ವಿದ್ವದ್ವಿಭೂತಿ

ಶ್ರೀ ಕಾಶೀ ಜಗದ್ಗುರು ವೀರಭದ್ರ ಶಿವಾಚಾರ್ಯರು

ಗ್ರಂಥಕರ್ತರು
ಷ.ಬ್ರ. ಡಾ|| ಶ್ರೀ ಶಿವಾನಂದ ಶಿವಾಚಾರ್ಯರು

ವೀರಶೈವ ಅನುಸಂಧಾನ ಸಂಸ್ಥಾನ
'ನಾವೀನ್ಯ' 365/ಸಿ, 5ನೇ 'ಎ' ಮುಖ್ಯರಸ್ತೆ, ರೆಂಕೋ ಬಡಾವಣೆ,
ವಿಜಯನಗರ 2ನೇ ಹಂತ, ಬೆಂಗಳೂರು – 560 040
ದೂರವಾಣಿ : 2330 2537

ವೀರಶೈವ ಅನುಸಂಧಾನ ಕಿರಣ-೧೩

ವಿದ್ವದ್ವಿಭೂತಿ
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯರು

ಗ್ರಂಥಕರ್ತರು

ಷ|| ಬ್ರ|| ಡಾ|| ಶಿವಾನಂದ ಶಿವಾಚಾರ್ಯರು

ಪ್ರಕಾಶಕರು

ವೀರಶೈವ ಅನುಸಂಧಾನ ಸಂಸ್ಥಾನ

'ನಾವೀನ್ಯ', ೩೬೫/ಸಿ, ೫ನೇ 'ಎ' ಮುಖ್ಯರಸ್ತೆ
ರೆಂಕೋ ಬಡಾವಣೆ, ವಿಜಯನಗರ ೨ನೇ ಹಂತ
ಬೆಂಗಳೂರು-೫೬೦ ೦೪೦
ದೂರವಾಣಿ : ೨೩೩೦೨೫೩೬

VIDVADVIBHUTHI SHRI KASI JAGADGURU VEERABHADRA SHIVACHARYARU : Written by : Sha.Bra. Dr. Shivananda Shivacharyaru, Hiremath, Chikpet, Tumkur, ✆ : 2273242. Published by : Veerashaiva Anusandhana Samsthana, 'Naviniya', 365/C, 5th 'A' Main Road, Remco Layout, Vijayanagar 2nd Stage, Bangalore-40 ✆ : 23302537

Pages : XX+210

© Veerashaiva Anusandhana Samsthana

First Impression : December 2004

Price : Rs. 140/-

Printed at:
Sneha Printers
No. 114, 4th Cross, B.C.C. Layout, Attiguppe
Vijayanagar 2nd Stage, Bangalore-40 ✆ : 23392814
E-Mail-snehaprinters1@rediffmail.com
karthikenterprisesin@yahoo.com

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ
ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ
ಶುಭಾಶೀರ್ವಚನ ಸಂದೇಶ

ಸಮಷ್ಟಿ ಪ್ರಜ್ಞೆಯನ್ನು ನಾಡಿನ ಜನಮನಕ್ಕೆ ಬೋಧಿಸುತ್ತ ಬಂದಿವೆ ಪಂಚಪೀಠಗಳು.ಇವು ವೀರಶೈವ ಸಮಾಜದ ಕೇಂದ್ರಗಳಾಗಿದ್ದರೂ ಮಾನವ ಕಲ್ಯಾಣವೇ ಇವುಗಳ ಗುರಿ. ವೀರಶೈವ ಧರ್ಮ ಉದಾತ್ತ ಮೌಲ್ಯಗಳನ್ನು ಹೊಂದಿದ ಮತ್ತು ಎಲ್ಲ ಸಮುದಾಯಗಳ ಜನರ ಭಾವ-ಭಾವನೆಗಳಿಗೆ ಸ್ಪಂದಿಸಿ ಕಾರ್ಯವನ್ನೆಸಗಿದ್ದನ್ನು ಯಾರೂ ಮರೆಯಲಾಗದು.

ಶ್ರೀ ಜಗದ್ಗುರು ಪಂಚಪೀಠಗಳು ಪ್ರಾಚೀನ ಗುರುಪೀಠಗಳು. ಪರಶಿವನ ಪಂಚಮುಖಗಳಿಂದ ಸಂಜನಿಸಿದವರೇ ಪಂಚ ಆಚಾರ್ಯರು. ಯುಗಯುಗಗಳ ಚಾರಿತ್ರಿಕ ಹಿನ್ನೆಲೆ ಹೊಂದಿದ ಪೀಠಗಳು ಕಾಲಕಾಲಕ್ಕೆ ಜನಜಾಗೃತಿ ಉಂಟುಮಾಡುತ್ತ ಸಾತ್ವಿಕ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತ ಬಂದಿವೆ. ಅಂತೆಯೇ ಪಂಚಪೀಠಗಳಿಗೆ ರಾಷ್ಟ್ರೀಯ ಗುರುಪೀಠಗಳೆಂದು ಎಲ್ಲರೂ ತಿಳಿದು ಗೌರವಿಸಿ ತಮ್ಮ ಭಕ್ತಿಶ್ರದ್ಧೆಯನ್ನು ಅರ್ಪಿಸಿದ್ದಾರೆ.

ಈ ಮಹಾನ್ ಪೀಠಗಳಿಗೆ ಉಜ್ವಲವಾದ ಇತಿಹಾಸವಿದೆ. ಭವ್ಯವಾದ ಪರಂಪರೆ ಇದೆ. ವೀರಶೈವ ಪಂಚಪೀಠಗಳಲ್ಲಿ ಒಂದಾಗಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನ ಮಹಾಪೀಠವು ಪವಿತ್ರ ಕಾಶೀ ಕ್ಷೇತ್ರದಲ್ಲಿ ಸಂಸ್ಥಾಪಿತಗೊಂಡಿದೆ. ಈ ಪೀಠ ಪರಂಪರೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ವತ್ ಲೋಕದ ಅನರ್ಘ್ಯರತ್ನ ಲಿಂ. ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಭಗವತ್ಪಾದರು ಶ್ರೀ ಪೀಠದ ಇತಿಹಾಸದಲ್ಲಿ ಧ್ರುವತಾರೆಯಾಗಿ ಕಂಗೊಳಿಸಿದರು. ತಮ್ಮ ಅಪಾರ ಪಾಂಡಿತ್ಯ ಪ್ರತಿಭೆಯಿಂದ ಜನಮನದ ಹೃದಯವನ್ನು ಗೆದ್ದರು. ಪರಳಿಯ ವ್ಯಾಜ್ಯದಲ್ಲಿ ಹೋರಾಡಿ ವೀರಶೈವ ಸಮಾಜಕ್ಕೆ ಗೌರವವನ್ನು ತಂದುಕೊಟ್ಟ ಪುಣ್ಯಪುರುಷರವರು. ಅವರು ಸಂಗ್ರಹಿಸಿದ ಸಾಹಿತ್ಯ ಮತ್ತು ಗ್ರಂಥಗಳು ಶ್ರೀಪೀಠದ ಅಮೂಲ್ಯ ಆಸ್ತಿ. ಇಂದಿಗೂ ಆ ಭವ್ಯ ಗ್ರಂಥ ಭಂಡಾರ ಸಂಗ್ರಹವನ್ನು ಕಾಶೀ ಪೀಠದಲ್ಲಿ ಕಾಣಬಹುದು.

ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಭಗವತ್ಪಾದರು ಶ್ರೀಮತ್ಕಾಶೀ ಪೀಠವನ್ನು ಕೇವಲ ಮೂರೇ ಮೂರು ವರುಷಗಳ ಕಾಲಾವಧಿಯವರೆಗೆ ಆರೋಹಣ ಮಾಡಿದ್ದರೂ ಈ ಅವಧಿಯಲ್ಲಿ ಅವರು ಮುನ್ನೂರು ವರುಷಗಳ ಸಾಧನೆಯನ್ನು ಮಾಡಿ ಎಲ್ಲರ ಮನದಾಳದಲ್ಲಿ ಹಸಿರಾಗಿದ್ದಾರೆ. ಸರಸ್ವತಿಯ ಸುಪುತ್ರರಾದ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರಿಗೆ ಅಧಿಕಾರವನ್ನು ಅನುಗ್ರಹಿಸಿದವರು ಶ್ರೀಮದ್ರಂಭಾಪುರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರು. ಇನ್ನಷ್ಟು ಕಾಲ ಶ್ರೀಪೀಠದಲ್ಲಿ ಅವರಿದ್ದರೆ ಆ ಚಿತ್ರವೇ ಬದಲಾಗುತ್ತಿತ್ತು. ವಿಧಿಯ ಅಟ್ಟಹಾಸದಿಂದ ಅವರು ಅಲ್ಪಾಯುಗಳಾಗಿ ಲಿಂಗೈಕ್ಯರಾಗಬೇಕಾಯಿತು. ಆ ನೋವು ಪಂಚಪೀಠಗಳ ಇತಿಹಾಸದಲ್ಲಿ ಮರೆಯಲಾಗದು. ಪರಮಪೂಜ್ಯ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಭಗವತ್ಪಾದರ ಜನ್ಮಶತಮಾನೋತ್ಸವದ ಸಂಸ್ಮರಣೆಯಲ್ಲಿ ತುಮಕೂರು ಹಿರೇಮಠಾಧ್ಯಕ್ಷರಾದ ಶ್ರೀ ಷ. ಬ್ರ. ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಅವರ ಜೀವನ, ಸಾಧನೆ, ಸಿದ್ಧಿಗಳನ್ನು ಒಳಗೊಂಡ ಜೀವನ ಚರಿತ್ರೆಯನ್ನು ಭಕ್ತ-ಸಂಕುಲಕ್ಕೆ ಪರಿಚಯಿಸುತ್ತಲಿರುವುದು ಹೆಮ್ಮೆಯ ಸಂಗತಿ. ಶ್ರೀಗಳವರ ಬರಹ-ಬದುಕು ಇದರಿಂದ ಸಾರ್ಥಕ. ಈ ಕೃತಿಯ ಅಂತರಾಳದಲ್ಲಿ ಲಿಂ. ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಭಗವತ್ಪಾದರ ಜೀವನಾದರ್ಶ ಮೌಲ್ಯಗಳನ್ನು ಕಾಣಬಹುದು. ಪೂರ್ವಾಚಾರ್ಯರ ನೆನಪು-ನೆನಹು ದಾರಿದೀಪ. ಅವರ ಪವಿತ್ರ ಚರಣಗಳಿಗೆ ಜನ್ಮ ಶತಮಾನೋತ್ಸವದ ಸುಸಂದರ್ಭದಲ್ಲಿ ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರೀ ಪೀಠವು ಅತ್ಯಂತ ಅಭಿಮಾನ ಮತ್ತು ಗೌರವದಿಂದ ನೆನಹು-ನಮನ ಅರ್ಪಿಸಿ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಪರಮದಯಾಳು ಶ್ರೀ ಪಾರ್ವತಿ-ಪರಮೇಶ್ವರರು ಹಾಗೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸರ್ವರಿಗೂ ಮಂಗಳ ಪರಂಪರೆಯನ್ನು ದಯಪಾಲಿಸಲಿ.

ಇತ್ಯನಂತ ಶಿವಾಶಿಷಃ

ಮಲಯಾಚಲ ತಪೋಭೂಮಿ.
ಶ್ರೀ ಜಗದ್ಗುರು ರಂಭಾಪುರೀ ವೀರ ಸಿಂಹಾಸನ ಪೀಠ,
ಬಾಳೆಹೊನ್ನೂರು ಶ್ರೀಕ್ಷೇತ್ರ

ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಶುಭಾಶೀರ್ವಚನ ಸಂದೇಶ

ಶ್ರೀ ವೀರಭದ್ರ ಜಗದ್ಗುರುಗಳು ಕಾಶೀ ಮಹಾಪೀಠದ ಜಗದ್ಗುರು ಪರಂಪರೆಯಲ್ಲಿ ಧ್ರುವ ನಕ್ಷತ್ರವಾಗಿದ್ದಾರೆ. ಕೇವಲ 44 ವರುಷ ಬಾಳಿ ಬದುಕಿದ ಶ್ರೀ ಮಹಾಸನ್ನಿಧಿಯವರು ತಮ್ಮ ಬಹುಪಾಲು ಆಯುಷ್ಯವನ್ನು ವಿದ್ಯಾಧ್ಯಯನದಲ್ಲಿಯೇ ಕಳೆದ ವಿಭೂತಿಪುರುಷರವರು. ಅಂತೆಯೇ ಈ ಗ್ರಂಥ ಲೇಖಕರಾದ ಶ್ರೀ ಷ. ಬ್ರ. ಡಾ. ಶಿವಾನಂದ ಶಿವಾಚಾರ್ಯರು ಇವರನ್ನು 'ವಿದ್ವದ್ವಿಭೂತಿ' ಎಂಬ ಸಾರ್ಥಕ ಹಾಗೂ ಸಮರ್ಥ ವಿಶೇಷಣವನ್ನಿತ್ತು ಗೌರವಿಸಿದ್ದಾರೆ. ಬಾಲ್ಯದಿಂದಲೇ ಪ್ರತಿಭಾಸಂಪನ್ನರೂ ಬಹುಭಾಷಾತಜ್ಞರೂ ಪ್ರಾಚೀನ ಲಿಪಿವಿಶೇಷಜ್ಞರೂ ಶ್ರೇಷ್ಠ ಸಂಶೋಧಕರೂ ಆದ ಇವರು ಚಿದರೆಮಠದ ವೀರಭದ್ರ ಶರ್ಮರೆಂಬ ಹೆಸರಿನಿಂದಲೇ ಖ್ಯಾತನಾಮರಾಗಿದ್ದರು. ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಯಿಂದ ಸರ್ವೋನ್ನತ ಸ್ಥಾನವಾದ ಜ್ಞಾನಪೀಠಾಧಿಪತ್ಯದವರೆಗೆ ತಮ್ಮನ್ನು ವಿಕಾಸಮಾಡಿಕೊಂಡ ಧೀಮಂತ ವ್ಯಕ್ತಿಗಳಿವರು. ವೀರಶೈವ ವಿದ್ವಾಂಸರಲ್ಲಿ ಚೌಡದಾನಪುರದ ಶ್ರೀ ವಿರೂಪಾಕ್ಷ ಒಡೆಯರ್‌ರವರ ತರುವಾಯ 'ವೇದತೀರ್ಥ' ಉಪಾಧಿ (ಪದವಿ)ಯನ್ನು ಪಡೆದ ಏಕಮೇವ ವ್ಯಕ್ತಿ ಎಂದರೆ ಶ್ರೀ ವೀರಭದ್ರ ಜಗದ್ಗುರುಗಳು.

ಕವಿ, ಲೇಖಕ, ಸಂಪಾದಕ ಮತ್ತು ವಿಮರ್ಶಕ ಮುಂತಾದ ಬಹುಮುಖ ವ್ಯಕ್ತಿತ್ವದ ಇವರು ಉತ್ತಮ ಗ್ರಂಥಸಂಗ್ರಾಹಕರೂ ಆಗಿದ್ದರು. ಇಂದು ಶ್ರೀ ಕಾಶೀ ಮಹಾಪೀಠದಲ್ಲಿ ಕಂಗೊಳಿಸುತ್ತಿರುವ 'ಜ್ಞಾನಮಂದಿರ' ಗ್ರಂಥಾಲಯವು ಇವರ ಸಂಗ್ರಹದ ಒಂದು ಉತ್ತಮ ಉದಾಹರಣೆಯಾಗಿದೆ. ತಮ್ಮದೇ ಸಂಪಾದಕತ್ವದಲ್ಲಿ 'ವಿಭೂತಿ' ಎಂಬ ತೆಲಗು ಮಾಸಪತ್ರಿಕೆಯನ್ನು ಪ್ರಾರಂಭಿಸಿ ಆಂಧ್ರದ ಪತ್ರಿಕಾ ಪ್ರಪಂಚದಲ್ಲಿ ಕ್ರಾಂತಿ ಕಹಳೆಯನ್ನು ಊದಿದ್ದರು. ಅವರ ಅಂದಿನ ಸಂಪಾದಕೀಯ ಲೇಖನಗಳು ಇಂದಿಗೂ ಪ್ರಸ್ತುತವಾಗಿವೆ. ಶ್ರೀ ಜಗದ್ಗುರು ಪೀಠವನ್ನು ಅಲಂಕರಿಸುವ ಪೂರ್ವದಲ್ಲಿಯೇ ಇವರು ವಿದ್ವತ್ ಜಗತ್ತಿನಲ್ಲಿ ವಿಖ್ಯಾತರಾಗಿದ್ದರು. ವೀರ ಸಾವರಕರ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ಶ್ರೀಶೈಲ ಪೀಠದ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಮುಂತಾದವರು ಇವರ ವ್ಯಕ್ತಿತ್ವಕ್ಕೆ ಮಾರುಹೋದವರಲ್ಲಿ ಪ್ರಮುಖರು.

ಶ್ರೀ ಕಾಶೀ ಪೀಠ ಪರಂಪರೆಯಲ್ಲಿ ಅತ್ಯಲ್ಪ ಕಾಲದ ಪೀಠಾಧಿಪತಿಗಳಾಗಿದ್ದರೂ ಎಲ್ಲರಿಗಿಂತಲೂ ಹೆಚ್ಚಿನ ಕಾರ್ಯವನ್ನು ಸಾಧಿಸಿದ್ದು ಇವರ ವೈಶಿಷ್ಟ್ಯವಾಗಿದೆ. 'ವಿದ್ಯಾನಗರಿ' ಎಂದೇ ಸುಪ್ರಸಿದ್ಧವಾದ ಶ್ರೀ ಕ್ಷೇತ್ರ ಕಾಶಿಯ ವಿದ್ವಾಂಸರು ಇವರನ್ನು 'ಪುರುಷ ಸರಸ್ವತಿ' ಎಂತಲೇ ಸಂಬೋಧಿಸುತ್ತಿದ್ದ ಈ ವಿದ್ವದ್ವಿಭೂತಿ ಪುರುಷರು ಕೇವಲ ವೀರಶೈವ ಸಮಾಜಕ್ಕಷ್ಟೇ ಅಲ್ಲ, ಸಮಗ್ರ ರಾಷ್ಟ್ರಕ್ಕೇ ಹೆಮ್ಮೆಯ ಪುತ್ರರಾಗಿದ್ದಾರೆ.

2004-2005ನೇ ವರುಷವು ಮಹಾಸನ್ನಿಧಿಯ ಜನ್ಮಶತಮಾನೋತ್ಸವದ ವರುಷ. ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ಹತ್ತು ದಿನಗಳ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡು ವಿಜೃಂಭಣೆಯಿಂದ ಆಚರಿಸುತ್ತಿದೆ. ಈ ಕಾರ್ಯಕ್ರಮಕ್ಕೆ ಕಳಸಪ್ರಾಯವಾಗಿ 'ವಿದ್ವದ್ವಿಭೂತಿ ಶ್ರೀ ವೀರಭದ್ರ ಜಗದ್ಗುರುಗಳು' ಎಂಬ ಗ್ರಂಥ ಬಿಡುಗಡೆಯು ನಡೆಯುತ್ತಿರುವುದು ಇನ್ನೂ ಸಂತೋಷದ ಸಂಗತಿ. ಈ ಗ್ರಂಥವನ್ನು ರಚಿಸಿದವರು ಸಮರ್ಥ ಲೇಖಕರೂ ವಿಮರ್ಶಕ ಸಂಪಾದಕರೂ ಆದ ತುಮಕೂರು ಹಿರೇಮಠದ ಶ್ರೀ ಷ.ಬ್ರ. ಡಾ. ಶ್ರೀ ಶಿವಾನಂದ ಶಿವಾಚಾರ್ಯರು ಶ್ರೀ ಮಹಾಸನ್ನಿಧಿಯ ಆದೇಶದ ಮೇರೆಗೆ ಅತ್ಯಂತ ಶ್ರದ್ಧೆಯಿಂದ ಈ ಕಾರ್ಯವನ್ನು ನಿರ್ವಹಿಸಿದ್ದಾರೆ. 'ಶಿವೋ ಭೂತ್ವಾ ಶಿವಂ ಯಜೇತ್' ಎಂಬ ಉಕ್ತಿಯಂತೆ ತಮ್ಮ ತನು-ಮನಗಳಲ್ಲಿ ಶ್ರೀ ವೀರಭದ್ರ ಜಗದ್ಗುರುಗಳನ್ನು ತುಂಬಿಕೊಂಡು ತನ್ಮಯರಾಗಿ ಈ ಗ್ರಂಥವನ್ನು ವಿರಚಿಸಿದ್ದಾರೆ. ಅತ್ಯಲ್ಪ ಕಾಲದಲ್ಲಿ ಮಾಡಿದ ಇವರ ಸಾಹಿತ್ಯ ಶ್ರಮವು ಪ್ರಶಂಸನೀಯವಾದುದು. ಇವರ ಪ್ರಮುಖ ಸಂಪಾದಕತ್ವದಲ್ಲಿ ಮುಂದೆ ಹೊರಬರಲಿರುವ ಕಾಶೀ ಪೀಠದ ಬೃಹತ್ ಗ್ರಂಥಕ್ಕೆ ಇದು ನಾಂದಿಯೋಪಾಧಿಯಲ್ಲಿದೆ. ವಿಷಯ ಗಾಂಭೀರ್ಯದೊಂದಿಗೆ ಶಬ್ದಲಾಲಿತ್ಯದಿಂದ ಸಾಹಿತ್ಯ ಸೃಜಿಸಬಲ್ಲ ಡಾ. ಶ್ರೀ ಶಿವಾನಂದ ಶಿವಾಚಾರ್ಯರು ಈಗಾಗಲೇ ತಮ್ಮ ಅನೇಕ ಕೃತಿಗಳಿಂದ ಸಾಹಿತ್ಯ ಪ್ರಪಂಚದಲ್ಲಿ ಖ್ಯಾತನಾಮರಾಗಿದ್ದಾರೆ.

ಕಾಶೀ ವಿಶ್ವನಾಥ ಅನ್ನಪೂರ್ಣೆಯರ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮಂಗಳಾಶೀರ್ವಾದದಿಂದ ಇವರು ಇನ್ನೂ ಹೆಚ್ಚಿನ ಸಾಹಿತ್ಯಕೃಷಿಯನ್ನು ಮಾಡಲೆಂಬುದಾಗಿ ಹಾರೈಸಲಾಗಿದೆ. ಈ ಗ್ರಂಥದ ಮುದ್ರಣ ಸೇವೆಯನ್ನು ಸಹರ್ಷದಿಂದ ಮಾಡಿದ ಬೆಂಗಳೂರಿನ ಶ್ರೀ ಎಸ್.ಎನ್.ವಿನೋದ ದಂಪತಿಗಳಿಗೆ ಅನಂತ ಮಂಗಲಾಶೀರ್ವಾದಗಳು. ಈ ಗ್ರಂಥವನ್ನು ಅಂದವಾಗಿ ಮುದ್ರಿಸಿ ಕೊಟ್ಟ ಸ್ನೇಹಾ ಪ್ರಿಂಟರ್ಸ್, ಬೆಂಗಳೂರು ಮುದ್ರಣಾಲಯದ ಸಿಬ್ಬಂದಿ ವರ್ಗಕ್ಕೆ ಹಾಗೂ ಜಿಜ್ಞಾಸು ಅಭ್ಯಾಸಕರಿಗೆ ಮಂಗಲಾಶೀರ್ವಾದಗಳು. ಸರ್ವರಿಗೂ ಅನಂತ ಮಂಗಲಾಶೀರ್ವಾದಗಳು.

ಇತ್ಯಾಶಿಷಃ

ಕೈ ಮುಗಿದು ಒಳಗೆ ಬನ್ನಿ.....

ಲಿಜಾತಸ್ಯ ಮರಣಂ ಧ್ರುವಮ್ಳಿ ಹುಟ್ಟಿದವರೆಲ್ಲ ಸಾಯಲೇಬೇಕು ಇದು ಜಗಕ್ಕಿಕ್ಕಿದ ವಿಧಿ. ಈ ಜಗತ್ತಿನಲ್ಲಿ ಹುಟ್ಟಿದವರಾರೂ ಲಿಮರಣ ಧರ್ಮಬಾಹಿರರಲ್ಲ. ಈ ಮಾತು ಅಕ್ಷರಶಃ ಸತ್ಯ. ಲಿಹುಟ್ಟಿದವರೆಲ್ಲ ಸಾಯಲೇಬೇಕಾಗುತ್ತದೆಳಿ ಎಂದು ಹುಟ್ಟಿದ ತಕ್ಷಣವೇ ಸಾಯುವ ಸಿದ್ಧತೆಯಲ್ಲಿ ತೊಡಗಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಹುಟ್ಟು ಸಾಯುತ್ತದೆ, ಇದೇನೋ ನಿಜ. ಆದರೆ ಸಾರ್ಥಕ ಬದುಕು ಯಾವತ್ತೂ ಜೀವಂತವಾಗಿರುತ್ತದೆ. ಪ್ರಾಂಜಲವಾಗಿ ಹೇಳಬೇಕೆಂದರೆ ಹುಟ್ಟು, ಮರಣಗಳ ಮಧ್ಯದಲ್ಲಿ ತುಂಬಿಕೊಂಡಿರುವ ಬದುಕಿದೊಂದು ಅದ್ಭುತ ಕನಸು. ಅದನ್ನು ನಾವು ಸಜೀವಗೊಳಿಸಬೇಕು, ನನಸಾಗಿಸಬೇಕು. ಸಾರ್ಥಕ ಮತ್ತು ಸತ್ವಯುತ ಬದುಕನ್ನು ನಾವೆಲ್ಲ ಬದುಕಬೇಕು. ನಮ್ಮ ಬದುಕನ್ನು ಬರೀ ಲಿಆಯಾರಾಂ ಗಯಾರಾಂಳಿ ಮಾದರಿಗೆ ಸೇರಿಸದೆ ಅದನ್ನು ಲಿಚಿರಂಜೀವಿಳಿಯಾಗಿಸಬೇಕು, ತೇಜಸ್ವಿಯಾಗಿಸಬೇಕು. ಲಿನಾವು ಎಷ್ಟು ದಿನ ಬದುಕುತ್ತೇವೆ?ಳಿ ಎಂಬುವುದಿದು ಮುಖ್ಯ ವಿಷಯ ಅಲ್ಲವೇ ಅಲ್ಲ. ಲಿನಾವು ಅದು ಹೇಗೆ ಬದುಕುತ್ತೇವೆ?ಳಿ ಎಂಬುವುದೇ ಬಹುಮುಖ್ಯ ವಿಷಯ. ಸಾಮಾನ್ಯವಾಗಿ ಇದು ಎಲ್ಲರಿಗೂ ಗೊತ್ತು. ನಾವು ನಮ್ಮ ಬದುಕಿನ ಸಿಹಿನೆನಪುಗಳನ್ನು ಬಹುದಿನಗಳವರೆಗೆ ಜನರ ಲಿಸ್ಮೃತಿಪಟಲಳಿದಲ್ಲಿ ಕಟ್ಟಿಹಾಕಬೇಕು. ಆ ಭಗವಂತನೂ ಕೂಡ ಲಿಈ ವ್ಯಕ್ತಿತ್ವಕ್ಕೆ ಇನ್ನಷ್ಟು ಸಮೃದ್ಧ ಆಯುಷ್ಯವನ್ನು ಕೊಟ್ಟಿದ್ದರೆ ಚೆನ್ನಾಗಿತ್ತಲ್ಲಷಿ ಎಂದು ಸ್ವತಃ ಪ್ರಾಯಶ್ಚಿತ್ತದಿಂದ ಮತ್ತು ಪಶ್ಚಾತ್ತಾಪದಿಂದ ಕೈ ಕೈ ಹಿಸುಕಿಕೊಳ್ಳುವಂತೆ ನಾವು ಬದುಕಬೇಕು.

ಕಾಶೀ ಜ್ಞಾನಪೀಠದ 84ನೆಯ ಪೀಠಾಧಿಪತಿಗಳಾದ ಲಿಂ. ಶ್ರೀ ವೀರಭದ್ರ ಜಗದ್ಗುರುಗಳನ್ನು 'ಅಲ್ಪಾಯುಳಿವಾಗಿಸಿದ್ದಕ್ಕಾಗಿ ಆ ಭಗವಂತನೇ ಸ್ವತಃ ಪ್ರಾಯಶ್ಚಿತ್ತದಿಂದ ನೊಂದುಕೊಳ್ಳುವಂತಾಗಿದೆ. ಆತನೀಗ 'ವಿಷಾದ ಕಾಂಡಳಿದಲ್ಲಿದ್ದಾನೆ!! ಕಾಶೀ ಜ್ಞಾನಪೀಠಕ್ಕೆ 'ಅನ್ವರ್ಥಕಳಿವಾದ ವ್ಯಕ್ತಿತ್ವವನ್ನು ಹೊಂದಿದ್ದ ಶ್ರೀ ವೀರಭದ್ರ ಜಗದ್ಗುರುಗಳು ಬದುಕಿದ್ದು ಕೇವಲ 44 ವರುಷಗಳು ಮಾತ್ರ. ಆದರೆ ಇಂದಿಗೂ ಅವರು ನಮ್ಮೆಲ್ಲರ ಮನದಲ್ಲಿ ಹಸಿರು ಹಸಿರಾಗಿ ಉಳಿದಿದ್ದಾರೆ. ತಮ್ಮ ಸಾರ್ಥಕ ಬದುಕಿನ ಅವಿಸ್ಮರಣೀಯ ನೆನಹುಗಳನ್ನು ಜನಮನದಲ್ಲಿ ಕಟ್ಟಿಹಾಕಿದ್ದಾರೆ. ಶಿಸ್ತು ಮತ್ತು ಬದ್ಧತೆಯ 'ಪರ್ಯಾಯ ಪದಳಿದಂತಿದ್ದ ಶ್ರೀ ವೀರಭದ್ರ ಜಗದ್ಗುರುಗಳು ಓರ್ವ ಧೀಮಂತ 'ಅಕ್ಷರ ತಪಸ್ವಿಳಿ.

ಅವರದು ಕಾಶೀ ಜ್ಞಾನಪೀಠ ಕಂಡ ಅಪರೂಪದ ವ್ಯಕ್ತಿತ್ವ. ಅವರ ಜೀವನವೇ ಒಂದು ತಪಸ್ಸು. ಹುಟ್ಟು ಹೋರಾಟಗಾರರಾದ ಅವರು ತಮ್ಮನ್ನು ತಾವು ಸಾಧನೆಯ 'ಮಹಾಮೇರು'ವಾಗಿ ಗುರುತಿಸಿಕೊಂಡರು. ಸಾಧನೆಯಿಂದಲೇ ಮಾತನಾಡಿದ 'ವಿಭೂತಿಪುರುಷ'ರವರು. ಪರಮಪೂಜ್ಯರನ್ನು 'ಶಿಸ್ತಿನ ಸಿಪಾಯಿ' ಎಂದು ಹೇಳುವುದು ಅಷ್ಟೊಂದು ಸಮಂಜಸವಲ್ಲ. ಅದಕ್ಕೆ ಪ್ರತಿಯಾಗಿ 'ಶಿಸ್ತು' ಅವರ ಬಳಿಯಲ್ಲಿ ಸಿಪಾಯಿಯ ತೆರದಲ್ಲಿ ಅತಿ ನಮ್ರವಾಗಿ ಇದ್ದುಕೊಂಡಿತ್ತು ಎಂದು ಹೇಳುವುದು ಹೆಚ್ಚು ಸೂಕ್ತ ಮತ್ತು ಸಮಂಜಸವೆನಿಸುತ್ತದೆ. ಮಹಾಸಂಘಟಕರೂ ಮತ್ತು ಅದ್ಭುತ ಕನಸುಗಾರರಾದ ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳು ಸಾರಸ್ವತ ಕ್ಷೇತ್ರದ ಅವಿರಳ ತಪಸ್ವಿಗಳು. 'ಧ್ಯೇಯವೇ ದೇವರು' ಮತ್ತು 'ಧೈರ್ಯವೇ ದೇವರು' ಎಂದು ಬದುಕಿನುದ್ದಕ್ಕೂ ಹೋರಾಡಿ ಸಮಸ್ಯೆಗಳನ್ನು ಪರಾಭವಗೊಳಿಸಿದ ಮಹಾನುಭಾವರವರು. ಅವರೊಂದು ವಿದ್ವತ್ತಿನ ಮಹಾಪೂರದಂತಿದ್ದರು. ಆದರೆ ಅವರು 'ಸುನಾಮಿ'ಯಲ್ಲ!! ಸುನಾಮಿಯಂತೆ ಎಲ್ಲರನ್ನೂ ಮತ್ತು ಎಲ್ಲವನ್ನೂ ಮುಚ್ಚಿಹಾಕುವ ಮತ್ತು ಕೊಚ್ಚಿಹಾಕುವ ಜಲಪ್ರಳಯವಲ್ಲ ಅವರು. ಜೀವಿತದ ಅಲ್ಪ ಕಾಲಾವಧಿಯಲ್ಲಿಯೇ ಸಾಧನೆಯ ಹತ್ತು ಹಲವಾರು ಮಜಲುಗಳನ್ನು ಯಶಸ್ವಿಯಾಗಿ ತಲುಪಿದ ಅವರನ್ನೊಂದು 'ಚಲಿಸುವ ಸಾರಸ್ವತ ಭಂಡಾರ' ಎಂದು ಕರೆಯಬಹುದು. ಅನನ್ಯ ಪುಸ್ತಕಪ್ರೇಮಿಗಳಾದ ಅವರನ್ನು 'ಪುಸ್ತಕಾದ್ವೈತಿ' ಎಂದು ಕರೆದರೆ ತಪ್ಪೇನಿಲ್ಲ. 'ಭಾಷಾ ಸರಸ್ವತಿ' ಅವರಿಗೊಲಿದು ಬಿಟ್ಟಿದ್ದಳು. ಬಹುಭಾಷಾ ವಿಶಾರದರಾದ ಅವರು ತಮ್ಮ ಕ್ರಾಂತಿಕಾರಕ ವಿಚಾರಗಳಿಂದಾಗಿ ಆಂಧ್ರ ಪ್ರದೇಶದಲ್ಲಿ ನಿತ್ಯ ಸುದ್ದಿಯಲ್ಲಿರುತ್ತಿದ್ದರು. ಅವರದು ಬಹುಮುಖಿ ವ್ಯಕ್ತಿತ್ವ. ಕಾಶೀ ಜ್ಞಾನಪೀಠದ 'ಜಗದ್ಗುರುತ್ವ'ವು ಅವರಿಗೊಲಿದು ಬಂದಾಗ ಆಂಧ್ರ ನಾಡಿನ ಜನಗಳು ಅವರನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಆ ಜನಗಳ ಮೇಲೆ ಪೂಜ್ಯರ ಪ್ರಭಾವ ಅಂಥದ್ದು!! ಅವರಿಗೆಲ್ಲ ಸಮಝಾಯಿಸಿ ಹೇಳಿಬರಬೇಕೆಂದರೆ ಪೂಜ್ಯರಿಗೆ ಸಾಕುಬೇಕಾಯಿತು.

ಪರಮಪೂಜ್ಯರ ಜೀವನವನ್ನು ಸಮಗ್ರವಾಗಿ ಗಮನಿಸಿದಾಗ 'ಅದೃಷ್ಟ' ಅವರೊಂದಿಗೆ ಬದುಕಿನುದ್ದಕ್ಕೂ ಆಟವಾಡುತ್ತಲೇ ಬಂದಿರುವುದು ಗಮನಕ್ಕೆ ಬರುತ್ತದೆ. ಅದು ಅವರ ಹೆಜ್ಜೆಯೊಂದಿಗೆ ಹೆಜ್ಜೆ ಹಾಕದೆ ಅಡ್ಡಗಾಲು ಹಾಕಿ ಎಡವಟ್ಟುಗಳನ್ನು ಸೃಷ್ಟಿಸಿ ಅಡ್ಡಿಮಾಡಿದುದೇ ಹೆಚ್ಚು. 1. ಚಿಕ್ಕಂದಿನಲ್ಲಿಯೇ ಪರಮಪೂಜ್ಯರ ತಂದೆ-ತಾಯಿಗಳು ಕಾಲವಾದರು. 2. ಬಹುಬೇಗನೇ ಜವಾಬ್ದಾರಿ ಅವರ ಹೆಗಲೇರಿ ಕುಳಿತುಕೊಂಡಿತು. 3. ಉದರ ನಿರ್ವಹಣೆಗಾಗಿ ಅವರು ಓದನ್ನು ಅರ್ಧಕ್ಕೆ ನಿಲ್ಲಿಸಿ ಶಿಕ್ಷಕ ವೃತ್ತಿಯನ್ನು ಅವಲಂಬಿಸಬೇಕಾಯಿತು. 4. ವಯಸ್ಸಲ್ಲದ ವಯಸ್ಸಿನಲ್ಲಿ ಸಮಸ್ಯೆಗಳೊಂದಿಗೆ ನೇರವಾಗಿ ಅವರೇ ಮಾತನಾಡಬೇಕಾಗಿ ಬಂತು. 5. ಓದುವುದಕ್ಕಾಗಿ ಅವರು ನಿರಂತರವಾಗಿ ಅತ್ತಿಂದಿತ್ತ ಇತ್ತಿಂದತ್ತ ಅಲೆಯಬೇಕಾಯಿತು. 6. ಯಾದಗಿರಿ ಸಂಸ್ಕೃತ ಕಾಲೇಜಿನ

ಪ್ರಾಂಶುಪಾಲರಾದರೂ ಸಹ ಅಲ್ಲಿನ ಅಧ್ವಾನಗಳ ಜೊತೆ ಹೊಂದಿಕೊಳ್ಳಲಾಗದೆ ಅವರು ಆ ಲಿಪದಳಿ ಮತ್ತು ಲಿ ಪ್ರಾಂಶುಪಾಲ ಪದವಿಳಿಗೆ ರಾಜೀನಾಮೆಯನ್ನಿತ್ತು ಹೊರಬರಬೇಕಾಯಿತು. 7. ಕಾಶೀ ಪೀಠದ ಲಿಜಗದ್ಗುರುತ್ವಳಿ ತಾನಾಗಿ ಒಲಿದೇನೋ ಬಂತು. ಆದರೆ ಆಯುಷ್ಯದ ತೀವ್ರ ಅಭಾವದಿಂದಾಗಿ ಅವರು ಈ ಜಗತ್ತಿಗೆ ಹೊತ್ತಲ್ಲದ ಹೊತ್ತಿನಲ್ಲಿ ಲಿಅಂತಿಮ ವಿದಾಯಳಿವನ್ನು ಹೇಳಬೇಕಾಯಿತು. ಅವರಿಗೇನಾದರೂ ಒಂದು ವೇಳೆ ಅದೃಷ್ಟಲಕ್ಷ್ಮೀಯು ಲಿಜೊತೆ (ಸಾಥ್)ಳಿ ಕೊಟ್ಟಿದ್ದರೆ ಆ ಮಾತೇ ಬೇರೇ ಇತ್ತು. ಲಿಅದೃಷ್ಟಲಕ್ಷ್ಮೀಳಿಯು ಅವರೊಂದಿಗೆ ಲಿಧರ್ಮೇ ಚ, ಅರ್ಥೇ ಚ, ಕಾಮೇ ಚ ನಾತಿಚರಾಮಿಳಿ ಎಂದು ಲಿಸಪ್ತಪದಿಳಿ ತುಳಿದಿದ್ದರೆ ಅವರ ಕೀರ್ತಿ ಬರೀ ಕರ್ನಾಟಕಾಂಧ್ರ ಮಹಾರಾಷ್ಟ್ರ, ಉತ್ತರ ಪ್ರದೇಶಗಳಲ್ಲಷ್ಟೇ ಅಲ್ಲ, ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ರಾರಾಜಿಸುತ್ತಿತ್ತು. ಅವರಲ್ಲಿ ಅಪಾರವಾದ ಆತ್ಮವಿಶ್ವಾಸವಿತ್ತು. ಅಷ್ಟೊಂದು ಭರವಸೆಯ ಮುಖ ಅವರದು. ಅವರೊಂದು ಆತ್ಮವಿಶ್ವಾಸದ ಶಕ್ತಿಕೇಂದ್ರದಂತಿದ್ದರು. ಆದರೆ ಅದೃಷ್ಟ ಮಾತ್ರ ಅವರಿಗೆದುರಾಗಿ ಯಾವತ್ತೂ ಅವರ ವಿರುದ್ಧ ಲಿವಿರೋಧ ಮತಳಿವನ್ನು ಚಲಾಯಿಸುತ್ತಲೇ ಬಂತು.

ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳವರ ಜೀವನವನ್ನು ಅಧಿಕೃತವಾಗಿ ದಾಖಲಿಸುವ ಮತ್ತು ಅದನ್ನು 'ಅಕ್ಷರಸ್ಥಳಿಗೊಳಿಸುವ ಭಾಗ್ಯ ನಮ್ಮದಾಗಿದ್ದಕ್ಕೆ ನಮಗೆ ನಿಜಕ್ಕೂ ಸಂತೋಷವಾಗಿದೆ. ಅಕ್ಟೋಬರ್ ಮಾಹೆಯಲ್ಲಿ ನಾವು ಕಾಶೀ ಶ್ರೀಕ್ಷೇತ್ರಕ್ಕೆ ಭೇಟಿ ಕೊಟ್ಟಾಗ ಕಾಶೀ ಜಗದ್ಗುರು ಪರಮಪೂಜ್ಯ ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನಮ್ಮಮುಂದೆ ಶ್ರೀ ವೀರಭದ್ರ ಜಗದ್ಗುರುಗಳ ಜನ್ಮಶತಮಾನೋತ್ಸವದ ಪ್ರಸ್ತಾಪ ಮಾಡಿದರು. ಶ್ರೀಪೀಠದಲ್ಲಿನ ಇತ್ತೀಚಿನ ಕಾಶೀ ಜಗದ್ಗುರುಗಳ ಸುದೀರ್ಘ ವಾಸ್ತವ್ಯವು ಅವರಿಗೆ ಶ್ರೀಪೀಠದ ಹಳೆಯ ಕಡತಗಳನ್ನು ಮತ್ತು ದಾಖಲೆಗಳನ್ನು ಗಮನಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಇದೇ ಸಂದರ್ಭದಲ್ಲಿ ಪರಮಪೂಜ್ಯರಿಗೆ ಶ್ರೀ ವೀರಭದ್ರ ಜಗದ್ಗುರುಗಳ 'ಜನ್ಮಕುಂಡಲಿಳಿಯು ಪ್ರಾಪ್ತವಾಯಿತು. ಕೂಡಲೇ ಅದನ್ನು ಪಂಚಾಂಗತಜ್ಞರಿಗೆ ತೋರಿಸಿದಾಗ ಶ್ರೀ ವೀರಭದ್ರ ಜಗದ್ಗುರುಗಳ ಜನ್ಮ ತಾರೀಖು, ತಿಥಿ, ಮಿತಿ ಇವೆಲ್ಲವುಗಳು ಅವಗತವಾದವು. ಶ್ರೀ ವೀರಭದ್ರ ಜಗದ್ಗುರುಗಳು 1904ನೆಯ ಆಗಸ್ಟ್ ಮಾಹೆಯ ದಿನಾಂಕ 25ನೆಯ ತಾರೀಖಿನಂದು ಜನಿಸಿದುದು ಆ ಜನ್ಮಕುಂಡಲಿಯಿಂದ ತಿಳಿದುಬಂತು.

ಈಗ ಇದು 2004ನೆಯ ವರುಷ. ಅಂದರೆ ಶ್ರೀ ವೀರಭದ್ರ ಜಗದ್ಗುರುಗಳು ಜನಿಸ್ಸಿ ಈ ವರುಷಕ್ಕೆ ಒಂದು ಶತಮಾನವಾದಂತಾಯಿತು. ಆದ್ದರಿಂದ ಪರಮಪೂಜ್ಯರ ಜನ್ಮಶತಮಾನೋತ್ಸವವನ್ನು ಈ ವರ್ಷಪೂರ್ತಿ ಆಚರಿಸಬೇಕು ಮತ್ತು ತನ್ಮೂಲಕ ಶ್ರೀ ವೀರಭದ್ರ ಜಗದ್ಗುರುಗಳವರ ವಿಶಿಷ್ಟ ಮತ್ತು ವಿದ್ವತ್ಪೂರ್ಣ ಜೀವನವನ್ನು ಇಂದಿನ ನವಪೀಳಿಗೆಗೆ ಪರಿಚಯಿಸಬೇಕು ಎಂಬ ಉದ್ದೇಶದಿಂದ ಪರಮಪೂಜ್ಯ ಜಗದ್ಗುರುಗಳು

ಈ ವರ್ಷವನ್ನು 'ಶ್ರೀ ವೀರಭದ್ರ ಜಗದ್ಗುರುಗಳ ಜನ್ಮಶತಮಾನೋತ್ಸವ ವರ್ಷ'ವೆಂದು ಘೋಷಿಸಿದರು. ಒಂದು ವರ್ಷದ ಪರ್ಯಂತರ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಉತ್ತರಪ್ರದೇಶ ಇತ್ಯಾದಿ ಭಾರತದ ವಿವಿಧ ಪ್ರಾಂತ-ಪ್ರದೇಶಗಳಲ್ಲಿ ವೈವಿಧ್ಯಮಯವಾಗಿ ತಮ್ಮ ಪೂರ್ವಾಚಾರ್ಯರ ಜನ್ಮಶತಮಾನೋತ್ಸವವನ್ನು ಆಚರಿಸಬೇಕೆಂದು ಜಗದ್ಗುರುಗಳು ಸದೃಢ ಸಂಕಲ್ಪ ಮಾಡಿದರು.

ಈ ಒಂದು ಸಂದರ್ಭದಲ್ಲಿ ಶ್ರೀ ವೀರಭದ್ರ ಜಗದ್ಗುರುಗಳ ಹೆಸರಿನಲ್ಲಿ ನಾಡಿನ ವಿವಿಧ ಪ್ರಾಂತ-ಪ್ರದೇಶಗಳಲ್ಲಿ ಧರ್ಮ ಸಮ್ಮೇಳನಗಳನ್ನು, ವಿದ್ವದ್ಗೋಷ್ಠಿಗಳನ್ನು, ವಿಚಾರ ಸಂಕಿರಣಗಳನ್ನು, ಚರ್ಚಾಸ್ಪರ್ಧೆಗಳನ್ನು ನಡೆಯಿಸಬೇಕೆಂದು ತೀರ್ಮಾನಿಸಲಾಯಿತು. ಆ ವಿಧವಾಗಿ ಶ್ರೀಪೀಠದಿಂದ ಒಂದು ಅಧಿಕೃತ ಪ್ರಕಟಣೆಯನ್ನು ಹೊರಡಿಸಿ ಶ್ರೀ ವೀರಭದ್ರ ಜಗದ್ಗುರುಗಳವರ ಜನ್ಮಶತಮಾನೋತ್ಸವದ ಆಚರಣೆಗೆ ಕರೆಕೊಡಲಾಯಿತು.

ಇದೇ ಸಂದರ್ಭದಲ್ಲಿ ಶ್ರೀ ವೀರಭದ್ರ ಜಗದ್ಗುರುಗಳ ಕುರಿತಾಗಿ ಒಂದು ದಾಖಲಾತ್ಮಕ ಮತ್ತು ಅಧಿಕೃತ ಗ್ರಂಥವನ್ನು ಪ್ರಕಟಿಸಬೇಕೆಂದು ಪರಮಪೂಜ್ಯ ಕಾಶೀ ಜಗದ್ಗುರು ಡಾ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸಂಕಲ್ಪಿಸಿದರು. ಈ ಒಂದು ಮಹತ್ವದ ಮತ್ತು ಅಧಿಕೃತ 'ಸಾಹಿತ್ಯ-ಸೇವಾ ಕೈಂಕರ್ಯ'ಕ್ಕೆ ಅವರ ಅನುಗ್ರಹಪೂರ್ಣ ದೃಷ್ಟಿಯು ನಮ್ಮನ್ನು ಬದ್ಧರನ್ನಾಗಿಸಿ ಆಶೀರ್ವದಿಸಿತು. ಅಷ್ಟೇ ಅಲ್ಲ, ಪರಮಪೂಜ್ಯ ಜಗದ್ಗುರುಗಳು ಶ್ರೀ ವೀರಭದ್ರ ಜಗದ್ಗುರುಗಳ ಕುರಿತಾಗಿರುವ ಎಲ್ಲ ಉಪಲಬ್ಧ ಮಾಹಿತಿಗಳನ್ನು ಮತ್ತು ದಾಖಲೆಗಳನ್ನು, ಶ್ರೀ ವೀರಭದ್ರ ಜಗದ್ಗುರುಗಳ ಭಾವಚಿತ್ರಗಳನ್ನು, ಅವರ 'ಸ್ವಲೇಖ ಮತ್ತು ಪರಲೇಖ'ಗಳ ಸಂಗ್ರಹದ ಮಹತ್ವಪೂರ್ಣ ಕಡತಗನ್ನೆಲ್ಲ ಅತ್ಯಂತ ಜವಾಬ್ದಾರಿಯಿಂದ ನಮಗೆ ಹಸ್ತಾಂತರಿಸಿ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದರು.

ಈ ಸಂದರ್ಭದಲ್ಲಿ ನಾವು ಕಾಶೀ ಶ್ರೀ ಜಗದ್ಗುರು ಪೀಠದ 85ನೆಯ ಪೀಠಾಧಿಪತಿಗಳಾದ ಲಿಂ. ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದರನ್ನು ಕೃತಜ್ಞತೆಯಿಂದ ಜ್ಞಾಪಿಸಿಕೊಂಡು ಅವರ ಅಡಿದಾವರೆಗಳಿಗೆ ಅನಂತ 'ನಮನಶ್ರೀ'ಗಳನ್ನು ಸಲ್ಲಿಸಬಯಸುತ್ತೇವೆ. ಏಕೆಂದರೆ ಅವರು ಸುಮಾರು ಐವತ್ತಕ್ಕೂ ಹೆಚ್ಚು ವರುಷಗಳ ಈ ಸುದೀರ್ಘ ಕಾಲಾವಧಿಯ ಮಧ್ಯದಲ್ಲಿ ಒಂದು ದಾಖಲೆಯೂ ಕೂಡ ಕಳೆದುಹೋಗದಂತೆ ನಿಗಾವಹಿಸಿ ಅವೆಲ್ಲವುಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದಿದ್ದಾರೆ. ತಮ್ಮ ಪೂರ್ವಚಾರ್ಯರ 'ಸಾರಸ್ವತ ನಿಧಿ'ಯು ಒಂದಿಷ್ಟೂ ಹಾನಿಗೊಳಗಾಗದಂತೆ ರಕ್ಷಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಅವರನ್ನು ಸ್ಮರಿಸಿಕೊಂಡು ಪ್ರಪ್ರಥಮದಲ್ಲಿ ಅವರಿಗೆ ಕೃತಜ್ಞತಾಪೂರ್ವಕವಾಗಿ ನಮನಗಳನ್ನು ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯವೆಂದು ನಾವು ಭಾವಿಸಿದ್ದೇವೆ.

ಇನ್ನು ಎರಡನೆಯದಾಗಿ ಸದ್ಯದ ಕಾಶೀ ಜಗದ್ಗುರುಗಳಾದ ಡಾ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಾವು ಕಾಶೀ ಶ್ರೀಪೀಠದಲ್ಲಿ ವಿದ್ಯಾರ್ಥಿಗಳಾಗಿದ್ದು ಅಧ್ಯಯನ ಮಾಡುತ್ತಿದ್ದ ಸಂದರ್ಭದಲ್ಲಿ ತಮ್ಮ ಪೂರ್ವಾಚಾರ್ಯರ ಕುರಿತಾಗಿ ಒಂದು ಪರಿಚಯಾತ್ಮಕ ಮತ್ತು ಸಂಶೋಧನಾಯುಕ್ತ ಕಿರುಹೊತ್ತಿಗೆಯನ್ನು 'ಕಾಶೀ ವಿಶ್ವಾರಾಧ್ಯ ಪೀಠದ ವಿದ್ಯಾನಿಧಿ ಶ್ರೀ ವೀರಭದ್ರ ಜಗದ್ಗುರುಗಳು' ಎಂಬ ನಾಮಾಂಕಿತದಲ್ಲಿ ಹೊರತಂದು ಶ್ರೀ ವೀರಭದ್ರ ಜಗದ್ಗುರುಗಳವರ ಪರಮಪೂಜ್ಯ ಶ್ರೀ ಸನ್ನಿಧಾನಕ್ಕೆ ತಮ್ಮ 'ಶ್ರದ್ಧಾ-ಸುಮನ'ಗಳನ್ನು ಅರ್ಪಿಸಿದ್ದರು. ಆ ಕಿರುಹೊತ್ತಿಗೆಯನ್ನು ಬಳ್ಳಾರಿ ಜಿಲ್ಲೆಯ ಕುಡತಿನಿ ಗ್ರಾಮದ 'ಸತ್ಸಂಗ ಪ್ರಕಾಶನ ಸಂಸ್ಥೆ'ಯು 1988ರಲ್ಲಿ ಪ್ರಕಟಿಸಿ ಆ ಗ್ರಂಥದ 'ಪ್ರಕಟಣಾ ಗೌರವ'ವನ್ನು ತನ್ನದಾಗಿಸಿಕೊಂಡಿತ್ತು. ಮುಂದೆ ಈ ಪುಟ್ಟ ಗ್ರಂಥವು ಮರಾಠಿ ಭಾಷೆಗೆ ಅನುವಾದಗೊಂಡು ಮರಾಠಿ 'ಭಾಷಾ-ಭಾಷಿಗ'ರನ್ನು ಕೂಡ ತಲುಪಿತ್ತು. ಅಂದು ಪರಮಪೂಜ್ಯ ಕಾಶೀ ಜಗದ್ಗುರು ಡಾ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಪೂರ್ವಾಚಾರ್ಯರ ಕುರಿತು ಮಾಡಿದ ಆ 'ಅಕ್ಷರ ದಾಸೋಹ ಸೇವೆ'ಯನ್ನು ಮುಂದುವರಿಸಿಕೊಂಡು ಹೋಗುವ ಭಾಗ್ಯ ನಮ್ಮದಾಗಿರುವುದು ನಮಗೆ ಅತೀವ ಆನಂದವನ್ನುಂಟು ಮಾಡಿದೆ.

ಪರಮಪೂಜ್ಯ ಶ್ರೀ ಕಾಶೀ ಜಗದ್ಗುರುಗಳು ತಮ್ಮ ಪೂರ್ವಾಚಾರ್ಯರ ವಿಷಯದಲ್ಲಿ ಉಪಲಬ್ಧವಾಗಿರುವ ಎಲ್ಲ ಸಾಹಿತ್ಯ ಪ್ರಕಾರಗಳನ್ನು ಮತ್ತು ಪರಿಕರಗಳನ್ನು ಪ್ರಾಂಜಲ ಮನಸ್ಸಿನಿಂದ ನಮಗೆ ನೀಡಿದ್ದಾರೆ. ಅದನ್ನು 'ಅಕ್ಷರಸ್ಥ'ಗೊಳಿಸುವ ಮತ್ತು 'ವ್ಯವಸ್ಥಿತ'ಗೊಳಿಸುವ ಕೈಂಕರ್ಯಕ್ಕೆ ಬದ್ಧರಾಗಿ ನಾವು ಲಿಂ. ಶ್ರೀ ವೀರಭದ್ರ ಜಗದ್ಗುರುಗಳವರ ಪರಮಪೂಜ್ಯ ಶ್ರೀ ಚರಣಾರವಿಂದಗಳಿಗೆ ನಮ್ಮ ಈ 'ಅಕ್ಷರ ಸೇವೆ'ಯನ್ನು ಸಲ್ಲಿಸುತ್ತಿದ್ದೇವೆ. ನಮಗೆ ಈ ಸೇವಾವಕಾಶವನ್ನು ಅನುಗ್ರಹಿಸಿದ ಶ್ರೀ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಶ್ರೀಸನ್ನಿಧಾನಕ್ಕೆ ನಾವು ಕೃತಜ್ಞತೆಯಿಂದ ಮಣಿದು ನಮ್ಮ ಭಕ್ತಿ-ಗೌರವಗಳನ್ನು ಅವರ ಶ್ರೀಚರಣಂಗಳಿಗೆ ಅರ್ಪಿಸುತ್ತೇವೆ.

ಈ ಒಂದು ಮಹತ್ವಪೂರ್ಣ ದಾಖಲಾತ್ಮಕ ಗ್ರಂಥಕ್ಕೆ ಶುಭಾಶೀರ್ವಾದ ಸಂದೇಶವನ್ನು ದಯಪಾಲಿಸಬೇಕೆಂದು ಶ್ರೀ ರಂಭಾಪುರೀ ಜಗದ್ಗುರು ಪ್ರಸನ್ನ ರೇಣುಕ ವೀರ ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರಲ್ಲಿ ಅರಿಕೆ ಮಾಡಿಕೊಂಡಾಗ ನಮ್ಮ ಸಾಹಿತ್ಯವನ್ನು ಯಾವತ್ತೂ ಅಭಿಮಾನದ ಕಣ್ಣುಗಳಿಂದ ಆಶೀರ್ವದಿಸುತ್ತ ಬಂದಿರುವ ಅವರುಗಳು ಕೂಡಲೇ ಈ ಗ್ರಂಥಕ್ಕೆ ಶುಭಾಶೀರ್ವಾದ ಸಂದೇಶವನ್ನು ಬರೆದು ಕಳುಹಿಸಿ ನಮ್ಮನ್ನು ಆಶೀರ್ವದಿಸಿದ್ದಾರೆ. ಅವರ ಶ್ರೀಸನ್ನಿಧಾನಕ್ಕೆ ನಮ್ಮ ಭಾವಪೂರ್ಣ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ. ಈ ಗ್ರಂಥಕ್ಕೆ ಶುಭಾಶೀರ್ವಾದ ಸಂದೇಶವನ್ನು ಕಳುಹಿಸಬೇಕೆಂದು ಶ್ರೀಮತ್ ಶ್ರೀಶೈಲ, ಶ್ರೀಮತ್ ಕೇದಾರ ಹಾಗೂ ಶ್ರೀಮದುಜ್ಜಯಿನಿ

ಜಗದ್ಗುರುಗಳಲ್ಲಿ ಬಿನ್ನವಿಸಿಕೊಂಡಾಗ ಅವರು ತುಂಬ ಸಂತೋಷದಿಂದ ನಮ್ಮನ್ನು ಅಭಿನಂದಿಸಿ ತಮ್ಮ 'ಮೌಖಿಕ ಶುಭಾಶಯಳಿಗಳನ್ನು ತಿಳಿಸಿದ್ದಾರೆ. ಅವರುಗಳನ್ನು ಕೂಡ ಈ ಸಂದರ್ಭದಲ್ಲಿ ಜ್ಞಾಪಿಸಿಕೊಂಡು ಅವರ ಶ್ರೀ ಸನ್ನಿಧಾನಂಗಳಿಗೆ 'ಪ್ರಥಮ ಗೌರವಳಿವನ್ನು ಅರ್ಪಿಸುತ್ತೇವೆ.

ಈ ಮಹಾಮಣಿಹಕ್ಕೆ ಹೆಗಲು ಕೊಟ್ಟು ನಾವು ಈ ಗ್ರಂಥವನ್ನು ರಚಿಸಲು ಉದ್ಯುಕ್ತರಾದಾಗ ನಮ್ಮೀ ಕಾರ್ಯದಲ್ಲಿ ನೆರವಾದ ಕೈಗಳು ಹಲವಾರು, ಪ್ರೋತ್ಸಾಹಿಸಿದ ಮನಸ್ಸುಗಳು ನೂರಾರು. ಆ ಎಲ್ಲ ಕೈಗಳಿಗೆ ಮತ್ತು ಮನಸ್ಸುಗಳಿಗೆ ಇಲ್ಲೊಂದು ಪುಟ್ಟ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದರೆ ಅದು ಈ ಗ್ರಂಥದ 'ಗ್ರಂಥಭಾರಳಿವನ್ನು ಹೆಚ್ಚಿಸುವುದಿಲ್ಲವೆಂದು ನಾವು ಭಾವಿಸಿದ್ದೇವೆ.

ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳವರ ಸುಮಾರು ಐದರಿಂದ ಎಂಟು ದಶಕಗಳಿಗೂ ಮಿಗಿಲು ಹಳತಾಗಿರುವ ಛಾಯಾಚಿತ್ರಗಳನ್ನು ಅಂದರೆ ಗತಕಾಲೀನ ಫೋಟೋಗಳನ್ನು 'ಸಮಕಾಲೀನಳಿಗೊಳಿಸಿದ ಸಾಹಸ ತುಮಕೂರಿನ ನಮ್ಮ ಶ್ರೀ ಸಿ.ಬಿ. ರಾಜುರವರದು. ಅವರು ತುಂಬ ಶ್ರದ್ಧೆವಹಿಸಿ ತಮ್ಮ ಎಲ್ಲ ಕೆಲಸ ಕಾರ್ಯಗಳಿಗೆ 'ತಾತ್ಕಾಲಿಕ ವಿದಾಯಳಿ ಹೇಳಿ ನಮ್ಮ ಜೊತೆಗೆ ಕುಳಿತು ಎಲ್ಲ ಭಾವಚಿತ್ರಗಳನ್ನು ಒಪ್ಪ-ಓರಣಗೊಳಿಸಿ ಕೊಟ್ಟಿದ್ದಾರೆ. ಈ ಕಾರ್ಯದಲ್ಲಿ ಅವರ ಶ್ರೀಮತಿ ಭಾರತಿ ರಾಜುರವರ ಸ್ಫೂರ್ತಿಯು ಕೂಡ ಮೇಳೈಸಿಕೊಂಡಿರುವುದನ್ನು 'ಗಮನಬಾಹಿ ರಳಿವಾಗಿಸುವಂತಿಲ್ಲ.

ನಮ್ಮೊಂದಿಗೆ ರಾತ್ರಿಗಳ ತುಂಬೆಲ್ಲ ಎಚ್ಚರವಾಗಿದ್ದುಕೊಂಡು ನಮ್ಮನ್ನು ನಿದ್ರಾದೇವಿಯ ದಾಳಿಯಿಂದ ರಕ್ಷಿಸಿದ ಮತ್ತು ಶ್ರೀ ವೀರಭದ್ರ ಜಗದ್ಗುರುಗಳ ಜನ್ಮಕುಂಡಲಿಯನ್ನು ಮತ್ತೊಮ್ಮೆ ಪರಿಷ್ಕರಿಸಿ ಕೊಟ್ಟ ನಮಗತ್ಯಂತ ಆತ್ಮೀಯರಾದ ತುಮಕೂರಿನ ನಮ್ಮ ವೇ.ಮೂ. ಶ್ರೀ ಗೌರೀಶಂಕರ ಶಾಸ್ತ್ರಿಗಳನ್ನು ಹಾಗೂ ನಮ್ಮ ಶ್ರೀಮಠದ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಡಿ. ಎಮ್. ಶಿವಕುಮಾರ್‌ರವರನ್ನು ಈ ಸಂದರ್ಭದಲ್ಲಿ ತುಂಬು ಹೃದಯದಿಂದ ಅಭಿನಂದಿಸುತ್ತೇವೆ. ಆಗಾಗ್ಗೆ ನಮಗೆ ಫೋನಿಸಿ ನಮ್ಮ ಕಾರ್ಯವನ್ನು ಉತ್ಸಾಹಿಸಿದ ಮತ್ತು ಪ್ರೋತ್ಸಾಹಿಸಿದ ನಮ್ಮ ಶಿವಾಚಾರ್ಯಮಿತ್ರರಾದ ಕವಲೇದುರ್ಗದ ಶ್ರೀ ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯರನ್ನು, ಎಸಳೂರಿನ ತೆಂಕಲಗೋಡು ಬೃಹನ್ಮಠದ ಶ್ರೀ ಷ.ಬ್ರ. ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯರನ್ನು, ಹುಕ್ಕೇರಿಯ ಶ್ರೀ ಷ. ಬ್ರ. ಚಂದ್ರಶೇಖರ ಶಿವಾಚಾರ್ಯರನ್ನು, ಕಡಕೋಳ ಶ್ರೀ ಮಡಿವಾಳೇಶ್ವರ ಮಠದ ಶ್ರೀ ಷ.ಬ್ರ. ರುದ್ರಮುನಿ ಶಿವಾಚಾರ್ಯರನ್ನು ಹಾಗೂ ತೆಕ್ಕಲಕೋಟೆಯ ಶ್ರೀ ಷ. ಬ್ರ. ವೀರಭದ್ರ ಶಿವಾಚಾರ್ಯರನ್ನು ನಾವು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳುತ್ತೇವೆ.

ನಾವು ಗ್ರಂಥ ರಚನಾ ಕಾರ್ಯದಲ್ಲಿ ತೊಡಗಿಕೊಂಡಾಗ ನಮಗೆ ಕೆಲವು ಅಧಿಕೃತ ಮಾಹಿತಿಗಳನ್ನು ನೀಡಿದ ಹಾಗೂ ಮಹತ್ವಪೂರ್ಣ ದಾಖಲೆಗಳನ್ನು ಒದಗಿಸಿಕೊಟ್ಟ ಕಾಶೀ ಶ್ರೀಪೀಠದಲ್ಲಿರುವ ಪಂಡಿತ ಶ್ರೀ ಚಂದ್ರಹಾಸ ಕರೂರ, ಡಾ. ಶ್ರೀ ಗಂಗಾಧರ ಕೆಂಡದಮಠ ಹಾಗೂ ಶ್ರೀ ಪಂಚಾಕ್ಷರಿ ಲಿಗಾಡೆ ಇವರುಗಳನ್ನು ಸ್ಮರಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವೂ ಅಹುದು ಹಾಗೂ ವೇದ್ಯ ಕರ್ತವ್ಯವೂ ಅಹುದು.

ಇಂಟರ್‌ನೆಟ್ ಮೂಲಕ ನಮ್ಮ ಲಿ-ಮೇಲ್‌ಗೆ ಮೊಘಲ ಚಕ್ರವರ್ತಿಗಳ ಚಿತ್ರಗಳನ್ನು ರವಾನಿಸಿದ ಬೆಂಗಳೂರಿನ ನಮ್ಮ ಶ್ರೀ ಗಂಗಾಧರ್ ಇವರಿಗೂ ನಾವು ಅಭಿನಂದನೆಯನ್ನು ತಿಳಿಸಬೇಕು. ನಮ್ಮ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್(Laptop) ಕಿರಿಕಿರಿ ಮಾಡಿದಾಗ ಅವುಗಳನ್ನು ಸಂತೈಸಿ, ಸಮಾಧಾನಿಸಿ ನಮ್ಮ ಬರಹ ಕಾರ್ಯವು ನಿರಾತಂಕವಾಗಿ ಮತ್ತು ನಿರ್ವಿಘ್ನವಾಗಿ ಸಾಗಲು ಸಹಕರಿಸಿದ ನಮ್ಮ ಯುವ ಸಾಫ್ಟ್‌ವೇರ್ ತಜ್ಞರಾದ ಕುಮಾರ ರಾಘವೇಂದ್ರ ಮತ್ತು ಕುಮಾರ ರವಿಯನ್ನು ನಾವು ಅವಶ್ಯವಾಗಿ ಅಭಿನಂದಿಸಲೇಬೇಕು. ಅದೇ ರೀತಿ ನಾವು ಬೇಕೆಂದಾಗ ನಮಗೆ ಪ್ರಿಂಟ್‌ಔಟ್‌ಗಳನ್ನು ತೆಗೆದುಕೊಟ್ಟ ನಮ್ಮ ಶ್ರೀ ಚಂದ್ರನಾಥ ಪ್ರೆಸ್ಸಿನ ಶ್ರೀ ಪಾರ್ಶ್ವನಾಥ್ ಇವರನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳದೆ ಇರಲಾಗದು. ಗ್ರಂಥದ ಪ್ರೂಫ್ ನೋಡುವ ಕಾರ್ಯದಲ್ಲಿ ಸಹಕರಿಸಿದ ಶ್ರೀಮಠದ ಆತ್ಮೀಯ ಭಕ್ತರಾದ ಶ್ರೀಮತಿ ಶಿವಮ್ಮ ಚಂದ್ರಶೇಖರ ಮತ್ತು ಶ್ರೀಮತಿ ಆಶಾ ಮಲ್ಲಿಕಾರ್ಜುನ ಇವರುಗಳನ್ನು ಜ್ಞಾಪಿಸಿಕೊಂಡು ಅವರಿಗೆ ಹದುಳ ಹಾರೈಸುತ್ತೇವೆ.

ನಾವು ಪುಸ್ತಕ ರಚನಾ ಕಾರ್ಯದಲ್ಲಿ ವ್ಯಸ್ತರಾದಾಗ ಸಾಕಷ್ಟು ಸುಳ್ಳುಗಳನ್ನು ಹೇಳಿ ನಮ್ಮನ್ನು ಭಕ್ತರಿಗೆ ಒಪ್ಪಿಸಿಕೊಡದೆ ನಮಗೆ 'ಏಕಾಂತ'ವನ್ನು ಮತ್ತು 'ಏಕಾಗ್ರತೆ'ಯನ್ನು ಒದಗಿಸಿಕೊಟ್ಟ ನಮ್ಮ ಶ್ರೀಮಠದ ವಿದ್ಯಾರ್ಥಿಗಳಾದ ಕುಮಾರ ಸಂತೋಷ, ವಾಗೀಶ, ವೀರೇಶ, ವೈಭವ, ಅನಿಲ ಮತ್ತು ಚೆನ್ನಬಸು (ಆಲನೂರು) ಇವರುಗಳ 'ಅಳಿಲು ಸೇವೆ'ಯನ್ನು ಸ್ಮರಿಸಿಕೊಳ್ಳದೆ ಹೋದರೆ 'ಮೆಚ್ಚನಾ ಭಗವಂತನು' ಎಂಬ ಅರಿವು ನಮ್ಮಲ್ಲಿದೆ.

ಇನ್ನು ಈ ಗ್ರಂಥವನ್ನು ಪ್ರಕಟಪಡಿಸುತ್ತಿರುವುದು ಕಾಶೀ ಶ್ರೀ ಜಗದ್ಗುರು ಜ್ಞಾನಪೀಠದ ಶ್ರೀ ವಿಶ್ವಾರಾಧ್ಯ ಅನುಸಂಧಾನ ಸಂಸ್ಥೆಯ ಬೆಂಗಳೂರಿನ ಅಂಗಸಂಸ್ಥೆ. ಈ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಡಾ. ಉಮಾದೇವಿಯವರು ನಮ್ಮ ಮೇಲೆ ಸಾಕಷ್ಟು ಒತ್ತಡ ತಂದು ಈ ಕಾರ್ಯವನ್ನು ನಾವು ಬೇಗನೇ ಆಗುಮಾಡುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಶಬರಿಯಂತೆ ಕಾದು, ನಮ್ಮ ಮಾನಸಿಕ ಒತ್ತಡವನ್ನು ಹೆಚ್ಚಿಸಿ, ಒಂದಿಷ್ಟು ನಮ್ಮನ್ನು ಫೋನುಗಳ ಮೂಲಕ ಸತಾಯಿಸಿ ಈ ಕಾರ್ಯವು ನಮ್ಮಿಂದ ಬಹುಬೇಗನೇ ಆಗುವಂತೆ ಆಗುಮಾಡಿಸಿದ್ದಾರೆ. ಅವರ

ಯಜಮಾನರಾದ ಶ್ರೀ ಉಮಾಶಂಕರ ಇವರುಗಳು ಸಹ ನಮ್ಮ ಕರ್ತವ್ಯಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಸಫಲರಾಗಿದ್ದಾರೆ. ಈ ಪರಮ ಸಾತ್ವಿಕ ದಂಪತಿಗಳನ್ನು ನಾವು ತುಂಬು ಹೃದಯದಿಂದ ಅಭಿನಂದಿಸುವ ಮೂಲಕ ಅವರಿಗೆ ಶುಭಕೋರುತ್ತೇವೆ. ಇದೂ ಅಲ್ಲದೆ ಅನುಸಂಧಾನ ಸಂಸ್ಥೆಯ ಎಲ್ಲ ಪದಾಧಿಕಾರಿಗಳಿಗೂ ನಮ್ಮ ಶುಭಾಶಯಗಳನ್ನು ತಿಳಿಸುತ್ತೇವೆ.

ಈ ಗ್ರಂಥಕ್ಕೆ ಲಿಅರ್ಥರೂಪೀ ಇಂಧನಳಿವನ್ನು ತುಂಬಿದ ದಾನಿಗಳು ನಮ್ಮ ಎಸ್.ಎನ್. ವಿನೋದ ದಂಪತಿಗಳು. ದಾನ, ಧರ್ಮದಲ್ಲಿ ಅವರದು ಎತ್ತಿದ ಕೈ. ಸೇವೆಯನ್ನು ಹುಡುಕಿಕೊಂಡು ಹೋಗುವ ಜಾಯಮಾನ ನಮ್ಮ ವಿನೋದರವರದು. ಗುರುಕಾರ್ಯ ಮತ್ತು ದೇವತಾಕಾರ್ಯಗಳೆಂದರೆ ಸಾಕು, ಅವರಲ್ಲಿನ ಉತ್ಸಾಹ ಮತ್ತು ಲವಲವಿಕೆಗಳು ಇಮ್ಮಡಿ-ಮುಮ್ಮಡಿಗೊಳ್ಳುತ್ತವೆ. ಅವರ ಈ ಲಿಗ್ರಂಥ-ದಾಸೋಹಳಿಕ್ಕೆ ಕನ್ನಡದ ಜನಗಳು ಅವರಿಗೆ ಕೃತಜ್ಞರಾಗಿರಬೇಕು. ಅದೇನು ಕಾರಣವೆಂದಡೆ ಶ್ರೀ ವೀರಭದ್ರ ಜಗದ್ಗುರುಗಳಂಥ ಸಮರ್ಥ ವ್ಯಕ್ತಿತ್ವವನ್ನು ನಾಡಿಗೆ ಪರಿಚಯಿಸುವಲ್ಲಿ ಅವರು ತಮ್ಮ ಧನ-ಸಂಪದವನ್ನು ಕೃತಾರ್ಥ ಮತ್ತು ಕೃತಕೃತ್ಯಗೊಳಿಸಿದ್ದಾರೆ. ಆ ದಂಪತಿಗಳಿಗೆ ಮತ್ತು ಅವರ ಕುಟುಂಬಕ್ಕೆ ಭಗವಂತನ ಶ್ರೀರಕ್ಷೆ ಯಾವತ್ತೂ ಲಿರಕ್ಷಾಕವಚಳಿವಾಗಿ ನಿಲ್ಲಲಿ.

ಈ ಗ್ರಂಥವನ್ನು ತುಂಬ ಕಡಿಮೆ ಸಮಯದಲ್ಲಿ ಅಚ್ಚುಕಟ್ಟಾಗಿ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಅಂದದ ಮತ್ತು ಚೆಂದದ ಮುದ್ರಣಕ್ಕೆ ಕರ್ನಾಟಕದಾದ್ಯಂತ ಹೆಸರುವಾಸಿಗಳಾದ ಸ್ನೇಹಾ ಪ್ರಿಂಟರ್ಸ್‌ನ ಮಾಲೀಕರಾದ ಮತ್ತು ಸ್ವತಃ ಖ್ಯಾತ ವಿದ್ವಾಂಸರಾದ ಪ್ರೊ. ಶ್ರೀ ವಿದ್ಯಾಶಂಕರ್‌ರವರನ್ನು ಮತ್ತು ಅವರ ಪುತ್ರರನ್ನು ನಾವು ಆತ್ಮೀಯವಾಗಿ ಅಭಿನಂದಿಸುತ್ತೇವೆ.

ಇನ್ನು ಈ ಅಭಿನಂದನಾ ಸಮಾರಂಭಕ್ಕೆ ತೆರೆ ಎಳೆಯುವ ಮುನ್ನ ಕೊನೆಯದಾಗಿ ಒಂದೇ ಒಂದು ಮಾತು. ಈ ಸಂದರ್ಭದಲ್ಲಿ ಸಂಸ್ಕೃತ ಶ್ಲೋಕವೊಂದು ನಮ್ಮ ಜ್ಞಾಪಕಕ್ಕೆ ಬರುತ್ತಿದೆ.

ಲಿಬುಧಾಗ್ರೇ ನ ಗುಣಾನ್ ಬ್ರೂಯಾತ್ ಸಾಧು ವೇತ್ತಿ ಯತಃ ಸ್ವಯಂ।
ಮೂರ್ಖಾಗ್ರೇಽಪಿ ಚ ನ ಬ್ರೂಯಾತ್ ಬುಧಪ್ರೋಕ್ತಂ ನ ವೇತ್ತಿ ಸಃ॥

ಎಂದು ಪ್ರಾಜ್ಞರಾದವರಿಗೆ ಗುಣಾವಗುಣಗಳ ಕುರಿತು ಹೆಚ್ಚಿಗೆ ಹೇಳುವ ಅವಶ್ಯಕತೆ ಇಲ್ಲ. ಏಕೆಂದರೆ ಅವರು ಸ್ವತಃ ಎಲ್ಲ ವಿಷಯಗಳನ್ನು ಚೆನ್ನಾಗಿ ಗ್ರಹಿಸಿಕೊಂಡಿರುತ್ತಾರೆ. ಇನ್ನು ಪಾಮರ ಶಿಖಾಮಣಿಗಳಿಗೂ ಸಹ ಹೆಚ್ಚಿಗೆ ಹೇಳುವ ಅವಶ್ಯಕತೆ ಇಲ್ಲ. ಏಕೆಂದರೆ ಅವರು ಪ್ರಾಜ್ಞರು ಹೇಳುವುದನ್ನು ಒಂದಿನಿತೂ ಅರ್ಥೈಸಿಕೊಳ್ಳುವುದಿಲ್ಲ.

ಈಗೇಕೆ ಈ ಮಾತು........ ಅಂತೀರಾ? ಈ ಗ್ರಂಥವನ್ನು ಓದಿ ನಮ್ಮ ಜನಗಳು ಶ್ರೀ ವೀರಭದ್ರ ಜಗದ್ಗುರುಗಳ ಬದುಕನ್ನು ಅರ್ಥೈಸಿಕೊಂಡರೆ ಮಾತ್ರ ನಮ್ಮ ಶ್ರಮ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ನಮ್ಮ ಶ್ರಮವೆಲ್ಲ ಗುಡ್ಡಕ್ಕೆ ಕಲ್ಲು ಹೊತ್ತಂತಾಗುತ್ತದೆ. ಆದ್ದರಿಂದ 'ಹಾಗೆಂದು, ಹೀಗೆಂದುಳಿ ಅವರಿವರ ಮೇಲೆ ಆರೋಪ, ಆಪಾದನೆಗಳನ್ನು ಮಾಡದೆ ಈ ಶ್ಲೋಕವನ್ನು ಹೇಳಿಕೊಳ್ಳುವ ಮೂಲಕ ನಮ್ಮನ್ನು ನಾವು ಸಮಾಧಾನಿಸಿ ಕೊಳ್ಳುತ್ತಿದ್ದೇವೆ.

ಶ್ರೀ ವೀರಭದ್ರ ಜಗದ್ಗುರುಗಳ ಬದುಕಿನೊಂದಿಗೆ ನಮ್ಮ ಜನಗಳು ಮಾತನಾಡಬೇಕು. ಅವರನ್ನು ತಮ್ಮಗಳ ಮಸ್ತಿಷ್ಕಗಳಿಗೆ ಇಳಿಸಿಕೊಳ್ಳಬೇಕು. ಅವರಾದರ್ಶಗಳನ್ನು ಯಥಾಸಾಧ್ಯ ಮೈ-ಮನಸ್ಸುಗಳಲ್ಲಿ ಅಳವಡಿಸಿಕೊಳ್ಳಬೇಕು. ಶ್ರೀ ವೀರಭದ್ರ ಜಗದ್ಗುರುಗಳ ಬದುಕಿನ ಪ್ರತಿಯೊಂದು ಅಂಶವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೂ ಅವರಲ್ಲಿನ ಹತ್ತು-ಹಲವು ಅಂಶಗಳಾದರೂ ನಮ್ಮ ಯುವ ಮನಸ್ಸುಗಳಲ್ಲಿ ಸ್ಥಾಯಿಯಾಗಿ ನೆಲೆನಿಂತರೆ ನಾವೊಂದು ಸ್ವಸ್ಥ ಹಾಗೂ ಸುಂದರ ಸಮಾಜವನ್ನು ಕಾಣಬಹುದಾಗಿದೆ. ನಮ್ಮ ಯುವಚೇತನಗಳು ಈ ಗ್ರಂಥದಿಂದ ಸ್ಫೂರ್ತಿ ಪಡೆಯಲಿ. ಶ್ರೀ ವೀರಭದ್ರ ಜಗದ್ಗುರುಗಳು ಅಂದು ಕಂಡ ಆ ಕನಸಿನ ವೀರ ಸೈನಿಕರು ಇಂದು ಸಾವಿರ ಸಾವಿರ ಸಂಖ್ಯೆಯಲ್ಲಿ ಜನ್ಮತಳೆದು ಬರಲಿ ಎಂದು ನಾವು ಆಶಿಸುತ್ತೇವೆ.

ಅಂತತೋ ಗತ್ವಾ, ಸರ್ವ ಜನಗಳ ಮೇಲೆ, ಸರ್ವ ಜೀವಿಗಳ ಮೇಲೆ ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳವರ ಆ ಸ್ನೇಹಮಯ, ವಾತ್ಸಲ್ಯಪೂರ್ಣ ಅನುಗ್ರಹದ ಕಾರುಣ್ಯಧಾರೆ ಅನವರತವೂ ಧಾರೆ ಧಾರೆಯಾಗಿ ಹರಿದು ಬರಲಿ ಎಂದು ಪರಮಪೂಜ್ಯರ ಪಾದಸನ್ನಿಧಿಯಲ್ಲಿ ಪ್ರಾರ್ಥಿಸಿಕೊಳ್ಳುತ್ತ ಈ 'ಗ್ರಂಥ-ಕುಸುಮಳಿವನ್ನು ಅವರ ಮಂಗಲಮಯ 'ಚರಣ-ಸನ್ನಿಧಾನಳಿಕ್ಕೆ ಸಮರ್ಪಿಸುತ್ತೇವೆ.

ಡಾ. ಶ್ರೀ ಶಿವಾನಂದ ಶಿವಾಚಾರ್ಯರು

ಶ್ರೀ ಜಗದ್ಗುರು ವಿಶ್ವಾರಾಧ್ಯರು

'ಆಕಾಶ ತತ್ವ'ದಿಂದ
ಧರಣಿ ಮಂಡಲ ಮಧ್ಯದೊಳಗೆ ಶ್ರೀ ಜಗದ್ಗುರು ವಿಶ್ವಾರಾಧ್ಯರು



ಕಾಶೀ ಪೀಠದ

ಗೋತ್ರಪುರುಷ ಶ್ರೀ ಸ್ಕಂದ



'ಮೋಕ್ಷ ದೀಕ್ಷಾ' ನಗರಿ ಸುಕ್ಷೇತ್ರ ಶ್ರೀ ಕಾಶಿ



ಕಾಶೀ ಶ್ರೀ ಜಂಗಮವಾಡಿಮಠ

'ಶ್ರೀ ವಿಶ್ವಾರಾಧ್ಯೋ ವಿಜಯತೇ'
ಶ್ರೀ ಜಗದ್ಗುರು ವಿಶ್ವಾರಾಧ್ಯರ ಕರ್ತೃ ಸನ್ನಿಧಾನ

ಶ್ರೀ ಜಂಗಮವಾಡಿ ಮಠದ ಮಹಾದ್ವಾರ



ಶ್ರೀ ಜ್ಞಾನಪೀಠ



ಜ್ಞಾನಪೀಠದ ಶ್ರೀ ಸನ್ನಿಧಾನ

'ವಿದ್ವದ್ವಿಭೂತಿ'
ಲಿಂ. ಶ್ರೀ ವೀರಭದ್ರ ಜಗದ್ಗುರುಗಳು

ಕಾಶೀ ಪೀಠದ 79ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ಹರೀಶ್ವರ ಶಿವಾಚಾರ್ಯರು 1826-1879



ಕಾಶೀ ಪೀಠದ 80ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರು (ಪ್ರಥಮ) 1879-1889



ಸಿಂಹಾಸನಾರೂಢ
ಶ್ರೀ ವೀರಭದ್ರ ಜಗದ್ಗುರುಗಳು



ಸುಖಾಸೀನ ಪೂಜ್ಯ ತಪೋಮೂರ್ತಿ
ಶ್ರೀ ವೀರಭದ್ರ ಜಗದ್ಗುರುಗಳು

ಕಾಶೀ ಪೀಠದ 81ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ರಾಜೇಶ್ವರ ಶಿವಾಚಾರ್ಯರು 1889-1907

ಕಾಶೀ ಪೀಠದ 82ನೆಯ ಪೀಠಾಧಿಪತಿಗಳಾದ
ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು 1907-1932

ಕಾಶೀ ಪೀಠದ ೮೩ನೆಯ ಪೀಠಾಧಿಪತಿಗಳಾದ

ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು 1932-1944

'ಭಕ್ತಹೃದಯ ಚೇತನ'
ಕಾಶೀ ಶ್ರೀಪೀಠದ ೮೫ನೆಯ ಪೀಠಾಧಿಪತಿ
ಲಿಂ. ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು

'ವಿದ್ಯಾ ವಾಚಸ್ಪತಿ' 'ಸಾರಸ್ವತ ಚೇತನ'
ಕಾಶೀ ಶ್ರೀ ಪೀಠದ ೮೬ನೆಯ ಪೀಠಾಧಿಪತಿ
ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು



'ಭಾಷಾ ಸರಸ್ವತಿ' 'ವಿದ್ವತ್ ತಪಸ್ವಿ'
ಕಾಶೀ ಶ್ರೀಪೀಠದ 84ನೆಯ ಪೀಠಾಧಿಪತಿ
ಲಿಂ. ಶ್ರೀ ವೀರಭದ್ರ ಜಗದ್ಗುರುಗಳು

ಗ್ರಂಥಕರ್ತರು
ಷ|| ಬ್ರ|| ಡಾ|| ಶ್ರೀ ಶಿವಾನಂದ ಶಿವಾಚಾರ್ಯರು
ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಂದ ಗ್ರಂಥ ಸ್ವೀಕರಿಸುತ್ತಿರುವುದು



ಗ್ರಂಥಕರ್ತರು
ಷ|| ಬ್ರ|| ಡಾ|| ಶ್ರೀ ಶಿವಾನಂದ ಶಿವಾಚಾರ್ಯರು
ಹಿರೇಮಠ, ತುಮಕೂರು

ಲಿಂ|| ಶ್ರೀ ಷರಾಫ್ ಬಿ. ಬಸಪ್ಪನವರು

ಗ್ರಂಥ ದಾನಿಗಳು

ಸಮಾಜದಲ್ಲಿ ಹೆಸರು ಗಳಿಸುವ ಸಲುವಾಗಿ ದಾನ ಕಾರ್ಯಗಳನ್ನು ಮಾಡದೆ ತಮ್ಮ ಆತ್ಮಸಂತೋಷಕ್ಕಾಗಿ, ಹಿರಿಯರ ಆತ್ಮಸಂತೃಪ್ತಿಗಾಗಿ, ತಾಯಂದಿರ ಸಂತೋಷಕ್ಕಾಗಿ ಸೌಜನ್ಯಶೀಲರಾದ ಎಸ್.ಎನ್. ವಿನೋದ್ ಅವರು ಇಂದು 'ವಿದ್ವದ್ವಿಭೂತಿ : ಶ್ರೀ ವೀರಭದ್ರ ಜಗದ್ಗುರುಗಳು' ಎಂಬ ಗ್ರಂಥವನ್ನು ಹೊರತರಲು ನಮಗೆ ಉದಾರವಾದ ಆರ್ಥಿಕ ನೆರವು ನೀಡಿರುವರು. ಕಾಶೀಪೀಠ ಪರಂಪರೆಯ ೮೪ನೇ ಜಗದ್ಗುರುಗಳ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ವೀರಶೈವ ಅನುಸಂಧಾನ ಸಂಸ್ಥಾನವು ಬಿಡುಗಡೆ ಮಾಡುವ ಈ ಗ್ರಂಥಕ್ಕೆ 'ಎಸ್.ಬಿ.ಎನ್. ಬಿ.ಜಿ.ಬಿ., ಎಸ್.ಬಿ.ಜಿ. ಎಂಡೋಮೆಂಟ್ ಟ್ರಸ್ಟ್'ನ ಟ್ರಸ್ಟಿಯಾಗಿರುವ ಶ್ರೀ ಎಸ್.ಎನ್. ವಿನೋದ್ ಅವರು ಟ್ರಸ್ಟ್ ವತಿಯಿಂದ ದಾನ ನೀಡಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ. "ಈ ಪುಸ್ತಕ ಪ್ರಕಟಿಸುವ ಅವಕಾಶ ನಮಗೆ ದೊರೆತದ್ದು ಕಾಶೀ ಜಗದ್ಗುರುಗಳವರ ಆಶೀರ್ವಾದ ಹಾಗೂ ಅನುಗ್ರಹದಿಂದ. ಈ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಟ್ಟ ಪೋಷಕ ಮಂಡಳಿಯ ಎಲ್ಲ ಸದಸ್ಯರಿಗೂ, ಅಧ್ಯಕ್ಷರಾದ ಶ್ರೀ ಬಿ.ಆರ್.ವಿ. ಗೌಡ್ ಅವರಿಗೂ ಗೌರವಪೂರ್ವಕ ವಂದನೆಗಳು" ಎಂದು ಶ್ರೀ ಎಸ್.ಎನ್. ವಿನೋದ್‌ರವರು ತಿಳಿಸಿರುವರು.

ಶ್ರೀ ಷರಾಫ್ ಬಿ. ಬಸಪ್ಪನವರು ತಮ್ಮ ಕಾಲದಲ್ಲಿಯೇ ಕಾಶೀಪೀಠದ ಲಿಂ. ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳ ಸಂಪರ್ಕವನ್ನು ಹೊಂದಿದವರಾಗಿದ್ದರು. ಪಂಚಪೀಠದ ಮಹಾಭಕ್ತರಾಗಿದ್ದ ಶ್ರೀ ಷರಾಫ್ ಬಿ. ಬಸಪ್ಪನವರಿಗೆ ಅಂದಿನ ಐದು ಪೀಠದ ಜಗದ್ಗುರುಗಳೂ ಸೇರಿ ನಕ್ಷತ್ರದಾಕಾರದ ಚಿನ್ನದ ಫಲಕದಲ್ಲಿ ಅವರಿಗೆ ಕೊಟ್ಟ ಬಿರುದನ್ನು ಬರೆಯಿಸಿ ದೊಡ್ಡ ಸಭೆಯಲ್ಲಿ ಅವರನ್ನು ಸನ್ಮಾನಿಸಿ ಗುರುರಕ್ಷೆ ನೀಡಿದ್ದನ್ನು ಇಂದು ಅವರ ಮೊಮ್ಮಗನಾದ ಶ್ರೀ ವಿನೋದ್ ಅವರು ನೆನಪಿಸಿಕೊಳ್ಳುವರು.

ಕರ್ನಾಟಕ ರಾಜಧಾನಿ ಬೆಂಗಳೂರು ಮಹಾನಗರದಲ್ಲಿ ಕೀರ್ತಿಶೇಷ ಶ್ರೀ ಷರಾಫ್ ಬಿ. ಬಸಪ್ಪನವರ ಹೆಸರು ಜನತೆಗೆ ಚಿರಪರಿಚಿತ. ಕಳೆದ ಶತಮಾನದ ಆರಂಭದಲ್ಲಿ



ಲಿಂ|| ಶ್ರೀ ಎಸ್.ಬಿ. ನಂಜುಂಡಯ್ಯನವರು

ಜನಸಾಮಾನ್ಯರ ವಿದ್ಯಾಭ್ಯಾಸದ ಬಗ್ಗೆ ಕನಸು ಕಟ್ಟಿ, ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿ ಅಂದಿನ ಅನೇಕ ಗಣ್ಯರ ಮಾರ್ಗದರ್ಶನದಲ್ಲಿ 'ಬಸಪ್ಪ ಇಂಟರ್ ಮಿಡಿಯೇಟ್ ಕಾಲೇಜ'ನ್ನು ಚಿಕ್ಕದಾಗಿ ಆರಂಭಿಸಿ ತಮ್ಮ ಕನಸನ್ನು ನನಸಾಗಿಸಿಕೊಂಡ ಮಹಾನುಭಾವರು ಷರಾಫ್ ಬಿ. ಬಸಪ್ಪನವರು. ಮುಂದೆ ೧೯೪೫ರಲ್ಲಿ ಇದೇ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು ಇಂದು ಬೃಹದಾಕಾರವಾಗಿ ಬೆಳೆದುನಿಂತಿರುವ 'ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ'ಯಾಗಿ ರೂಪುಗೊಂಡಿದೆ. ಇಂದು ಇದೇ ಸಂಸ್ಥೆ ಅನೇಕ ಶಾಖೆಗಳನ್ನು ತೆರೆದು ವಿದ್ಯಾಕ್ಷೇತ್ರದಲ್ಲಿ ಬಹಳ ಹೆಸರುವಾಸಿಯಾಗಿದೆ. ಅಂತಹ ಮಹಾನ್ ಚೇತನ ಕಟ್ಟಿದ ಕನಸೇ ಈ ಸಂಸ್ಥೆಯ ಬಲವಾದ ಅಡಿಪಾಯವಾಗಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಯಲು ಸಾಧ್ಯವಾಗಿದೆ. ಮುಂದೆ ಅವರ ಮಗನಾದ ಶ್ರೀ ಎಸ್.ಬಿ. ನಂಜುಂಡಯ್ಯನವರು ಸಹ ತಂದೆಯ ಮಾರ್ಗದಲ್ಲೇ ನಡೆದು ಈ ಸಂಸ್ಥೆಯನ್ನು ಪೋಷಿಸಿದರು. ಸಂಸ್ಥೆಯ ಬೆಳವಣಿಗೆಗೆ ಅಹರ್ನಿಶಿ ದುಡಿದರು.

ತಾತ ಷರಾಫ್ ಬಿ. ಬಸಪ್ಪ, ತಂದೆ ಶ್ರೀ ಎಸ್.ಬಿ. ನಂಜುಂಡಯ್ಯನವರ ಆದರ್ಶವನ್ನು ಮುಂದುವರಿಸಿಕೊಂಡು ಬಂದ ಶ್ರೀ ಎಸ್.ಎನ್. ವಿನೋದ್‌ರವರು ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಂಡು ಅದರ ಏಳ್ಗೆಗೆ ಸತತವಾಗಿ ದುಡಿಯುತ್ತಿರುವವರು.

ವೀರಶೈವ ಅನುಸಂಧಾನ ಸಂಸ್ಥಾನದ ಪೋಷಕ ಮಂಡಲಿಯ ಸದಸ್ಯರಾಗಿ ಕಳೆದ ೬-೭ ವರ್ಷಗಳಿಂದ ಅದರ ಕಾರ್ಯಕ್ರಮಗಳ ಜವಾಬ್ದಾರಿ ಹೊತ್ತು ಬಹಳ ಅಚ್ಚುಕಟ್ಟಾಗಿ, ಕಲಾತ್ಮಕವಾಗಿ, ಕಾರ್ಯ ನಡೆಸಿಕೊಂಡು ಬರುತ್ತಿರುವ ಶ್ರೀ ಎಸ್.ಎನ್. ವಿನೋದ್ ಸ್ವಭಾವತಃ ಮೌನಿ. ಯಾವುದೇ ಕಾರ್ಯದಲ್ಲಿ ಬೆನ್ನೆಲುಬಾಗಿ ನಿಂತು ದುಡಿಯುವ ವಿನೋದ್‌ರವರು ಎಂದೂ ವೇದಿಕೆಯ ಪ್ರಚಾರ ಬಯಸಿದವರಲ್ಲ; ಹಿನ್ನೆಲೆಯಲ್ಲೇ ನಿಂತು ಕಾರ್ಯಪ್ರವೃತ್ತರಾಗುವ ಸದ್ಗುಣವುಳ್ಳವರು.

ಶ್ರೀ ಎಸ್.ಎನ್. ವಿನೋದ್ ಅವರು ತಾತನಿಗಿಂತ ಒಂದು ಹೆಜ್ಜೆ ಮುಂದಿಟ್ಟು ಬೆಂಗಳೂರಿನಲ್ಲಿ ಎಸ್.ಬಿ.ಎನ್. ವಿದ್ಯಾರ್ಥಿ ನಿಲಯವನ್ನು ಆರಂಭಿಸಿ ಗ್ರಾಮಾಂತರ ಪ್ರದೇಶದಿಂದ ಬಂದ ಸುಮಾರು ೪೦ ಮಂದಿ ಬಡವಿದ್ಯಾರ್ಥಿಗಳಿಗೆ ಉಚಿತ ಊಟ-ವಸತಿಯನ್ನು ಕಲ್ಪಿಸಿ ಪ್ರೋತ್ಸಾಹಿಸುತ್ತಿದ್ದಾರೆ. ೧೯೭೦ರಲ್ಲಿ ಶ್ರೀ ಎಸ್.ಬಿ. ನಂಜುಂಡಯ್ಯನವರಿಂದ ಆರಂಭಗೊಂಡ ಎಸ್‌ಬಿಎನ್, ಬಿಜಿಬಿ, ಎಸ್‌ಬಿಜಿ ಎಂಡೋಮೆಂಟ್ ಟ್ರಸ್ಟ್‌ನ ಟ್ರಸ್ಟಿಯಾಗಿರುವ ಶ್ರೀ ಎಸ್.ಎನ್. ವಿನೋದ್‌ರವರು ಶೈಕ್ಷಣಿಕ ಸೇವೆಯ ಜೊತೆಗೆ ಸಮಾಜಸೇವಾ ಕಾರ್ಯದಲ್ಲೂ ಆಸಕ್ತಿಯುಳ್ಳವರಾಗಿ

ಕಡುಬಡವರಾದವರಿಗೆ ವೈದ್ಯಕೀಯ ಸಹಾಯ, ಊಟೋಪಚಾರ (poor feeding) ಮೊದಲಾದ ಅಗತ್ಯ ಸೇವೆಗಳನ್ನು ಮಾಡುವ ಮೂಲಕ ಅಲ್ಲಿ ದೇವರನ್ನು ಕಾಣುತ್ತಿರುವರು.

ಕೊಡುಗೈ ದಾನಿಗಳಾದ ಶ್ರೀ ಎಸ್.ಎನ್. ವಿನೋದ್ ಅವರಿಗೆ ಈ ಪುಸ್ತಕ ಪ್ರಕಟಣೆಯ ಅವಕಾಶ ದೊರಕಿರುವುದು ನಿಜಕ್ಕೂ ಸಂತೋಷ ತಂದಿದೆ. ಇದಕ್ಕೆ ಬೆಂಬಲವಾಗಿ ಅವರ ಮಾತೃಶ್ರೀ ಶ್ರೀಮತಿ ಬಿ.ಜಿ. ಭ್ರಮರಾಂಭಮ್ಮ ಮತ್ತು ಶ್ರೀಮತಿ ಎಸ್.ಬಿ. ಗಿರಿಜಾಂಬಮ್ಮನವರೂ ವಿನೋದ್ ಅವರ ಎಲ್ಲ ದಾನಧರ್ಮಗಳಲ್ಲಿ, ಸೇವಾಕಾರ್ಯಗಳಲ್ಲಿ ಭಾಗಿಗಳಾಗಿರುವರು. ಆದ್ಯವಚನಕಾರ ಜೇಡರ ದಾಸಿಮಯ್ಯ ಹೇಳುವಂತೆ ಸಂಪತ್ತನ್ನು ಕೊಡುವವನೂ, ಅದರ ಅಗತ್ಯವಿರುವವರಿಗೆ ಉಳ್ಳವರ ಮೂಲಕ ಅವರ ಅಂತರಂಗದಲ್ಲಿ ಪ್ರೇರಣೆಯಾಗುವಂತೆ ಮಾಡಿ ಕೊಡಿಸುವವನೂ ಆದ ಪರಮಾತ್ಮನ ಈ ಲೀಲಾವಿಲಾಸ ಅತ್ಯದ್ಭುತವಾದುದು:

'ನೀನೀಶನೀಯದೆ ಮಾನೀಶನೀವನೇ
ನೀನೀಸುವ ಕಾರಣ ಮಾನೀಶನೀವನು
ಆ ಮಾನೀಶನ ಹೃದಯದೊಳು ಹೊಕ್ಕು
ನೀನೀಸುವ ಕಾರಣದಿಂದ
ನೀನೆ ಶರಣೆಂಬೆನಯ್ಯಾ ರಾಮನಾಥ.

ಶ್ರೀ ಷರಾಫ್ ಬಿ. ಬಸಪ್ಪನವರ ಮನೆತನದ ಈ ದಾನಪ್ರವೃತ್ತಿಯನ್ನು ನೆನೆದಾಗ ಮೇಲಿನ ವಚನ ನೆನಪಾಗುತ್ತದೆ. ಶ್ರೀ ಎಸ್.ಎನ್. ವಿನೋದ್‌ರವರು ಪುಸ್ತಕ ಪ್ರಕಟಣೆಯಲ್ಲಿ ತೋರಿರುವ ಶ್ರದ್ಧೆಯು ಪಂಚಪೀಠಗಳಲ್ಲಿ ಅವರು ಇಟ್ಟಿರುವ ಅನನ್ಯ ಭಕ್ತಿ-ವಿಶ್ವಾಸವನ್ನು ಪ್ರಕಟಪಡಿಸುತ್ತದೆ.

-ಡಾ. ಸಿ.ಯು. ಉಮಾದೇವಿ ಉಮಾಶಂಕರ್
ಗೌರವ ಕಾರ್ಯದರ್ಶಿ
ವೀರಶೈವ ಅನುಸಂಧಾನ ಸಂಸ್ಥಾನ

ಪರಿಚಯ ಪರ್ವ

ವಿದ್ವದ್ವಿಭೂತಿ
ಶ್ರೀ ವೀರಭದ್ರ ಜಗದ್ಗುರುಗಳು

ಭಾರತವೆನೆ ಕುಣಿದಾಡುವುದೆನ್ನೆದೆ....

''ಅದ್ಯಾಪಿ ದೇವಾ ಇಚ್ಛಂತಿ ಜನ್ಮ ಭಾರತ ಭೂತಲೇ''

(ನಾರದ ಪುರಾಣ 3.52)

'ಈಗಲೂ ಸಹ ಭಾರತದಲ್ಲಿ ಹುಟ್ಟುವುದಕ್ಕೆ ದೇವತೆಗಳು ಲಾಲಾಯಿತರಾಗಿದ್ದಾರೆ'. ಈ ನಮ್ಮ ಭರತ ಭೂಮಿಯಲ್ಲಿ ಹುಟ್ಟುವುದಕ್ಕಾಗಿ ದೇವತೆಗಳು 'ನಾನು ಮೊದಲು, ತಾನು ಮೊದಲು' ಎಂದು ದೌಡಾಯಿಸಿಕೊಂಡು ಪರಸ್ಪರ ಸ್ಪರ್ಧೆಗಿಳಿದಿದ್ದಾರೆ' ಎಂದು ನಾರದ ಪುರಾಣವು ಘಂಟಾಘೋಷವಾಗಿ ಸಾರಿ ಸಾರಿ ಹೇಳಿದೆ. ದೇವತೆಗಳ ಬಂಡವಾಳವನ್ನೆಲ್ಲ ನಾರದಪುರಾಣವು ಹೂಬೇ ಹೂಬಾಗಿ ಬಯಲಿಗೆಳೆದುಬಿಟ್ಟಿದೆ. ಆ ದೇವತೆಗಳೆಲ್ಲ ಈ ಭರತ ಭೂಮಿಯಲ್ಲಿ ಹುಟ್ಟುವುದಕ್ಕೆ ಅಷ್ಟೊಂದು ಆತುರಗೊಳ್ಳುವುದು ಏಕೆ? ಹಂಬಲಿಸುವುದು ಏಕೆ? ಏಕೆಂದರೆ ನಮ್ಮ ದೇಶವಿದು ಬರೀ ಕಾಮ-ಕ್ರೋಧ, ಲೋಭ-ಮೋಹ, ಮದ-ಮತ್ಸರಾದಿಗಳ ದಟ್ಟ ಕಾಡಲ್ಲ. ಧರ್ಮ-ದಯೆಗಳ ಒಡನಾಡಿಯಾದ ಈ ನಾಡು ಭಕ್ತಿಯ ಬೀಡು ಮತ್ತು ಭಾವ-ಭಾವನೆಗಳ ಮಧುರ ಮಕರಂದದಿಂದ ಕೂಡಿದ ಜೇನಗೂಡು. 'ಲೌಕಿಕವಿದು ಕೇವಲ ತಾತ್ಕಾಲಿಕ. ಅಲೌಕಿಕವೊಂದೇ ಶಾಶ್ವತ' ಎಂದು ಗಟ್ಟಿಯಾಗಿ ಪ್ರತಿಪಾದಿಸಿಕೊಂಡು ಬಂದ ದೇಶ ನಮ್ಮದು. ಲೌಕಿಕವನ್ನು ಕೂಡ ಅಲೌಕಿಕವಾಗಿ ಪರಿವರ್ತಿಸಿದ ದೇಶವಿದು. ಭೌತಿಕ ಬೆಳವಣಿಗೆಗಿಂತ ಭಾವನಾತ್ಮಕ ಬೆಳವಣಿಗೆಗೆ ಈ ದೇಶ ಹೆಚ್ಚು ಒತ್ತು ಕೊಟ್ಟಿದೆ. 'ನಾನು, ನನ್ನದು' ಎಂಬುವುದು 'ನೀನು, ನಿನ್ನದು' ಎಂದಾಗಬೇಕು ಎಂದು ಅನವರತವೂ ಹಂಬಲಿಸಿದ ದೇಶವಿದು. ಈ ಕಾರಣದಿಂದಾಗಿಯೇ ದೇವತೆಗಳು ಯಾವತ್ತೂ ಈ ದೇಶದಲ್ಲಿ ವಾಸಮಾಡಿಕೊಂಡಿದ್ದು ಆಡಿಕೊಂಡು ಹಾಡಿಕೊಂಡು ಇರುತ್ತಾರೆ. ಹಾಗೆಂದು ನಾವು ಹೇಳುತ್ತಿಲ್ಲ. ವಿಷ್ಣು ಪುರಾಣ ಹೇಳುತ್ತದೆ, 'ಗಾಯಂತಿ ದೇವಾಃ ಕಿಲ ಗೀತಿಕಾನಿ, ಧನ್ಯಾಸ್ತು ತೇ ಭಾರತ ಭೂಮಿಭಾಗೇ..........' (ವಿಷ್ಣುಪುರಾಣ 2. 3. 24) ಎಂದು.

'ಸತ್ಯಮೇವ ಜಯತೇ' ಇದು ರಾಷ್ಟ್ರೀಯ ಘೋಷವಾಕ್ಯ!
'ಶ್ರದ್ಧಾ ಏವ ಜಯತೇ' ಇದು 'ಭಕ್ತ-ಪ್ರಪಂಚ'ದ ಘೋಷವಾಕ್ಯ!!

'ಸತ್ಯಮೇವ ಜಯತೇ' ಎಂಬುವುದು ಭಾರತದ ರಾಷ್ಟ್ರೀಯ ಘೋಷವಾಕ್ಯವಾದರೆ 'ಶ್ರದ್ಧಾ ಏವ ಜಯತೇ', 'ಭಕ್ತಿರೇವ ಜಯತೇ' ಎಂಬವುಗಳು 'ಭಕ್ತ-ಪ್ರಪಂಚ'ದ ಘೋಷವಾಕ್ಯಗಳು. ಭಾರತವಿದು ಅಪಾರ ಶ್ರದ್ಧೆ, ಅತಿಶಯ ಭಕ್ತಿ ಮತ್ತು ಅಮಾಯಕ ನಂಬಿಕೆಗಳ ತವರುಮನೆ. ಭಾರತೀಯ ಸಂಸ್ಕೃತಿ ಇದು ಬರೀ ಭವ್ಯ ಸಂಸ್ಕೃತಿ ಮಾತ್ರವಲ್ಲ. ಇದು ದಿವ್ಯ ಮತ್ತು ಪರಮ ದಿವ್ಯ ಸಂಸ್ಕೃತಿ ಎಂಬ ಅನ್ವರ್ಥಕ ಅಭಿದಾನವನ್ನು ಪಡೆದುಕೊಂಡಿದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳು ಈ ದೇಶದ ಆಧಾರಸ್ತಂಭಗಳು. ಈ ನಾಲ್ಕರ ಸಾಂಗತ್ಯವನ್ನು 'ಪುರುಷಾರ್ಥ ಚತುಷ್ಟಯ'ವೆಂದು ಕರೆಯಲಾಗಿದೆ. ಈ ದೇಶದಲ್ಲಿ 'ಧರ್ಮೇ ಚ, ಅರ್ಥೇ ಚ, ಕಾಮೇ ಚ ನಾತಿಚರಾಮಿ' ಎಂದಷ್ಟೇ ಹೇಳಿ ನಮ್ಮ ಜನ ಸುಮ್ಮನೇ ಕುಳಿತುಕೊಳ್ಳಲಿಲ್ಲ. ಅವರು ಮುಖತಃ ಹೀಗೆ ಹೇಳುವಾಗ ಅವರ ಮನಸ್ಸು ಮತ್ತು ಅವರಲ್ಲಿನ ಆ ಅಂತರ್ಧ್ವನಿ 'ಮೋಕ್ಷೇನ ಸಹ ಸಂಚರಾಮಿ' ಎಂದು ಮಿಡಿಯುತ್ತಿತ್ತು ಮತ್ತದು ತುಡಿಯುತ್ತಿತ್ತು. ಈ ದೇಶದಲ್ಲಿನ ಜನಗಳು ಬರೀ ಅರ್ಥ, ವ್ಯರ್ಥ, ಸ್ವಾರ್ಥಗಳಿಗೆ ಹಂಬಲಿಸಿಕೊಂಡಿರದೆ ಪರಮ ಪುರುಷಾರ್ಥಕ್ಕಾಗಿ ಮತ್ತು ಪರಮಾರ್ಥಕ್ಕಾಗಿ ಹಂಬಲಿಸಿಕೊಂಡಿರುವ ಗುಣಗಳನ್ನು ಆತ್ಮಸಾತ್‌ಗೊಳಿಸಿಕೊಂಡಿದ್ದಾರೆ. ಈ ದೇಶದಲ್ಲಿ 'ದೇಹಕ್ಕಿಂತ ಧ್ಯೇಯ ಮುಖ್ಯ', 'ಧ್ಯೇಯಕ್ಕಿಂತ ದೈವ ಮುಖ್ಯ'ವಾಗಿ ನಿಂತುಕೊಳ್ಳುತ್ತದೆ. ಅಸಾಧ್ಯವನ್ನು ಸಾಧ್ಯವನ್ನಾಗಿ ಮತ್ತು ವಿಕಲ್ಪವನ್ನು ಸಂಕಲ್ಪವನ್ನಾಗಿ ಪರಿವರ್ತಿಸುವ ದಿಶೆಯಲ್ಲಿ ಈ ದೇಶವಿದು ಪ್ರಮುಖ ಹೆಜ್ಜೆ ಇಟ್ಟಿದೆ. ಇದು ಸೂರ್ಯ 'ಭಾ', ಚಂದ್ರ 'ಭಾ', ದೈವ 'ಭಾ' ಮತ್ತು ಶಿವ 'ಭಾ' ರತವಾದ ದೇಶ. 'ಭಾ' ವಿರತ ದೇಶವಲ್ಲ ನಮ್ಮದು. ಭೋಗರತ ದೇಶವಲ್ಲವಿದು. ಇದು ಯೋಗರತ ದೇಶ. ಉಪನಿಷತ್ತುಗಳನ್ನು ಉಸಿರನ್ನಾಗಿಸಿಕೊಂಡು, ಆಗಮಗಳನ್ನು ಆತ್ಮವಾಗಿಸಿಕೊಂಡು, ವೇದಗಳನ್ನು ವಾಕ್ಕು-ವಾಣಿಯನ್ನಾಗಿಸಿಕೊಂಡು ಮತ್ತು ಪುರಾಣಗಳನ್ನು ಪ್ರಾಣವನ್ನಾಗಿಸಿಕೊಂಡು ಬದುಕುತ್ತಿರುವ ದೇಶವಿದು.

ಕವಿಕುಲಗುರು ಕಾಳಿದಾಸ ತನ್ನ ' ಕುಮಾರಸಂಭವ' ಮಹಾಕಾವ್ಯದಲ್ಲಿ ಈ ಭಾರತ ದೇಶವನ್ನು ಬಣ್ಣಿಸುತ್ತ 'ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ' (ಕುಮಾರ ಸಂಭವ, ಪ್ರಥಮ ಸರ್ಗ, 1ನೇ ಶ್ಲೋಕ) ಎಂದು ಈ ಭವ್ಯ ಭಾರತದ ವೈಭವವನ್ನು ನಮ್ಮ ಕಣ್ಣುಗಳ ಮುಂದೆ ತಂದು ನಿಲ್ಲಿಸುತ್ತಾನೆ. ಭಾರತದ ಉತ್ತರ ದಿಕ್ಕಿನಲ್ಲಿ ಆಕಾಶದುದ್ದಕ್ಕೂ ತಲೆ ಎತ್ತಿ ನಿಂತಿರುವ ಹಿಮಾಲಯ ಈ ದೇಶದ 'ರಕ್ಷಾಕವಚ'ವಿದ್ದಂತಿದೆ. ಅದು ತನ್ನ ಕಬಂಧ ಬಾಹುಗಳನ್ನು ಬಿಚ್ಚಿ ನಿಂತುಕೊಳ್ಳದಿದ್ದರೆ ಭಾರತವಿದು ಛಳಿ-ಗಾಳಿ-ಮಳೆಗಳಿಂದ ಅನವರತವೂ ಗಡಗಡನೆ ನಡುಗುತ್ತ ನಿಂತುಕೊಳ್ಳಬೇಕಾಗುತ್ತಿತ್ತು. ಆದರೆ ಪರ್ವತರಾಜ ಹಿಮಾಲಯದಿಂದಾಗಿ ನಾವುಗಳು ಸಂಭವನೀಯ ಅವಗಢಗಳಿಂದ ಬಚಾವಾಗಿದ್ದೇವೆ.

ಭಾರತವಿದು ಬೌದ್ಧಿಕವಾಗಿ ಧೀಮಂತ ರಾಷ್ಟ್ರ !
ಭಾವನಾತ್ಮಕವಾಗಿ ಶ್ರೀಮಂತ ರಾಷ್ಟ್ರ !!

ಭಾರತವೆಂದರೆ ಸಾಕು, ಮೈ-ಮನಗಳ ತುಂಬೆಲ್ಲ ರೋಮಾಂಚನವು ತುಂಬಿಕೊಳ್ಳುವುದು. ನಮ್ಮದು ಬೌದ್ಧಿಕವಾಗಿ ಧೀಮಂತ ರಾಷ್ಟ್ರ ಮತ್ತು ಭಾವನಾತ್ಮಕವಾಗಿ ಶ್ರೀಮಂತ ರಾಷ್ಟ್ರ. ನಾವು ಆಧ್ಯಾತ್ಮಿಕವಾಗಿ ಬುದ್ಧರು, ವೈಚಾರಿಕವಾಗಿ ಪ್ರಬುದ್ಧರು. ಬರೀ ಗಂಗೆ, ಯಮುನೆಯರಿಗೆ ಮಾತ್ರ ಗಂಗೋತ್ರಿ, ಯಮುನೋತ್ರಿಯಾಗಿ ನಿಂತುಕೊಳ್ಳದೆ 'ಪ್ರಸ್ಥಾನತ್ರಯ'ಗಳಿಗೂ ಗಂಗೋತ್ರಿ, ಯಮುನೋತ್ರಿಯಾಗಿ ನಿಂತ ದೇಶವಿದು. ಕ್ಷಮೆ, ಸಹನೆ, ತ್ಯಾಗ, ಸಂಯಮಗಳು ಇಲ್ಲಿ ಉಸಿರಾಡಿವೆ. ಭಕ್ತಿ, ಜ್ಞಾನ, ಕರ್ಮಗಳು ಇಲ್ಲಿ ಮನೆಮಾಡಿಕೊಂಡಿವೆ. ಆದ್ದರಿಂದಲೇ ಉಕ್ಕಿನ ಮನುಷ್ಯ ಸರದಾರ್ ಪಟೇಲರು ತಮ್ಮೊಂದು ಭಾಷಣದಲ್ಲಿ ಹೇಳುತ್ತಾರೆ, ''ಹಮಾರೀ ಭಾರತ ಭೂಮಿ ಕೀ ಏಕ್ ಬಡೀ ವಿಶೇಷತಾ ಹೈ. ಚಾಹೇ ಜಿತನೇ ಉತಾರ್-ಚಢಾವ್ ಆಯೇಂ, ತೋ ಭೀ ಪುಣ್ಯಶಾಲೀ ಆತ್ಮಾಯೇಂ ಯಹಾಂ ಜನ್ಮಲೇತೀ ಹೈಂ'' ಎಂದು. 'ಎಷ್ಟೇ ಆಪತ್ತು, ವಿಪತ್ತುಗಳು ಎದುರಾದರೂ, ಏರಿಳಿತಗಳು ಉಂಟಾದರೂ ಈ ದೇಶದ ಪವಿತ್ರ ಮಣ್ಣಿನಲ್ಲಿ ಪುಣ್ಯಪುರುಷರು ಜನ್ಮ ತಳೆದು ಬರುತ್ತಾರೆ. ಅದುವೇ ಈ ನಮ್ಮ ಭವ್ಯ ಭಾರತದ ವೈಶಿಷ್ಟ್ಯ'ವೆಂದು ಪಟೇಲರು ಉದ್ಗರಿಸಿದ್ದಾರೆ. ಚೀನ ದೇಶದಿಂದ ಭಾರತದ ಪ್ರವಾಸಕ್ಕೆಂದು ಬಂದಿದ್ದ ಹ್ಯುಯನ್‌ತ್ಸ್ಯಾಂಗ್ ಹೇಳುವುದನ್ನು ಎಲ್ಲರೂ ಕೇಳಬೇಕು. ಆತ ಹೇಳುತ್ತಾನೆ, ''ಧನ್ಯ ಹೈ ವಹ್ ಭಾರತ್, ಜಹಾಂ ನ್ಯಾಯಾಲಯ್ ಹೈ ಪರ್ ಕೋಯೀ ಅಪರಾಧೀ ನಹೀಂ, ಕಾರಾಗಾರ್ ಹೈಂ ಪರ್ ಕೋಯೀ ಬಂದೀ ನಹೀಂ, ಘರ್ ಮೇ ಸಂಪೂರ್ಣ ಸಮೃದ್ಧಿ ಹೈ ಪರ್ ತಾಲೇ ನಹೀಂ........'' 'ಯಾವ ದೇಶದಲ್ಲಿ ನ್ಯಾಯಾಲಯಗಳಿದ್ದರೂ ಶಿಕ್ಷೆ ನೀಡುವುದಕ್ಕೆ ಅಪರಾಧಿಗಳು ದೊರೆಯುವುದಿಲ್ಲವೋ, ಎಲ್ಲಿ ಸೆರೆಮನೆಗಳಿದ್ದರೂ ಕಳ್ಳಕಾಕರು ಇರುವುದಿಲ್ಲವೋ, ಎಲ್ಲಿ ಮನೆಗಳು ಸಮೃದ್ಧಿಯಿಂದ ಕೂಡಿಕೊಂಡಿದ್ದರೂ ಚೋರ-ತಸ್ಕರರ ಭೀತಿ ಇಲ್ಲದೆ ಬೀಗ ಹಾಗೂ ಬೀಗದ ಕೈಗಳಿಂದ ಮುಕ್ತವಾಗಿವೆಯೋ ಅಂಥ ಭಾರತವಿದು ಧನ್ಯ, ಧನ್ಯ'' ಎಂದು ಹ್ಯುಯನ್ ತ್ಸ್ಯಾಂಗ್ ಇಂಥ ಪಗನು ದಿವ್ಯ ಭಾರತದ ದರ್ಶನವನ್ನು ಪಡೆದುದಕ್ಕಾಗಿ ತನ್ನನ್ನೇ ತಾನು 'ಧನ್ಯೋಽಸ್ಮಿ' ಎಂದು 'ಸ್ವಗತ'ದಲ್ಲಿ ಅಭಿನಂದಿಸಿಕೊಳ್ಳುತ್ತಿದ್ದಾನೆ.

ಧರ್ಮ-ದರ್ಶನಗಳ ಪಠ್ಯಪುಸ್ತಕವೀ ಭಾರತ.....

ಭಾರತದಲ್ಲಿ ಧರ್ಮ, ದರ್ಶನ, ತತ್ವಜ್ಞಾನಗಳು ದಟ್ಟೈಸಿಕೊಂಡಿವೆ. ಆದ್ದರಿಂದ ಇಲ್ಲಿ ತತ್ವಜ್ಞಾನಿಗಳಿಗೆ, ದಾರ್ಶನಿಕರಿಗೆ, ದೃಷ್ಟಾರರಿಗೆ, ಚಿಂತಕರಿಗೆ ಕೊರತೆಯೇ ಇಲ್ಲ.

ಸಂತ-ಮಹಂತರ ಜಾತ್ರೆಯೇ ಇಲ್ಲಿ ಸೇರಿಕೊಂಡಂತಿದೆ. ಈ ದೇಶದಲ್ಲಿ ಋಷಿ-ಮಹರ್ಷಿಗಳ, ಮುನಿ-ಮನೀಷಿಗಳ, ಸಂತ-ಮಹಂತರ ಅಭಾವವಿದೆ ಎಂದು ಯಾವ ಕಾಲಕ್ಕೂ ಹೇಳುವ ಹಾಗಿಲ್ಲ. ಈ ಮಣ್ಣಿನ ಕಣಕಣದಲ್ಲೂ ತಪಸ್ಸಿನ ವಾಸನೆ ತುಂಬಿಕೊಂಡಿದೆ. ಇಲ್ಲಿ ತ್ಯಾಗದ ಹವಿಸ್ಸು ಮನೆಮಾಡಿಕೊಂಡಿದೆ. ತಪಸ್ವಿಗಳ ತಪಸ್ಸು, ತ್ಯಾಗಿಗಳ ತ್ಯಾಗ, ಸಿದ್ಧರ ಸಿದ್ಧಿ, ಸಾಧಕರ ಸಾಧನೆ ಈ ಸುಜನ ಜನಪದ ಭಾರತವನ್ನು 'ದೇವಭೂಮಿ'ಯನ್ನಾಗಿಸಿದೆ. ಸಾಕ್ಷಾತ್ ದೈವವಿಲ್ಲಿ ಎರಡು ಮಾತನಾಡದೆ ಸ್ಥಾವರವಾಗಿ ನೆಲೆನಿಂತುಕೊಳ್ಳುವ ಹಾಗೆ ಮಾಡಿದೆ. ಇಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಯತಿಯಾಗಿ, ಮತಿಯಾಗಿ ನಿಂತುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾನೆ. ''In India Philosophers are Saints, Saints are Philosophers'' ಎಂದು ಕವಿ ರವೀಂದ್ರನಾಥ್ ಟ್ಯಾಗೋರ್‌ರವರು ಈ ದೇಶದ ಆಧ್ಯಾತ್ಮಿಕ ಮತ್ತು ವೈಚಾರಿಕ ಐಸಿರಿಯನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ. ನಾವು ಭಾರತೀಯರು ಬೌದ್ಧಿಕವಾಗಿ ಅದೆಷ್ಟು ಶ್ರೀಮಂತರು ಮತ್ತು ಪ್ರಗಲ್ಭರು ಎಂಬುವುದನ್ನು ರಾಧಾಕೃಷ್ಣನ್‌ರ ಮಾತುಗಳಲ್ಲಿ ಕೇಳಿ- ''Today Indian wisdom is essential not only for the well and good of the Indian nation but also for the re-education of the human race''ಎಂದು. ಇಡೀ ವಿಶ್ವಕ್ಕೆ ಮಾನವೀಯ ಮೌಲ್ಯಗಳ ಹಾಗೂ ಜೀವನಾದರ್ಶಗಳ ಕುರಿತು ಸಮರ್ಥವಾಗಿ ಪಾಠ ಮಾಡುವ ಸಾಮರ್ಥ್ಯವನ್ನು ಭಾರತ ಹೊಂದಿದೆ. ಸಮಗ್ರ ಭಾರತ ದೇಶವಿದು 'ಪರಸುಖ' ಮತ್ತು 'ಪರಮ ಸುಖ'ದ ಪಠ್ಯಪುಸ್ತಕ'ವಿದ್ದಂತಿದೆ.

ಇಡೀ ಜಗತ್ತಿಗೆ ಭಾರತೀಯರು ಹಿರಿಯಣ್ಣಗಳು.......!!

ಭಾರತೀಯರು ಇತ್ತೀಚೆಗೆ, ಈಗ, ಈ ಕಾಲದಲ್ಲಿ ಬೆಳೆದು ಪ್ರಬುದ್ಧರಾಗಿದ್ದಾರೆ ಎಂದು ಯಾರೂ ಭಾವಿಸಕೂಡದು. ಅವರು ಪುರಾತನ ಕಾಲದಿಂದಲೂ ಪ್ರಬುದ್ಧರು. ಭಾರತೀಯರು ಬೆಳೆದು ದೊಡ್ಡವರಾಗಲಿಲ್ಲ. ಅವರು ದೊಡ್ಡವರಾಗಿಯೇ ಬೆಳೆದರು. ಜಗತ್ತು ಬೆಳೆದು ಪ್ರಬುದ್ಧವಾಗುವ ಸಮಯಕ್ಕೆ ಅವರು ಪ್ರಾಚೀನರಾಗಿ, ಪುರಾತನರಾಗಿ ನಿಂತಕೊಂಡಿದ್ದರು. ಜಗತ್ತು ಆಸೆ-ಆಮಿಷಗಳ, ಭೋಗ-ಉಪಭೋಗಗಳ ಲೋಕದಲ್ಲಿ ಕಣ್ಣು ಬಿಡುವಷ್ಟರಲ್ಲಿ ಭಾರತೀಯರು ಆತ್ಮ-ಪರಮಾತ್ಮರ ಲೋಕದಲ್ಲಿ ವಿಹರಿಸಿಕೊಂಡು ಆನಂದದಿಂದ ಅರ್ಧನಿಮೀಲಿತ ನೇತ್ರರಾಗಿದ್ದುಕೊಂಡು ಧ್ಯಾನಸ್ಥರಾಗಿದ್ದರು. ಜಗತ್ತು ಮಾತನಾಡುವುದಕ್ಕೆ ಶುರುಹಚ್ಚಿಕೊಳ್ಳುವ ಹೊತ್ತಿಗೆ 'ಮೌನಸುಖ'ದ ಮಹಾಮನೆಯನ್ನು ಸೇರಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿತ್ತು. ಬದ್ಧರನ್ನು ಬುದ್ಧರನ್ನಾಗಿ, ಪಾಮರರನ್ನು ಪ್ರಬುದ್ಧರನ್ನಾಗಿ ಪರಿವರ್ತಿಸಿದ ದೇಶವಿದು. ಪಾಮರರು ಇಲ್ಲಿ ಪರಮಹಂಸರಾಗಿ ಬೆಳೆದರು, ವಾಮನರು ವೇಮನರಾಗಿ ಮೊಳಗಿದರು. ಇಲ್ಲಿ ರಾಜರ್ಷಿಗಳು

ದೇವರ್ಷಿಗಳಾಗಿ, ದೇವರ್ಷಿಗಳು ಮಹರ್ಷಿಗಳಾಗಿ, ಮಹರ್ಷಿಗಳು ಬ್ರಹ್ಮರ್ಷಿಗಳಾಗಿ ಬೆಳೆದರು. ರತಿಯು ಇಲ್ಲಿ ವಿರತಿಯಾಗಿ ವಿಜೃಂಭಿಸಿತು. ವಿಷಯಾಸಕ್ತರಿಲ್ಲಿ ಜೀವನ್ಮುಕ್ತರಾಗಿ ಬೆಳಗಿದರು. ದೃಶ್ಯ, ಅದೃಶ್ಯಗಳಿಲ್ಲಿ 'ಅಸದೃಶ'ಗಳಾಗಿ ಬೆಳೆದು ನಿಂತವು.

'ನೀನೊಲಿದರೆ ಒಲಿ, ಒಲಿಯದಿದ್ದರೆ ಮಾಣು' ಎಂದು ದೇವರಿಗೇ ಸವಾಲೆಸೆದ ದಿಟ್ಟರು ಈ ಮಣ್ಣಿನಲ್ಲಿ ಹುಟ್ಟು ಪಡೆದಿದ್ದಾರೆ. 'ನಾಸ್ತಿ'ಯನ್ನೇ 'ಆಸ್ತಿ'ಯನ್ನಾಗಿ ಪರಿವರ್ತಿಸಿದ ಭಾರತೀಯರು ತಮ್ಮಲ್ಲಿನ ಶ್ರದ್ಧೆಯಿಂದ ಆ ಭಗವಂತನನ್ನೇ ಕಟ್ಟಿಹಾಕಿದ್ದಾರೆ. ಇಲ್ಲಿನ ಜನಗಳ ಶ್ರದ್ಧೆಯು ಕಲ್ಲುಕೋಳಿಗಳು ಕೂಗುವಂತೆ, ಕಾದ ಬಾಣಲೆಯಲ್ಲಿ ಹೂಗಳರಳಿ ನಳನಳಿಸಿ ಸಂಭ್ರಮಿಸುವಂತೆ, ಕಲ್ಲು ವಿಗ್ರಹಗಳು ಗುರುಗಳಾಗಿ ಪಾಠ ಮಡುವಂತೆ ಮಾಡಿವೆ. ಭಾರತೀಯರು ಮೊದಲು ಶ್ರದ್ಧಾಜೀವಿಗಳು. ನಂತರ ಅವರು ಬುದ್ಧಿಜೀವಿಗಳು. ಭಾರತೀಯರ ಶ್ರದ್ಧೆ ಅಗ್ಘವಣಿಯನ್ನು ತೀರ್ಥವನ್ನಾಗಿಸಿತು, ಪದಾರ್ಥಗಳನ್ನು ಪ್ರಸಾದವನ್ನಾಗಿಸಿತು, ಕಲ್ಲು, ಕಟ್ಟಿಗೆ, ಮಣ್ಣು-ಮಸಿಗಳನ್ನು ದೈವವಾಗಿಸಿತು. ಗ್ರಹಗಳನ್ನು ವಿಗ್ರಹವಾಗಿಸಿತು. ಭಾರತದಲ್ಲಿ ಚಮತ್ಕಾರಗಳಿಲ್ಲ. ಏಕೆಂದರೆ ಭಾರತವೇ ಒಂದು ಚಮತ್ಕಾರ!!

ಕಾಶೀ ಕ್ಷೇತ್ರವಿದು.........

'ಕಾಶಿ' ಎಂದರೆ ಸಾಕು 'ಭವರೋಗವೆಲ್ಲ ವಾಸಿ' ಎಂಬ ಭಾವನೆ ನಮ್ಮ ಜನಗಳ ಮನದಲ್ಲಿ ಓತಪ್ರೋತವಾಗಿ ತುಂಬಿಕೊಂಡಿದೆ. ಕಾಶಿಯನ್ನು ಜ್ಞಾಪಿಸಿಕೊಳ್ಳುತ್ತಲೇ ನಮ್ಮ ಜನಗಳ 'ಹಮ್ಮು'ಗಳು ತಣ್ಣಗಾಗುತ್ತವೆ, ಹುಬ್ಬುಗಳು ಇಳಿದುಕೊಳ್ಳುತ್ತವೆ, ಹಣೆಗಳು ಮಣಿದುಕೊಳುತ್ತವೆ, ತಲೆಗಳು ಬಾಗಿಕೊಳ್ಳುತ್ತವೆ ಮತ್ತು ಕೈಗಳು ಮುಗಿದುಕೊಳ್ಳುತ್ತವೆ. ಕಾಶಿಯು ಭಾರತೀಯ ಜನಗಳ ಮನಸ್ಸಿನ ಮೇಲೆ 'ಸಮ್ಮೋಹಿನಿ ವರ್ಚಸ್ಸ'ನ್ನು ಹೊಂದಿದೆ. ಕಾಶೀ ಪಟ್ಟಣವು ಭಾರತೀಯ ಜನಗಳ 'ಶ್ರದ್ಧಾಕೇಂದ್ರ' ಹಾಗೂ ಭಾವನೆಗಳ 'ಶಕ್ತಿಕೇಂದ್ರ'. 'ಕಾಶಿ' ಎಂದರೆ 'ಕೈವಲ್ಯ'. 'ಕೈವಲ್ಯ'ವೆಂದರೆ 'ಕಾಶಿ' ಎಂಬ ಭಾವನೆಯು ನಮ್ಮ ಜನಗಳ ಮನಸ್ಸಿನಲ್ಲಿ ಬಿಡಾರ ಹೂಡಿ ಬಿಟ್ಟಿದೆ. 'ಕಾಶಿಯಿಂದ ಕೈವಲ್ಯ' ಅಥವಾ 'ಕಾಶಿಯಲ್ಲಿ ಸಾಯುವುದರಿಂದ ಕೈವಲ್ಯ' (ಕಾಶ್ಯಾಂ ಮರಣಾನ್ಮುಕ್ತಿಃ) ಎಂಬ ಭಾವನೆಗಿಂತ ನಮ್ಮ ಜನಗಳಲ್ಲಿ ''ಕಾಶಿಯೇ ಕೈವಲ್ಯ' ಎಂಬ ಭಾವನೆ ಬಲು ದಟ್ಟವಾಗಿ ತುಂಬಿಕೊಂಡಿದೆ. ನಮ್ಮ ಜನಗಳ ಮಧ್ಯದಲ್ಲಿ ಕೈಲಾಸವಾಸಕ್ಕಿಂತಲೂ ಕಾಶೀವಾಸ ಹೆಚ್ಚು ಜನಪ್ರಿಯವಾಗಿದೆ. ಏಕೆಂದರೆ ಸತ್ತು 'ಕೈಲಾಸವಾಸಿ'ಗಳಾಗುವುದಕ್ಕಿಂತ ಬದುಕಿದ್ದು 'ಕಾಶೀವಾಸ' ಮಾಡಿಕೊಂಡಿರುವುದು ಕ್ಷೇಮವಲ್ಲವೇ? ಆದ್ದರಿಂದಲೇ ಭಾರತದ ಬಹುಪಾಲು ಜನಗಳು ತಮ್ಮ ಜೀವಿತಾವಧಿಯಲ್ಲಿ 'ಕಾಶೀವಾಸ'ಕ್ಕಾಗಿ ಹಂಬಲಿಸಿಕೊಂಡಿರುತ್ತಾರೆ.

ಭಾರತ ದೇಶದ ಧಾರ್ಮಿಕ ರಾಜಧಾನಿ ಎಂದು ಗುರುತಿಸಲ್ಪಟ್ಟಿರುವ ಕಾಶಿಯು ಪ್ರಪಂಚದ ಅತ್ಯಂತ ಪ್ರಾಚೀನ ಪಟ್ಟಣಗಳಲ್ಲಿ ಒಂದು. ಕಾಶಿಯನ್ನು 'ಮೋಕ್ಷಪುರ' ಎಂಬ ಪರ್ಯಾಯ ನಾಮದಿಂದ ಕರೆಯಲಾಗಿದೆ. ಗರುಡ ಪುರಾಣದಲ್ಲಿ,

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ ।
ಪುರೀ ದ್ವಾರವತೀ ಚೈವ ಸಪ್ತೈತಾ ಮೋಕ್ಷದಾಯಿಕಾಃ॥

(ಗರುಡ ಪುರಾಣ ಪ್ರೇತಖಂಡ 24-25)

ಅಯೋಧ್ಯಾ, ಮಥುರಾ, ಹರದ್ವಾರ, ಕಾಶೀ, ಕಾಂಚೀ, ಉಜ್ಜಯಿನಿ ಮತ್ತು ದ್ವಾರಕಾ ಈ ಏಳು ಪಟ್ಟಣಗಳನ್ನು ಮೋಕ್ಷದ ಹೆಬ್ಬಾಗಿಲಗಳೆಂದು ಕರೆಯಲಾಗಿದೆ. ಸರ್ವರಿಗೂ 'ಮೋಕ್ಷದೀಕ್ಷೆ'ಯನ್ನು ನೀಡುವ ಈ ಪಟ್ಟಣಗಳು ಭಾರತೀಯ ಭಾವ-ಭಾವನೆಗಳ ಶ್ರದ್ಧಾಬಿಂದುಗಳಾಗಿ ನಿಂತುಕೊಂಡಿವೆ. ಅದರಲ್ಲೂ ಕಾಶಿಯದೇ 'ಮೇಲುಗೈ' ಎಂದರೆ ತಪ್ಪೇನಿಲ್ಲ. ಕಾಶಿಯಿದು ಬೆಳಗಿನ ಮಹಾಮನೆ. ಸೂರ್ಯ, ಚಂದ್ರ, ನಕ್ಷತ್ರಗಳ ಹಾಗೆ ಕಾಶಿಯಿದು ಸ್ವಯಂ ಪ್ರಕಾಶಕ. ಅಷ್ಟೇ ಅಲ್ಲ, ಅದರ ಜೊತೆ ಜೊತೆಯಲ್ಲಿ ಸಮಸ್ತ ಪ್ರಪಂಚವನ್ನು ಬೆಳಗುವ ವಿಶೇಷ ಸಾಮರ್ಥ್ಯವನ್ನಿದು ಹೊಂದಿದೆ. 'ಬೆಳಗು' ಮತ್ತು 'ಬೆಳಗಿಸು' ಎಂಬ ಸಿದ್ಧಾಂತವನ್ನು ಇದು ತನ್ನಲ್ಲಿ ಅವಧರಿಸಿಕೊಂಡಿದೆ.

ಕಾಶಿಯನ್ನು ಕುರಿತು ಆದಿ ಶಂಕರಾಚಾರ್ಯರು ಅಭಿಪ್ರಾಯಿಸುತ್ತ ಹೇಳುತ್ತಾರೆ,

ಕಾಶ್ಯಾಂ ಹಿ ಕಾಶ್ಯತೇ ಕಾಶೀ ಕಾಶೀ ಸರ್ವಪ್ರಕಾಶಿಕಾ ।
ಸಾ ಕಾಶೀ ವಿದಿತಾ ಯೇನ ತೇನ ಪ್ರಾಪ್ತಾ ಹಿ ಕಾಶಿಕಾ ॥

(ಶಂಕರಾಚಾರ್ಯ, ಕಾಶೀಪಂಚಕ 4)

''ಕಾಶಿಯು ಸರ್ವಪ್ರಕಾಶಕವಾಗಿದೆ. ಅದು ಬೆಳಗುವವರನ್ನು, ಬೆಳಗದವರನ್ನು, ಮತ್ತೆ ಬೆಳಗಲು ಹಟ ಮಾಡುವವರನ್ನು ಒಟ್ಟಿನಲ್ಲಿ ಎಲ್ಲರನ್ನೂ ಬೆಳಗುತ್ತದೆ. ಇಂಥ ಕಾಶಿಯ ಮರ್ಮವನ್ನು ಯಾರು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆಯೋ ಅವರು 'ಮೋಕ್ಷದೀಕ್ಷಿತ'ರೇ ಸರಿ. ಇದರಲ್ಲಿ ಸಂದೇಹ ಬೇಡ'' ಎಂದು ಅದ್ವೈತ ಲೋಕದ 'ಧ್ರುವನಕ್ಷತ್ರ'ವೆಂದೇ ಖ್ಯಾತರಾದ ಶಂಕರರು ಕಾಶಿಯನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ.

ಬರೀ ಶಂಕರರಷ್ಟೇ ಅಲ್ಲ, ಈ ದೇಶದಲ್ಲಿನ ಪ್ರತಿಯೊಬ್ಬ ನಾಗರಿಕನೂ ಸಹ ಕಾಶೀ ಕ್ಷೇತ್ರದ ಕುರಿತು ಮನದುಂಬಿ ಮಾತನಾಡುತ್ತಾನೆ. ಈ ಕ್ಷೇತ್ರದ ಮಹಿಮಾತಿಶಯವನ್ನು ಎದೆ ತುಂಬಿ ಹಾಡುತ್ತಾನೆ. ಈ ನಮ್ಮ ಭಾರತ ದೇಶದಲ್ಲಿ ಕಾಶಿಯನ್ನು ಹೊಗಳದ ನಾಲಿಗೆಗಳೇ ಇಲ್ಲವೆಂದು ಹೇಳಬಹುದು.

ಕಾಶೀ ಕ್ಷೇತ್ರವನ್ನು ಕುರಿತು ಅಜ್ಞಾತ ಕವಿಯೊಬ್ಬ ಹೇಳಿದ ಮಾತನ್ನು ಪ್ರಸ್ತುತ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು.

ವಿದ್ಯಾನಾಂ ಸದನಂ ಕಾಶೀ, ಕಾಶೀ ಲಕ್ಷ್ಮ್ಯಾಃ ಪರಾಲಯಃ ।
ಮುಕ್ತಿಕ್ಷೇತ್ರಮಿದಂ ಕಾಶೀ ಕಾಶೀ ಸರ್ವಾ ತ್ರಯೀಮಯೀ ॥

ಕಾಶಿ ಇದು ವಿದ್ಯೆಯ ಆವಾಸ ಸ್ಥಾನ ಮತ್ತು ಲಕ್ಷ್ಮೀಯ ನಿವಾಸ ಸ್ಥಾನ. ಕಾಶಿಯಲ್ಲಿ ಮೋಕ್ಷಲಕ್ಷ್ಮಿಯು ಬೀಡುಬಿಟ್ಟಿದ್ದಾಳೆ. ವಿದ್ಯಾಲಕ್ಷ್ಮಿ ಧನಲಕ್ಷ್ಮಿ ಮತ್ತು ಮೋಕ್ಷಲಕ್ಷ್ಮಿಯರ 'ತ್ರಿವೇಣಿ ಸಂಗಮ'ವಿದು ಈ ಕಾಶೀಕ್ಷೇತ್ರ. ಪರಮಪವಿತ್ರ 'ದೇವ ಭಾಗೀರಥಿ' ಗಂಗಾ ನದಿಯ ತೀರದಲ್ಲಿರುವ ಕಾಶೀ ಪಟ್ಟಣಕ್ಕೆ ಶಿವನೇ ಯಜಮಾನ. ಸಾಕ್ಷಾತ್ ಮಾತಾ ಅನ್ನಪೂರ್ಣೇಶ್ವರಿಯೇ ಈ ಪಟ್ಟಣದ ಒಡತಿ. ಕಾಶೀ ಪಟ್ಟಣವು ಶಿವನ ಆಯುಧವಾದ ತ್ರಿಶೂಲದ ಮೇಲೆ ನಿಂತುಕೊಂಡಿದೆ ಎಂಬ ಪ್ರತೀತಿಯೊಂದಿದೆ.

ಕಾಶಿಯು ಜ್ಯೋತಿರ್ಲಿಂಗ ಕ್ಷೇತ್ರವೂ ಕೂಡ ಅಹುದು. 'ವಾರಾಣಸ್ಯಾಂ ತು ವಿಶ್ವೇಶಮ್' ಎಂದು' ದ್ವಾದಶ ಜ್ಯೋತಿರ್ಲಿಂಗ ಸ್ತುತಿ' ಸಂದರ್ಭದಲ್ಲಿ ದಿನಂಪ್ರತಿ ಕಾಶೀ ಕ್ಷೇತ್ರದ ಶ್ರೀ ವಿಶ್ವನಾಥ ಜ್ಯೋತಿರ್ಲಿಂಗವನ್ನು 'ಭಕ್ತ-ಜಗತ್ತು' ಭಕ್ತಿಯಿಂದ ತಪ್ಪದೆ ಸ್ಮರಿಸಿಕೊಳ್ಳುತ್ತದೆ. ಕಾಶಿಯು ಜ್ಯೋತಿರ್ಲಿಂಗ ಹಾಗೂ ಶಿವನ ನಿರಂತರ ವಾಸಸ್ಥಾನವಾಗಿರುವುದರಿಂದ ಪರಮ ಪವಿತ್ರ ಕ್ಷೇತ್ರವೂ ಹೌದು ಮತ್ತು ಗಂಗಾನದಿಯ ತೀರದಲ್ಲಿರುವ ಕಾರಣದಿಂದಾಗಿ ಪುಣ್ಯತೀರ್ಥವೂ ಅಹುದು. ಹರನ ಜಡೆಯಿಂದ ಧರೆಗಿಳಿದ ಗಂಗೆಯು ಉತ್ತರದ ಗಂಗೋತ್ರಿಯಲ್ಲಿ ಉಗಮಿಸಿ ಅಲ್ಲಿಂದ ದಕ್ಷಿಣಾಭಿಮುಖವಾಗಿ ತನ್ನ 'ಜಲ ದಿಗ್ವಿಜಯ ಯಾತ್ರೆ'ಯನ್ನು ಪ್ರಾರಂಭಿಸುತ್ತಾಳೆ. ಪ್ರಯಾಗ ಕ್ಷೇತ್ರದವರೆಗೆ ಹಿಂದಿರುಗಿ ನೋಡದೆ ತನ್ನ 'ಜಲ ದಿಗ್ವಿಜಯ ಯಾತ್ರೆ'ಯನ್ನು ಮುಂದುವರಿಸಿದ ಗಂಗೆಯು ಕಾಶೀ ಕ್ಷೇತ್ರ ಸಮೀಪಿಸುತ್ತಲೇ ಅದೇಕೋ ಏನೋ ತವರುಮನೆಯ ನೆನಪಾಗಿ ಮತ್ತೆ ಉತ್ತರಾಭಿಮುಖವಾಗಿ ಪ್ರವಹಿಸತೊಡಗುತ್ತಾಳೆ. ನದಿಯೊಂದು ಮನಸ್ಸು ಬದಲಾಯಿಸಿ ಮತ್ತೆ ತನ್ನ ಉಗಮದತ್ತ ಮುಖಮಾಡುವುದು ತುಂಬ ಅಪರೂಪ ಮತ್ತು ಅಸಹಜ. ಆದರೆ ಗಂಗೆ ಇಲ್ಲಿ ಮತ್ತೆ ಉತ್ತರಾಭಿಮುಖಿಯಾಗಿ ಹರಿಯುವ ಮೂಲಕ ಜನಗಳೆಲ್ಲರ ಕುತೂಹಲದ 'ಕೇಂದ್ರ ಬಿಂದು'ವಾಗಿದ್ದಾಳೆ. ಕಾಶಿಯ ಮಹಿಮೆಯನ್ನು ವಿಸ್ತರಿಸುವಲ್ಲಿ ಈ ಕಾರಣವೂ ಕೂಡ ತನ್ನದೇ ಆದ ಮಹತ್ವದ ಕೊಡುಗೆಯನ್ನು ನೀಡಿದೆ. ನದಿಯೊಂದು ತಕ್ಷಣಕ್ಕೆ ಮನಸ್ಸು ಬದಲಾಯಿಸಿ ಮತ್ತೆ ತನ್ನ ತವರುಮನೆಯತ್ತ ಮುಖಮಾಡುವುದು ತುಂಬ ಅಪರೂಪ.

'ದೇವನೊಬ್ಬ, ನಾಮ ಹಲವು' ಎಂದು ಹೇಳುವ ಹಾಗೆ ಕಾಶಿ ಒಂದಾದರೂ ಅದಕ್ಕೆ ನಾಮಗಳು ಹಲವು. 'ವರುಣಾ' ಮತ್ತು 'ಅಸ್ಸಿ' ನದಿಗಳ ಮಧ್ಯದಲ್ಲಿರುವುದರಿಂದ 'ವಾರಾಣಸಿ' ಎಂದೂ, ಶಿವನು ಖಾಯಂ ಆಗಿ ಇಲ್ಲಿಯೇ ವಾಸ್ತವ್ಯ ಮಾಡಿರುವುದರಿಂದ

ಕಾಶಿಯನ್ನು 'ಅವಿಮುಕ್ತ ಕ್ಷೇತ್ರ'ವೆಂದು ಕರೆಯುತ್ತಾರೆ. ಕಾಶಿಯು ಆನಂದಕಾನನ, ರುದ್ರಾವಾಸ, ಕಾಶಿಕಾ, ತಪಸ್ಥಲಿ, ಶಿವಪುರಿ, ರಾಜನಗರಿ, ಮಹಾನಗರಿ, ಮಹಾಸ್ಮಶಾನ ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತದೆ. ಇದನ್ನು ಆಧುನಿಕರು 'ಬನಾರಸ' ಎಂಬ ನಾಮಧೇಯದಿಂದಲೂ ಕರೆಯುತ್ತಾರೆ. ಭಕ್ತಾದಿಗಳು 'ಶಿವ-ಶಕ್ತಿ'ಯರನ್ನು ಅಷ್ಟೋತ್ತರ ಶತನಾಮಾದಿಗಳಿಂದ ಪೂಜಿಸಿ ಆನಂದಪಡುವಂತೆ ಕಾಶಿಯನ್ನು ನಮ್ಮ ಜನಗಳು ತಮಗಿಷ್ಟವಾದ ಹೆಸರುಗಳಿಂದ ಕರೆದು ಸಂತೋಷಪಡುತ್ತಾರೆ. ಅವುಗಳಲ್ಲಿ ಕಾಶೀ, ವಾರಾಣಸಿ ಮತ್ತು ಬನಾರಸ ಎಂಬ ಈ ಮೂರು ಹೆಸರುಗಳು ಮಾತ್ರ ತುಂಬ ಸಲೀಸಾಗಿ ಜನಗಳ ನಾಲಿಗೆಯ ಮೇಲೆ ನಿಂತು ನಿರಂತರದಲ್ಲೂ ವಿಜೃಂಭಿಸಿಕೊಂಡಿವೆ.

'ವಿಶ್ವನಾಥನ ಪುಣ್ಯನಗರಿ' ಎಂದೇ ಗುರುತಿಸಲ್ಪಟ್ಟಿರುವ ಕಾಶಿಯ ಒಡಲಲ್ಲಿ ಸಮಗ್ರ ಭಾರತವನ್ನೇ ಕಾಣಬಹುದು. ಯಾವ ರೀತಿ ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವನ್ನೇ ಕಾಣಬಹುದೋ ಅದೇ ರೀತಿ ಕಾಶಿಯು ಮನದೆರೆದು ಮಾತನಾಡಿದರೆ ಅಲ್ಲಿ ಸಮಸ್ತ ಭಾರತೀಯ ಸಂಸ್ಕೃತಿಯನ್ನೇ ಕಾಣಬಹುದು. ಕಾಶಿಯಲ್ಲಿ ಭಾರತದ ಎಲ್ಲ ಜನಗಳೂ ಬಂದು ವಾಸಮಾಡಿಕೊಂಡಿದ್ದಾರೆ. ಎಲ್ಲ 'ಭಾಷಾ-ಭಾಷಿಗ'ರು ತಮ್ಮದೇ ಆದ ಪ್ರಾಂತೀಯ ಸೊಗಡನ್ನು ಕಾಯ್ದುಕೊಂಡು ಕಾಶಿಯ ಸಂಸ್ಕೃತಿ ಮತ್ತು ಸಭ್ಯತೆಗಳೊಂದಿಗೆ ತಾದಾತ್ಮ್ಯವನ್ನು ಸಾಧಿಸಿಕೊಂಡು ಕಾಶಿಯಲ್ಲಿನೆಲೆನಿಂತಿದ್ದಾರೆ. ಕಾಶಿಯಲ್ಲೊಂದು 'ಪುಟ್ಟ ಭಾರತ (Mini India)'ವನ್ನೇ ಕಾಣಬಹುದಾಗಿದೆ.

ಕಾಶೀ ಮಹಾನಗರವು ಹತ್ತು ಹಲವು ವಿಶೇಷತೆಗಳ ಆಗರ ಮತ್ತು ವೈವಿಧ್ಯಮಯ ವಿಷಯಗಳ ಸಾಗರ. ಕಾಶಿಯ ಕೆಲವು ವಿಶೇಷತೆಗಳನ್ನು ಈ ರೀತಿಯಾಗಿ ಸಂಗ್ರಹಿಸಿ ಹೇಳಬಹುದು.

1. ಕಾಶಿಯು ಸರ್ವ 'ಧರ್ಮ-ದರ್ಶನ'ಗಳ ಸಂಗಮ ಸ್ಥಳ.
2. ಕಾಶಿಯ ಗಲ್ಲಿಗಲ್ಲಿಗಳಿಂದ 'ಹರ ಹರ ಮಹಾದೇವ', 'ಹರ ಹರ ಮಹಾದೇವ' ಎಂಬ ವೀರ ಉದ್ಘೋಷವು ಆಗಾಗ್ಗೆ ಕೇಳಿಬರುತ್ತಿರುತ್ತದೆ.
3. ಕಾಶಿ ಪಟ್ಟಣದಲ್ಲಿ 'ನಾನು, ತಾನು' ಎಂಬ ಭೇದ-ಭಾವವಿಲ್ಲದೆ ಎಲ್ಲ ಜಾತಿ-ಮತಗಳ ಪಂಥ-ಪಂಗಡಗಳ ಮಠ, ಮಂದಿರಗಳು ಜಾತ್ರೆಯ ಉಪಾಧಿಯಲ್ಲಿ ಬಂದು ಸೇರಿಕೊಂಡಿವೆ.
4. ಕಾಶಿಯಲ್ಲಿ ಮೂರಡಿಗೊಂದು ಮಂದಿರ, ಆರಡಿಗೊಂದು ಮಠವಿದೆ. ಇದು ಅತಿಶಯೋಕ್ತಿಯಲ್ಲ. ಇದು ಸಜೀವ ಸತ್ಯ ಮತ್ತು ಸತ್ಯಸ್ಯ ಸತ್ಯ.
5. ಕಾಶಿಯ ಪ್ರಮುಖ ಧಾರ್ಮಿಕ ಆಕರ್ಷಣೆ ಎಂದರೆ ಗಂಗಾಸ್ನಾನ ಮತ್ತು ವಿಶ್ವನಾಥ ದರ್ಶನ. ಅದೂ ಅಲ್ಲದೆ ಕಾಶೀವಾಸವೂ ಕೂಡ ಅಷ್ಟೇ ಜನಪ್ರಿಯವಾಗಿದೆ ಗಮನೀಯ.

6. ಕಾಶಿಯಲ್ಲಿ ಬದುಕುವುದಕ್ಕಷ್ಟೇ ಅಲ್ಲ, ಸಾಯುವುದಕ್ಕೂ ಸ್ಪರ್ಧೆ ಇದೆ. ಅದೂ ಸಾಲದೆಂಬಂತೆ ಸತ್ತ ಮೇಲೆ 'ಅಂತ್ಯ ಸಂಸ್ಕಾರ ಅಥವಾ ಅಂತಿಮ ಸಂಸ್ಕಾರ'ವನ್ನು ಹೊಂದುವುದಕ್ಕಾಗಿಯೂ ಕಾಶಿಯಲ್ಲಿ 'ಕ್ಯೂ'ನಲ್ಲಿ ಕಾಯ್ದುಕೊಂಡಿರಬೇಕಾಗುತ್ತದೆ. ಈ ಕಾರಣದಿಂದಾಗಿಯೇ ಕಾಶಿಯ ಸತ್ಯ ಹರಿಶ್ಚಂದ್ರ ಘಾಟ, ಮಣಿಕರ್ಣಿಕಾ ಘಾಟಗಳಲ್ಲಿ ಶವಗಳು ಅಂತಿಮ ಸಂಸ್ಕಾರಕ್ಕಾಗಿ ಸರತಿಯಲ್ಲಿ ಕಾಯ್ದುಕೊಂಡಿರುತ್ತವೆ. ಅಲ್ಲಿ ಅಗ್ನಿದೇವನಿಗೆ ವಿಶ್ರಾಂತಿಯೇ ಇಲ್ಲ.

7. ಕಾಶಿಯಲ್ಲಿ ಅನ್ನಕ್ಕೆ ಕೊರತೆ ಇಲ್ಲ. ಕಾಶಿಯಲ್ಲಿ ಹಸಿವೆಯಿಂದ ಯಾರೂ ಬಳಲಿಕೊಂಡಿರುವುದಿಲ್ಲ. ಏಕೆಂದರೆ ಕಾಶಿಯಲ್ಲಿ ಕಾಶೀ ಪುರಾಧೀಶ್ವರಿಯಾದ ಸಾಕ್ಷಾತ್ ಅನ್ನಪೂರ್ಣೇಶ್ವರಿಯೇ ನಿರಂತರವಾಗಿ ದಾಸೋಹವನ್ನು ನಡೆಯಿಸಿಕೊಂಡಿರುತ್ತಾಳೆ.

8. ಶೈಕ್ಷಣಿಕವಾಗಿ ಹೇಳುವುದಾದರೆ ಕಾಶಿಯು ವಿದ್ವತ್ತಿನ 'ತೀರ್ಥಕ್ಷೇತ್ರ'ವೂ ಅಹುದು ಮತ್ತು 'ಧರ್ಮಕ್ಷೇತ್ರ'ವೂ ಅಹುದು. ಕಾಶಿಯಲ್ಲಿ ಐದು ವಿಶ್ವವಿದ್ಯಾಲಯಗಳಿವೆ. 1. ಬನಾರಸ ಹಿಂದೂ ವಿಶ್ವವಿದ್ಯಾಲಯ 2. ಕಾಶೀ ವಿದ್ಯಾಪೀಠ 3. ಶ್ರೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ 4. ಅರೇಬಿಯನ್ ಮತ್ತು ಪಾರ್ಸಿ ವಿಶ್ವವಿದ್ಯಾಲಯ ಮತ್ತು 5. ಸಾರನಾಥದಲ್ಲಿ ಟಿಬೇಟಿಯನ್ ವಿಶ್ವವಿದ್ಯಾಲಯ

9. ಭಾರತದಲ್ಲಿ ಕಾಶಿಗೆ ಪ್ರತಿಸ್ಪರ್ಧಿಯೂ ಇಲ್ಲ, ಪರ್ಯಾಯವೂ ಇಲ್ಲ. ಕಾಶಿಯದು ಖಡಾಖಂಡಿತವಾಗಿ ಏಕಮೇವಾದ್ವಿತೀಯ ವರ್ಚಸ್ಸು.

10. ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಕಾಶಿಗೆ ಸಾಟಿಯಾದ ಮತ್ತೊಂದು ಸ್ಥಳವೇ ಇಲ್ಲ. ಕಾಶಿ ಇದು ಸಾಹಿತ್ಯ, ಸಂಗೀತ, ಕಲೆಗಳ ತವರುಮನೆ.

11. 'ಸರ್ವಂ ಕಾಶಿಮಯಮಿದಂ ಜಗತ್'

    ಸಂಸ್ಕೃತವೆಂದರೆ ಕಾಶಿ, ಸಾಹಿತ್ಯವೆಂದರೆ ಕಾಶಿ, ಪಾಂಡಿತ್ಯವೆಂದರೆ ಕಾಶಿ, ಸಂಗೀತವೆಂದರೆ ಕಾಶಿ, ಧರ್ಮವೆಂದರೆ ಕಾಶಿ, ಕರ್ಮವೆಂದರೆ ಕಾಶಿ, ಪುಣ್ಯವೆಂದರೆ ಕಾಶಿ, ಪರಮಾರ್ಥವೆಂದರೆ ಕಾಶಿ, ಕೈಲಾಸವೆಂದರೆ ಕಾಶಿ, ಕೈವಲ್ಯವೆಂದರೆ ಕಾಶಿ. ಎಲ್ಲದರಲ್ಲೂ ಕಾಶಿಯದೇ ಎತ್ತಿದ ಕೈ ಮತ್ತು ಅದರದೇ ಮೇಲುಗೈ.

12. ಸಾಹಿತ್ಯ, ಸಂಗೀತ, ಕಲಾ ಕ್ಷೇತ್ರಗಳಲ್ಲಿ ಬಹುದೊಡ್ಡ ಹೆಸರು ಮಾಡಿದ ದಿಗ್ಗಜರು ಕಾಶಿ ಪಟ್ಟಣದಲ್ಲಿ ವಾಸಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ 'ಭಾರತಶ್ರೇಷ್ಠ' ಪ್ರಶಸ್ತಿ ಪುರಸ್ಕೃತ ಶಹನಾಯಿ ಮಾಂತ್ರಿಕ ಬಿಸ್ಮಿಲ್ಲಾ ಖಾನ್ ಕಾಶಿವಾಸಿ ಎಂಬುವುದನ್ನು ನಾವಿಲ್ಲಿ ಜ್ಞಾಪಿಸಿಕೊಳ್ಳಬಹುದು.

13. ಕಾಶಿಯು ಪೌರಾಣಿಕವಾಗಿಯಷ್ಟೇ ಅಲ್ಲ, ಕಾಶಿಯು ಐತಿಹಾಸಿಕವಾಗಿ, ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕ್ರವಾಗಿ ಅತ್ಯಂತ ಶ್ರೀಮಂತವೆಂಬ ವಿಷಯ ಜಗಜ್ಜಾಹಿರವಾಗಿದೆ.

14. ಕಾಶಿಯದು ಸಾರ್ವಕಾಲಿಕ ವರ್ಚಸ್ಸು. ಅಷ್ಟೇ ಅಲ್ಲ, ಕಾಶಿಯದು 'all in one' ವರ್ಚಸ್ಸು!!

15. ಭಾರತದ ಎಲ್ಲ ಧರ್ಮ, ದರ್ಶನಗಳ ಆಚಾರ್ಯರು, ಯತಿವರೇಣ್ಯರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಕಾಶಿಗೆ ಭೇಟಿಕೊಟ್ಟಿರುವ ದಾಖಲೆಗಳಿವೆ.

ಆದಿ ಶಂಕರಾಚಾರ್ಯರಿಂದ ಮೊದಲು ಮಾಡಿಕೊಂಡು ಆಧುನಿಕ ಶಂಕರಾಚಾರ್ಯರವರೆಗೆ ಎಲ್ಲರೂ ಭಕ್ತಿ, ಶ್ರದ್ಧೆಗಳಿಂದ ಈ ಕ್ಷೇತ್ರವನ್ನು ದರ್ಶಿಸಿದ್ದಾರೆ.

ಸಮಗ್ರವಾಗಿ. ಒಂದೇ ಮಾತಿನಲ್ಲಿ ಹೇಳುವುದಾದರೆ, ಕಾಶಿ ಇದು ಬಹುಮುಖಿ ವರ್ಚಸ್ಸನ್ನು ಹೊಂದಿದ ವಿಶ್ವತೋಮುಖಿ ಕ್ಷೇತ್ರ!!

ಕಾಶೀ ನಗರದ ಪ್ರಾಚೀನತೆ ಮತ್ತು ಅದರ 'ಬಹುಶ್ರುತತ್ವ"ಕ್ಕೆ ಸಾಕ್ಷಿಯಾಗಿ ನಿಂತುಕೊಂಡಿರುವ ಕೆಲ ದಾಖಲಾತ್ಮಕ ಘಟನೆಗಳನ್ನು ಈ ಗ್ರಂಥದ ಅನುಬಂಧದಲ್ಲಿ ಕಾಣಬಹುದು.

ಕ್ರಿಸ್ತಪೂರ್ವ 100ರಿಂದ ಕ್ರಿಸ್ತಶಕೆ 1960ರವರೆಗಿನ ಅವಧಿಯಲ್ಲಿ ಘಟಿಸಿದ ಕೆಲವು ಪ್ರಮುಖ ಘಟನೆಗಳನ್ನು ಇಲ್ಲಿ ದಾಖಲಿಸಲಾಗಿದೆ.

ಓ... ವೀರಶೈವ ನೀನು ಆದಿ ಮತ್ತು ಅನಾದಿ

ವಿರೋಧರಹಿತವಾದ ಧರ್ಮವೇ ವೀರಶೈವ ಧರ್ಮ. 'ವಿರೋಧರಹಿತಂ ಶೈವಂ ವೀರಶೈವಮ್' ಎಂದು ಈ ಧರ್ಮವನ್ನು ವ್ಯಾಖ್ಯಾನಿಸಲಾಗಿದೆ.

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವ ಮತಂ ಪರಮ್॥

ಸಿದ್ಧಾಂತ ಶಿಖಾಮಣಿ, 5. 14

'ಶಿವೋದಿತ' ಮತ್ತು 'ಶಿವೋದ್ಭವ'ಗಳೆಂದು 'ಆತ್ಮಪರಿಚಯ'ವನ್ನು ಮಾಡಿಕೊಳ್ಳುವ ಕಾಮಿಕಾದಿ ವಾತುಲಾಂತ ಆಗಮಗಳ ಉತ್ತರಭಾಗದಲ್ಲಿ ಅತ್ಯಂತ ಶ್ರೇಷ್ಠವಾದ ವೀರಶೈವ

ಮತವು ಪ್ರತಿಪಾದಿಸಲ್ಪಟ್ಟಿದೆ. ಆಗಮಗಳನ್ನು ವೀರಶೈವ ಧರ್ಮದ 'ಮುಖ್ಯಪ್ರಾಣ'ಗಳೆಂದು ಕರೆಯಲಾಗಿದೆ. ವೀರಶೈವ ಧರ್ಮ ಸಿದ್ಧಾಂತಕ್ಕೆ ಆಗಮಗಳೇ ತಾಯಿಬೇರು ಮತ್ತು ಮಾತೃಭೂಮಿ. ಶಿವಾಗಮಗಳ ಸಾರಸರ್ವಸ್ವವೆಲ್ಲ ವೀರಶೈವ ಧರ್ಮದಲ್ಲಿ ಓತಪ್ರೋತವಾಗಿ ತುಂಬಿಕೊಂಡಿದೆ.

ವಿದ್ಯಾಯಾಂ ಶಿವರೂಪಾಯಾಂ ವಿಶೇಷಾದ್ರಮಣಂ ಯತಃ ।
ತಸ್ಮಾದೇತೇ ಮಹಾಭಾಗಾ ವೀರಶೈವಾ ಇತಿ ಸ್ಮೃತಾಃ ॥

ಸಿದ್ಧಾಂತ ಶಿಖಾಮಣಿ 5. 14

ಯಾರು ಶಿವಜ್ಞಾನಸಂಬಂಧೀ ಹಾಗೂ ತತ್ಸಮಾನ ವಿದ್ಯೆಯಲ್ಲಿ ವಿಶೇಷವಾಗಿ ಆಸ್ಥೆ ಮತ್ತು ಆಸಕ್ತಿಗಳನ್ನು ಹೊಂದಿರುತ್ತಾರೋ ಅಂಥ ಮಹಾನುಭಾವರೇ ವೀರಶೈವರು.

ಅಷ್ಟೇ ಅಲ್ಲ, ಶ್ರೀ ಸಿದ್ಧಾಂತ ಶಿಖಾಮಣಿಯು ಮತ್ತೆ ಮುಂದುವರಿದು ಹೇಳುತ್ತದೆ,

ತಮೋಮೂಲಾ ಹಿ ಸಂಜಾತಾ ರಾಗದ್ವೇಷಾದಿ ಪಾದಪಾಃ ।
ಶಿವಜ್ಞಾನ ಕುಠಾರೇಣ ಛಿದ್ಯಂತೇ ಹಿ ನಿರಂತರಂ ॥

ಸಿದ್ಧಾಂತ ಶಿಖಾಮಣಿ, ತಾಮಸ ನಿರಸನ ಸ್ಥಲ, ಶ್ಲೋಕ 8

ಯಾರು ತಮೋಮೂಲವಾಗಿರುವ ರಾಗ, ದ್ವೇಷ, ಅಸೂಯಾದಿಗಳೆಂಬ ಹೆಮ್ಮರ್ರಗಳನ್ನು ಶಿವಜ್ಞಾನವೆಂಬ ಕುಠಾರದಿಂದ ನಿರ್ದಾಕ್ಷಿಣ್ಯವಾಗಿ ಯಾವತ್ತೂ ಕತ್ತರಿಸಿಕೊಂಡಿರುತ್ತಾರೋ ಅವರೇ ವೀರಶೈವರು, ಎಂದು. ವೀರಶೈವರು ರಾಗ, ದ್ವೇಷರಹಿತರಷ್ಟೇ ಅಲ್ಲ, ಅವರು ಅನುರೋಧ, ಅನುರಾಗಸಹಿತರು!!

ವೀರಶೈವ ಧರ್ಮವಿದು 'ಶಕ್ತಿ ಪ್ರಧಾನ' ಧರ್ಮವಲ್ಲ. ಇದು 'ಭಕ್ತಿ ಪ್ರಧಾನ' ಧರ್ಮ. ಸಕಲ ಜೀವಾತ್ಮರ ಕಲ್ಯಾಣವೇ ಈ ಧರ್ಮದ ಉಸಿರು. ಅಷ್ಟಾವರಣ, ಪಂಚಾಚಾರ ನಿಷ್ಠರಾದ ವೀರಶೈವರು ಷಟ್‌ಸ್ಥಲಗಳಲ್ಲಿ ವಿಹರಿಸಿಕೊಂಡಿರುತ್ತಾರೆ. ಭಕ್ತಿಯಿಂದ ಪ್ರಾರಂಭವಾದ ಅವ'ರ 'ಸಾಧನಾಯಾತ್ರೆ' ಸ್ವತಃ ಅವರೇ 'ಮುಕ್ತಿ'ಯಾಗಿ ನಿಂತುಕೊಳ್ಳುವವರೆಗೆ ಮುಂದುವರಿದುಕೊಂಡಿರುತ್ತದೆ. ವೀರಶೈವರು ಭಕ್ತರಾಗಿ ಹುಟ್ಟುತ್ತಾರೆ, ಭಾವವಾಗಿ ಬೆಳೆಯುತ್ತಾರೆ, ಬ್ರಹ್ಮವಾಗಿ ಆಕಾಶ-ಭೂಮಿಗಳ ಒಂದು ಮಾಡಿ ನಿಲ್ಲುತ್ತಾರೆ. 'ವೃತ್ತಿಶ್ಚೈತನ್ಯರೂಪಿಣೀ' ಎಂದು ಹೇಳಿದ ಹಾಗೆ ವೀರಶೈವರಿಗೆ ಅವರ ವೃತ್ತಿಯೇ ಚೈತನ್ಯ ಮತ್ತು ಅವರು ಮಾಡುವ ಅವರ ಕಾಯಕವೇ ಕೈಲಾಸ. ಸರ್ವೇ ಸಾಮಾನ್ಯವಾಗಿ ಮರಣವು ಎಲ್ಲರನ್ನೂ ಹೆದರಿಸುತ್ತದೆ. ಆದರೆ ವೀರಶೈವರನ್ನು ಹೆದರಿಸಲಾಗದೆ ಅದು ಸೋತು ತೆಪ್ಪಗಾಗಿ ನಿಂತುಕೊಳ್ಳುತ್ತದೆ. ಮರಣದ ಬಗ್ಗೆ ವೀರಶೈವರು ತಲೆಕೆಡಿಸಿಕೊಳ್ಳುವುದೇ ಇಲ್ಲ. ಅವರು ಮರಣವನ್ನು 'ಮಹಾನವಮಿ' ಎಂದು ಕರೆದು ಅದನ್ನು ಗೌರವಿಸಿದ್ದಾರೆ. ಜನರು ಸತ್ತಾದ ಮೇಲೆ ಅವರನ್ನು ಕೈಲಾಸಕ್ಕೆ

ಕರೆದುಕೊಂಡು ಹೋಗುವ ಧರ್ಮವಿದಲ್ಲ. ಜನಗಳು ಬದುಕಿಕೊಂಡಿದ್ದಾಗಲೇ ಅವರಿಗೆ 'ಕೈಲಾಸ'ವನ್ನು ಮತ್ತು ಕೈವಲ್ಯವನ್ನು ಸಮನಿಸಿಕೊಡುವಂಥ ಧರ್ಮವಿದು.

ಇತಿಹಾಸದ ಪ್ರತಿ ಪುಟ ಪುಟಗಳಲ್ಲಿ, ಸಂಪುಟಗಳಲ್ಲಿ ಈ ಧರ್ಮದ ಬೇರುಗಳು ಅತ್ಯಂತ ಗಟ್ಟಿಯಾಗಿ ಬೇರೂರಿವೆ. ವೀರಶೈವ ಧರ್ಮವು ಆದಿ ಧರ್ಮವೂ ಅಹುದು, ಆದ್ಯ ಧರ್ಮವೂ ಅಹುದು ಮತ್ತು ಆರಾಧ್ಯ ಧರ್ಮವೂ ಅಹುದು. ಇಂಥ ಈ ಪರಮಪಾವನ ವೀರಶೈವ ಧರ್ಮದ ಪರಮಾಚಾರ್ಯರು ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು. ಲೋಕ ಕಲ್ಯಾಣಕ್ಕಾಗಿ ಶಿವನ ಸದ್ಯೋಜಾತ, ವಾಮದೇವ, ಅಘೋರ ತತ್ಪುರುಷ ಮತ್ತು ಈಶಾನ ಮುಖಗಳಿಂದ ಪ್ರಾದುರ್ಭವಿಸಿದ ಇವರು ಪರಶಿವನ 'ಮುಖಸಂಜಾತ'ರು. ಸಾಮಾನ್ಯವಾಗಿ ನಮ್ಮ ಬಹುಪಾಲು ದೇವತೆಗಳು 'ಮುಖಸಂಜಾತ'(ಯಜ್ಞಸಂಜಾತ)ರು. ಆದರೆ ವೀರಶೈವ ಧರ್ಮದ ಆದಿ ಆಚಾರ್ಯರಾದ ಮತ್ತು ತಮ್ಮಲ್ಲಿನ ಮಾನವೀಯ ಹಾಗೂ ಧಾರ್ಮಿಕ ಕಾಳಜಿಗಳಿಂದಾಗಿ 'ಜಗದ್ಗುರುತ್ವ'ವನ್ನು ಪ್ರಾಪ್ತಿಸಿಕೊಂಡ ಇವರುಗಳು ಶಿವನ 'ಮುಖಸಂಜಾತ'ರು. 'ವೀರಶೈವ'ದ ಉಗಮಾಭ್ಯುದಯಗಳ 'ಕೇಂದ್ರಬಿಂದು'ವಾಗಿ 'ಮಾನವ ಕಲ್ಯಾಣ' ಮತ್ತು 'ವಿಶ್ವಶಾಂತಿ'ಯನ್ನು ತಮ್ಮ ಉಸಿರನ್ನಾಗಿಸಿ ನಿಂತುಕೊಂಡ ಇವರುಗಳು ಸಮಸ್ತ ಭೂಮಂಡಲವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಲೋಕಹಿತಕ್ಕಾಗಿ ಅಹರ್ನಿಶಿ ಸಂಚರಿಸಿದರು.

ಪರಶಿವನ ಸದ್ಯೋಜಾತ ಮುಖಸಂಜಾತರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಮಲಯಾಚಲ ತಪೋಭೂಮಿಯಲ್ಲಿ ನೆಲೆನಿಂತು ಧರ್ಮ ರಕ್ಷಣೆಯ ಮಹಾದಾಸೋಹಕ್ಕೆ ವೇದಿಕೆಯಾದರು. ಪರಶಿವನ ವಾಮದೇವ ಮುಖಸಂಜಾತರಾದ ಶ್ರೀ ಜಗದ್ಗುರು ದಾರುಕಾಚಾರ್ಯರು ಸಿದ್ಧ ವಟಕ್ಷೇತ್ರದಲ್ಲಿ ನೆಲೆನಿಂತು 'ಧರ್ಮದುಂದುಭಿ'ಯನ್ನು ಮೊಳಗಿಸಿದರು. ಪರಶಿವನ ಅಘೋರ ಮುಖಸಂಜಾತರಾದ ಶ್ರೀ ಜಗದ್ಗುರು ಏಕೋರಾಮಾರಾಧ್ಯರು ಎತ್ತರದ ಆ ಉತ್ತರದ ಹಿಮಾಲಯದಲ್ಲಿ ನೆಲೆನಿಂತು ಲೋಕಕಲ್ಯಾಣಗೈದರು. ಪರಶಿವನ ತತ್ಪುರುಷ ಮುಖಸಂಜಾತರಾದ ಶ್ರೀ ಜಗದ್ಗುರು ಪಂಡಿತಾರಾಧ್ಯರು ಆಂಧ್ರಪ್ರದೇಶದ ಶ್ರೀ ಶ್ರೀಶೈಲ ತಪೋಭೂಮಿಯಲ್ಲಿ ನೆಲೆನಿಂದು ಧರ್ಮವು ಜನಮನದಲ್ಲಿ 'ಪ್ರಸ್ತುತ'ವಾಗಿ ನಿಲ್ಲುವಂತೆ ಮಾಡಿದರು. ಪರಶಿವನ ಈಶಾನ ಮುಖಸಂಜಾತರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರು ಪರಮಪವಿತ್ರ ಕಾಶೀ ಶೀಕ್ಷೇತ್ರದಲ್ಲಿ ನೆಲೆನಿಂತು ಜಗದೋದ್ಧಾರದ ಮಹಾಮಣಿಹಕ್ಕೆ ಹೆಗಲುಕೊಟ್ಟರು.

ಪರಮಪೂಜ್ಯ ಶ್ರೀ ಜಗದ್ಗುರು ಪಂಚಾಚಾರ್ಯರು ಯುಗ ಯುಗಾಂತರಗಳಿಂದ ಜನಶಕ್ತಿಯೊಂದಿಗೆ ತಮ್ಮ 'ಧರ್ಮಶಕ್ತಿ'ಯನ್ನು ಮೇಳೈಸಿ ಜನಕಲ್ಯಾಣದಲ್ಲಿ ತೊಡಗಿಕೊಂಡಿದ್ದು ಯಾವತ್ತೂ 'ಪ್ರಸ್ತುತ'ವಾಗಿ ಉಳಿದುಕೊಂಡಿದ್ದಾರೆ. ಅತಿವೈಚಾರಿಕತೆಯ ಅಪಸ್ಮಾರ ರೋಗಕ್ಕೆ ತುತ್ತಾಗಿ ಧರ್ಮದ ಕುರಿತು ಅವಹೇಳನಕಾರಿಯಾಗಿ ಮಾತನಾಡುವ ಮತ್ತು ಧರ್ಮದ

ವಿಷಯದಲ್ಲಿ ಕುಹಕ-ಕಟಕಿಗಳನ್ನಾಡುತ್ತ ವ್ಯರ್ಥವಾಗಿ ತಮ್ಮ ನಾಲಿಗೆಗಳನ್ನು ದಣಿಸಿಕೊಳ್ಳುತ್ತಿರುವ ಜನಗಳನ್ನು ಕಾಲಕಾಲಕ್ಕೆ ಎಚ್ಚರಿಸುತ್ತ ಅವರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ತುಂಬಿ ಅವರನ್ನು ಸಂತೈಸಿದ 'ಚಾರುಕೀರ್ತಿ' ಶ್ರೀ ಜಗದ್ಗುರು ಪಂಚಾಚಾರ್ಯರ 'ಕೀರ್ತಿಗುಚ್ಛ'ವನ್ನು ಸೇರಿಕೊಳ್ಳುತ್ತದೆ.

ಕಾಶಿಯ 'ಪಿತಾಮಹ ಮಠ' - ಶ್ರೀ ಜಂಗಮವಾಡಿಮಠ

ಧಾರ್ಮಿಕ ಮೌಲ್ಯಗಳಿಗೆ ಧ್ವನಿಯಾಗಿ ನಿಂತುಕೊಂಡಿರುವ ಕಾಶೀಕ್ಷೇತ್ರವು ಕ್ರಿಸ್ತಪೂರ್ವದ ಕಾಲದಿಂದ ಮೊದಲುಮಾಡಿಕೊಂಡು ಇದುವರೆಗೂ ತನ್ನ ಜನಪ್ರಿಯತೆಯನ್ನು ಮತ್ತು ಜನದಟ್ಟಣೆಯನ್ನು ನಿರಂತರವಾಗಿ ಹಾಗೂ ಅಬಾಧಿತವಾಗಿ ಕಾಯ್ದುಕೊಂಡುಬಂದಿದೆ. ಕಾಶೀಕ್ಷೇತ್ರಕ್ಕೆ ಭಕ್ತಿಯೇ ಉಸಿರು, ಶ್ರದ್ಧೆಯೇ ಪ್ರಾಣ. ಇಲ್ಲಿನ ಜನಗಳು ಸ್ವಭಾವತಃ ದೈವಭಕ್ತರು ಮತ್ತು ಶ್ರದ್ಧಾಳುಗಳು. ಈ ಕಾರಣದಿಂದಾಗಿಯೇ ಕಾಶೀ ಪಟ್ಟಣದ ತುಂಬೆಲ್ಲ ಮಠ-ಮಂದಿರಗಳು ಪರಸ್ಪರ ಸ್ಪರ್ಧೆಗಿಳಿದಂತೆ ತಮ್ಮ ಸಂಖ್ಯೆಯನ್ನು 'ಭೂಯೋಭೂಯಃ' ಹೆಚ್ಚಿಸಿಕೊಂಡಿವೆ. ಈ ನಗರದಲ್ಲಿ 'ಮೂರಡಿಗೊಂದು ಮಂದಿರ ಮತ್ತು ಆರಡಿಗೊಂದು ಮಠವಿದೆ' ಎಂದರೆ ಅದು ಅತಿಶಯೋಕ್ತಿ ಏನಲ್ಲ. ಕಾಶೀ ಪಟ್ಟಣದಲ್ಲಿ ಸುಮಾರು 1800ಕ್ಕೂ ಹೆಚ್ಚು ದೇವಸ್ಥಾನಗಳು ಹಾಗೂ 300ಕ್ಕೂ ಹೆಚ್ಚು ವಿವಿಧ ಧರ್ಮ ಹಾಗೂ ಸಂಪ್ರದಾಯಗಳ ಮಠಗಳಿವೆ ಎಂದು ಅಂದಾಜಿಸಲಾಗಿದೆ. ಈ ಸಂಖ್ಯೆಯು ಇತ್ತೀಚಿನ ದಿನಮಾನಗಳಲ್ಲಿ ಇನ್ನೂ ಅಧಿಕಗೊಂಡಿರುವ ಸಾಧ್ಯತೆ ಇದೆ. ಏಕೆಂದರೆ ಕಾಶಿಯಲ್ಲಿ ಇಂಥ ಸಂಪ್ರದಾಯದ ಮತ್ತು ಇಂಥ ಪರಂಪರೆಯ ಮಠ-ಮಂದಿರಗಳಿಲ್ಲವೆಂದು ಕೈ ಎತ್ತಿ ಹೇಳುವುದು ತುಂಬ ಕಷ್ಟಸಾಧ್ಯದ ಮಾತು.

ಈ ಪುಣ್ಯಕ್ಷೇತ್ರದಲ್ಲಿ ವೀರಶೈವರನ್ನು ಮೊದಲು ಮಾಡಿಕೊಂಡು ದಶನಾಮಿ, ಗೋರಖ ಪಂಥೀ, ಶಂಕರ, ರಾಮಾನುಜ, ಮಧ್ವ, ನಿಂಬಾರ್ಕ, ಗೌಡೀಯ, ರಾಮಾನಂದೀ, ಕಬೀರಪಂಥೀ, ಗರೀಬದಾಸೀ, ದಾದೂ ಪಂಥೀ, ಪೀಸಾ ಪಂಥೀ, ಸ್ವಾಮಿ ನಾರಾಯಣ, ಸ್ವಾಮಿ ರಾಮಕೃಷ್ಣ, ನಿರ್ಮಲ, ಸಖೀ ಸಂಪ್ರದಾಯ, ಉದಾಸೀನ, ಆರ್ಯಸಮಾಜ, ಬ್ರಹ್ಮ ಸಮಾಜ, ಅವಧೂತ ಪರಂಪರೆ, ಹರಿಹರ ಸಂಪ್ರದಾಯ, ಜೈನ, ಬೌದ್ಧ........ಇತ್ಯಾದಿ ಈ ಎಲ್ಲ ಸಂಪ್ರದಾಯಗಳಿಗೆ ಮತ್ತು ಪರಂಪರೆಗಳಿಗೆ ಸೇರಿದ ಮಠ-ಮಂದಿರಗಳಿಲ್ಲಿವೆ. ಇವುಗಳ ಜೊತೆ-ಜೊತೆಯಲ್ಲಿ ಹತ್ತು ಹಲವು ಸಂಖ್ಯೆಯಲ್ಲಿ ಸಿಖ್ ಸಂಪ್ರದಾಯದ ಗುರುದ್ವಾರಗಳು, ಕ್ರೈಸ್ತ- ಈಸಾಯಿ ಮತಾನುಯಾಯಿಗಳ ಗಿರಿಜಾಘರ್‌ಗಳು ಮತ್ತು ಇಸ್ಲಾಂ ಧರ್ಮೀಯರ ಮಸೀದೆ-ಮದರಸಾಗಳು ಕಾಶಿಯ ತುಂಬೆಲ್ಲ ದಟ್ಟೈಸಿ ತುಂಬಿಕೊಂಡಿವೆ. ಹೀಗೆ ವಿಭಿನ್ನ ಧರ್ಮ ಹಾಗೂ ಸಂಪ್ರದಾಯಗಳ ಮಠ-ಮಂದಿರಗಳು ಈ ಪುಣ್ಯನಗರಿಯಲ್ಲಿ ಒತ್ತೊತ್ತಾಗಿ ತುಂಬಿಕೊಂಡಿವೆ. ಜನಗಣತಿಯೊಂದರ ಪ್ರಕಾರ ಕಾಶಿಯ 240 ಜನರಿಗೆ ತಲಾ ಒಬ್ಬ ಸನ್ಯಾಸಿಯಂತೆ ಇಲ್ಲಿ ಸನ್ಯಾಸಿಗಳು, ಸಾಧು-ಸಂತರು, ಮಂಡಲೇಶ್ವರರು ಮತ್ತು ಮಹಾತ್ಮರುಗಳು ಭೂರಿ-ಭೂರಿ ಸಂಖ್ಯೆಯಲ್ಲಿ ತುಂಬಿಕೊಂಡು ಈ ಕ್ಷೇತ್ರದಲ್ಲಿ ಶಾಶ್ವತವಾಗಿ ನೆಲೆನಿಂತಿದ್ದಾರೆ.

ಕಾಶಿಯಲ್ಲಿ ಅನೇಕ ಮಠಗಳಿವೆ. ಅವುಗಳಲ್ಲಿ ಪ್ರಮುಖವಾದ ಕೆಲ ಮಠಗಳ ಹೆಸರುಗಳನ್ನು ಇಲ್ಲಿ ಹೆಸರಿಸಲಾಗಿದೆ. ಕಾಶಿಯ ಅಸ್ಸಿ ಬಡಾವಣೆಯಲ್ಲಿ ಅನಂತ ವಿಜ್ಞಾನ ಮಠ, ಹನುಮಾನ ಘಾಟ್‌ನಲ್ಲಿ ಕಂಚಿ ಕಾಮಕೋಟಿ ಮಠ, ದಶಾಶ್ವಮೇಧ ಬಡಾವಣೆಯಲ್ಲಿ ಕಾಮರೂಪ ಮಠ, ಲಕ್ಷ್ಮೀಕುಂಡದಲ್ಲಿ ಕಾಳಿ ಮಠ, ಮತ್ತೆ ಅಸ್ಸಿಯಲ್ಲಿ ಗಣೇಶ್ವರ ಮಠ, ಗಢವಾಸಿ ಟೋಲಾದಲ್ಲಿ ಗೋಮಠ, ಮೀರಾ ಘಾಟ್‌ನಲ್ಲಿ ಗೌಡಮಠ, ಚೌಸಷ್ಟಿ ಘಾಟ್‌ನಲ್ಲಿ ಚೌಸಷ್ಟಿ ಮಠ, ಬೆಂಗಾಲಿ ಟೋಲಾದಲ್ಲಿ ಜರಿ ಮಠ, ಮಿಶ್ರಾ ಪೊಕ್ರಾನಲ್ಲಿ ತಾರಕೇಶ್ವರಮಠ, ನಾರದ ಘಾಟ್‌ನಲ್ಲಿ ತ್ರಿಮೂರ್ತಿ ದತ್ತಾತ್ರೇಯ ಮಠ, ಲಲಿತಾ ಘಾಟ್‌ನಲ್ಲಿ ಬ್ರಹ್ಮಾಶ್ರಮಮಠ, ನಗ್ವಾದಲ್ಲಿ ಮುಚ್ಚಲಿ ಭಂಡಾರ ಮಠ, ಪಠಾರಾ ಗಲ್ಲಿಯಲ್ಲಿ ಮಾಧವಾನಂದಮಠ...... ಇವುಗಳಲ್ಲದೆ ಪುರುಷೋತ್ತಮ ಮಠ, ಪುಷ್ಕರ ಮಠ, ಪೂರ್ಣಾನಂದಸ್ವಾಮಿ ಮಠ, ಮಧುಸೂದನ ಮಠ......ಇತ್ಯಾದಿ ಮಠಗಳು ಕಾಶಿಯ ಪ್ರತಿಯೊಂದು ಗಲ್ಲಿ ಗಲ್ಲಿಗಳಲ್ಲಿ ಮತ್ತು ಗಂಗಾನದಿಯ ಪ್ರತಿಯೊಂದು ಘಾಟ್‌ನಲ್ಲೂ ಬಲು ವ್ಯಾಪಕವಾಗಿ ತುಂಬಿಕೊಂಡಿವೆ.

ಈ ಎಲ್ಲ ಮಠಗಳ ಜಾತ್ರೆಯ ಮಧ್ಯದಲ್ಲಿದ್ದರೂ ತನ್ನದೇ ಆದ ಸರ್ವತಂತ್ರ ಸ್ವತಂತ್ರ ವರ್ಚಸ್ಸಿನಿಂದ ಬೆಳಗುತ್ತಿರುವ ಶ್ರೀ ಜಂಗಮವಾಡಿ ಮಠವು ಕಾಶಿಯ ಅತ್ಯಂತ ಪ್ರಾಚೀನ ಮಠವೆಂಬ ಗೌರವಕ್ಕೆ ಪಾತ್ರವಾಗಿದೆ. ಒಂದರ್ಥದಲ್ಲಿ ಹೇಳುವುದಾದರೆ ಶ್ರೀ ಕಾಶಿಕ್ಷೇತ್ರ ಮತ್ತು ಶ್ರೀ ಜಂಗಮವಾಡಿ ಮಠವು ಪ್ರಾಚೀನತೆಯ ವಿಷಯದಲ್ಲಿ ಪರಸ್ಪರ ಸ್ಪರ್ಧೆಗಿಳಿದಂತಿವೆ. ಶ್ರೀ ಜಂಗಮವಾಡಿಮಠವು ಪುರಾತನವೂ ಅಹುದು ಮತ್ತದು ಸನಾತನವೂ ಅಹುದು. ಶ್ರೀ ಜಗದ್ಗುರು ವಿಶ್ವಾರಾಧ್ಯರ ಕರ್ತೃ ಸನ್ನಿಧಾನವಾದ ಇದು ಅತ್ಯಂತ ಮಹಿಮಾನ್ವಿತ ಮಠವೆಂಬ ಖ್ಯಾತಿಯನ್ನು ತನ್ನದಾಗಿಸಿಕೊಂಡಿದೆ.

ಕಾಶೀ ಶ್ರೀ ವಿಶ್ವನಾಥ ಮಂದಿರ ಹಾಗೂ ಶ್ರೀ ತೀರ್ಥ ಗಂಗಾ ನದಿಯಿಂದ ಅನತಿ ದೂರದಲ್ಲಿರುವ ಶ್ರೀ ಜಂಗಮವಾಡಿಮಠವು ಶ್ರೀ ಜಗದ್ಗುರು ವಿಶ್ವಾರಾಧ್ಯರ ಕಾರಣಿಕ ಭೂಮಿ. ವೀರಶೈವರ 'ಶಕ್ತಿಕೇಂದ್ರ' ಮತ್ತು 'ಶ್ರದ್ಧಾಕೇಂದ್ರ'ವಾದ ಇದು ವೀರಶೈವ ಸನಾತನ ಗುರುಪರಂಪರೆಯ ಪಂಚಪೀಠಗಳಲ್ಲಿ ಒಂದು. ಪಂಚಪೀಠ ಪರಂಪರೆಯಲ್ಲಿ ಈ ಪೀಠವು ಜ್ಞಾನಕ್ಕೆ ಆದ್ಯತೆಯನ್ನು ಕೊಟ್ಟಿರುವುದರಿಂದ ಇದನ್ನು 'ಜ್ಞಾನಪೀಠ'ವೆಂದೂ ಮತ್ತು 'ಜ್ಞಾನ ಸಿಂಹಾಸನ'ವೆಂದೂ ಕರೆಯುತ್ತಾರೆ. 'ಜ್ಞಾನಾದೇವ ತು ಕೈವಲ್ಯಮ್', 'ನ ಹಿ ಜ್ಞಾನೇನ ಸದೃಶಮ್', 'ವಿದ್ಯಯಾ ಅಮೃತಮಶ್ನುತೇ' ಮತ್ತು 'ಯಾ ವಿದ್ಯಾ ಸಾ ವಿಮುಕ್ತಯೇ' ಎಂಬಿತ್ಯಾದಿ ಮಾತುಗಳನ್ನೇ ತನ್ನ ಉಸಿರು ಹಾಗೂ 'ವ್ಯಕ್ತಿತ್ವ'ವನ್ನಾಗಿಸಿಕೊಂಡಿರುವ ಈ ಜ್ಞಾನಪೀಠವು ಜ್ಞಾನದ ಪಾರಮ್ಯವನ್ನು ಎತ್ತಿ ಹಿಡಿಯುತ್ತದೆ.

ಶಿವನ ಈಶಾನ ಮುಖಸಂಜಾತರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರು ಶಿವರಾತ್ರಿಯ ಮಹಾಪರ್ವಕಾಲದಲ್ಲಿ ಶ್ರೀ ಕಾಶೀ ವಿಶ್ವನಾಥ ಲಿಂಗದಿಂದ ಪ್ರಾದುರ್ಭವಿಸಿದರು. ಅವರು

ಕೃತಯುಗದಲ್ಲಿ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರೆಂಬ ನಾಮಾಂಕಿತವನ್ನು ಧರಿಸಿ, ತ್ರೇತಾಯುಗದಲ್ಲಿ ಶ್ರೀ ಜಗದ್ಗುರು ಪಂಚವಕ್ತ್ರ ಶಿವಾಚಾರ್ಯರೆಂಬ ಅಭಿದಾನವನ್ನು ಹೊತ್ತು, ದ್ವಾಪರಯುಗದಲ್ಲಿ ಶ್ರೀ ಜಗದ್ಗುರು ವಿಶ್ವಕರ್ಣ ಶಿವಾಚಾರ್ಯರೆಂಬ ನಾಮಧೇಯವನ್ನು ಹೊಂದಿ, ಕಲಿಯುಗದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯರಾಗಿ ಲೋಕೋದ್ಧಾರ ಕಾರ್ಯವನ್ನು ಕೈಕೊಂಡರು. ಪರಮಪೂಜ್ಯರಾದ ಅವರು ಮನುಕುಲದ ಕಲ್ಯಾಣಕ್ಕಾಗಿ ತಮ್ಮನ್ನೇ ತಾವು ಇಡಿಯಾಗಿ ಸಮರ್ಪಿಸಿಕೊಂಡರು. 'ವಿಶ್ವಬಂಧು' ಮತ್ತು 'ಧರ್ಮಸಿಂಧು' ಎಂದೇ ಜನಮನದಲ್ಲಿ ವಿರಾಜಮಾನರಾದ ಅವರು ಈ ಧರಣಿ ಮಂಡಲ ಮಧ್ಯದೊಳಗೆ 'ಮಾನವ ಧರ್ಮ'ವೆಂಬ ಪರ್ಯಾಯ ನಾಮದಿಂದ ಗುರುತಿಸಲ್ಪಡುವ ಮಹಾಮಾನವತಾವಾದಿ 'ವೀರಶೈವ ಧರ್ಮ'ವನ್ನು ಆಸೇತು ಹಿಮಾಲಯದವರೆಗೆ ಪ್ರಚುರಗೊಳಿಸಿದರು.

ಶ್ರೀ ವಿಶ್ವಾರಾಧ್ಯ ಭಗವತ್ಪಾದರ ನಂತರ ಅವರ ಉತ್ತರಾಧಿಕಾರಿಗಳಾಗಿ ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನವನ್ನು ಅಲಂಕರಿಸಿದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳವರು ಪರಮ ತಪಸ್ವಿಗಳು. ಅವರು 'ಕರ್ತುಂ, ಅಕರ್ತುಂ ಮತ್ತು ಅನ್ಯಥಾ ಕರ್ತುಂ' ಶಕ್ತಿಸಂಪನ್ನರಾಗಿದ್ದರು. ಸುಮಾರು 311 ವರುಷಗಳ ಸುದೀರ್ಘ ಜೀವಿತಾವಧಿಯಲ್ಲಿ ಅವರು ಅನಂತ ಲೀಲೆಗಳನ್ನು ಗೈದರು. ಪವಾಡಸದೃಶ ಬದುಕು ಅವರದು. ಅವರು 'ಅಣೋರಣೀಯಾನ್ ಮತ್ತು ಮಹತೋ ಮಹೀಯಾನ್' ಶಕ್ತಿಸಂಪನ್ನರಾಗಿದ್ದರು.ಅಣಿಮಾ ಮಹಿಮಾದಿ ಅಷ್ಟಸಿದ್ಧಿಗಳು ಅವರ ಅಂಗೈನಲ್ಲಿ ಆಟವಾಡಿಕೊಂಡಿದ್ದವು. ತಮ್ಮಲ್ಲಿನ ಯೋಗಶಕ್ತಿಯಿಂದ ಅವರು ಗಗನಮಾರ್ಗದಲ್ಲಿ ಸಂಚರಿಸುತ್ತಿದ್ದರು. ಪರಮಪೂಜ್ಯರು ಜೀವನದ ತುಂಬೆಲ್ಲ ಅನಂತ ಮಹಿಮಾತಿಶಯಗಳನ್ನು ತೋರಿ ಜನರನ್ನು 'ಭಕ್ತಿವಿಸ್ಮಿತ್ರ'ಗೊಳಿಸಿದರು. ಅವರು ತಮ್ಮ ಕಾಲಾವಧಿಯಲ್ಲಿ ಅದೊಂದು ಸಶಕ್ತ ಭಕ್ತ ಪರಂಪರೆಯನ್ನೇ ಸೃಷ್ಟಿಸಿಬಿಟ್ಟರು. ಜನಗಳು ಇವರನ್ನು 'ಜಂಗಮ ಬಾಬಾ'ಎಂದೂ, 'ಗಾದಿಸ್ವಾಮಿ' ಎಂದೂ ಕರೆಯುತ್ತಿದ್ದರು. ಜ್ಞಾನ-ವೈರಾಗ್ಯಗಳ ಪವಿತ್ರ ಸಂಗಮದಂತಿದ್ದ ಈ ಪುಣ್ಯಪುರುಷರು ತಮ್ಮ ಸುದೀರ್ಘ ಬದುಕಿಗೆ ಕೊನೆಗೊಂದು ದಿನ ಪೂರ್ಣವಿರಾಮವನ್ನಿತ್ತು 'ಜೀವಂತ ಸಮಾಧಿ'ಯನ್ನು ಹೊಂದಿದರು. ಆ ಪೂರ್ವದಲ್ಲಿ ಜ್ಞಾನಪೀಠದ ಆಧಿಪತ್ಯವನ್ನು ಚಾರುಶೀಲರಾದ, ಜನಗಳ ಪ್ರಶಂಸೆ ಮತ್ತು ಅಭಿಮಾನಗಳಿಗೆ ಪಾತ್ರರಾದ ತಮ್ಮ ಶಿಷ್ಯೋತ್ತಮರಾದ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳಿಗೆ ಪ್ರದಾನ ಮಾಡಿದರು.

ಇಂದು ಕಾಶೀ ಜ್ಞಾನಪೀಠದಲ್ಲಿ ಶ್ರೀ ವಿಶ್ವಾರಾಧ್ಯರ ಮಂಗಲಮಯ ಮೂರ್ತಿಯು ಪ್ರತಿಷ್ಠಾಪಿತಗೊಂಡಿರುವ ಆ ದಿವ್ಯಸ್ಥಳವು ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರು ಜೀವಂತ ಸಮಾಧಿಯನ್ನೈದಿದ ಸ್ಥಳವೆಂದು ಶ್ರೀಪೀಠದ ಐತಿಹ್ಯಗಳು ಅತ್ತ ಬೆರಳು ಮಾಡುತ್ತವೆ. ಪರಮಪೂಜ್ಯರು ಸಮಾಧಿಯನ್ನೈದಿದ ಆ ಸ್ಥಳವನ್ನೇ ಇಂದು ಎಲ್ಲರೂ 'ಗಾದಿ ಸ್ವಾಮಿ ಗದ್ದುಗೆ' ಎಂದು ಕರೆಯುತ್ತಾರೆ. ಆ ಮಹಾನುಭಾವರು ಜೀವಂತ ಸಮಾಧಿಯನ್ನು ತೆಗೆದುಕೊಂಡ

ಆ ಸ್ಥಳವೇ ಇಂದು ಕಾಶೀ ಶ್ರೀಪೀಠದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಕರ್ತೃ ಗದ್ದುಗೆಯಾಗಿ ತ್ರಿಕಾಲದಲ್ಲಿ ಪೂಜೆಗೊಳ್ಳುತ್ತಿದೆ. ಉತ್ತರ ಪ್ರದೇಶದ ಜನಗಳ ಮೇಲೆ, ಅದರಲ್ಲೂ ಕಾಶಿಯಲ್ಲಿನ ಸ್ಥಳೀಯ ಜನಗಳ ಮೇಲೆ ಗಾದಿಸ್ವಾಮಿಯ ಪ್ರಭಾವ ಈಗಲೂ ಅಚ್ಚೊತ್ತಿದಂತೆ ಗಟ್ಟಿಯಾಗಿ ಉಳಿದುಕೊಂಡಿರುವುದು ಅತ್ಯಂತ ಸ್ಪಷ್ಟವಾಗಿ ಕಂಡುಬರುತ್ತದೆ. ವಿಶೇಷ ಪರ್ವದಿನಗಳಲ್ಲಿ, ಅಮಾವಾಸ್ಯೆ, ಹುಣ್ಣಿಮೆಗಳಂದು, ಅದರಲ್ಲೂ ಶಿವರಾತ್ರಿಯ ಮಹಾಪರ್ವಕಾಲದಲ್ಲಿ ಈಗಲೂ ಸಹ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸ್ಥಳೀಯ ಜನಗಳು ಬಂದು ಗಾದಿಸ್ವಾಮಿಯ (ಗದ್ದಿ ಸ್ವಾಮಿ) ಅರ್ಥಾತ್ ಜಂಗಮಬಾಬಾನ ದರ್ಶನಮಾಡುತ್ತಾರೆ.

ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರ ಅಂದರೆ ಜಂಗಮ ಬಾಬಾನ ನಂತರ ಕಾಶೀ ಜ್ಞಾನಸಿಂಹಾಸನವನ್ನು ಆರೋಹಣ ಮಾಡಿದ ಪೀಠಾಚಾರ್ಯರುಗಳು ಪೀಠಾಧಿಪತ್ಯವನ್ನು ಸ್ವೀಕರಿಸಿಯಾದ ಮೇಲೆ ಪೂರ್ವಾಶ್ರಮಗಳ ಹೆಸರುಗಳನ್ನು ಕಳಚಿಕೊಂಡು, ತಮ್ಮ ಪೂರ್ವಾಚಾರ್ಯರಾದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರ ಅಭಿದಾನದಿಂದಲೇ ಗುರುತಿಸಲ್ಪಡುತ್ತಿದ್ದರು. ಪೀಠಾಧಿಪತಿಗಳು ತಮ್ಮ ಪೂರ್ವಾಶ್ರಮ ಮತ್ತು ತತ್ಸಂಬಂಧೀ ಪೂರ್ವಾಶ್ರಮದ ಹೆಸರು ಮತ್ತು ಸಂಬಂಧಗಳಿಂದ ಅಕ್ಷರಶಃ ಮತ್ತು ಕಡ್ಡಾಯವಾಗಿ ಮುಕ್ತರಾಗಬೇಕಾಗುತ್ತಿತ್ತು. ಆದ್ದರಿಂದ ಕೆಲವೇ ಕೆಲವು ದಿನಗಳಲ್ಲಿ ಅವರೇ ಸ್ವತಃ ತಮ್ಮ ಪೂರ್ವಾಶ್ರಮದ ಹೆಸರುಗಳನ್ನು ಸಂಪೂರ್ಣವಾಗಿ ಮರೆತುಬಿಡುತ್ತಿದ್ದರು. ಪೂರ್ವಾಶ್ರಮದ ಬಂಧಾನುಬಂಧಗಳೆಲ್ಲ ಅವರಿಂದ ವಿಳಾಸ ಕೂಡ ಇಲ್ಲದ ಹಾಗೆ ಮರೆಯಾಗಿಬಿಡುತ್ತಿದ್ದವು. ಈ ಕಾರಣದಿಂದಾಗಿಯೇ ನಮಗೆ ಇದುವರೆಗಿನ 86 ಜನ ಕಾಶೀ ಪೀಠದ ಪೀಠಾಧಿಪತಿಗಳ ಉಪಲಬ್ಧ 'ಪಟ್ಟವಲ್ಲರಿ'ಯಲ್ಲಿ ಸರಿ ಸುಮಾರು 77ನೆಯ ಜಗದ್ಗುರುಗಳವರೆಗೆ ನಮಗೆ ಅವರ ಮೂಲ ಹೆಸರಿನ ಪರಿಚಯವೇ ಆಗುವುದಿಲ್ಲ. ನಮಗೆ ಉಪಲಬ್ಧವಾಗುವ ಮಾಹಿತಿಗಳ ಪ್ರಕಾರ ಅವರೆಲ್ಲ ಕಾಶೀ ಜಗದ್ಗುರುಗಳು ಮತ್ತು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಭಗವತ್ಪಾದರು, ಅಷ್ಟೇ.

ಶ್ರೀ ಜಗದ್ಗುರು ವಿಶ್ವಾರಾಧ್ಯರ ಆಶೀರ್ವಾದದಿಂದ ಮುಂದುವರಿದ ಜ್ಞಾನಪೀಠದ ಶ್ರೀ ಗುರು-ಪರಂಪರೆಯು ಇದುವರೆಗೂ ಅಬಾಧಿತವಾಗಿ ಮುನ್ನಡೆದಿದೆ. ಶ್ರೀ ಜಗದ್ಗುರು ವಿಶ್ವಾರಾಧ್ಯ ಮತ್ತು ಮಲ್ಲಿಕಾರ್ಜನ ಗುರುಪರಂಪರೆಯು ಉತ್ತರೋತ್ತರವಾಗಿ ತನ್ನ ಧಾರ್ಮಿಕ ಕರ್ತವ್ಯಗಳನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿಕೊಂಡು ಬಂದಿದೆ. ಶ್ರೀ ಜಗದ್ಗುರು ವಿಶ್ವಾರಾಧ್ಯ ಹಾಗೂ ಶ್ರೀ ಮಲ್ಲಿಕಾರ್ಜುನ ಜಗದ್ಗುರುಗಳನ್ನು ಮೊದಲು ಮಾಡಿಕೊಂಡು ಇದುವರೆಗಿನ ಶ್ರೀ ಕಾಶೀ ಜಗದ್ಗುರು ಪರಂಪರೆಯ ಪೀಠಾಧಿಪತಿಗಳ ಸಕ್ರಮ 'ಪಟ್ಟವಲ್ಲರಿ'ಯನ್ನು ಜಿಜ್ಞಾಸುಗಳ ಅವಗಾಹನೆಗೆಂದು ಅನುಬಂಧದಲ್ಲಿ ಕೊಡಲಾಗಿದೆ. ಗಮನಿಸಿ.

ಜಂಗಮವಾಡಿಮಠದ ಸುತ್ತ-ಮುತ್ತ

ಕಾಶಿಯ ಕೆಲವೇ ಕೆಲವು ಪ್ರಾಚೀನ ಮಠಗಳಲ್ಲಿ ಒಂದಾದ ಮತ್ತು ಕಾಶಿಯ ಎಲ್ಲ ಮಠಗಳಿಗಿಂತಲೂ ಅತ್ಯಂತ ಪ್ರಾಚೀನವಾದ ಜಂಗಮವಾಡಿಮಠವು ಗೊದೋಲಿಯಾ ವೃತ್ತದಿಂದ ದಕ್ಷಿಣಕ್ಕೆ ಸರಿಸುಮಾರು 300 ಮೀಟರ್ ದೂರದಲ್ಲಿದೆ. ಗೊದೋಲಿಯಾ ಮತ್ತು ಅಸ್ಸಿ ರಸ್ತೆಯಲ್ಲಿರುವ ಶ್ರೀ ಜಂಗಮವಾಡಿಮಠವು ವೀರಶೈವರ ಕೇಂದ್ರಸ್ಥಾನ. ಇದನ್ನು ವೀರಶೈವ ಲಿಂಗಾಯತರ ಅಥವಾ ಲಿಂಗಾಯತ ವೀರಶೈವರ 'ಶಕ್ತಿಸ್ಥಳ' (Head Quarter)ವೆಂದು ಕರೆಯಬಹುದು. ಪ್ರಮುಖವಾಗಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಿಂದ ಬರುವ ಜನಗಳು ಇಲ್ಲಿಯೇ ವಾಸ್ತವ್ಯ ಮಾಡುತ್ತಾರೆ.

1. ಸ್ವಾಯಂಭು ಆಗಮದಲ್ಲಿ ಸ್ವತಃ ಶಿವನು ಪಾರ್ವತಿಗೆ ಹೇಳುತ್ತಾನೆ.

''ಪಾರ್ವತಿಯೇ, ನೀನಿದನ್ನು ತುಂಬ ಶ್ರದ್ಧೆಯಿಂದ ಕೇಳು. ಶ್ರೀ ವಿಶ್ವಾರಾಧ್ಯರು ಕಾಶೀ ಕ್ಷೇತ್ರದಲ್ಲಿರುವ ಶ್ರೀ ವಿಶ್ವೇಶ್ವರ ಲಿಂಗದಿಂದ ಜನಿಸಿದರು. ಲಿಂಗೋದ್ಭವರಾದ ಅವರು ಕೃತಾದಿ ನಾಲ್ಕು ಯುಗಗಳಲ್ಲಿಯೂ ಧರ್ಮೋಪದೇಶ ಮಾಡುತ್ತ ಜನರಿಂದ ಪೂಜಿಸಲ್ಪಡುತ್ತಾರೆ'' ಎಂದು.

2. ಕಾಶೀಪೀಠದ ಪ್ರಾಚೀನತೆಯ ಕುರಿತು ಆಗಮಾದಿಗಳ ಜೊತೆಜೊತೆಯಲ್ಲಿ ಜಂಗಮವಾಡಿಮಠವೂ ಸಹ ಮುಖತಃ ಸಾಕ್ಷಿಯನ್ನು ಹೇಳುತ್ತದೆ

ಕಾಶೀರಾಜನಾದ ಶ್ರೀ ಜಯನಂದದೇವನು ಕ್ರಿಸ್ತಶಕ 574ರಲ್ಲಿ ನೀಡಿದ ದಾನಪತ್ರ ಅತ್ಯಂತ ಪ್ರಾಚೀನವಾದ ದಾನಪತ್ರವನ್ನು ಮೊದಲು ಮಾಡಿಕೊಂಡು, ವಿವಿಧ ರಾಜ-ಮಹಾರಾಜರುಗಳು ಮತ್ತು ಮೊಘಲ ನವಾಬ, ಬಾದಶಹರುಗಳು ಕೊಟ್ಟ ತಾಮ್ರಪತ್ರ, ಫರ್ಮಾನುಗಳು ಕಾಶಿಪೀಠದ ಜಂಗಮವಾಡಿ ಮಠದಲ್ಲಿವೆ. ಕಾಶೀ ಜಂಗಮವಾಡಿಮಠದ ಐತಿಹಾಸಿಕ ಸಾಕ್ಷ್ಯಗಳ ಕೋಟೆ ಸುಭದ್ರವಾಗಿದೆ. ಜಂಗಮವಾಡಿಮಠದಲ್ಲಿ ಪೀಠಕ್ಕೆ ಸಂಬಂಧಿಸಿದ ಪ್ರತಿಯೊಂದು ದಾಖಲೆಯೂ ಅತ್ಯಂತ ಸುರಕ್ಷಿತವಾಗಿದೆ.

ಪಂಚಪೀಠಗಳ ಪ್ರಾಚೀನತೆಯ ಕುರಿತು ವಿತಂಡವಾದ ಮಾಡುವ ಜನಗಳು ಇವೆಲ್ಲ ಸಾಕ್ಷ್ಯಾಧಾರಗಳನ್ನು ಗಮನಿಸಿದರೆ ಅವರ ವಿತಂಡವಾದದ ಅಬ್ಬರ ಕೊಂಚ ಮಟ್ಟಿಗಾದರೂ ಕಡಿಮೆಯಾಗುವ ಸಾಧ್ಯತೆ ಉಂಟು.

1. 6ನೆಯ ಶತಮಾನದಲ್ಲಿದ್ದ ಕಾಶೀ ನರೇಶ ರಾಜಾ ಜಯನಂದದೇವನು ಕಾಶೀ ಪೀಠದ ಗೋಸಾಯಿ ಶ್ರೀ ಮಲ್ಲಿಕಾರ್ಜುನ ಜಂಗಮರಿಗೆ (ಶಿವಯೋಗಿಗಳಿಗೆ) ನೀಡಿದ ದಾನಪತ್ರವು ಎಲ್ಲಕ್ಕಿಂತಲೂ ಪ್ರಾಚೀನವಾಗಿದೆ.

ಈ ದಾನಪತ್ರದಲ್ಲಿ 'ಕಾಶೀ ನರೇಶರಾದ ಶ್ರೀ ಜಯನಂದದೇವ ಮಹಾರಾಜರು ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನದ ಗೋಸಾಯಿ ಮಲ್ಲಿಕಾರ್ಜುನ ಜಂಗಮರಿಗೆ 'ಕರ್ದಮೇಶ್ವರ ಮಹಾದೇವ' ಮತ್ತು ಗಂಗೆಯ ಸುತ್ತಮುತ್ತ ಇರುವ ಗೋಚರಣ ವನವನ್ನು ದಾನರೂಪದಲ್ಲಿ ನೀಡಲಾಗಿದೆ' ಎಂಬ ಸಂಪೂರ್ಣ ವಿವರವಿದೆ.

ಈ ದಾನಪತ್ರದ ಕಾಗದವು ತುಂಬ ಹಳೆಯದಾಗಿದ್ದು ಅದನ್ನು ಕೈಯಿಂದ ಮುಟ್ಟುವುದಕ್ಕೂ ಸಹ ಆಗದಂತಿದೆ. ಅದು ಚೌಕಟ್ಟಿ (Frame)ನಲ್ಲಿದೆ. ಆ ದಾನಪತ್ರವು ತುಂಬ ಜೀರ್ಣ-ಶೀರ್ಣವಾಗಿರುವುದರಿಂದ ಅವರ ವಂಶಸ್ಥರೇ ಆದ ಕಾಶೀ ನರೇಶ ಶ್ರೀ ಪ್ರಭು ನಾರಾಯಣಸಿಂಹರವರು ಆ ದಾನಪತ್ರದ ವಿವರಗಳನ್ನೆಲ್ಲ ನೂತನವಾಗಿ ತಾಮ್ರಪತ್ರದ ಮೇಲೆ ಬರೆಯಿಸಿ ಶ್ರೀಪೀಠದ ಸನ್ನಿಧಾನಕ್ಕೆ ಸಮರ್ಪಿಸಿರುತ್ತಾರೆ.

ಕ್ರಿಸ್ತಶಕ 574ರಲ್ಲಿ ಶ್ರೀಪೀಠದ ಪೂಜ್ಯರಿಗೆ ಅರ್ಪಿಸಿದ ಆ ದಾನಪತ್ರದ ಸಂಪೂರ್ಣ ವಿವರ ಮತ್ತು ಪೂರ್ಣಪಾಠವು ಇಲ್ಲಿದೆ.

Grant (Danapatra)

by Maharaja of Banaras to Goswami Mallikarjuna Jangam

(from the original, preserved inside a frame)

A bow to Ganesh

`Patsahi' (Certified to be correct)

Here there is a drawing of `ankush'

(goad for elephant)

Shri Vishweshwara .

By order of Swasti Shri Maharajadhiraja Shri Shri Shri Maharaja Jainanda Deva Kashinaresh's land has been granted to Gosain Mallikarjuna Jangama of Shri Vishwaradhya Sinhasan out of the Gocharan Van between Kardameshwara Mahadeo and the Ganges (paper worn out due to age and letters missing by half). North-South 800 Steps. Whatever is produced in this land shall be enjoyed by

you Gosain Mallikarjuna along with your `Sampradaaya' (Community) always and forever. Anybody who casts an evil eye on this.............(he will be punished)

(paper worn out and whole line missing).

ಅದೇ ದಾನಪತ್ರದಲ್ಲಿ ಒಮ್ಮೆ ಕೊಟ್ಟ ದಾನವನ್ನು ಮತ್ತೆ ವಾಪಾಸು ತೆಗೆದುಕೊಂಡರೆ ಏನಾಗುತ್ತದೆ? ಎಂಬುವುದನ್ನು ಅತ್ಯಂತ ಸ್ಪಷ್ಟವಾಗಿ ಹೇಳಲಾಗಿದೆ.

''Anybody who takes back this land gifted by him or anybody else becomes a worm of the filth for sixty thousand years. The doings of man are watched by sun, moon, air, fire, sky, earth, water, heart, Yam, day and night and both the evenings and `dharma'. Out of making a gift and protecting a gift it is better to protect. By making a gift one attains heaven and by protecting `moksha'. By protecting another's gift one attains double the merit of making a gift. By taking away another's gifted things one's gift becomes useless.

Miti Kartik Shukla Deothan Ekadashi Samvat (574 A.D)

''ಪೂಜ್ಯರಿಗೆ ದಾನರೂಪದಲ್ಲಿ ನೀಡಿದ ಈ ಭೂಮಿಯನ್ನು ಯಾರಾದರೂ ಬಲಪ್ರಯೋಗ ಮಾಡಿ ಒತ್ತಾಯದಿಂದ ವಾಪಾಸು ತೆಗೆದುಕೊಂಡರೆ ಅವರು ಅರವತ್ತು ಸಾವಿರ ವರುಷಗಳ ಘೋರ-ಘನಘೋರ ನರಕವನ್ನು ಅನುಭವಿಸಬೇಕಾಗುತ್ತದೆ. ನಾವು ಮಾಡುವ ಎಲ್ಲ ಕಾರ್ಯಗಳನ್ನು ಸೂರ್ಯ, ಚಂದ್ರರನ್ನು ಮೊದಲು ಮಾಡಿಕೊಂಡು ಆಕಾಶಾದಿ ಪಂಚ ಮಹಾಭೂತಗಳು ಮತ್ತು 'ಧರ್ಮ' ಇವೆಲ್ಲ ಗಮನಿಸಿಕೊಂಡಿರುತ್ತವೆ. ದಾನವನ್ನು ನೀಡುವುದಕ್ಕಿಂತ ಅದಕ್ಕೆ ರಕ್ಷಣೆಯನ್ನು ಒದಗಿಸಿಕೊಡುವುದು ತುಂಬ ಮುಖ್ಯ. ದಾನವನ್ನು ಮಾಡಿದವನು ಬರೀ 'ಸ್ವರ್ಗಸುಖ'ವನ್ನು ಪಡೆಯುವುದಾದರೆ ಅದನ್ನು ರಕ್ಷಿಸುವವನು ಮೋಕ್ಷವನ್ನು ಪಡೆಯುತ್ತಾನೆ. ದಾನವನ್ನು ರಕ್ಷಿಸುವ ವ್ಯಕ್ತಿಯು ದಾನವನ್ನು ನೀಡುವ ವ್ಯಕ್ತಿಗಿಂತ ಹೆಚ್ಚು ಲಾಭಾನ್ವಿತನಾಗುತ್ತಾನೆ''...............ಎಂದಿತ್ಯಾದಿಯಾಗಿ ಹೇಳಲಾಗಿದೆ.

ಅತ್ಯಂತ ಪ್ರಾಚೀನವಾದ ರಾಜಾ ಜಯನಂದದೇವನ ದಾನಪತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಅಲಹಾಬಾದ್ ಹೈಕೋರ್ಟು ಆ ಕಾಲದಲ್ಲಿ ಬಳಸಲಾದ ಕಾಗದ, ಮಸಿ, ಲಿಪಿ ಮತ್ತು ಕಾಶೀರಾಜ ಜಯನಂದ ದೇವನ ಅಧಿಕೃತ ಆಧಿಪತ್ಯ......ಇತ್ಯಾದಿಗಳನ್ನು ಹತ್ತುಹಲವು ವಿಧದಿಂದ ಶೋಧಿಸಿ, ಪರಿಷ್ಕರಿಸಿ ಈ 'ದಾನಪತ್ರ'ವು ಅಧಿಕೃತವಾದುದೆಂದು ಮತ್ತು ಸಸಾಧು

ಪ್ರಮಾಣವೆಂದು ತೀರ್ಮಾನಿಸಿತು (Proceedings, First Appeal No. 58 of 1934 op. cit., p. 323).

ಈ ದಾನಪತ್ರದ ಪ್ರಾಚೀನತೆಯು ಬರೀ ಕೋರ್ಟಿನ ಗಮನವನ್ನಷ್ಟೇ ಅಲ್ಲ, ಮಾಧ್ಯಮಗಳ ಗಮನವನ್ನು ಕೂಡ ಸೆಳೆದಿತ್ತು ಎಂಬುವುದಕ್ಕೆ 'ಸನ್ಮಾರ್ಗ' ವೃತ್ತ ಪತ್ರಿಕೆಯಲ್ಲಿ ಪ್ರಕಟವಾದ ಈ ಸುದ್ದಿಯೇ ನಿದರ್ಶನ.

ಪ್ರಯಾಗ ಉಚ್ಚ ನ್ಯಾಯಾಲಯವು ತನ್ನ ಶತಮಾನೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಪ್ರಕಟವಾದ ಸುದ್ದಿ ಇದು. ಅದರ ಸಂಕ್ಷಿಪ್ತ ರೂಪವಿಲ್ಲಿದೆ.

'ಪ್ರಯಾಗ ಉಚ್ಚ ನ್ಯಾಯಾಲಯವು ಭಾರತದ ಅತ್ಯಂತ ಪ್ರಾಚೀನ ಉಚ್ಚ ನ್ಯಾಯಾಲಯಗಳಲ್ಲಿ ಒಂದು. ಅದೀಗ ತನ್ನ ಶತಾಬ್ದಿ ಸಮಾರಂಭವನ್ನು ಆಚರಿಸಲು ಉದ್ಯುಕ್ತವಾಗಿದೆ. ಭಾರತದ ಮುಖ್ಯ ನ್ಯಾಯಾಧೀಶರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿದ್ದಾರೆ ಹಾಗೂ ಭಾರತದ ರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ರಾಧಾಕೃಷ್ಣನ್ ರವರಿಗೆ ಈ ಸಮಾರಂಭದ ಉದ್ಘಾಟನೆಯನ್ನು ಮಾಡುವುದಕ್ಕಾಗಿ ಬಿನ್ನವಿಸಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಸ್ಮೃತಿರೂಪದಲ್ಲಿ ಒಂದು ವಿಶೇಷ ಅಂಚೆಚೀಟಿಯನ್ನು ಬಿಡುಗಡೆ ಮಾಡಲು ಭಾರತ ಸರಕಾರವನ್ನು ಕೇಳಿಕೊಳ್ಳಲಾಗಿದೆ. ಇದೇ ಸಂದರ್ಭದಲ್ಲಿ ಒಂದು ವಿಶೇಷ ಸ್ಮರಣ ಸಂಚಿಕೆಯನ್ನು ಕೂಡ ಹೊರತರಲಾಗುತ್ತದೆ.

ಇವೆಲ್ಲವುಗಳ ಜೊತೆಯಲ್ಲಿ ಈ ಸಮಾರಂಭದ ಉಪಲಕ್ಷ್ಯದಲ್ಲಿ ಪ್ರಯಾಗ ಹೈಕೋರ್ಟು ನ್ಯಾಯಾಲಯದ ಅತ್ಯಂತ ಮಹತ್ವಪೂರ್ಣ ಅಭಿಲೇಖಗಳ ಮತ್ತು ದಾಖಲೆಗಳ ಪ್ರದರ್ಶನವನ್ನು ಕೂಡ ಏರ್ಪಡಿಸಿದೆ. ಈ ಪ್ರದರ್ಶನದಲ್ಲಿ ಸಾರ್ವಜನಿಕರು 'ಕಾಶೀ ಮಹಾರಾಜ ಜಯನಂದ ದೇವನಿಂದ ಕ್ರಿಸ್ತಶಕ 574ರಲ್ಲಿ ಕೊಡಲ್ಪಟ್ಟ ಒಂದು 'ಶಾಹೀ ಫರಮಾನ'ನ್ನು ಕೂಡ ನೋಡಬಹುದಾಗಿದೆ'' ಎಂದು ವಿಶೇಷವಾಗಿ ಒತ್ತುಕೊಟ್ಟು ಹೇಳಿದೆ. (ಇದರ ಹಿಂದಿ ಮೂಲವನ್ನು ಅನುಬಂಧದಲ್ಲಿ ನೋಡಿ.)

ಅಲಹಾಬಾದ ಹೈಕೋರ್ಟು ಸಹ ತನ್ನ ಶತಮಾನೋತ್ಸವದ ಸಂದರ್ಭದಲ್ಲಿ ರಾಜಾ ಜಯನಂದದೇವನು ಕಾಶೀಪೀಠಕ್ಕೆ ನೀಡಿದ ಆ ದಾನಪತ್ರವನ್ನು ಹೆಮ್ಮೆಯಿಂದ ಪ್ರದರ್ಶಿಸುತ್ತದೆ ಮತ್ತು ಅದನ್ನು ನೋಡಲು ಜನಗಳನ್ನು ಆಗ್ರಹದಿಂದ ಆಹ್ವಾನಿಸುತ್ತದೆ ಎಂದರೆ ಆ ದಾನಪತ್ರವು ಅದೆಷ್ಟು ಶಕ್ತಿಶಾಲಿ ಎಂಬುವುದನ್ನು ನಾವುಗಳು ಊಹಿಸಿತಿಳಿಯಬೇಕಷ್ಟೇ.

2. ಇಸ್ಲಾಂ ಧರ್ಮಾನುಯಾಯಿಗಳಾದ ಮೊಘಲ ಚಕ್ರವರ್ತಿಗಳು ಹಾಗೂ ಬಾದಶಹರುಗಳು ಜಂಗಮವಾಡಿ ಮಠದ ವಿಭೂತಿಗಳ ಅದ್ಭುತ ತಪಶ್ಶಕ್ತಿಗೆ ಮಾರುಹೋಗಿ ಈ ಶ್ರೀಪೀಠಕ್ಕೆ ಬಹುದೊಡ್ಡ ಮೊತ್ತದ ದಾನಗಳನ್ನು ನೀಡಿ ರಾಜಮುದ್ರೆಗಳಿಂದ ಕೂಡಿದ ಅಧಿಕೃತ ಫರ್ಮಾನುಗಳನ್ನು ಹೊರಡಿಸಿದ್ದಾರೆ.

ಮೊಘಲ ಚಕ್ರವರ್ತಿಗಳಾದ ಹುಮಾಯೂನ್, ಅಕ್ಬರ್, ಜಹಾಂಗೀರ್, ಶಹಾಜಹಾನ್ ಮತ್ತು ಮಹಮದ್ ಷಾ ಇವರೇ ಮೊದಲಾದವರು ನೀಡಿದ ಹತ್ತು ಹಲವಾರು ದಾನಪತ್ರದ ಫರ್ಮಾನುಗಳು ಜಂಗಮವಾಡಿಮಠದ ಐತಿಹಾಸಿಕ ಕಡತಗಳಲ್ಲಿ ಸುಭದ್ರವಾಗಿವೆ. ಮೊಘಲ ಬಾದಶಹರುಗಳು ನೀಡಿದ ಈ ಫರ್ಮಾನುಗಳಿಂದ ಮೊಘಲರ ಕಾಲದಲ್ಲಿ ಈ ಶ್ರೀಪೀಠದ ಜಂಗಮ-ತಪಸ್ವಿಗಳು ಕಾಶೀ ಪಟ್ಟಣದಲ್ಲಿ ಮತ್ತು ದೆಹಲಿಯ ಚಕ್ರವರ್ತಿಗಳ ಆಸ್ಥಾನಗಳಲ್ಲಿ ಅದೆಷ್ಟೊಂದು ಮಹತ್ವಪೂರ್ಣವಾದ ಸ್ಥಾನಮಾನಗಳನ್ನು ಹಾಗೂ ಘನತೆ-ಗೌರವಗಳನ್ನು ಹೊಂದಿದ್ದರು ಎಂಬುವುದಕ್ಕೆ ಸಾಧಾರ-ಸಾಕ್ಷಿಗಳನ್ನು ಒದಗಿಸಿಕೊಡುತ್ತವೆ.

ಜಂಗಮವಾಡಿಮಠದ ಒಡಲಾಳದಲ್ಲಿ 'ಪವಾಡಸದೃಶ' ಶಕ್ತಿಗಳನ್ನು ಹೊಂದಿದ್ದ ಅನೇಕ ತಪಸ್ವಿಗಳ ಅದ್ಭುತ ಚರಿತ್ರೆಯು ತುಂಬಿಕೊಂಡಿದೆ. 'ಸಿದ್ಧ-ಮಹಾತ್ಮ'ರಾದ ಈ ಜಂಗಮ-ತಪಸ್ವಿಗಳು ಅನೂಹನೀಯ ಶಕ್ತಿಯನ್ನು ಸಂಪಾದಿಸಿಕೊಂಡಿದ್ದರು. ಅವರು 'ಅಘಟಿತಘಟನಾ ಪಟೀಯಸ'ರಾಗಿದ್ದರು. ಅವರುಗಳು ಬೆಂಕಿಯ ಮೇಲೆ ನಡೆದು ಬರುತ್ತಿದ್ದರು, ಆಕಾಶ ಮಾರ್ಗವಾಗಿ ಚಲಿಸುತ್ತಿದ್ದರು. ಪೂಜ್ಯರಾದ ಅವರು ಪಂಚಭೂತಗಳ ಮೇಲೆ ಪ್ರಭುತ್ವವನ್ನು ಹೊಂದಿದ್ದರು. ಅವರ ಅತ್ಯಂತ ಪ್ರಬಲ ಇಚ್ಛಾಶಕ್ತಿಯನ್ನು ಹೊಂದಿದ್ದರು. ಭೂತ, ಭವಿಷ್ಯ ಮತ್ತು ವರ್ತಮಾನಗಳನ್ನು ತಮಿಚ್ಛೆಯಂತೆ ಆಳುವ ಶಕ್ತಿ-ಸಾಮರ್ಥ್ಯಗಳನ್ನು ಹೊಂದಿದ್ದರು.

'ಹಿಂದೂದ್ವೇಷ'ದ ಪರಾಕಾಷ್ಠೆಯ ಪ್ರತಿನಿಧಿಯಂತಿದ್ದ ಔರಂಗಜೇಬನು ಕಾಶಿಯಲ್ಲಿರುವ ಅನೇಕ ದೇವಸ್ಥಾನಗಳನ್ನು, ಮಠ-ಮಂದಿರಗಳನ್ನು ಗುಡಿಸಿಹಾಕಿ ಕಾಶಿಯಲ್ಲಿಯೇ ಅತ್ಯಂತ ಪ್ರಾಚೀನ ಮಠವೆಂಬ ಖ್ಯಾತಿಯನ್ನು ಸಂಪಾದಿಸಿದ್ದ ಜಂಗಮವಾಡಿಮಠವನ್ನು ಧ್ವಂಸಮಾಡಲು ತನ್ನ ಸೈನ್ಯದೊಂದಿಗೆ ಜಂಗಮವಾಡಿಮಠದ ಶ್ರೀ ಸನ್ನಿಧಾನಕ್ಕೆ ಬಂದನಂತೆ. ಶ್ರೀಮಠದ ಸನ್ನಿಧಾನಕ್ಕೆ ಬರುತ್ತಲೇ ಔರಂಗಜೇಬನ ಸೈನಿಕರೆಲ್ಲ ಸಮ್ಮೋಹಿನಿಗೆ ಒಳಗಾದಂತೆ ನಿಸ್ತೇಜಗೊಂಡರಂತೆ. 'ಇದೇನು ಮಹಾ? ನಾನೊಂದು ಕೈ ನೋಡಿಯೇ ಬಿಡುತ್ತೇನೆ' ಎಂದು ಧಾರ್ಷ್ಟ್ಯದಿಂದ ಮುನ್ನುಗ್ಗಿ ಬಂದ ಔರಂಗಜೇಬನಿಗೆ ಶ್ರೀಮಠದ ಮಹಾದ್ವಾರದಲ್ಲಿಯೇ ಆಕಾಶ ಭೂಮಿಗಳನ್ನು ಒಂದು ಮಾಡಿನಿಂತ ಒಂದು ವಿರಾಟ್ ರೂಪವು ಪ್ರಳಯಾಂತಕ ಕಾರ್ಮೋಡಗಳಂತಿದ್ದು ಕಣ್ಣುಗಳಿಂದ ಕೆಂಡವನ್ನು ಉಗುಳುತ್ತ ಎಲ್ಲವನ್ನೂ 'ಸ್ವಾಹಾ' ಮಾಡುವುದಕ್ಕೆ ಸಿದ್ಧವಾಗಿ ನಿಂತುಕೊಂಡಿರುವಂತೆ ಕಂಡಿತಂತೆ. ಆ ಭವ್ಯ ಆಕಾರವನ್ನು ನೋಡಿದ ಔರಂಗಜೇಬನ ಅಹಂಕಾರದ ಜಂಘಾಬಲವೇ ಅಡಗಿಹೋಯಿತಂತೆ. ಆತನ ಔದ್ಧತ್ಯವು ಮದಿಸಿದ ಕರಿಯ ಮದವಡಗಿದಂತೆ ಅಡಗಿಹೋಯಿತಂತೆ. ಮುಂದೆ ಆತ ಯಾವೊಂದೂ ಅನುಚಿತ ಕಾರ್ಯವೆಸಗದೆ ಅಲ್ಲಿಂದ ಕಂಬಿಕಿತ್ತ. ಅಷ್ಟೇ ಅಲ್ಲ, ಆತ ಈ ಶ್ರೀಮಠದ ಪರಮದಿವ್ಯ ದೈವೀಶಕ್ತಿಗೆ ಬೆರಗಾಗಿ ಶ್ರೀಮಠದ ಪರಮಭಕ್ತನಾಗಿ ಅನೇಕ ದಾನದತ್ತಿಗಳನ್ನು ನೀಡಿದ್ದನ್ನು ಇತಿಹಾಸ ದಾಖಲಿಸಿಕೊಂಡಿದೆ. ಈತ ನೀಡಿದ ದಾನದ ಫರ್ಮಾನಿಗೆ ಈತನೇ ಸ್ವತಃ ತನ್ನ ಕೈಯಾರೆ ಉರ್ದು ಭಾಷೆಯಲ್ಲಿ ಹಸ್ತಾಕ್ಷರವನ್ನು ಮಾಡಿದ್ದಾನೆ.

ಈ ಒಂದು ರೋಮಾಂಚಕ ಸನ್ನಿವೇಶವನ್ನು ಔರಂಗಜೇಬನ ಮುಖದಿಂದಲೇ ಕೇಳಿ - "As soon as I (Aurangzeb) went to the Jangambari Matha, the form of its deity was visible to me in all its terrific aspects. The deity was as black as the clouds of destruction and had eyes as red as the fire of the deluge. It had over its head rough curly hair resembling that of the sheep. It was little in size but yet it stood from earth to Heaven. Terror-struck by this, I make my obeisance and offer this much in pious devotion."

[ಉರ್ದು ಭಾಷೆಯ ಮೂಲ ಅವತರಣಿಕೆಯು ಆಂಗ್ಲ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟಿದೆ.]

ಕಾಶೀ ಜಂಗಮವಾಡಿಮಠದ ಮೇಲಿನ ಶ್ರದ್ಧೆಯಿಂದಾಗಿ ಮೊಘಲ ಚಕ್ರವರ್ತಿಗಳು ಪದೇ ಪದೇ ಫರ್ಮಾನುಗಳನ್ನು ಹೊರಡಿಸಿ ತಮ್ಮ ಕೈಕೆಳಗಿನ ನೌಕರರಿಗೆ

1. ಜಂಗಮ ಮಹಾತಪಸ್ವಿಗಳಿಗೆ ಕೊಡುತ್ತ ಬಂದಿರುವುದನ್ನು ಮತ್ತು ಕೊಡಬೇಕಾದುದನ್ನು ಮುಂದೆಯೂ ಕೊಡಬೇಕೆಂದು 2. ಅವರಿಂದ ಯಾವುದೇ ತೆರನಾದ ತೆರಿಗೆಯನ್ನು ವಸೂಲು ಮಾಡಬಾರದೆಂದು ಮತ್ತು 3. ಅವರನ್ನು ತೊಂದರೆಪಡಿಸುವ ಮೂಲಕ ಅವರ ಏಕಾಗ್ರತೆಯನ್ನು ಕದಡಬಾರದೆಂದು ಅಪ್ಪಣೆಯನ್ನು ಕೊಡುತ್ತಿದ್ದರು. ಈ ಕಾರಣದಿಂದಾಗಿ ಕಾಶೀಪೀಠದಲ್ಲಿ ಮೊಘಲ ಚಕ್ರವರ್ತಿಗಳ ಅಧಿಕ ಸಂಖ್ಯೆಯ ಫರ್ಮಾನುಗಳನ್ನು ಕಾಣಬಹುದಾಗಿದೆ. ಬನಾರಸ ಗೆಜೆಟಿಯರಿನ 123ನೇ ಪುಟದಲ್ಲಿ ಈ ಎಲ್ಲ ದಾನ ಹಾಗೂ ಫರ್ಮಾನುಗಳ ವಿಷಯವನ್ನು ಹೇಳಲಾಗಿದೆ..

ಕಾಶೀ ಜ್ಞಾನಪೀಠದ ಜಂಗಮ ಮಹಾತಪಸ್ವಿಗಳು ಬರೀ ಬನಾರಸ್‌ನಲ್ಲಷ್ಟೇ ಅಲ್ಲ, ಅಲಹಾಬಾದ ಮತ್ತು ಬಿಹಾರ ರಾಜ್ಯದ ಗಯಾ ಜಿಲ್ಲೆಗಳಲ್ಲಿಯೂ ಕೂಡ ಆಸ್ತಿಪಾಸ್ತಿಗಳನ್ನು ಹೊಂದಿದ್ದರು. ಅಲಹಾಬಾದ್‌ನ ದಾರಗಂಜ್ ಮೊಹಲ್ಲಾದಲ್ಲಿ ಈಗಲೂ ಕಾಶೀ ಜ್ಞಾನಪೀಠದ ಆಸ್ತಿ ಇದ್ದು ಅಲ್ಲಿಯೂ ಒಂದು ಸುವ್ಯವಸ್ಥಿತವಾದ ಜಂಗಮವಾಡಿಮಠವಿದೆ. ಗಯಾ ಪಟ್ಟಣದ ಶಿಸೋರಿಯಾ ಮೊಹಲ್ಲಾದಲ್ಲಿಯೂ ಶ್ರೀಮಠಕ್ಕೆ ಸಂಬಂಧಪಟ್ಟ ಆಸ್ತಿ ಹಾಗೂ ಮಂದಿರಗಳಿದ್ದು ಅವು ಕಾಶೀ ಜ್ಞಾನಪೀಠದ ಪ್ರಭಾವೀ ಅಸ್ತಿತ್ವಕ್ಕೆ ಸಾಕ್ಷಿ ಹೇಳುತ್ತವೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನಾಧೀಶ್ವರ 1008 ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಪೀಠದ ಪೂರ್ವದ ಶ್ರೀ ಜಗದ್ಗುರುಗಳವರಲ್ಲಿ ಹಣವನ್ನಿಟ್ಟಿದ್ದ ಕೆಲವರನ್ನು ಪ್ರತಿವಾದಿಗಳನ್ನಾಗಿ ಮಾಡಿ, 1932ನೇ ಇಸ್ವಿಯೊಳಗೆ ಬನಾರಸ್ ಸಬ್ ಜಡ್ಜ್ ಕೋರ್ಟಿನಲ್ಲಿ 12ನೇ ನಂಬರಿನ ದಾವೆಯನ್ನು ಮಾಡಿದ್ದರು.

ಸದರಿ ದಾವೆಯಲ್ಲಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟವು. ಅದರಲ್ಲಿ ಶ್ರೀ ಜಗದ್ಗುರು ಪೀಠದ ಪ್ರಾಚೀನತ್ವದ ವಿಷಯವು ವಿಶೇಷವಾಗಿ ಚರ್ಚಿಸಲ್ಪಟ್ಟಿದ್ದು ಜಡ್ಜ್ ಸಾಹೇಬರಾದ ಮೆ॥ ಬಾಬು ವಿಂಧ್ಯವಾಸಿ ಪ್ರಸಾದರವರು ಶ್ರೀಪೀಠದ ದಾನ ಶಾಸನಗಳನ್ನೆಲ್ಲ ಕೂಲಂಕುಷವಾಗಿ ವಿಚಾರ ಮಾಡಿ ಶ್ರೀ ಜಗದ್ಗುರು ಕಾಶೀ ಜ್ಞಾನಪೀಠದ ಪ್ರಾಚೀನತೆಯ ಮತ್ತು ಪ್ರಾಮಾಣಿಕತೆಯ ಕುರಿತಾದ ಪ್ರತಿಯೊಂದು ಸಾಕ್ಷ್ಯಾಧಾರಗಳನ್ನು ಅಧ್ಯಯನ ಮಾಡಿ, ಪುನಃ ಪುನಃ ವಿಮರ್ಶಿಸಿ ಒಂದು ಖಚಿತವಾದ ತೀರ್ಮಾನಕ್ಕೆ ಬಂದರು.

ಕೊನೆಗೊಂದು ಶುಭ ಮುಂಜಾನೆಯಂದು ಅಲಹಾಬಾದ್ ಹೈಕೋರ್ಟ್ ತನ್ನ ಅಂತಿಮ ತೀರ್ಪನ್ನು ನೀಡಿತು. (ಅನುಬಂಧ ನೋಡಿ.)

ಇದೂ ಅಲ್ಲದೆ, ಕೆಳದಿ ಅರಸರು, ಮೈಸೂರಿನ ಕೃಷ್ಣರಾಜ್ ಒಡೆಯರ್‌ರವರು ಇವರೇ ಮೊದಲಾದ ಹಿಂದೂ ರಾಜ-ಮಹಾರಾಜರುಗಳು ಕೂಡ ಕಾಶೀ ಜಂಗಮವಾಡಿ ಮಠಕ್ಕೆ ದಾನ-ದತ್ತಿಗಳನ್ನು ಕೊಟ್ಟದ್ದುಂಟು. ಅಷ್ಟೇ ಅಲ್ಲ, ಅವರು ಶ್ರೀಪೀಠದ ಪರಮಭಕ್ತರಾಗಿ ತಮ್ಮ ಪರಿವಾರದೊಂದಿಗೆ ಹಲವಾರು ತಿಂಗಳುಗಳ ಕಾಲ ವಾಸ್ತವ್ಯ ಮಾಡಿರುವ ದಾಖಲೆಗಳು ಶ್ರೀಪೀಠದ ಇತಿಹಾಸದ ಗರ್ಭದಲ್ಲಿ ಸೇರಿಕೊಂಡಿವೆ. ನಮ್ಮ ನೆರೆಯ ರಾಷ್ಟ್ರವಾದ ನೇಪಾಳದ ಭಕ್ತಪುರದಲ್ಲೂ ಸಹ ಜಂಗಮವಾಡಿಮಠವಿದೆ ಎಂಬುವುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು.

ಕಾಶಿ ಜಂಗಮವಾಡಿಮಠದ ಪ್ರಾಚೀನತೆಯು ಅಂಗೈಯಲ್ಲಿ ಹಿಡಿದುಕೊಂಡಿರುವ ಕನ್ನಡಿಯಷ್ಟೇ ಸ್ಪಷ್ಟವಾಗಿದೆ. ಕಾಶೀಪೀಠದಲ್ಲಿ ಉಪಲಬ್ಧವಿರುವ ದಾಖಲೆಗಳು ಮತ್ತು ಪುರಾವೆಗಳು ಶ್ರೀಪೀಠದ ಪ್ರಾಚೀನತೆಗೆ ತಮ್ಮ ಧ್ವನಿ-ಸಂಯೋಜನೆ ಮಾಡುತ್ತವೆ. ಕಾಶೀ ಜ್ಞಾನಪೀಠವು ಯಾವೊಂದೂ ದಾಖಲೆಯನ್ನು ನಷ್ಟಪಡಿಸದೆ, ಅಜಾಗರೂಕತೆಯಿಂದ ಕಳೆದುಕೊಳ್ಳದೆ ಎಲ್ಲವನ್ನೂ ಅಚ್ಚುಕಟ್ಟಾಗಿ ಕಾಯ್ದುಕೊಂಡು ಬಂದಿದೆ. ಆದ್ದರಿಂದ ಈ ಸಂದರ್ಭದಲ್ಲಿ, ಕಾಶೀ ಜ್ಞಾನಪೀಠವು ಮನದೆರೆದು ಮಾತನಾಡಿದರೆ ಪಂಚಪೀಠಗಳ ಪ್ರಾಚೀನತೆಯ ಝೇಂಕಾರವೇ ಮೊಳಗಬಹುದು ಎಂದು ಹೇಳಬಹುದು.

'ಜ್ಞಾನ ಸಿಂಹಾಸನ'ವೆಂದೇ ಖ್ಯಾತವಾದ ಕಾಶೀಪೀಠದ ಶ್ರೀ ಜಗದ್ಗುರು 'ಪಟ್ಟವಲ್ಲರಿ'ಯತ್ತ ಗಮನ ಹರಿಸಿದಾಗ ನಮ್ಮಗಳಿಗೆ ಶ್ರೀಪೀಠದ 78ನೆಯ ಜಗದ್ಗುರುಗಳಾದ ಶ್ರೀ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು (ಪ್ರಥಮ) 1750-1825, ಇವರ ಕಾಲಾವಧಿಯಿಂದ ಶ್ರೀಪೀಠದ ಪೂರ್ವಾಚಾರ್ಯರುಗಳ ವೈಯಕ್ತಿಕ ಸಾಧನೆ ಮತ್ತು ವೇದನೆಗಳ ಇತಿಹಾಸವು ಅತ್ಯಂತ ಸ್ಪಷ್ಟವಾಗಿ ಗೋಚರವಾಗುತ್ತ ಹೋಗುತ್ತದೆ.

ಶ್ರೀಪೀಠದ ಪೂರ್ವಾಚಾರ್ಯರುಗಳು

1. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು (ಪ್ರಥಮ) ಕ್ರಿ.ಶ. 1750-1825

ಇವರು ಶ್ರೀಪೀಠದ 78ನೆಯ ಪೀಠಾಧಿಪತಿಗಳು. ಇವರು ತಮ್ಮ ಪೀಠಾರೋಹಣದ ಕಾಲಾವಧಿಯಲ್ಲಿ ಶ್ರೀಪೀಠದ ಐತಿಹಾಸಿಕ ಮತ್ತು ಚಾರಿತ್ರಿಕ ಘನತೆ-ಗೌರವಗಳ ಉತ್ಕರ್ಷವನ್ನು ಹೆಚ್ಚಿಸುವುದರೊಂದಿಗೆ ತಮ್ಮ ಯೋಗಬಲ ಮತ್ತು ತಪೋಬಲಗಳಿಂದ ಜನತೆಯ ಧಾರ್ಮಿಕ ಮನಸ್ಸುಗಳನ್ನು ಆಳಿದರು. ಭಕ್ತರ ಆಧ್ಯಾತ್ಮಿಕ ಮತ್ತು ಅಲೌಕಿಕ ಶ್ರೇಯಸ್ಸಿಗಾಗಿ ಸಂತತವೂ ಚಿಂತಿಸಿಕೊಂಡಿದ್ದು ಭಕ್ತೋದ್ಧಾರಗೈದರು.

2. ಶ್ರೀ ಜಗದ್ಗುರು ಹರೀಶ್ವರ ಶಿವಾಚಾರ್ಯರು ಕ್ರಿ.ಶ. 1825-1879

ಇವರು ಶ್ರೀಪೀಠದ 79ನೆಯ ಪೀಠಾಧಿಪತಿಗಳು. ಇವರು ಸ್ವಭಾವತಃ ತೇಜಸ್ವಿಗಳು ಮತ್ತು ತಪಸ್ವಿಗಳು. ಶಾಂತ, ಪ್ರಶಾಂತ, ಸುಶಾಂತವದನರಾದ ಇವರು ಅಹರ್ನಿಶಿ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಕೊಂಡಿರುತ್ತಿದ್ದರು. ಪರಮಪೂಜ್ಯರು 54 ವರುಷಗಳ ತಮ್ಮ ಪೀಠಾರೋಹಣದ ಸುದೀರ್ಘ ಕಾಲಾವಧಿಯಲ್ಲಿ ಶ್ರೀಪೀಠದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದರು. ಲೌಕಿಕದಷ್ಟೇ ಅಲೌಕಿಕವೂ ಕೂಡ ಮಾನವಮಾತ್ರರ ಬದುಕಿಗೆ ಅತ್ಯಗತ್ಯ ಎಂದು ಸಾರಿ ಸಾರಿ ಹೇಳಿದರು. ಇವರ ಕಾಲದಲ್ಲಿ ಕೊಡಗು ಅರಸರು ಶ್ರೀಪೀಠದ ಪ್ರಭಾವಕ್ಕೆ ಒಳಗಾಗಿ ಪರಮಪೂಜ್ಯರ ಸೇವೆಗೈಯ್ಯುತ್ತಾರೆ. ಇವರು ಸಮಾಧಿಯನ್ನೈದಿರುವ ಆ ಪುಣ್ಯಸ್ಥಳವು ಈಗ ಕಾಶೀ ಶ್ರೀಪೀಠದಲ್ಲಿ 'ಹರೀಶ್ವರ ಮಂದಿರ'ವೆಂದು ಖ್ಯಾತವಾಗಿದೆ.

3. ಶ್ರೀ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯರು (ಪ್ರಥಮ) ಕ್ರಿ. ಶ. 1879-1889

ಇವರು ಶ್ರೀಪೀಠದ 80ನೆಯ ಪೀಠಾಧಿಪತಿಗಳು. ಅತ್ಯಂತ ಸದೃಢ ಕಾಯದ ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದ ಇವರು ಬಹುದೊಡ್ಡ ವಿದ್ವಾಂಸರು. ಅವರ ನಾಮಧೇಯವೇ ಸೂಚಿಸುವಂತೆ ಅವರು ತಪಸ್ಸಿನಲ್ಲಿ ವೀರರೂ ಮತ್ತು ವಿದ್ವತ್ತಿನಲ್ಲಿ ಭದ್ರರೂ ಆಗಿದ್ದರು. ಇವರು ಮೂಲತಃ ತೆಲಗು ನಾಡಿನವರು.

'ವಿದ್ವದ್ವಿಭೂತಿ' ಶ್ರೀ ವೀರಭದ್ರ ಜಗದ್ಗುರುಗಳ ಪೀಠಾರೋಹಣದ ಸಂದರ್ಭದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರು ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಪ್ರಥಮ ವೀರಭದ್ರ ಜಗದ್ಗುರುಗಳ ಕುರಿತು ಮಾತನಾಡುತ್ತ,

''ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ತಪಸ್ವಿಗಳು ಮತ್ತು ತೇಜಸ್ವಿಗಳು. ಅಷ್ಟೇ ಅಲ್ಲ, ಅವರು ಘನವಿದ್ವಾಂಸರಾಗಿದ್ದರು. ಇವರೂ ಸಹ ತೆಲಗು ದೇಶದಿಂದಲೇ ಬಂದು ಪೀಠವನ್ನು ಅಲಂಕರಿಸಿದ್ದರು. ಪುನಃ ಅವರೇ ತೆಲಗು ದೇಶದಲ್ಲಿ

ಅವತರಿಸಿ ಅದೇ ಶುಭಾಭಿಧಾನವನ್ನು ಶೋಭಿತರಾಗಿ ಈ ಪೀಠಕ್ಕೆ ದಯಮಾಡಿಸಿದ್ದಾರೆ ಎಂದು ನಮ್ಮ ಅಂತರಾತ್ಮವು ಹೇಳುತ್ತಿರುವುದರಿಂದ ನೂತನ ಜಗದ್ಗುರುಗಳವರ ಹೆಸರನ್ನು ಪರಿವರ್ತಿಸುವ ಅಧಿಕಾರವು ನಮ್ಮದಲ್ಲವೆಂದು ಸನ್ನಿಧಿಯವರ ಪೂರ್ವನಾಮವನ್ನೇ ಪುನಃ ಉದ್ಘೋಷಿಸಲಾಗಿದೆ''ಎಂದು ಹೇಳಿದರು. ಈ ಮಾತುಗಳು ನಮಗೆ ಶ್ರೀ ವೀರಭದ್ರ ಜಗದ್ಗುರುಗಳ ಅಂತಸ್ಸತ್ವವನ್ನು ಪರಿಚಯಿಸಿಕೊಡುತ್ತವೆ.

4. ಶ್ರೀ ಜಗದ್ಗುರು ರಾಜೇಶ್ವರ ಶಿವಾಚಾರ್ಯರು ಕ್ರಿ. ಶ. 1889-1907

ಇವರು ಶ್ರೀಪೀಠದ 81ನೆಯ ಪೀಠಾಧಿಪತಿಗಳು. ಅತ್ಯಂತ ಸಾತ್ವಿಕರು ಮತ್ತು ಸರಳರು. ಇವರದು ಅಮಾಯಕ ಮನಸ್ಸು. ಪೂಜೆ, ಜಪ, ತಪ, ಧ್ಯಾನಾದಿಗಳಿಗಾಗಿಯೇ ತಮ್ಮ ಬಹುಪಾಲು ಸಮಯವನ್ನು ವ್ಯಯಿಸುತ್ತಿದ್ದರು. ಅಷ್ಟೇ ಅಲ್ಲ, ಇವರು ಪಂಡಿತರು ಮತ್ತು ಪಂಡಿತ-ಪ್ರೇಮಿಗಳು.

ಶಿವಯೋಗನಿಷ್ಠರಾದ ಇವರು ಶಾಪಾನುಗ್ರಹ ಶಕ್ತಿ ಸಂಪನ್ನರಾಗಿದ್ದರು. ಇಂಗ್ಲಂಡದ ಪಂಚಮ ಜಾರ್ಜ್‌ನ ಪಟ್ಟಾಭಿಷೇಕದ ಸಮಯದಲ್ಲಿ ಸ್ವತಃ ಸರಕಾರವೇ ಮುಂದೆ ನಿಂತು ಧುರೀಣತ್ವ ವಹಿಸಿ ಇವರ ಉತ್ಸವವನ್ನು ಮಾಡಿತು. ಸಂಸ್ಕೃತ ಸಾಹಿತ್ಯದ ಬಗ್ಗೆ ಇವರು ಅಪಾರವಾದ ಕಾಳಜಿಯನ್ನು ವಹಿಸಿದ್ದರು.

ಶ್ರೀಪೀಠದ ಆರ್ಥಿಕ ಬಾಹುಗಳನ್ನು ಬಲಪಡಿಸಲು ಇವರು ನಿರಂತರವಾಗಿ ಪರಿಶ್ರಮಿಸಿದರು. ಶ್ರೀಪೀಠಕ್ಕೊಂದು ಗಟ್ಟಿಯಾದ 'ಆರ್ಥಿಕ ಕಾಯಕಲ್ಪ'ವನ್ನು ಒದಗಿಸಿಕೊಡಬೇಕೆಂಬ ಹೆಬ್ಬಯಕೆ ಇವರದಾಗಿತ್ತು. ಆದಕ್ಕೋಸ್ಕರ ಇವರನ್ನು ಕಾರ್ಯೋನ್ಮುಖಿಗೊಳಿಸುವಲ್ಲಿ ಇವರ ನಂತರ ಪೀಠಾರೋಹಣ ಮಾಡಿದ ಶ್ರೀ ಶಿವಲಿಂಗ ಶಿವಾಚಾರ್ಯರೂ ಸಹ ಧ್ವನಿಗೂಡಿಸಿದರು.

5. ಶ್ರೀ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರು ಕ್ರಿ. ಶ. 1907-1932

ಇವರು ಶ್ರೀಪೀಠದ 82ನೆಯ ಪೀಠಾಧಿಪತಿಗಳು. ಪರಮ ತೇಜಸ್ವಿಗಳಾದ ಇವರು ಪ್ರವಾಹಕ್ಕೆ ವಿರುದ್ಧವಾಗಿ ಈಜಿ ಯಶಸ್ವಿಯಾಗಬಲ್ಲ ಎದೆಗಾರಿಕೆಯನ್ನು ಹೊಂದಿದ್ದರು. ಪೀಠವು ಸಂಕಷ್ಟದ ದಿನಗಳನ್ನು ಎದುರಿಸುತ್ತಿದ್ದಾಗ ಇವರು ಯಶಸ್ವಿಯಾಗಿ ಎಲ್ಲ ಸಮಸ್ಯೆಗಳನ್ನು ನಿಭಾಯಿಸುವ ಮೂಲಕ 'ಹೋರಾಟವೇ ಜೀವನ' ಎಂಬುವುದನ್ನು ಸಾಬೀತುಪಡಿಸಿದರು. ಇವರ ಕಾಲಾವಧಿಯಲ್ಲಿ ಪೀಠಾಚಾರ್ಯರ ತಲೆಯಲ್ಲಿ ಕೋರ್ಟು-ಕಚೇರಿ ಇತ್ಯಾದಿ ಸಮಸ್ಯೆಗಳು ಸೇರಿಕೊಂಡು ಇವರನ್ನು ಧಾರ್ಮಿಕವಾಗಿ ವಿಚಲಿತಗೊಳಿಸಲು ಯತ್ನಿಸುತ್ತಿದ್ದವು. ಆದರೂ ಸಹ ಪೂಜ್ಯರು ಲೌಕಿಕ ವಿಷಯಗಳಿಗೆ ಅಷ್ಟೊಂದು ಆದ್ಯತೆಯನ್ನು ಕೊಡದೆ ಯಾತ್ರೆ, ಪುಣ್ಯಕ್ಷೇತ್ರ ಹಾಗೂ ಪುಣ್ಯತೀರ್ಥ ದರ್ಶನ ಇತ್ಯಾದಿ ಪುಣ್ಯಪ್ರದ ಮತ್ತು ಪುಣ್ಯವರ್ಧಕ ಕಾರ್ಯಗಳಲ್ಲಿ

ತೊಡಗಿಕೊಂಡಿರುತ್ತಿದ್ದರು.ಲೌಕಿಕದ ಮಧ್ಯದಲ್ಲಿದ್ದರೂ ತಮ್ಮ ಅಲೌಕಿಕ ವರ್ಚಸ್ಸನ್ನು ಅಬಾಧಿತವಾಗಿ ಕಾಯ್ದುಕೊಂಡು ಬಂದಿದ್ದರು.

6. ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು ಕ್ರಿ. ಶ. 1932-1944

ಇವರು ಶ್ರೀಪೀಠದ 83ನೆಯ ಪೀಠಾಧಿಪತಿಗಳು. ಪರಮ ಸಾತ್ವಿಕರಾದ ಇವರು ತಮ್ಮ ಪೀಠಾರೋಹಣದ ಕಾಲಾವಧಿಯಲ್ಲಿ ಸಾಕಷ್ಟು ಸಂಘರ್ಷಮಯ ವಿಷಯಗಳಿಗೆ ವಸ್ತುವಾಗಬೇಕಾಯಿತು. ಶ್ರೀ ಜಗದ್ಗುರು ವಿಶ್ವಾರಾಧ್ಯ ಬ್ಯಾಂಕು ಸುನಾಮಿ ಅಲೆಯಂತೆ ಶ್ರೀಪೀಠದ ಅಸ್ತಿತ್ವವನ್ನು ಮತ್ತು ಆಸ್ತಿಯನ್ನು ಕಬಳಿಸಲು ಬರುತ್ತಿರುವಾಗ ಪೀಠವನ್ನು ಮತ್ತು ಪೀಠದ ಘನತೆ-ಗೌರವಗಳನ್ನು ಕಾಯ್ದುಕೊಂಡು ಬರುವ ಮಹತ್ವದ ಜವಾಬ್ದಾರಿಗೆ ಇವರು ಕಂಕಣಬದ್ಧರಾಗಿ ನಿಲ್ಲಬೇಕಾಯಿತು. ಪ್ರತಿಯೊಂದು ಸಮಸ್ಯೆಯನ್ನು ಯಶಸ್ವಿಯಾಗಿ ನಿಭಾಯಿಸಿದ ಪರಮಪೂಜ್ಯರು ಶ್ರೀಪೀಠದಲ್ಲಿ ಧಾರ್ಮಿಕ ಚುರುಕುತನವನ್ನು ಕಾಪಾಡಿಕೊಂಡು ಬರುವಲ್ಲಿ ಯಾವತ್ತಿಗೂ ಹಿಂದೇಟು ಹಾಕಲಿಲ್ಲ. ಇವರ ಕಾಲದಲ್ಲಿ ಆಗಾಗ್ಗೆ ಶ್ರೀಪೀಠದಲ್ಲಿ ಭಕ್ತ-ಸಮಾವೇಶಗಳು ನಡೆಯುತ್ತಿದ್ದವು. ಅದೂ ಅಲ್ಲದೆ ಪರಮಪೂಜ್ಯರು ಕಾಶೀ ವೀರಶೈವ ವಿದ್ವತ್ ಸಂಘದ ಕಾರ್ಯ-ಚಟುವಟಿಕೆಗಳನ್ನು ತುಂಬು ಮನಸ್ಸಿನಿಂದ ಪ್ರೋತ್ಸಾಹಿಸುತ್ತಿದ್ದರು.

ಇವರ ಕಾಲಾವಧಿಯಲ್ಲಿ ನಡೆದ ಇನ್ನೊಂದು ಮಹತ್ವದ ಘಟನೆಯನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕು. ಅದೇನೆಂದರೆ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಈ ಗ್ರಂಥದ 'ಕೇಂದ್ರಬಿಂದು'ವಾದ ವಿದ್ವದ್ವಿಭೂತಿ ಶ್ರೀವೀರಭದ್ರ ಜಗದ್ಗುರುಗಳನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡದ್ದು. ಅವರ ಈ ನಿರ್ಣಯವು ಶ್ರೀಪೀಠದ ವರ್ಚಸ್ಸಿಗೊಂದು ಹೊಸ ಆಯಾಮವನ್ನು ಕಲ್ಪಿಸಿಕೊಟ್ಟಿತು.

7. ಶ್ರೀಪೀಠದ 84ನೆಯ ಪೀಠಾಧಿಪತಿ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯರು

ಕ್ರಿ. ಶ. 1944-1948

ಪೀಠಾಧಿಪತ್ಯದ ಕಾರ್ಯಕಾಲ

27.09.1944 ರಿಂದ 25.01.1948

ಕೇವಲ ಮೂರು ವರುಷ, ಮೂರು ತಿಂಗಳು, ಇಪ್ಪತ್ತೊಂಬತ್ತು ದಿನಗಳು
6 ಗಂಟೆ 10 ನಿಮಿಷಗಳು ಮಾತ್ರ
ಕಾಶೀ ಜ್ಞಾನಪೀಠಕ್ಕೆ 'ಜ್ಞಾನಮಂದಿರ'ವನ್ನು ಕೊಟ್ಟ ಧೀಮಂತರಿವರು.

8. ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರು ಕ್ರಿ. ಶ. 1948-1989

ಇವರು ಶ್ರೀಪೀಠದ 85ನೆಯ ಪೀಠಾಧಿಪತಿಗಳು. ಪರಮಪೂಜ್ಯರು ಶ್ರೀಪೀಠವನ್ನು ಪ್ರಗತಿ ಪಥದತ್ತ ಕರೆದುಕೊಂಡು ಹೋಗುವ ದಿಶೆಯಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟರು. ಶ್ರೀಪೀಠವನ್ನು

ಋಣಭಾರದಿಂದ ಸಂಪೂರ್ಣವಾಗಿ ಮುಕ್ತಗೊಳಿಸಿ ಪೀಠದ ಆಯ-ಆದಾಯಗಳನ್ನು ಹೆಚ್ಚಿಸಿದ ಕೀರ್ತಿ ಇವರದು. ನಿಧಾನ ಪ್ರಕೃತಿಯ ಇವರು ಸದ್ದಿಲ್ಲದೆ ಸುದ್ದಿಮಾಡಿ ಪೀಠದ ಶಕ್ತಿ-ಸಾಮರ್ಥ್ಯಗಳನ್ನು ಹೆಚ್ಚಿಸಿದರು. ಕಾಶಿಯ ಶ್ರೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಶ್ರೀ ಶಕ್ತಿ ವಿಶಿಷ್ಟಾದ್ವೈತ ಸಂಕಾಯ(ವಿಭಾಗ)ವನ್ನು ಸ್ಥಾಪಿಸುವುದಕ್ಕೆ ನೈತಿಕ ಹಾಗೂ ಆರ್ಥಿಕ ಬಲವನ್ನು ತುಂಬಿ ಅದನ್ನು ಆಗುಮಾಡಿದರು. ಭಕ್ತರೊಂದಿಗೆ ಘನಿಷ್ಠ ಸಂಬಂಧವನ್ನು ಹೊಂದಿದ್ದ ಇವರು ಅತ್ಯಂತ ಸೂಕ್ಷ್ಮಮತಿಗಳು ಮತ್ತು ಅತಿಹೆಚ್ಚು ಸಂವೇದನಾಶೀಲರು. ಭಕ್ತರ ಸುಖ-ದುಃಖಗಳಲ್ಲಿ ಹಿತವಾಗಿ ಸ್ಪಂದಿಸುತ್ತಿದ್ದ ಪೂಜ್ಯರು 'ವಿದ್ಯಾರ್ಥಿವತ್ಸಲ'ರಾಗಿದ್ದರು. ವಿದ್ಯಾವಂತರನ್ನು ಅತ್ಯಂತ ಹತ್ತಿರದಿಂದ ಪ್ರೀತಿಸುತ್ತಿದ್ದರು. ಶ್ರೀಪೀಠವನ್ನು 'ಮೌನ-ಸಾಧನೆ'ಗೆ ಬದ್ಧವಾಗಿಸಿದ 'ಚಾರುಚರಿತ'ರಾದ ಇವರು ಶ್ರೀಪೀಠದ ಸರ್ವಾಂಗೀಣ ಪ್ರಗತಿಗೆ ನಾಂದಿ ಹಾಡಿದರು.

೨. ಶ್ರೀ ಜಗದ್ಗುರು ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯರು 17.11.1989

ಶ್ರೀ ಕಾಶೀ ಜ್ಞಾನಪೀಠದ 86ನೆಯ ಪೀಠಾಧಿಪತಿಗಳಾದ ಇವರು ಶ್ರೀಪೀಠದ ಪ್ರಸ್ತುತ. ಇವರು ಪೀಠಾರೋಹಣ ಮಾಡುತ್ತಲೇ ಶ್ರೀಪೀಠದಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಶ್ರೀಪೀಠಕ್ಕೆ ಸುಭದ್ರವಾದ 'ಆರ್ಥಿಕ ಕಾಯಕಲ್ಪ'ವನ್ನು ಒದಗಿಸಿಕೊಡುವುದರ ಜೊತೆಯಲ್ಲಿ ಪೀಠವನ್ನು ಸರ್ವಾಂಗ ಸುಂದರಗೊಳಿಸಿದ ಪೂಜ್ಯರು ಕಾಶೀ ಪೀಠದ 'ಕೀರ್ತಿ'ಯು ಕರ್ನಾಟಕ ಮಹಾರಾಷ್ಟ್ರಗಳ ಪ್ರತಿ ಮನೆ-ಮನೆಯ ಮನಮಾತಾಗುವಂತೆ ಮಾಡಿದ್ದಾರೆ.

'ಸಿದ್ಧಾಂತ ಶಿಖಾಮಣಿ'ಯನ್ನೇ ತಮ್ಮ ಉಸಿರನ್ನಾಗಿಸಿಕೊಂಡ ಇವರು ಅದರ 'ಸಾರ ಸಂದೇಶ'ವು ಪ್ರತಿಯೊಂದು ಮನವನ್ನೇರಿ ಕುಳಿತುಕೊಳ್ಳುವಂತೆ ಮಾಡಿದ್ದಾರೆ. ಶ್ರೀ ವೀರಭದ್ರ ಜಗದ್ಗುರುಗಳವರ ನಂತರ ಅತಿ ಹೆಚ್ಚು ಪಾಂಡಿತ್ಯವನ್ನು ಸಂಪಾದಿಸಿ ಅದನ್ನು ದಾಖಲಿಸಿದ ಕೀರ್ತಿ ಇವರದು. ಪರಮಪೂಜ್ಯರು ಹಗಲಿರುಳೆನ್ನದೆ ನಿರಂತರವಾಗಿ ಜಿಜ್ಞಾಸು ಜನಗಳಿಗೆ ಜ್ಞಾನದಾಸೋಹವನ್ನು ನೀಡುತ್ತಲೇ ಇರುತ್ತಾರೆ.

ಪ್ರಸ್ತುತ ಈ ಗ್ರಂಥ ಅವರ ಸಂಕಲ್ಪ, ತಮ್ಮ ಪೂರ್ವಾಚಾರ್ಯರಾದ 'ವಿದ್ವದ್ವಿಭೂತಿ' ಶ್ರೀ ವೀರಭದ್ರ ಜಗದ್ಗುರುಗಳ ವಿದ್ವತ್ಪೂರ್ಣ ಸಮಗ್ರ ಪರಿಚಯ ಮಾನ್ಯ, ಸನ್ಮಾನ್ಯರುಗಳನ್ನು ಮೊದಲು ಮಾಡಿಕೊಂಡು ಜನಸಾಮಾನ್ಯರವರೆಗೆ ಎಲ್ಲರಿಗೂ ಆಗಬೇಕೆಂಬುದೇ ಅವರ ಮನದಾಳದ ಮಹದಾಶಯ.

ಜೀವನ ಪರ್ವ



'ಸಾರಸ್ವತ ಮೇರು' 'ಸದಮಲ ಮಾನಸ'

ಶ್ರೀ ವೀರಭದ್ರ ಜಗದ್ಗುರುಗಳು

ಬಹುಮುಖ ಪ್ರತಿಭೆಯ ಬಹುಭಾಷಾ ವಿಶಾರದ
ಶ್ರೀ ವೀರಭದ್ರ ಜಗದ್ಗುರುಗಳ ಆಜೀವನ ಜೀವನದ ಚಿತ್ರಯಾತ್ರೆ



'ಕ್ಷಣ-ಕ್ಷಣವೂ ಶಿಕ್ಷಣ' ಮಹಾಮಂತ್ರದ
ನಿಷ್ಠಾವಂತ ವಿದ್ಯಾರ್ಥಿ ವೀರಭದ್ರಯ್ಯ



'ಸರಸ-ಸಮರಸ'ವೇನಿದ್ದರೂ ಕಲಮು-ಕಾಗದಗಳೊಂದಿಗೆ
ವಿದ್ಯಾತಪಸ್ವಿ ವೀರಭದ್ರಯ್ಯ (1926)

ಸ್ನೇಹಿತರು ಮತ್ತು ಸಹಚರರೊಂದಿಗೆ ಜ್ಞಾನದೇಗುಲದ ಮುಂದೆ
ಚಿದರಮಠದ ಶ್ರೀ ವೀರಭದ್ರರು

'ಧ್ಯೇಯವೇ ಎನ್ನ ದೇಗುಲ' ಎಂಬ ಆದರ್ಶದ ಹರಿಕಾರ
ಶ್ರೀ ವೀರಭದ್ರ ಶರ್ಮಾ ಹಿಮಾಲಯದ ಯಾತ್ರೆಯಲ್ಲಿದ್ದಾಗ
ಜೂನ್-1929 ರ ಚಿತ್ರ



'ಪುಸ್ತಕಗಳೇ ನನ್ನ ಪ್ರಾಣ, ಪುಸ್ತಕಗಳೇ ನನ್ನ ಸಂಪತ್ತು' ಎಂದು ಸಾರಿ ಸಾರಿ ಹೇಳಿದ
ನಿತ್ಯ ನಿರಂತರ 'ಪುಸ್ತಕಾದ್ವೈತಿ' ಶ್ರೀ ವೀರಭದ್ರ ಶರ್ಮಾಜಿಗಳು

ಕ್ಯಾಮರಾದ ಕಣ್ಣುಗಳ ಮುಂದೆ

ಶ್ರೀ ವೀರಭದ್ರ ಶರ್ಮಾಜಿ ಚಿತ್ರ 1929



'ತರುಣ ತಪಸ್ವಿ' ಶ್ರೀ ವೀರಭದ್ರ ಶರ್ಮಾ

ಸಾಧನೆಯ ಹೆದ್ದಾರಿಯಲ್ಲಿ



ಹುಟ್ಟು ಛಲಗಾರ

ಶ್ರೀ ವೀರಭದ್ರ ಶರ್ಮಾರವರ ಒಂದು ಧೀಮಂತ ನೋಟ

ಪರಳಿ ಪ್ರಕರಣದತ್ತ ಒಂದು ಗಂಭೀರ ನೋಟ

ಕಾಶಿಯತ್ತ ಮುಖ ಮಾಡಿದ
ಶ್ರೀ ವೀರಭದ್ರ ಶರ್ಮಾ



ವೀರಶೈವ ವೇದಾಧಿಕಾರ ವಿಜಯದ ರೂವಾರಿ

ಪ್ರಪ್ರಥಮ 'ವೇದತೀರ್ಥ' ಚೌಡದಾನಪುರದ ಶ್ರೀ ವಿರೂಪಾಕ್ಷ ಒಡೆಯರ್‌ರವರು



ಪರಳಿ ಪ್ರಕರಣದ ವಿಜಯೀ ತಂಡ ಚೌಡದಾನಪುರದ
ಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರ್ ಇವರೊಂದಿಗೆ



ಕಾಶೀ ಶ್ರೀ ವಿಶ್ವಾರಾಧ್ಯ ಗುರುಕುಲದಲ್ಲಿ
ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳ ಶ್ರೀ ಸನ್ನಿಧಾನದಲ್ಲಿ



ಸಾರಸ್ವತ ತೇಜಸ್ವಿ ಸಾತ್ವಿಕ ಮೂರ್ತಿ
ಶ್ರೀ ವೀರಭದ್ರ ಶರ್ಮ

‘ಏನಾದರೂ ಆಗು ಮೊದಲು ವಿದ್ಯಾರ್ಜನೆ ಮಾಡು’ ಎಂದು ಸಾರಿ ಸಾರಿ ಹೇಳಿದ ನಿರಂತರ ಹೋರಾಟಗಾರ ಪಂಡಿತ ಶಿರೋಮಣಿ ಶ್ರೀ ವೀರಭದ್ರ ಶರ್ಮಾ

ಗ್ರಂಥಾಲಯವೆಂಬೀ ‘ತಾರುಮನೆ’ಯಲ್ಲಿ ವಿದ್ಯಾರ್ಥಿವೃಂದದೊಂದಿಗೆ

ಸಿಕಂದರಾಬಾದಿನಲ್ಲಿ ವೀರಶೈವ ಗುರುಕುಲ ಸ್ಥಾಪನೆಯ ಕಾಸಿನೊಂದಿಗೆ

ಗುರುಕುಲಕ್ಕೆ 'ಗೃಹದಾನ' ಮಾಡಿದ
ನಾಗಪ್ಪನ ಜೊತೆಯಲ್ಲಿ ಪಂಡಿತ ಶ್ರೀ ವೀರಭದ್ರ ಶರ್ಮರು



ಮಹಾದಾನಿ 'ಭಕ್ತಶ್ರೇಷ್ಠ' ಶ್ರೀ ನಾಗಪ್ಪ

ಶ್ರೀ ಮತ್ತು ಶ್ರೀಮತಿ ನಾಗಪ್ಪ ದಂಪತಿಗಳು

'ತನು ಮನ ಧನವೆಲ್ಲ ಪುಸ್ತಕ'

ಜ್ಞಾನಮಂದಿರದ ನಿರಂತರ ಜಿಜ್ಞಾಸು ಶ್ರೀ ವೀರಭದ್ರ ಶರ್ಮರು

ಕಾಶೀ ವೀರಶೈವ ವಿದ್ವತ್ ಸಂಘದ ಸಹಪಾಠಿ

ವಿದ್ಯಾವರೇಣ್ಯರೊಂದಿಗೆ ಮತ್ತು ಗುರುವರೇಣ್ಯರೊಂದಿಗೆ



ಯಾದಗಿರಿ ಸಂಸ್ಕೃತ ಕಾಲೇಜಿನ

ಪ್ರಾಂಶುಪಾಲ ಹಿರೇಮಠದ ಶ್ರೀ ವೀರಭದ್ರ ಶರ್ಮಾಜಿ

'ವಿಭೂತಿ' ಪತ್ರಿಕೆಯ ಸಂಪಾದಕ

ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳು

ಕಾಶೀ ಶ್ರೀ ವಿಶ್ವಾರಾಧ್ಯ ಜ್ಞಾನಪೀಠದಲ್ಲಿ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ
ಮಹಾಸ್ವಾಮಿಗಳವರ ದಿವ್ಯ ಸನ್ನಿಧಾನದಲ್ಲಿ
ಜನಾನುರಾಗಿ ಪಂಡಿತ ಶ್ರೀ ವೀರಭದ್ರ ಶರ್ಮಾರವರು

ಜಂಗಮವಾಡಿ ಶ್ರೀಮಠದ 'ಪರಮಪ್ರಾಜ್ಯ' ಆವರಣದಲ್ಲಿ
ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳೊಂದಿಗೆ
'ಭಕ್ತ ಜಗತ್ತು'



ಕಾಶೀ ಶ್ರೀ ಜಗದ್ಗುರು ಪೀಠದ ಉತ್ತರದುತ್ತರಾಧಿಕಾರಿ
ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳು



ಕಾಶೀ ಪೀಠದುತ್ತರಾಧಿಕಾರಿಗಳಿಗೆ ಜನಗಳಿಂದ ಆನಂದದಾಭಿನಂದನೆ
ಗುರುವಂದನೆ ಮತ್ತು ಗೌರವ ಸಮರ್ಪಣೆ

ಶ್ರೀ ಜಗದ್ಗುರು ವಿಶ್ವಾರಾಧ್ಯರ ತಪೋ ಸನ್ನಿಧಾನ



ರಂಭಾಪುರೀ ಪೀಠದ ಶ್ರೀ ಶಿವಾನಂದ ಜಗದ್ಗುರುಗಳ ದಿವ್ಯ ಸನ್ನಿಧಾನದಲ್ಲಿ
ಕಾಶೀ ಶ್ರೀ ಪೀಠದ ನೂತನ ಜಗದ್ಗುರುಗಳಿಗೆ ಕಿರೀಟಧಾರಣ.
ಶ್ರೀ ವೀರಭದ್ರ ಜಗದ್ಗುರುಗಳವರ ಪೀಠಾರೋಹಣ
ದಿನಾಂಕ 27. 09. 1944



ಶ್ರೀ ಜಗದ್ಗುರು ಪೀಠಾರೋಹಣ

ಜ್ಞಾನಪೀಠದ ಮಂಗಲಮಯ ಸನ್ನಿಧಾನದಲ್ಲಿ ಶ್ರೀ ರಂಭಾಪುರೀ ಜಗದ್ಗುರುಗಳೊಂದಿಗೆ

ಕಾಶೀ ಜಗದ್ಗುರು ಶ್ರೀ ವಿಶ್ವಾರಾಧ್ಯ ಜ್ಞಾನಪೀಠದ

ನೂತನ ಜಗದ್ಗುರು

ಶ್ರೀ ಶ್ರೀ ಶ್ರೀ 1008 ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು

ಪೀಠಾರೋಹಣದ ನಂತರ

ಕಾಶೀ ಮತ್ತು ರಂಭಾಪುರೀ ಪೀಠದ ಜಗದ್ಗುರುದ್ವಯರು

ದಿನಾಂಕ 27.09.194



ಕಾಶೀ ಶ್ರೀಪೀಠದಲ್ಲಿ ಶ್ರೀ ವೀರಭದ್ರ ಜಗದ್ಗುರುಗಳವರ
ಬಹುದಿನಗಳ ಕನಸಿನ ಕೂಸಾದ
'ಜ್ಞಾನಮಂದಿರ'ದ ಪ್ರಾರಂಭೋತ್ಸವ
ದಿನಾಂಕ 02.03.1946



ಕಾಶೀ ಶ್ರೀ ಜಂಗಮವಾಡಿಮಠದಲ್ಲಿ
ಕಾಶೀ ವೀರಶೈವ ವಿದ್ವತ್ ಸಂಘದ ವಿದ್ಯಾರ್ಥಿಗಳೊಂದಿಗೆ
ನಿತ್ಯ ನಿರಂತರ 'ವಿದ್ಯಾಚೇತನ' ಶ್ರೀ ವೀರಭದ್ರ ಜಗದ್ಗುರುಗಳು

ನೂತನ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯರ ಸಂಭ್ರಮದ ಪಲ್ಲಕ್ಕಿ ಉತ್ಸವ
ಕಾಶೀ ಪಟ್ಟಣದ ಪ್ರಮುಖ ಬೀದಿಗಳಲ್ಲಿ



ಆಂದೋಲಿಕೋತ್ಸವದಲ್ಲಿ ಸೇರಿದ ಜನಸಮುದಾಯ
(ಕಾಶೀ ಪಟ್ಟಣದ ಗೋಧೌಲಿಯಾದ ಸುತ್ತಮುತ್ತ)

ಶ್ರೀ ರಂಭಾಪುರೀ ಪೀಠದ ಶ್ರೀ ಶ್ರೀ ಶಿವಾನಂದ ಜಗದ್ಗುರುಗಳು
ಕಾಶೀ ಪೀಠದ ನೂತನ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯರು ಭಕ್ತರೊಂದಿಗೆ

೨೦. ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಪ್ರಥಮ ಪುಣ್ಯಾರಾಧನೆಯ ಪೂಜಾ ಸಂದರ್ಭದಲ್ಲಿ
ಶ್ರೀ ವೀರಭದ್ರ ಜಗದ್ಗುರುಗಳು

ವೀರಶೈವ ಸೈನಿಕರೊಂದಿಗೆ ವೀರಶೈವ ಸೇನೆಯ ಕಲ್ಪನೆಯ ಹರಿಕಾರ
ಶ್ರೀ ವೀರಭದ್ರ ಜಗದ್ಗುರುಗಳು
ಕಾಶೀ ಶ್ರೀ ಜಂಗಮವಾಡಿ ಮಠದಲ್ಲಿ

ದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಧಾರ್ಮಿಕ ಪರಿಕಲ್ಪನೆಗಳು
ಕಲಾವಿದ ಬ್ರಜೇಂದ್ರ ಕುಂಚಕ್ಕೆಳೆದು ಮಾತನಾಡಿದಾಗ



'ಹೂ' ಬಿಡಿಸುತ್ತಿರುವ (ಪುಷ್ಪಾವಚಯನ ಪ್ರಕ್ರಿಯೆ) ಸಾಧ್ವಿ ವನಿತೆಯು।



ಬಿಲ್ವವೃಕ್ಷವನ್ನೇರಿ ಬಿಲ್ವದಳಗಳನ್ನು ಬಿಡಿಸುತ್ತಿರುವ ಬಾಲಕನು

ಇಷ್ಟದೈವದ ಪೂಜೆಗಾಗಿ
'ಹೂಮಾಲೆ'ಗಳನ್ನು ಸಿದ್ಧಗೊಳಿಸುತ್ತಿರುವ ಕನ್ಯಾರತ್ನ

ಬಿಲ್ವದಳಗಳನ್ನು ಬಿಡಿಸುತ್ತಿರುವ 'ಸಾಧಕ ಶ್ರೇಷ್ಠ' ಸದ್ಗೃಹಸ್ಥ

ಪೂಜಾ ಸಿದ್ಧತೆಯಲ್ಲಿ ತೊಡಗಿಕೊಂಡು ಬಿಲ್ವದಳಗಳನ್ನು ವಿಂಗಡಿಸುತ್ತಿರುವ ಸಾಧ್ವಿ ಶಿರೋಮಣಿ

ಪತಿಯ ಶಿವಪೂಜೆಗಾಗಿ ಪೂಜಾ ಪರಿಕರಗಳನ್ನು ಸುಸಜ್ಜಿತಗೊಳಿಸುತ್ತಿರುವ ಸ್ತ್ರೀರತ್ನ

ಪೂಜಾ ಪರಿಕರಗಳೊಂದಿಗೆ ದೇವಾಲಯಾಭಿಮುಖಿಯಾಗಿ
ಹೆಜ್ಜೆ ಹಾಕುತ್ತಿರುವ ರುದ್ರಾಣಿ

ರಂಗವಲ್ಲಿಯನ್ನಿಟ್ಟು ದೀಪಸ್ತಂಭವನ್ನು
ಶೃಂಗರಿಸುತ್ತಿರುವ ನಾರಿಮಣಿ



'ಹಚ್ಚಿಟ್ಟರೆ ದೀಪ, ಮುಚ್ಚಿಟ್ಟರೆ ಕತ್ತಲೆಯ ಕೂಪ'

ತನ್ನ ಕರಕಮಲದಿಂದ

ದೀಪವನ್ನು ಬೆಳಗಿಸುತ್ತಿರುವ ದೀಪವರ್ಷಿಣಿ



ಪೂಜಾ ಪರಿಕರಗಳು ಮತ್ತು ಫಲ-ಪುಷ್ಪ-ತಾಂಬೂಲಾದಿಗಳು



'ಜಲಾಭಿಷೇಕಪ್ರಿಯ' ಶಿವನಿಗೆ ಜಲಾಭಿಷೇಕ ಮಾಡುತ್ತಿರುವ ಶಿವಭಕ್ತ



'ನಾದಪ್ರಿಯ' ಶಿವನಿಗೆ 'ನಾದಸೇವೆ'ಯನ್ನು ಸಲ್ಲಿಸುತ್ತ
ವೀಣಾಪಾಣಿಯಾದ ಮಹಾಸಾಧ್ವಿ



'ಮೊದಲ ಆಭರಣ' ವಿಭೂತಿ

ಕ್ರಿಯಾಭಸ್ಮದ ಗಟ್ಟಿಗಳನ್ನು ಸಿದ್ಧಗೊಳಿಸುತ್ತಿರುವ
'ವಿಭೂತಿ ಕಾಯಕ'ದ ಶಿವಭಕ್ತ



ರುದ್ರಾಕ್ಷಿ ಮಾಲೆಯನ್ನು ಸೂತ್ರಬದ್ಧಗೊಳಿಸುತ್ತಿರುವ
'ರುದ್ರಾಕ್ಷಿ ಕಾಯಕ'ದ ಅನೊಷ್ಠಿರ್ಗ ಶಿವಭಕ್ತ

ರುದ್ರಾಕ್ಷಿ ಮಳಿಗೆಯಲ್ಲಿ ರುದ್ರಾಕ್ಷಿ ಮಾಲೆಗಳನ್ನು ಗ್ರಾಹಕನಿಗೆ
ಮಾರಾಟ ಮಾಡುತ್ತಿರುವ ಶಿವಭಕ್ತ 'ರುದ್ರಾಕ್ಷಿ ವರ್ತಕ'

ಭಕ್ತರಿಗೆ ಶ್ರೀ ಸಿದ್ಧಾಂತ ಶಿಖಾಮಣಿಯ ಬೋಧಾಮೃತದ
ರಸಾಸ್ವಾದ ಮಾಡಿಸುತ್ತಿರುವ ಮಹಾಚಾರ್ಯರು

ಭಕ್ತರಿಂದ ಶ್ರೀ ಜಗದ್ಗುರುಗಳವರ ಸಾಮೂಹಿಕ ಪಾದಪೂಜೆ, ಸಾಮೂಹಿಕ ದರ್ಶನ ಮತ್ತು ಭಕ್ತಿ 'ನಮನ ಸುಮನ'ಗಳ ಸಮರ್ಪಣೆ



ಚಿತ್ರ-ಚಿತ್ತಾರ ಒಂದು ಪರಿಕಲ್ಪನೆ

ಸುಪ್ರಸನ್ನ ನಂದಿ

ಶ್ರೀ ಶ್ರೀ ವೀರಭದ್ರ ಜಗದ್ಗುರುಗಳೊಂದಿಗೆ....

''ಕಾಶೀ ಪೀಠದ ನೂತನ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯ ಸನ್ನಿಧಿಯವರು ಸರ್ವವಿದ್ಯಾನಿಧಿಗಳು ಮತ್ತು ಜ್ಞಾನಮೂರ್ತಿಗಳು. ಇವರಲ್ಲಿ ಶ್ರೀ ವಿಶ್ವಾರಾಧ್ಯರ ವಿಶೇಷ ಅಂಶವಿದೆ. ಇವರಿಂದಾಗಿ ಶಿವಾದ್ವೈತ ಸಿದ್ಧಾಂತವು ಜಗತ್ತಿನಲ್ಲಿ ವೈಭವದಿಂದ ಪ್ರಕಾಶಮಾನವಾಗಿ ಬೆಳಗುತ್ತದೆ. ಪೂಜ್ಯರಿಂದ ಗುರುಗಳ ಮತ್ತು ಗುರುಕುಲಗಳ ಗೌರವವು ಧಾರಾಳವಾಗಿ ವೃದ್ಧಿಸುತ್ತದೆ.''

ಲಿಂ. ಶ್ರೀ ರಂಭಾಪುರೀ ಜಗದ್ಗುರು ಶ್ರೀ ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು
ಶ್ರೀ ವೀರಭದ್ರ ಜಗದ್ಗುರುಗಳವರ 'ಶ್ರೀ ಕಾಶೀ ಜಗದ್ಗುರು ಪಟ್ಟಾಭಿಷೇಕ' ಸಂದರ್ಭ 27.09.1944

''ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರ ಬಗ್ಗೆ ನಾಲ್ಕು ಮಾತುಗಳಲ್ಲಿ ಬರೆಯಲಾಗದು. ಅವರ ಕುರಿತು ಸಮಗ್ರ ಇತಿಹಾಸದ ರಚನೆಯಾಗಬೇಕಿದೆ. ಅದು ಒಂದು ಸಾವಿರ ಪುಟಗಳನ್ನು ಮೀರಬಹುದು.''

ಲಿಂ. ಶ್ರೀಶೈಲ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು

ವಿಪಂಚೀ (ಷಾಣ್ಮಾಸಿಕ) ಮಾರ್ಚ್ 1951

''ಪೂಜ್ಯ ಶ್ರೀ ಶ್ರೀಗಳವರು ಈ ನೂತನ ಪದವಿಯನ್ನು ಅಲಂಕರಿಸಿರುವುದರಿಂದ ಅವರಿಂದ ಬರೀ ಕನ್ನಡ ನಾಡಿಗೇ ಅಲ್ಲದೆ, ಅಖಿಲ ಹಿಂದೂಸ್ಥಾನಕ್ಕೇ ಹೆಚ್ಚಿನ ಸೇವೆ ದೊರೆಯುವಂತಾಗಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು 16. 09. 1944

''ಶ್ರೀ ವೀರಭದ್ರ ಜಗದ್ಗುರುಗಳು ಪ್ರಕಾಂಡ ಪಂಡಿತರು, ವಿಮರ್ಶಾವಿಚಕ್ಷಣರು ಮತ್ತು ಸಹೃದಯರು. ಪೂಜ್ಯರು ಸ್ವಭಾವತಃ ಸಾಹಸಿಗಳು ಮತ್ತು ಸಂವೇದನಾಶೀಲರು. ಇದಕ್ಕೆ ಅವರು ತಮ್ಮ ಸಂಪಾದಕತ್ವದಲ್ಲಿ ಹೊರತರುತ್ತಿದ್ದ 'ವಿಭೂತಿ' ಪತ್ರಿಕೆಯೇ ಸಾಕ್ಷಿ.''

ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

ಮೈಸೂರು, 7. 12. 1965

ಯಾವ ನಗರಿಯೊಳಿದ್ದು ಜ್ಞಾನೋಪಾಸನೆಯ ನೀವ್ ಗೈದಿರೋ
ಯಾವ ಜಂಗಮವಾಡಿಯಲ್ಲಿಯೇ ಶಾಸ್ತ್ರ- ಸುಮಗಳನಾಯ್ದಿರೋ
ಯಾವ ವಿಶ್ವೇಶ್ವರನಾ ಕೊರಳಿಗೆ ಗ್ರಂಥಮಾಲೆಯನ್ನೈದಿರೋ
ಎಲ್ಲಿ ವ್ಯಾಸಂಗದಲಿ ನಿಮ್ಮಯ ಕಾಯವನ್ನೆಲ್ಲ ತೇಯ್ದಿರೋ
ಅಲ್ಲಿ ಜಗದ್ಗುರು ಪೀಠವೇರುವ ನೀವೆ ನಿಜಕ್ಕೂ ಧನ್ಯರು
ಸರಸ್ವತೀ ವರಪುತ್ರಶ್ರೇಷ್ಠರು, ಸರ್ವಕುಲ ಸನ್ಮಾನ್ಯರು

ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಪಕರಣೇ.........

ಶ್ರೀ ವೀರಭದ್ರ ಜಗದ್ಗುರುಗಳು ಕಾಶೀ ಶ್ರೀಪೀಠದ 84ನೆಯ ಪೀಠಾಧಿಪತಿಗಳು. ಇವರನ್ನು ಶ್ರೀಪೀಠದ 'ಜ್ಞಾನದೇಗುಲ' ಎಂದು ಕರೆಯಬಹುದು. ಜ್ಞಾನಪೀಠದ ಶ್ರೀಮಂತ ಇತಿಹಾಸದಲ್ಲಿ ಸಾತ್ವಿಕ ಚೈತನ್ಯವನ್ನು ತುಂಬಿ ಅಲ್ಲಿ ವಿದ್ವತ್ತಿನ ವಿದ್ಯುತ್ತು ಪ್ರವಹಿಸುವಂತೆ ಮಾಡಿದ ಕೀರ್ತಿ ಪರಮಪೂಜ್ಯರದು. ಪರಮಪೂಜ್ಯರೊಂದು ವಿದ್ವತ್ತಿನ ಪರ್ಯಾಯ ಪದ. 'ಕ್ಷಣ ಕ್ಷಣವೂ ಶಿಕ್ಷಣ' ಎಂಬ ಸಿದ್ಧಾಂತದ ಹರಿಕಾರರವರು. ಪರಮಪೂಜ್ಯರು ಕಾಶೀ ಜ್ಞಾನ ಪೀಠದತ್ತ ಕೀರ್ತಿಯ ಮಹಾಪೂರವು ತಾನೇ ತಾನಾಗಿ ಹರಿದುಬರುವಂತೆ ಮಾಡಿದ ಧೀಮಂತರು. ದೇವರು ಅವರಿಗೆ ಸಮೃದ್ಧವಾದ ಆಯುಷ್ಯವನ್ನು ಕೊಡುವಲ್ಲಿ ಧಾರಾಳತನವನ್ನು ತೋರಲಿಲ್ಲ. ಅದೊಂದೇ ಆತ ಮಾಡಿದ ಬಹುದೊಡ್ಡ ತಪ್ಪು. ಆದರೆ ಆತ ಅವರಿಗೆ ಪ್ರಬುದ್ಧವಾದ ಮನಸ್ಸನ್ನು ಕೊಟ್ಟಿದ್ದ. ಕೆಲವರು ವಯಸ್ಸಿನಿಂದ ವೃದ್ಧರಾಗುತ್ತಾರೆ. ಕೆಲವರು ಮನಸ್ಸಿನಿಂದ ವೃದ್ಧರಾಗುತ್ತಾರೆ. ಪರಮಪೂಜ್ಯರು ಮನಸ್ಸಿನಿಂದ ವೃದ್ಧರಾಗಿದ್ದರಷ್ಟೇ ಅಲ್ಲ, ಅವರು ಪ್ರಬುದ್ಧರೂ ಆಗಿದ್ದರು.

ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳವರ ಜೀವನವೇ ಒಂದು 'ಸಾಹಸ ಗಾಥೆ'. ಅದೊಂದು ಸಜೀವ ಭಗವದ್ಗೀತೆ. ಕವಿ ಭಾರವಿ ಹೇಳುವಂತೆ 'ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಪಕರಣೇ' ಎಂಬ ಈ ಮಾತಿಗೆ ವೀರಭದ್ರ ಜಗದ್ಗುರುಗಳ ಜೀವನ ಜೀವಂತ ಸಾಕ್ಷಿಯಾಗಿ ನಿಂತುಕೊಳ್ಳುತ್ತದೆ. ಪರಮಪೂಜ್ಯರು 'ಉಪಕರಣ'ಗಳಿಂದ ಬೆಳೆದು ದೊಡ್ಡವರಾಗಲಿಲ್ಲ. ಅವರು 'ಅಂತಃಕರಣ'ದಿಂದ ಬೆಳೆದು ದೊಡ್ಡವರಾದರು. ಅವರು 'ಸಾಧನ'ಗಳಿಂದ ಬೆಳೆಯಲಿಲ್ಲ. ಅವರು ಸಾಹಸದಿಂದ ಬೆಳೆದರು.

ಪರಮಪೂಜ್ಯರ ಜೀವನವೇನೂ ಹೂವಿನ ಹಾಸಿಗೆಯಾಗಿರಲಿಲ್ಲ. ಅದೊಂದು ಸಮಸ್ಯೆಗಳ 'ರುದ್ರತಾಂಡವ ಶಿಬಿರ'ವಾಗಿತ್ತು!! ಅವರ ಜೀವನದಲ್ಲಿ ಸಮಸ್ಯೆಗಳು ಒಂದಾದ ಮೇಲೊಂದರಂತೆ 'ಸುನಾಮಿ ಅಲೆಗಳು' ಬಂದು ಅಪ್ಪಳಿಸುವಂತೆ ಅಪ್ಪಳಿಸಿದವು. ಬದುಕಿನುದ್ದಕ್ಕೂ ಸಮಸ್ಯೆಗಳು ಅವರ ಬದುಕಿನ ಸುತ್ತಮುತ್ತ ಮತ್ತು ಅಕ್ಕಪಕ್ಕ ಬಿಡಾರ ಹೂಡಿಕೊಂಡಿದ್ದವು. ಸಮಯ ಸಿಕ್ಕಾಗಲೆಲ್ಲ ಅವು ದಿಢೀರನೇ ಎದ್ದು 'ರುದ್ರತಾಂಡವ'-

ವಾಡುತ್ತಿದ್ದವು. ಆದರೂ ಪರಮಪೂಜ್ಯರು ಜಗ್ಗಲಿಲ್ಲ, ಬಗ್ಗಲಿಲ್ಲ. ಅವರು ಕುಸಿದು ಬೀಳುವ ಬದುಕನ್ನು ಮತ್ತೆ ಮತ್ತೆ ಛಲದಿಂದ ಕಟ್ಟಿದರು. ಸಂಘರ್ಷಮಯ ಜೀವನದ 'ಪಂಥಾಹ್ವಾನ'(Challenge)ವನ್ನು ಸ್ವೀಕರಿಸಿ ಅದರ ವಿರುದ್ಧ ಈಜಿ ಬದುಕಿದ ಸಾಹಸಿಗಳು ಅವರು. ದೇವರು ಅವರಿಗೆ ಅಲ್ಪಾಯುವನ್ನು ಕೊಟ್ಟ. ಆದರೆ ಅವರು ಅದನ್ನೇ ಒಂದು 'ವರ'ವನ್ನಾಗಿ ಸ್ವೀಕರಿಸಿ ತಮ್ಮ ಕೀರ್ತಿ ಹಾಗೂ ಸಾಧನೆಗಳನ್ನು 'ಚಿರಂಜೀವಿ'ಯಾಗಿಸಿದರು. ಹುಟ್ಟು ಹೋರಾಟಗಾರರಾದ ಪರಮಪೂಜ್ಯರ ಬದುಕು 'ಛಲ, ಸಾಹಸ ಮತ್ತು ಸಾಧನೆಗಳ' ತ್ರಿವೇಣಿ ಸಂಗಮವಾಗಿತ್ತು. ಪೂಜ್ಯರದು 'ಪಂಚತಾರಾ ವರ್ಚಸ್ಸ'ಲ್ಲ. ಅವರದು 'ಧ್ರುವತಾರಾ ವರ್ಚಸ್ಸು'!! ಜೀವಿತದ ಅಲ್ಪಾವಧಿಯಲ್ಲಿಯೇ ಅವರು ಹಂತ ಹಂತವಾಗಿ ಕೀರ್ತಿಯ ಎಲ್ಲ ಮಜಲುಗಳನ್ನು ಯಶಸ್ವಿಯಾಗಿ ತಲುಪಿಬಂದರು. ಪೂಜ್ಯರು ತಮ್ಮ ಬದುಕಿನ ಪ್ರತಿಯೊಂದು ಕ್ಷಣ ಕ್ಷಣದಲ್ಲೂ ಜೀವಂತಿಕೆಯನ್ನು ತುಂಬಿದರು. ಪರಮಪೂಜ್ಯರ ಸಂಯಮದ ಬದುಕಿಗೊಂದು ಸವಿನಯದ 'ನಮೋ ನಮಃ' ಹೇಳಬೇಕು.

ಉದಿಸಿತೊಂದು ತಾರೆ, ವಿದ್ವತ್ತಿನ ಜ್ಞಾನಧಾರೆ.......

ಜನನ ಮತ್ತು ಬಾಲ್ಯ............

ಭಾರತೀಯ ಸಂವತ್ಸರಮಾನದ ಪ್ರಕಾರ ಹಾಗೂ ಪಂಚಾಂಗಶುದ್ಧಿಯ ಪ್ರಕಾರ ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳು ಶಾಲಿವಾಹನ ಶಕೆ 1826ನೆಯ ಕ್ರೋಧಿ ನಾಮ ಸಂವತ್ಸರದ ದಕ್ಷಿಣಾಯನದಲ್ಲಿ ವರ್ಷಾಋತುವಿನ ಶ್ರಾವಣಮಾಸದ ಶುಕ್ಲಪಕ್ಷದ ಪೌರ್ಣಿಮೆಯ ಶುಭ ಬೃಹಸ್ಪತಿವಾರದಂದು ಬೆಳಿಗ್ಗೆ 11.45ಕ್ಕೆ ಸರಿಯಾಗಿ ಧನಿಷ್ಠಾ ನಕ್ಷತ್ರ, 3ನೇ ಚರಣ, ಕುಂಭರಾಶಿಯ ಶುಭ ತುಲಾಲಗ್ನದಲ್ಲಿ ಜನಿಸಿದರು.

[ಪಂಚಾಂಗದ ಪ್ರಕಾರ ಇವರ ಜನನವು ಕುಜ ದೆಶೆಯ ಶನಿಭುಕ್ತಿಯಲ್ಲಾಯಿತು. ಪರಮಪೂಜ್ಯರಜನ್ಮಕುಂಡಲಿಯನ್ನು ಮತ್ತು ಅದರ ಫಲಭುಕ್ತಿಯ ವಿವರಗಳನ್ನು ಅನುಬಂಧದಲ್ಲಿ ನೋಡಿ.]

1904ರ ಆಗಸ್ಟ್ ಮಾಹೆಯ ದಿನಾಂಕ 25ರಂದು ಪರಮಪೂಜ್ಯರ ಶ್ರೀ ವೀರಭದ್ರ ಜಗದ್ಗುರುಗಳ ಜನನವಾಯಿತು. ಚಿದರೆಮಠದ ವೇದಮೂರ್ತಿ ವಿದ್ವಾನ್ ಶ್ರೀ ನಾಗಭೂಷಣ ಶಾಸ್ತ್ರಿಗಳು ಪರಮಪೂಜ್ಯರ 'ತೀರ್ಥರೂಪ'ರು. ಸೌಭಾಗ್ಯವತಿ ಶ್ಯಾಮಲಾಂಬಾದೇವಿಯವರು ಪೂಜ್ಯರಿಗೆ ಜನ್ಮಕೊಟ್ಟ ಜನ್ಮದಾತೆ. ಆಂಧ್ರಪ್ರದೇಶದ ಸುವಿಖ್ಯಾತ ನಲಗೊಂಡಾ ಪಟ್ಟಣದ ತಮ್ಮ 'ಪೈತೃಕ ಗೃಹ'ದಲ್ಲಿ ಪೂಜ್ಯರು ಜನ್ಮವೆತ್ತಿದರು.

ನಲಗೊಂಡಾ ಪಟ್ಟಣವಿದು ಜಿಲ್ಲಾಸ್ಥಳ (District Head Quarter). ಈ ಪಟ್ಟಣವು ಶ್ರೀಕ್ಷೇತ್ರ ಕೊಲನುಪಾಕಿಯ ಸಮೀಪದಲ್ಲಿದೆ. ಕೊಲನುಪಾಕಿಯ ಶ್ರೀ ಸೋಮೇಶ್ವರ ಲಿಂಗದಿಂದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಆವಿರ್ಭವಿಸಿದುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು. ಅಂದಿನ ಆ ದಿನಗಳಲ್ಲಿ ಆಂಧ್ರನಾಡಿನಲ್ಲಿ ಪ್ರಭಾವೀ ವೀರಶೈವರೆಂದೆನಿಸಿದ ಹಾಗೂ ಜಂಗಮಮೂರ್ತಿಗಳಾದ ಶ್ರೀ ಚಿದರೆಮಠ ವಂಶಸ್ಥರದು ವೀರಗೋತ್ರ, ಪಡ್ವಿಡಿ ಸೂತ್ರ ಮತ್ತು ರೇಣುಕ ಪೀಠ. ವೀರ ಗೋತ್ರಜರಾದ ಪೂಜ್ಯ ಶ್ರೀವೀರಭದ್ರ ಜಗದ್ಗುರುಗಳ ಜನ್ಮನಾಮ 'ಗುರಯ್ಯ' ಎಂದು. ಆದರೆ ಕುಟುಂಬದ ಸದಸ್ಯರೆಲ್ಲ ಅವರನ್ನು ಪ್ರೀತಿಯಿಂದ 'ವೀರಭದ್ರಯ್ಯ, ವೀರಭದ್ರಯ್ಯ' ಎಂದು ಕರೆಯುವುದಕ್ಕೆ ಮೊದಲುಮಾಡಿಕೊಂಡರು.

ಕುಲಂ ಪವಿತ್ರಂ ಜನನೀ ಕೃತಾರ್ಥಾ !!

ಚಿದರೆಮಠ ವಂಶವಿದು ಸಾಮಾನ್ಯ ವಂಶವಲ್ಲ. ಇದು ಪಂಡಿತ ವಂಶ.ಆಂಧ್ರ ಪ್ರಾಂತದಲ್ಲಿ ಚಿದರೆಮಠ ಅಥವಾ ಚಿದರೆಮಠದ ವಂಶಸ್ಥರು ಎಂದರೆ ಸಾಕು, ಅಲ್ಲಿನ ಜನಗಳ ತಲೆಗಳು ಗೌರವದಿಂದ ಬಾಗಿಕೊಳ್ಳುತ್ತಿದ್ದವು ಮತ್ತು ಕೈಗಳು ನಮ್ರತೆಯಿಂದ ಮುಗಿದುಕೊಳ್ಳುತ್ತಿದ್ದವು. ಶಿವಭಕ್ತಿಪರಾಯಣರಾದ ಚಿದರೆಮಠದ ವಂಶಸ್ಥರು ವೀರಶೈವ ಧರ್ಮ-ದರ್ಶನಗಳನ್ನು, ತತ್ತ್ವ-ಸಿದ್ಧಾಂತಗಳನ್ನು ಆಳವಾಗಿ ಮತ್ತು ಆಮೂಲಾಗ್ರವಾಗಿ ಅಧ್ಯಯನ ಮಾಡಿದ ಕೀರ್ತಿಯನ್ನು ತಮ್ಮದಾಗಿಸಿಕೊಂಡಿದ್ದರು. ವೀರಶೈವ ತತ್ತ್ವ, ಸಿದ್ಧಾಂತಗಳ ಕುರಿತು ಅಧಿಕೃತವಾಗಿ ಮಾತನಾಡಬಲ್ಲ ಎದೆ ಮತ್ತು ಎದೆಗಾರಿಕೆ ಇವರಲ್ಲಿತ್ತು. ಆ ಅಗಸ್ತ್ಯ ಮಹರ್ಷಿಯು ಸಮುದ್ರವನ್ನೇ ತನ್ನ ಅಂಗೈಯಲ್ಲಿ ಬರಸೆಳೆದುಕೊಂಡು ಅದನ್ನೊಂದಿನಿತೂ ಬಿಡದೆ ಆಪೋಶನ ಮಾಡಿದ ಹಾಗೆ 'ವೀರಶೈವ ಸಾರಸ್ವತ'ವನ್ನು ಮತ್ತು 'ವೀರಶೈವ ಸಾರ ಸತ್ತ್ವ'ವನ್ನು ಸಮಗ್ರವಾಗಿ ಆಪೋಶಣ ಮಾಡಿದ ಹೆಮ್ಮೆ ಮತ್ತು ಹೆಗ್ಗಳಿಕೆ ಈ ವಂಶದವರದಾಗಿತ್ತು. ವೀರಶೈವ ಜನಗಳು ಅಲ್ಪಸಂಖ್ಯಾತರಾಗಿರುವ ನಿಜಾಮ್ ಪ್ರಾಂತದಲ್ಲಿ ವೀರಶೈವ ತತ್ತ್ವ-ಸಿದ್ಧಾಂತಗಳನ್ನು ಮತ್ತು ವೀರಶೈವರನ್ನು ಲವಲವಿಕೆಯಿಂದ ಬದುಕಿಸಿದ ಕೀರ್ತಿಯನ್ನು ಪ್ರಾಮಾಣಿಕವಾಗಿ ಮತ್ತು ಪ್ರಾಂಜಲವಾಗಿ ಚಿದರೆಮಠದ ವಂಶಸ್ಥರಿಗೆ ಸಲ್ಲಿಸಬೇಕು. ವಿದ್ವತ್ತಿನ ಸಶಕ್ತ ಹಿನ್ನೆಲೆಯುಳ್ಳ ಈ ವಂಶಸ್ಥರಲ್ಲಿ 'ಪ್ರತಿಷ್ಠೆಯೊಂದಿಗೆ ಪಾಂಡಿತ್ಯ' ಮತ್ತು 'ಪಾಂಡಿತ್ಯದೊಂದಿಗೆ ಪ್ರತಿಷ್ಠೆ'ಗಳು 'ಸಮಾನ ಮನಸ್ಕತೆ'ಯಿಂದ ಮೇಳೈಸಿಕೊಂಡಿದ್ದವು.

ಪಂಡಿತ ವೇದಮೂರ್ತಿ ಶ್ರೀ ಶಿವಲಿಂಕಯ್ಯನವರು, ಪಂಡಿತ ವೇದಮೂರ್ತಿ ಶ್ರೀ ಪ್ರಾಣಲಿಂಗಯ್ಯನವರು, ಪಂಡಿತ ವೇದಮೂರ್ತಿ ಶ್ರೀ ಗಂಗಾಧರಯ್ಯನವರು ಮತ್ತು ಶ್ರೀ ವೀರಭದ್ರ ಜಗದ್ಗುರುಗಳವರ 'ತೀರ್ಥರೂಪ'ರಾದ ಪಂಡಿತ ವೇದಮೂರ್ತಿ ಶ್ರೀ ನಾಗಭೂಷಣ ಶಾಸ್ತ್ರಿಗಳು ಇವರೇ ಮೊದಲಾದವರನ್ನು ಚಿದರೆಮಠದ ವಂಶಸ್ಥರಲ್ಲಿ

ಪ್ರಮುಖವಾಗಿ ಹೆಸರಿಸಬಹುದು. ಆ ಕಾಲದ ಪಂಡಿತ ವಲಯದ ಮುಖ್ಯವಾಹಿನಿಯಲ್ಲಿ ಈ ಜಂಗಮಮೂರ್ತಿಗಳದು ಬಹುದೊಡ್ಡ ಹೆಸರು. ಇವರೆಲ್ಲ ಆಂಧ್ರ ನಾಡಿನ ಜನಸಾಮಾನ್ಯರ ನಾಡಿಬಡಿತವನ್ನು ಬಲ್ಲವರಾಗಿದ್ದು ಆ ಜನಗಳ ಧಾರ್ಮಿಕ ಬದುಕಿನ 'ರೂವಾರಿ'ಗಳಾಗಿ ಮತ್ತು 'ದಿಶಾಬೋಧಕ'ರಾಗಿ ಕಾರ್ಯನಿರ್ವಹಿಸುತ್ತಿದ್ದರು. ಜನಗಳಲ್ಲಿ ಧಾರ್ಮಿಕ ಅರಿವನ್ನು ತುಂಬುವಲ್ಲಿ ಮತ್ತು ಜನಗಳ ಧಾರ್ಮಿಕ ಬದುಕಿನ ಕ್ಷಿತಿಜವನ್ನು ವಿಸ್ತರಿಸುವಲ್ಲಿ ಇವರು 'ಅಹಂಭೂಮಿಕೆ'ಯನ್ನು ವಹಿಸಿಕೊಂಡಿದ್ದರು. ವೀರಶೈವರ ಘನತೆ-ಗೌರವಗಳು ವೀರಶೈವೇತರರ ಉಗ್ರಗಾಮಿ ದಾಳಿಗೆ ಸಿಕ್ಕು ಗಾಯಗೊಂಡಾಗ, ವೀರಶೈವರ ಸ್ವಾಭಿಮಾನ ಮತ್ತು ಪ್ರತಿಷ್ಠೆಗಳಿಗೆ ಧಕ್ಕೆ ಉಂಟಾದಾಗ ಚಿದರೆಮಠಸ್ಥರು ಮುಂಚೂಣಿಯಲ್ಲಿ ನಿಂತುಕೊಂಡು ವೀರಶೈವರ ಘನತೆ-ಗೌರವಗಳನ್ನು, ಅಭಿಮಾನ-ಸ್ವಾಭಿಮಾನಗಳನ್ನು ಪುನರ್ಪ್ರತಿಷ್ಠಾಪಿಸುವುದ್ಕಾಗಿ 'ಶತಾಯ ಗತಾಯ' ಹೋರಾಟಮಾಡುತ್ತಿದ್ದರು.

ಪೌರೋಹಿತ್ಯ ಪ್ರಧಾನವಾದ ವೇ.ಮೂ. ಶ್ರೀ ನಾಗಭೂಷಣ ಶಾಸ್ತ್ರಿಗಳ ಕುಟುಂಬವು ತನ್ನ 'ವೃತ್ತಿ-ಪ್ರವೃತ್ತಿ'ಗಳನ್ನು ಮತ್ತು 'ಅಂತರಂಗ-ಬಹಿರಂಗ'ಗಳೆರಡನ್ನೂ 'ಶುಚಿ-ರುಚಿ'ಯಾಗಿಸಿಕೊಂಡಿತ್ತು. ಈ ಕಾರಣದಿಂದಾಗಿ ಜನಗಳ 'ಆದ್ಯ ಗೌರವ'ವು ಈ ಆರಾಧ್ಯ ಜಂಗಮ ಕುಟುಂಬಕ್ಕೆ 'ಮೊದಲ ಮರ್ಯಾದೆ'ಯ ರೂಪದಲ್ಲಿ ಸಂದಾಯವಾಗುತ್ತಿತ್ತು.

ಇಂಥ ಸುಸಂಸ್ಕೃತ ಮತ್ತು ಶಾಲೀನ ಕುಟುಂಬದಲ್ಲಿ ಜನಿಸಿದ ಶ್ರೀ ವೀರಭದ್ರ ಜಗದ್ಗುರುಗಳು ಹುಟ್ಟುತ್ತಲೇ ಉತ್ತಮ ಸಂಸ್ಕಾರಗಳನ್ನು ತಮ್ಮ 'ಒಡನಾಡಿ'ಗಳನ್ನಾಗಿಸಿ ಕೊಂಡಿದ್ದರು. ಸದಾಚಾರ, ಸದ್ವಿನಯ ಮತ್ತು ಸದ್ವಿವೇಕಗಳು ಅವರ ಸಂಗಾತಿಗಳಾಗಿದ್ದವು. ಶ್ರೀ ವೀರಭದ್ರ ಜಗದ್ಗುರುಗಳು 'ಮಗು ವೀರಭದ್ರಯ್ಯ'ನಾಗಿರುವ ಆ ಕಾಲದಿಂದಲೇ ವಿದ್ಯೆ ಮತ್ತು ವಿನಯಗಳೊಂದಿಗೆ ತನ್ನ ಜೊತೆ ಒಡನಾಡಿಕೊಂಡಿದ್ದರು. ಮಗು ವೀರಭದ್ರಯ್ಯನ ಮುಗ್ಧ ಹಾಗೂ ತರಳ ಮನಸ್ಸಿನ ಮೇಲೆ ಮನೆಯ ಹಿರಿಯರೆಲ್ಲರೂ ಸಾತ್ವಿಕ ಪ್ರಭಾವವನ್ನು ಬೀರಿದರು. ಪೌರೋಹಿತ್ಯ ಪ್ರಧಾನ ಕುಟುಂಬವಾಗಿದ್ದರಿಂದ ಬಾಲ್ಯ ಕಾಲದಿಂದಲೇ ವೀರಭದ್ರಯ್ಯ ಸಂಸ್ಕೃತ ಭಾಷೆ ಹಾಗೂ ಮಂತ್ರಾದಿಗಳತ್ತ ವಿಶೇಷವಾಗಿ ಆಕರ್ಷಿತನಾದ. ಮನೆಯಲ್ಲಿನ ವಾತಾವರಣ ಆತನ ಮನೋಭಾವಕ್ಕೆ ಪೂರಕವಾಗಿತ್ತು ಮತ್ತು ಆತ ಮನೆಯಲ್ಲಿನ ವಾತಾವರಣಕ್ಕೆ ಪೂರಕವಾಗಿ ತನ್ನ ಮನೋಭಾವವನ್ನು ಬೆಳೆಸಿಕೊಂಡಿದ್ದ. ಬಾಲ್ಯಾವಸ್ಥೆಯಿಂದಲೇ ಬಾಲಕ ವೀರಭದ್ರಯ್ಯ ವೀರಶೈವ ಧರ್ಮ ಹಾಗೂ ಆಚರಣೆಗಳ ಮೂಸೆಯಲ್ಲಿ ಮಿಂದು ಮುಳುಗಿ ಪರಿಷ್ಕೃತನಾಗತೊಡಗಿದ. ಮನೆಯಲ್ಲಿನ ದೈವಿಕ ಪರಿಸರ, ಹಾಗೂ ಹಿರಿಯರೆಲ್ಲರ ಆಪ್ಯಾಯಮಾನವಾದ ಮಾರ್ಗದರ್ಶನ ಇವೆಲ್ಲವುಗಳು ಬಹುಬೇಗನೇ ಆತನ ಧಾರ್ಮಿಕ ತಿಳುವಳಿಕೆಯ 'ಕ್ಷಿತಿಜ'ವನ್ನು ವಿಸ್ತರಿಸಿದವು.

ತಂದೆ-ತಾಯಿಗಳಿರ್ವರೂ ಸುಸಂಸ್ಕೃತರಾಗಿದ್ದರಿಂದ ಮಗು ವೀರಭದ್ರಯ್ಯನ ಮನಸ್ಸು ದಿನೇ ದಿನೇ ಸಾಂಸ್ಕೃತಿಕವಾಗಿ ಮತ್ತು ಸೃಜನಾತ್ಮಕವಾಗಿ ಪ್ರಗಲ್ಭವಾಗತೊಡಗಿತು. ತಂದೆ-ತಾಯಿಗಳು ತಮ್ಮ ಮಗು ವೀರಭದ್ರಯ್ಯನನ್ನು ತಮ್ಮೆಲ್ಲ ಕನಸುಗಳ 'ಕೇಂದ್ರಬಿಂದು'ವಾಗಿಸಿಕೊಂಡು ಆತನ ಉತ್ತಮ ಹಾಗೂ ಉಜ್ವಲ ಭವಿಷ್ಯಕ್ಕಾಗಿ ಅಹರ್ನಿಶಿ ಭಗವಂತನಲ್ಲಿ ಪ್ರಾರ್ಥಿಸತೊಡಗಿದರು. ತಮ್ಮ ಅಂತಃಕರಣ ಮತ್ತು ಅಂತರಂಗದಲ್ಲಿರುವುದನ್ನೆಲ್ಲ ಆತನಿಗೆ ಸಮಗ್ರವಾಗಿ ಧಾರೆ ಎರೆದರು. ಮಾತಾಪಿತೃಗಳ ಅಪರಿಮಿತ ವಾತ್ಸಲ್ಯ ಹಾಗೂ ಸಕಾಲಿಕ ಮಾರ್ಗದರ್ಶನಗಳಿಂದ ಪುಳಕಿತನಾದ ವೀರಭದ್ರಯ್ಯ ದಿನದಿನವೂ ಅನುದಿನವೂ ಅತಿಶೀಘ್ರವಾಗಿ ಪ್ರಬುದ್ಧತೆಯತ್ತ ಹೆಜ್ಜೆ ಇಡತೊಡಗಿದ.

ಬಾಲಸ್ತಾವತ್ ವಿದ್ಯಾಸಕ್ತಃ,
ತರುಣಸ್ತಾವತ್ ಸೇವಾಸಕ್ತಃ..........

ಅಕ್ಷರಾಭ್ಯಾಸದೊಂದಿಗೆ ಬಾಲಕ ವೀರಭದ್ರಯ್ಯನ ಪ್ರಾಥಮಿಕ ಶಿಕ್ಷಣವು ನಲಗೊಂಡಾದಲ್ಲಿ ಪ್ರಾರಂಭವಾಯಿತು. ಆತ ವಿದ್ಯಾಧಿದೇವತೆ ಸರಸ್ವತಿಯ 'ಸಾರಸ್ವತ ಸದನದಲ್ಲಿ' ಅಂಬೆಗಾಲಿಡುವುದಕ್ಕೆ ಪ್ರಾರಂಭಿಸಿ ಮುಂದೆ ಒಂದೊಂದಾಗಿ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತ ಅಲ್ಲಿ ತನ್ನ ಹೆಜ್ಜೆಗಳನ್ನು ದಾಖಲಿಸತೊಡಗಿದ. 'ಬಾಲಸ್ತಾವತ್ ಕ್ರೀಡಾಸಕ್ತಃ, ತರುಣಸ್ತಾವತ್ ತರುಣೀರಕ್ತಃ' ಎಂಬ ಶಂಕರಾಚಾರ್ಯರ ಈ ಮಾತು ಬಾಲಕ ವೀರಭದ್ರಯ್ಯನ ವಿಷಯದಲ್ಲಿ ಹುಸಿಗುಂಡಾಗಿ ಪರಿಣಮಿಸಿತು. ಬಾಲಕ ವೀರಭದ್ರಯ್ಯನ ವಿಷಯದಲ್ಲಿ ಆಟದ ಪರಿಸ್ಥಿತಿಯು 'ಲೆಕ್ಕಕ್ಕುಂಟು, ಆಟಕ್ಕಿಲ್ಲ'ಎಂಬಂತಾಯಿತು. ಆಟ-ಓಟ-ನೋಟಗಳಿಗಿಂತಲೂ ಪಠ್ಯ, ಪಠಣ, ಪಾರಾಯಣ, ಪ್ರವಚನಾದಿಗಳೇ ಆತನ ಆಸಕ್ತಿಯ 'ಕೇಂದ್ರಬಿಂದು'ಗಳಾಗಿ ಪರಿಣಮಿಸತೊಡಗಿದವು. ತಂದೆ-ತಾಯಿಗಳ, ಬಂಧು-ಬಾಂಧವರ ಮತ್ತು ಮಿತ್ರ-ಹಿತೈಷಿಗಳ 'ಅಕ್ಕರೆ', ಅದು ತಪ್ಪಿದರೆ 'ಅಕ್ಕರ'(ಅಕ್ಷರ)ಗಳ ಸಂಗದಲ್ಲಿ ಬೆಳೆದ ಬಾಲಕ ವೀರಭದ್ರಯ್ಯ ಕ್ಷಣ ಕ್ಷಣಕ್ಕೂ 'ವಿದ್ಯಾಪಕ್ಷಪಾತಿ'ಯಾಗಿ ರೂಪಾಂತರಗೊಳ್ಳತೊಡಗಿದ. 'ಕ್ಷಣಕ್ಷಣವೂ ಶಿಕ್ಷಣ' ಎಂಬುವುದೇ ಆತನ ಉಸಿರಾಯಿತು. ಅದುವೇ ಆತನ ಮಾತಾಯಿತು, ಮಂತ್ರವಾಯಿತು. ವಿದ್ಯಾರ್ಜನೆಯನ್ನು ಆತ ತನ್ನ ತಪಸ್ಸನ್ನಾಗಿ ಸ್ವೀಕರಿಸಿದ. ಜಿಜ್ಞಾಸೆ ಹಾಗೂ ಆಸಕ್ತಿಗಳು ಆತನಲ್ಲಿ ಆಳವಾಗಿ ಬೇರುಬಿಟ್ಟಿದ್ದವು. ಈ ಕಾರಣದಿಂದಾಗಿ ಆತನಲ್ಲಿ ವಿದ್ವತ್ತು ದಿನೇ ದಿನೇ ಫಲವತ್ತಾಗಿ ಬೆಳೆಯತೊಡಗಿತು. ವೀರಭದ್ರಯ್ಯನ ಬಾಲ ಮನಸ್ಸು ಕವಿತೆಯಾಗಿ ಹಾಡತೊಡಗಿತು. ಆತನ ತರಳ ವಯಸ್ಸು ಕವಿಯಾಗಿ ಆಡತೊಡಗಿತು. ಕುಮಾರಾವಸ್ಥೆಯ ಹೊಸಿಲನ್ನು ತಲುಪುವಷ್ಟರಲ್ಲಿಯೇ ವೀರಭದ್ರಯ್ಯನಿಗೆ 'ಬಾಲಕವಿ, ಆಶುಕವಿ' ಎಂಬ ಕೀರ್ತಿಯು

ಸಂದಾಯವಾಯಿತು. ಚಿದರೆಮಠದ ಚಿರಂಜೀವಿ ವೀರಭದ್ರಯ್ಯ ಆಂಧ್ರನಾಡಿನ ತೆಲಗು ಭಾಷೆಯ 'ಬಾಲ ಆಶುಕವಿ' ಎಂಬ ಗೌರವಕ್ಕೆ ಪಾತ್ರನಾದ.

6ನೆಯ ತರಗತಿಯವರೆಗೆ ವೀರಭದ್ರಯ್ಯನ ಶಿಕ್ಷಣವು ಸ್ವಗ್ರಾಮವಾದ ನಲಗೊಂಡಾದಲ್ಲಿ ತೆಲಗು ಭಾಷೆಯ ಪ್ರಾಥಮಿಕ ಶಾಲೆಗಳಲ್ಲಿ ಯಶಸ್ವಿಯಾಗಿ ನಡೆದುಕೊಂಡಿತ್ತು. ಚಿರಂಜೀವಿ ವೀರಭದ್ರಯ್ಯನ ಪ್ರಾಥಮಿಕ ಶಾಲಾ ಶಿಕ್ಷಕರೆಲ್ಲ ಆತನ ಕುಶಾಗ್ರ ಬುದ್ಧಿಗೆ ಮಾರು ಹೋಗಿದ್ದರು. ಅವರು ಅವನ ಪ್ರಗಲ್ಭ ಗ್ರಹಣಶಕ್ತಿಯನ್ನು ಮತ್ತು ಕುಶಲಮತಿಯನ್ನು ಕುರಿತು ಅಭಿಮಾನದ ಮಾತುಗಳನ್ನಾಡುತ್ತಿದ್ದರು. ಅವರೆಲ್ಲ ಬಾಲಕನ ವಿದ್ಯಾದಾಹ ಮತ್ತು ವಿದ್ಯಾವಾತ್ಸಲ್ಯವನ್ನು ಬೆರಗು-ಕಂಗಳಿಂದ ನೋಡುತ್ತ ಆನಂದಿಸುತ್ತಿದ್ದರು. ಬಾಲಕ ವೀರಭದ್ರಯ್ಯನ ಸುಸಂಸ್ಕೃತ ನಡೆವಳಿಕೆಯ ಕುರಿತು ಆಗಾಗ್ಗೆ ಆತನ ಅಧ್ಯಾಪಕರಿಂದ ಮತ್ತು ಮಿತ್ರವೃಂದದಿಂದ ಪ್ರಶಂಸೆಯ ಮಹಾಪೂರವೇ ಹರಿದುಬರುತ್ತಿತ್ತು. ವೀರಭದ್ರಯ್ಯ ಬರೀ 'ಅಕ್ಷರಾಭ್ಯಾಸ'ಕ್ಕೆ ಮಾತ್ರ ತನ್ನನ್ನು ತಾನು ಸೀಮಿತಗೊಳಿಸಿಕೊಳ್ಳದೆ 'ಸಂಸ್ಕಾರಾಭ್ಯಾಸ'ಕ್ಕೂ ಮೊದಲು ಮಾಡಿಕೊಂಡಿದ್ದ. ತಂದೆ-ತಾಯಿಗಳು ಮತ್ತು ಬಂಧು-ಬಾಂಧವರು ಆತನ ಒಲವು-ನಿಲವುಗಳನ್ನು ಹೃದಯತುಂಬಿ ಪ್ರೋತ್ಸಾಹಿಸುತ್ತಿದ್ದರು. ರೀತಿ, ನೀತಿ, ಪ್ರೀತಿಗಳ 'ತ್ರಿವೇಣಿ ಸಂಗಮ'ದಲ್ಲಿ ದಿನವೂ ಮಿಂದು ಮಡಿಯಾಗುತ್ತಿದ್ದ ವೀರಭದ್ರಯ್ಯ 'ಭವಿಷ್ಯದ ಭರವಸೆಯ ಮುಖ'ವಾಗಿ ಬೆಳೆಯತೊಡಗಿದ.

ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ........
ಮಾತಾ-ಪಿತೃಗಳ ಅಕಾಲಿಕ ವಿಯೋಗ

ಬದುಕೊಂದು ಬುನಾದಿಯಿಲ್ಲದ ಕಟ್ಟಡ. ಅದೊಂದು ಮುರುಳು-ಮಂಟಪ. ಅದು ಯಾವಾಗ ಕುಸಿದು ಬೀಳುತ್ತದೆಯೋ ಬಲ್ಲವರಾರು? 'ಭಗವಂತ ನಮ್ಮ ಕೈಯಲ್ಲಿದ್ದಾನೆ' ಎಂದು ನಾವು ಭಾವಿಸಿಕೊಂಡಿದ್ದೇವೆ. ಆದರೆ 'ನಾವು ಭಗವಂತನ ಕೈಯಲ್ಲಿದ್ದೇವೆ' ಎಂಬುವುದಿದು ವಾಸ್ತವ!! ಹದಿಮೂರನೆಯ ವಯಸ್ಸಿನವರೆಗೆ ಯಾವೊಂದೂ ಅಪಸ್ವರವಿಲ್ಲದೆ ವೀರಭದ್ರಯ್ಯನ ವಿದ್ಯಾಭ್ಯಾಸ ಮತ್ತು ಜೀವನ ನಿರಾತಂಕವಾಗಿ ಸಾಗಿಕೊಂಡಿದ್ದವು. ವಿಧಿಯ ಸೈರಣೆಯ ಅವಧಿ ಮುಗಿದುಹೋಯಿತೆಂದು ಕಾಣುತ್ತದೆ. ಇನ್ನು ಸೈರಣೆಯಿಂದಿರುವುದು ಸರಿಯಲ್ಲವೆಂದು ಭಾವಿಸಿದ ಅದು ಬಾಲಕ ವೀರಭದ್ರಯ್ಯನ ಮೇಲೆ ತನ್ನ ಕಾಳ-ಕರಾಳ ದೃಷ್ಟಿಯನ್ನು ಚೆಲ್ಲಿ ಕ್ರೂರಬಲೆಯನ್ನು ಬೀಸಿತು. ಆ ತರಳ ಮನಸ್ಸಿಗೆ ತನ್ನ ವಿಕಟಾಟ್ಟಹಾಸ ಮತ್ತು ಆಟಾಟೋಪದ ಪ್ರಾಥಮಿಕ ಪರಿಚಯ ಮಾಡಿಕೊಟ್ಟಿತು. ಆಕಸ್ಮಿಕವಾಗಿ ವೀರಭದ್ರಯ್ಯನ ತಂದೆ, ತಾಯಿಗಳು ಅಕಾಲ ಮರಣಕ್ಕೆ ತುತ್ತಾದರು. ಬಾಲಕ ವೀರಭದ್ರಯ್ಯನ ಬಾಲ ಬದುಕಿಗೆ ಬರಸಿಡಿಲು ಬಡಿದಂತಾಯಿತು.

ವಿಧಿಯ ಈ ಅನಿರೀಕ್ಷಿತ ದಾಳಿಗೆ ಆ ತರಳ ತತ್ತರಿಸಿಹೋದ. ವಿಧಿಯು ತನ್ನೆದೆಯಲ್ಲಿ ತಿಲಮಾತ್ರದಷ್ಟೂ 'ಕರುಣ ರಸ' ಇಲ್ಲವೇ ಇಲ್ಲ ಎಂಬ ಮಾತನ್ನು ತನ್ನ ವರ್ತನೆಯಿಂದ ಮತ್ತೊಮ್ಮೆ ಜಗಜ್ಜಾಹಿರಗೊಳಿಸಿತು.

ಕಷ್ಟಗಾಳ ಮಳೆ ವಿಧಿ ಸುರಿಯೆ.......

ಸಾಮಾನ್ಯವಾಗಿ ಮೃತ್ಯು ಇದು ಅನಿರೀಕ್ಷಿತವಾಗಿ ದಾಳಿ ಮಾಡಿಕೊಂಡಿರುವುದೇ ಹೆಚ್ಚು. ಸಾಯುವುದಕ್ಕೆ ಸಿದ್ಧರಾಗಿ ನಾವು ಅದನ್ನು ಸ್ವಾಗತಿಸುವವರೆಗೆ ಕಾಯುತ್ತ ಕುಳಿತುಕೊಳ್ಳಲು ಅದೇನು ನಮ್ಮ ಮನೆಯ ತೊತ್ತೆ? ಅಥವಾ ನಮ್ಮ ವೈಯಕ್ತಿಕ ಸ್ವತ್ತೆ? ತಂದೆ, ತಾಯಿಗಳಿರ್ವರನ್ನೂ ಕಳೆದುಕೊಂಡ ವೀರಭದ್ರಯ್ಯ ತಬ್ಬಲಿಯಾದ. ಆತನ ಬಾಲ ಮನಸ್ಸು ಮತ್ತು ಎಳೆಯ ವಯಸ್ಸು ಇವೆರಡೂ ಆಘಾತಕ್ಕೆ ಒಳಗಾದವು. ಒಂದೆಡೆ ಆತನನ್ನು 'ತಬ್ಬಲಿತನ' ಬಾಧಿಸಿದರೆ ಕಾಡಿದರೆ, ಇನ್ನೊಂದೆಡೆ ಈ ನಿಷ್ಠುರ ಬದುಕನ್ನು ಅದೆಂತು ಎದುರಿಸುವುದೆಂಬ ಚಿಂತೆ ಆತನನ್ನು ಕಾಡತೊಡಗಿತು. ಊಹೆಗೂ ಮೀರಿದ ಘಟನೆಗಳು ಒಮ್ಮಿಂದೊಮ್ಮೆಲೇ ಆಕಸ್ಮಿಕವಾಗಿ ಮತ್ತು ಅನಿರೀಕ್ಷಿತವಾಗಿ ಘಟಿಸಿದಾಗ ಅದೆಂಥ ವ್ಯಕ್ತಿಯ ಧೈರ್ಯ-ಸ್ಥೈರ್ಯಗಳು ಕೆಲಕಾಲ ನಲುಗಿ ಹೋಗುತ್ತವೆ. ಹಲವಾರು ದಿನಗಳವರೆಗೆ ಮಾನಸಿಕವಾಗಿ ಅಪ್ಪಚ್ಚಿಯಾಗಿಬಿಟ್ಟ ವೀರಭದ್ರಯ್ಯನನ್ನು 'ಮುಂದೇನು...... ಮತ್ತೇನು?' ಎಂಬ ಚಿಂತೆಗಳು ಕಾಡತೊಡಗಿದವು.

ಏನಾನುಮಂ ಮಾಡು ಕೈಗೆ ದೊರೆತುದ್ಯಾವ.....
ನಾನೇನು ಹುಲ್ಲುಕಡ್ಡಿಯೆಂಬ ನುಡಿ ಬೇಡ.....

ಬದುಕಿನಂಥ ಬಹುದೊಡ್ಡ ಶಿಕ್ಷಕ ಮತ್ತೊಬ್ಬರಿಲ್ಲ. ಅದು ಎಂಥೆಂಥವರನ್ನೂ ಸಹ ತನ್ನ ಸಮರ್ಥ ಗರಡಿಯಲ್ಲಿ ಪಳಗಿಸುತ್ತದೆ. ವೀರಭದ್ರಯ್ಯ ಧೃತಿಗೆಡಲಿಲ್ಲ, ಧೈರ್ಯಗುಂದಲಿಲ್ಲ. ತನಗೊದಗಿ ಬಂದ ಅಕಾಲಿಕ ಆಪತ್ತಿನಿಂದ ವೀರಭದ್ರಯ್ಯ ಯಥಾಶೀಘ್ರದಲ್ಲಿ ಚೇತರಿಸಿಕೊಳ್ಳಲು ಪ್ರಯತ್ನಿಸಿ ಅದರಲ್ಲಿ ಯಶಸ್ವಿಯಾದ. 'ಧೈರ್ಯಂ ಸರ್ವತ್ರ ಸಾಧನಮ್' ಎಂಬ ಮಾತಿಗೆ ಆತ ಪ್ರಯೋಗಶಾಲೆಯಾದ. **"ಮುಂದೇನೋ, ಮತ್ತೇನೊ, ಇಂದಿಗಾ ಮಾತೇಕೆ? । ಸಂದರ್ಭ ಬರಲಿ, ಬಂದಾಗಳಾ ಚಿಂತೆ॥ ಹೊಂದಿಸುವನಾರೊ, ನಿನ್ನಾಳಲ್ಲ, ಬೇರಿಹನು । ಇಂದಿಗಿಂದಿನ ಬದುಕು॥"** ಎಂದು ಕವಿ ಡಿ.ವಿ.ಜಿ.ಯವರು ಹೇಳಿದಂತೆ ವೀರಭದ್ರಯ್ಯ ನೇರವಾಗಿ ಬದುಕನ್ನು ಎದುರಿಸಲು ಮಾನಸಿಕವಾಗಿ ಸಿದ್ಧನಾದ. ಬದುಕು ಆತನನ್ನು ಹೆದರಿಸಿತು. ಆದರೆ ಆತನ ಗಟ್ಟಿಗೊಂಡ ಮನಸ್ಸು ಅದನ್ನು ಮುಖಾಮುಖಿಯಾಗಿಯೇ ಎದುರಿಸಿತು. ಬದುಕನ್ನು ಬಹುಬೇಗನೇ ತುಂಬ ಹತ್ತಿರದಿಂದ ನೋಡುವ ಅವಕಾಶವನ್ನು ವಿಧಿಯು ಆತನಿಗೆ ಕಲ್ಪಿಸಿಕೊಟ್ಟಿತ್ತು. ವೀರಭದ್ರಯ್ಯನಿಗೆ ಬದುಕಿನ ಸಿಹಿ-ಕಹಿಗಳ ಪರಿಚಯವಾಯಿತು. ಆತನ ಕಣ್ಣುಗಳ ಮುಂದೆ

ಆಷಾಢಭೂತಿ ಜಗತ್ತಿನ ಮುಖಗಳು ಬೆತ್ತಲಾದವು, ಬಣ್ಣಬಳಿದುಕೊಂಡ ಮನಸ್ಸುಗಳು ಬಣ್ಣ ಕಳೆದುಕೊಂಡು ಬಯಲು ಬಯಲಾದವು.

ನಡೆ ಮುಂದೆ, ನಡೆ ಮುಂದೆ ನುಗ್ಗಿ ನಡೆ ಮುಂದೆ.....
ಅಧ್ಯಯನದಿಂದ ಅಧ್ಯಾಪನಕ್ಕೆ ....

''ಬಂದದ್ದೆಲ್ಲ ಬರಲಿ. ಆ ಶಿವನ ದಯೆಯೊಂದೆನ್ನ ಮೇಲಿರಲಿ' ಎನ್ನುತ್ತ ವೀರಭದ್ರಯ್ಯ ತನ್ನ ಬಾಲ್ಯಾವಸ್ಥೆಗೆ ಬಹುಬೇಗನೇ ವಿದಾಯಹೇಳಿ ಬದುಕಿನ ಜವಾಬ್ದಾರಿಗೆ ಹೆಗಲುಕೊಡಬೇಕಾಯಿತು. ಕುಮಾರಾವಸ್ಥೆಯಿಂದ ಅಕಾಲಿಕ ಮುಂಬಡತಿಯನ್ನು ಪಡೆದುಕೊಂಡು ಹೊರಬಂದ ವೀರಭದ್ರಯ್ಯ 'ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ' ಎಂದೆನ್ನುತ್ತ ನೇರವಾಗಿ ಬದುಕಿನ ರಣಾಂಗಣಕ್ಕೆ ನುಗ್ಗಲೇಬೇಕಾಯಿತು.ಅದು ಬರೀ ಆವಶ್ಯಕತೆಯಷ್ಟೇ ಅಲ್ಲ, ಅನಿವಾರ್ಯವೂ ಆಗಿತ್ತು. ಏಕೆಂದರೆ ಮಾತೃ-ಪಿತೃಗಳ ವಿಯೋಗದಿಂದ ನೊಂದ ವೀರಭದ್ರಯ್ಯನನ್ನು ಇನ್ನಷ್ಟು ಮತ್ತಷ್ಟು ನೋಯಿಸಲು ಕಷ್ಟ-ಕಾರ್ಪಣ್ಯಗಳು ಅವನ ಮೇಲೆ ದಾಳಿಮಾಡಿದವು, ನಷ್ಟ-ಕಷ್ಟಗಳು ಅವನ ಮೈ ಮೇಲೆರಗಿ ಬಂದವು. ಅದೂ ಸಾಲದೆಂಬಂತೆ ಅವು ವೀರಭದ್ರಯ್ಯನೊಂದಿಗೆ 'ಧರ್ಮೇ ಚ, ಅರ್ಥೇ ಚ, ಕಾಮೇ ಚ ನಾತಿಚರಾಮಿ' ಎಂದು 'ಸಪ್ತಪದಿ' ತುಳಿಯತೊಡಗಿದವು.

ಈ ಎಲ್ಲ ಕಾರಣಗಳಿಂದಾಗಿ ಓದುವುದನ್ನು ನಿಲ್ಲಿಸಿದ ವೀರಭದ್ರಯ್ಯ ವಿದ್ಯಾರ್ಥಿ ಜೀವನಕ್ಕೆ ತಾತ್ಕಾಲಿಕವಾಗಿ ಒಂದು ಅಲ್ಪವಿರಾಮವನ್ನಿತ್ತು ಜೀವನ ನಿರ್ವಹಣೆಗಾಗಿ ವಯಸ್ಸಲ್ಲದ ವಯಸ್ಸಿನಲ್ಲಿ, ಮನಸ್ಸಿಲ್ಲದ ಮನಸ್ಸಿನಿಂದ ಅಧ್ಯಾಪಕ ವೃತ್ತಿಯನ್ನು ಅವಲಂಬಿಸಬೇಕಾಯಿತು. 'ಮಿಸ್ಟರ್' ಆಗುವ ಮುನ್ನವೇ 'ಮಾಸ್ಟರ್' (ಮಾಸ್ತರಿಕೆ) ಹುದ್ದೆ ವೀರಭದ್ರಯ್ಯನನ್ನು ಅರಸಿಕೊಂಡುಬಂದಿತ್ತು. ವೀರಭದ್ರಯ್ಯ ಮಕ್ಕಳಿಗೆ ಪಾಠಮಾಡುವ ಪೂಜ್ಯ ಗುರುಗಳಾದರು. ತನ್ಮೂಲಕ ಮಕ್ಕಳ ಅಚ್ಚುಮೆಚ್ಚಿನ ಶಿಕ್ಷಕರಾದರು.

ಪೂಜ್ಯ ವೀರಭದ್ರಯ್ಯನವರು ಬದುಕಿನ ಜವಾಬ್ದಾರಿಗೆ ಹೆಗಲುಕೊಟ್ಟು ಅನಿವಾರ್ಯವಾಗಿ ಶಿಕ್ಷಕ ವೃತ್ತಿಯನ್ನು ಕೈಗೊಂಡಿದ್ದರೂ 'ಇತೋಽಪ್ಯತಿಶಯ' ಅಧ್ಯಯನ ಮಾಡಬೇಕೆಂಬ ಅವರ ಜ್ಞಾನಾರ್ಜನೆಯ ಆಸೆ ರವೆಯಷ್ಟೂ ಕಡಿಮೆಯಾಗಿರಲಿಲ್ಲ. ವೃತ್ತಿ ಇದು ಯಾವತ್ತಿಗೂ ಪ್ರವೃತ್ತಿಗೆ ಅಡ್ಡ ಬರುವುದಿಲ್ಲ ಎಂಬ ಮಾತು ಸತ್ಯಸ್ಯ ಸತ್ಯ. ಬದುಕಿನ ಅಸಾಮಯಿಕ ಅನಿವಾರ್ಯ ಕರೆಗೆ 'ಓ'ಗೊಟ್ಟ ವೀರಭದ್ರಯ್ಯನವರು ಅಧ್ಯಾಪಕ ವೃತ್ತಿಯಲ್ಲಿದ್ದರೂ ಓದಿನಿಂದ ವಿರತರಾಗಲಿಲ್ಲ. ಅಹರ್ನಿಶಿ ಅವರು ಓದಿನಲ್ಲಿ ತೊಡಗಿಕೊಂಡಿರುತ್ತಿದ್ದರು. 'ಕ್ಷಣ

ಕ್ಷಣವೂ ಶಿಕ್ಷಣ' ಎಂಬ ಮಾತನ್ನು ಅವರು ಅಕ್ಷರಶಃ ಜಾರಿಯಲ್ಲಿ ತಂದಿದ್ದರು. ಸ್ವಾಧ್ಯಾಯವೇ ಅವರ ತಪಸ್ಸಾಗಿತ್ತು. ಅದುವೇ ಅವರ ಧ್ಯೇಯವಾಗಿತ್ತು, ಉಸಿರಾಗಿತ್ತು. ಒಂದು ವರುಷದ ಕಾಲ ಅಧ್ಯಾಪಕರಾಗಿ ಕರ್ತವ್ಯವನ್ನು ನಿರ್ವಹಿಸಿದ ಅವರು ಅಂತಿಮವಾಗಿ 1919ರಲ್ಲಿ ಅದಕ್ಕೊಂದು ವಿದಾಯ ಹೇಳಿ ಹೆಚ್ಚಿನ ಅಧ್ಯಯನಕ್ಕಾಗಿ ಸ್ವಗ್ರಾಮವನ್ನು ತೊರೆದು ಹೈದರಾಬಾದಿನತ್ತ ದಿಟ್ಟಹೆಜ್ಜೆ ಇಟ್ಟರು.

ಕಳೆಯುತೊಂದಿರಲಿಲ್ಲ, ಬೆಳೆವುದಿನ್ನೊಂದಲ್ಲೋ!.........
ಅಧ್ಯಾಪನದಿಂದ ಅಧ್ಯಯನಕ್ಕೆ

ಹೈದರಾಬಾದ್ ಪ್ರವೇಶಿಸುತ್ತಲೇ ವೀರಭದ್ರಯ್ಯನವರ ಬದುಕಿನ 'ಪ್ರಥಮ ಪರ್ವ'ದಲ್ಲಿನ 'ವ್ಯಾಸಂಗ ತಪಸ್ಸು' ಎಂಬ ದ್ವಿತೀಯ ಅಧ್ಯಾಯವು ತೆರೆದುಕೊಳ್ಳತೊಡಗಿತು.

ಸಂಕಲ್ಪಬದ್ಧತೆ ಮತ್ತು ಅದಕ್ಕನುಗುಣವಾದ ಒಂದು ಮಾನಸಿಕ ಸಿದ್ಧತೆ ಇದ್ದರೆ ಯಾವುದೇ ವ್ಯಕ್ತಿಯಾದರೂ ಸರಿ, ಏನನ್ನಾದರೂ ಸಾಧಿಸಬಹುದು. ಇವೆರಡೂ ತುಂಬ ಅಪರೂಪದ ಗುಣಗಳು. ಪೂಜ್ಯ ವೀರಭದ್ರಯ್ಯನವರಲ್ಲಿ ಇವೆರಡೂ ಗುಣಗಳು ಹಿತಮಿತವಾಗಿ ಮೇಳೈಸಿಕೊಂಡಿದ್ದವು. ಪೂಜ್ಯರಲ್ಲಿ ಏನನ್ನಾದರೂ ಸಾಧಿಸಲೇ ಬೇಕು ಎಂಬ ತೀವ್ರ ಮತ್ತು ತೀವ್ರತರವಾದ ಹಟವಿತ್ತು. ಪೂಜ್ಯರದು ಒಂದು ತೆರನಾದ ಏಕಲವ್ಯನ ಜಾಯಮಾನ. ಗುರುವಿಲ್ಲದಿದ್ದರೂ ಸರಿ 'ಗುರಿ'ಯನ್ನು ಮುಟ್ಟಲೇಬೇಕೆಂಬ ಛಲ ಅವರಲ್ಲಿ ಓತಪ್ರೋತವಾಗಿ ತುಂಬಿಕೊಂಡಿತ್ತು. 'ಜ್ಞಾನಾರ್ಜನೆಯ ತಪಸ್ಸು' ಅವರಲ್ಲಿ ಮರುಹುಟ್ಟು ಪಡೆದುಕೊಂಡಿತು.

ಸಾರಸ್ವತ ಲೋಕದತ್ತ ದಿಟ್ಟ ಹೆಜ್ಜೆ

ಪೂಜ್ಯರು 1919ರಲ್ಲಿ ಹೆಚ್ಚಿನ ಓದಿಗಾಗಿ ಹೈದರಾಬಾದ್ ಮಹಾನಗರಕ್ಕೆ ಆಗಮಿಸಿದರು. ಬಾಲ್ಯದಿಂದಲೂ ಸಂಸ್ಕೃತವೆಂದರೆ ಅವರಿಗೆ ತುಂಬ ಇಷ್ಟದ ವಿಷಯ. ಅದರೊಂದಿಗೆ ವೇದಾಗಮಗಳಲ್ಲಿ ಅವರಿಗೆ ಅಪಾರ ಶ್ರದ್ಧೆ. ಹೈದರಾಬಾದಿಗೆ ಬರುತ್ತಲೇ ಪೂಜ್ಯರು ಸಂಸ್ಕೃತಾಧ್ಯಯನಕ್ಕೆ ಮೊದಲುಮಾಡಿಕೊಂಡರು. ಸಂಸ್ಕೃತ ಭಾಷೆಯನ್ನು ಅದರ 'ವ್ಯುತ್ಪತ್ತಿ'ಯೊಂದಿಗೆ ಚೆನ್ನಾಗಿ ಅವಗತ ಮಾಡಿಕೊಳ್ಳುವುದರೊಂದಿಗೆ ಅವರು ವೇದಾಗಮಗಳ ಪ್ರಾಥಮಿಕ ಪರಿಚಯವನ್ನು ಮಾಡಿಕೊಂಡರು. ಪೂಜ್ಯರ ಓದು ಅದು ಯಾವತ್ತಿಗೂ 'ಔಪಚಾರಿಕ ಓದು' ಆಗಿರಲಿಲ್ಲ. ಅವರೆಂದೂ ಕಾಟಾಚಾರಕ್ಕಾಗಿ ಓದಲಿಲ್ಲ. ಪರೀಕ್ಷಾರ್ಥಿಗಳಾಗಿ ಓದುವ ಸಾಮಾನ್ಯ ವಿದ್ಯಾರ್ಥಿಗಳ ಹಾಗೆ ಅವರೆಂದೂ ಲೆಕ್ಕಾಚಾರದಿಂದ ಓದುತ್ತಿರಲಿಲ್ಲ. ಪರೀಕ್ಷೆಗಾಗಿ ಓದುವವನು ಪರೀಕ್ಷಾರ್ಥಿ. ಜ್ಞಾನಕ್ಕಾಗಿ ಓದುವವನು ವಿದ್ಯಾರ್ಥಿ. ಪೂಜ್ಯರೆಂದೂ ಪರೀಕ್ಷೆಗಾಗಿ ಓದಲಿಲ್ಲ. ಅವರು ತಾವು ಓದುವ ಪ್ರತಿಯೊಂದು ವಿಷಯವನ್ನು ಆಮೂಲಾಗ್ರವಾಗಿ ತಮ್ಮಲ್ಲಿ ಆಹ್ವಾನಿಸಿಕೊಂಡು ಬಿಡುತ್ತಿದ್ದರು. ಈ ಕಾರಣದಿಂದಾಗಿ ಅವರ ಓದನ್ನು ನಾವು 'ಸಶಕ್ತ ಓದು'

ಅಥವಾ 'ಸಮರ್ಥ ಓದು' ಎಂದು ಕರೆಯಬೇಕಾಗುತ್ತದೆ. ಪೂಜ್ಯರ 'ಹೈದರಾಬಾದ ವಾಸ' ಅವರನ್ನು ಸಂಸ್ಕೃತ ಭಾಷೆಯ ಜೊತೆ-ಜೊತೆಯಲ್ಲಿ ಉರ್ದುಭಾಷೆಗೂ ಹತ್ತಿರವಾಗಿಸಿತು. ಪ್ರಪಂಚದ ಸುಂದರ ಹಾಗೂ ಶ್ರೀಮಂತ ಭಾಷೆಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿರುವ ಉರ್ದು ಭಾಷೆಯನ್ನು ಅವರು ಕಷ್ಟಪಟ್ಟು ಮತ್ತು ಇಷ್ಟಪಟ್ಟು ಕಲಿತುಕೊಂಡರು.

1919ರಿಂದ 1920ರವರೆಗಿನ ಈ ಒಂದು ವರುಷದ ಕಾಲ ಹೈದರಾಬಾದಿನಲ್ಲಿದ್ದ ಅವರು ಸಂಸ್ಕೃತ, ಉರ್ದು ಹಾಗೂ ಮಾತೃಭಾಷೆ ತೆಲುಗು.... ಇವುಗಳಲ್ಲಿ ಬರೀ ಪಾಂಡಿತ್ಯವನ್ನಷ್ಟೇ ಅಲ್ಲ, ಪ್ರಭುತ್ವವನ್ನು ಕೂಡ ಸಂಪಾದಿಸಿಕೊಂಡರು. ಈ ಅವಧಿಯಲ್ಲಿ ಅವರು ಒಂದು ನಿಮಿಷವನ್ನು ಕೂಡ ವ್ಯರ್ಥವಾಗಿಸದೆ ಮತ್ತು ಎಡೆಬಿಡದೆ ತೆಲಗು ಸಾಹಿತ್ಯದ 'ಮೇರುಕೃತಿ'ಗಳನ್ನೆಲ್ಲ ಓದಿ ಮುಗಿಸಿದರು. ಓದಿದ್ದನ್ನು ಅವರು ಅಕ್ಷರಶಃ 'ಆತ್ಮಸಾತ್' ಗೊಳಿಸಿಕೊಂಡರು. ಇದರ ಜೊತೆ ಜೊತೆಯಲ್ಲಿ ಅವರು ಆ ಕಾಲದಲ್ಲಿಯೇ ಚಿಕ್ಕದಾಗಿ ಕವನ-ಕವಿತೆಗಳ ಮತ್ತು ಲೇಖನಾದಿಗಳ ಬರಹಕ್ಕೆ ಮೊದಲು ಮಾಡಿಕೊಂಡರು. ತೆಲಗು ಭಾಷೆಯಲ್ಲಿನ ಸ್ಥಳೀಯ ಪತ್ರಿಕೆಗಳಲ್ಲಿ ಅವರ ಚಿಕ್ಕಪುಟ್ಟ ಲೇಖನಗಳು ಮತ್ತು ಕವಿತೆಗಳು ಹಂತ ಹಂತವಾಗಿ ಮತ್ತು ಆಗಾಗ್ಗೆ ಮುಖ ತೋರಿಸತೊಡಗಿದವು. ಸಂಸ್ಕೃತ ಭಾಷೆಯಲ್ಲಿನ ಅವರ 'ಶ್ರಮ'ವು ಅವರಿಂದ ಕವಿತೆ-ಕವನಗಳನ್ನು ಬರೆಯಿಸತೊಡಗಿತು. ಸಹೃದಯಿ ಜನಗಳು ಮತ್ತು ವಿದ್ವಾಂಸರು ಪೂಜ್ಯರ ಕವಿತೆ-ಕವನಗಳನ್ನು ತಮ್ಮ ಮೆಚ್ಚುಗೆಯಿಂದ ಪ್ರೋತ್ಸಾಹಿಸಿದರು. 'ಬಾಲಕವಿ' ಖ್ಯಾತಿ, 'ಆಶುಕವಿ'ಖ್ಯಾತಿ ಅವರದಾಯಿತು. 15ರ ಎಳೆವಯದಲ್ಲಿಯೇ ಅವರಿಗೆ ದೊರೆತ 'ತ್ರಿಭಾಷಾ ಸಾಂಗತ್ಯ' ಅವರನ್ನು ಪ್ರಬುದ್ಧರನ್ನಾಗಿಸಿತು ಮತ್ತು ಪ್ರಸಿದ್ಧರನ್ನಾಗಿಸಿತು.

ಸಂಸ್ಕೃತ ಸಾರಸ್ವತದ ಸತ್ವದಂಗಳದಲ್ಲಿ

'ಸಂಸ್ಕೃತ ಭಾಷೆಯ 'ಇತೋಽಪ್ಯತಿಶಯ' ಅಧ್ಯಯನಕ್ಕೆ ಹೈದರಾಬಾದ್ ಸಾಲದು' ಎಂದು ಅವರ ಮನಸ್ಸು ತಕರಾರಿಸತೊಡಗಿತು. ಹೆಚ್ಚಿನ ಸಂಸ್ಕೃತ ಅಧ್ಯಯನಕ್ಕಾಗಿ ಪೂಜ್ಯರ ಮನಸ್ಸು ಹಂಬಲಿಸಿಕೊಂಡಿತ್ತು. ಅದಕ್ಕಾಗಿ ಅದು ಹೈದರಾಬಾದಕ್ಕಿಂತ ಉತ್ತಮ ಸ್ಥಳವನ್ನು ಹುಡುಕಿಕೊಂಡಿತ್ತು. ಆಗ ಅವರಿಗೆ ಹಿತೈಷಿಗಳ್ಳೋರ್ವರಿಂದ ಕರ್ನಾಟಕ ಮತ್ತು ಆಂಧ್ರ ಗಡಿಭಾಗದಲ್ಲಿರುವ ನೀರಡಗುಂಭ ಮತ್ತು ರಾಮಗಡ್ಡೆಯ ಶ್ರೀ ಸಿದ್ಧಲಿಂಗಸ್ವಾಮಿ ಮಹಾರಾಜ 'ಸಂಸ್ಕೃತ ಪಾಠಶಾಲೆ'ಯ ಪರಿಚಯವಾಯಿತು. ಕೂಡಲೇ ಪೂಜ್ಯರು ಆ ಪಾಠಶಾಲೆಯಲ್ಲಿ ಪ್ರವೇಶ ಪಡೆದುಕೊಂಡರು. 1920ರಿಂದ 1922ರವರೆಗಿನ ಈ ಮೂರು ವರುಷಗಳ ಅವಧಿಯಲ್ಲಿ ಅವರು ತಮ್ಮ ಬಹುಪಾಲು ಸಮಯವನ್ನು 'ಸಂಸ್ಕೃತ ಸಾರಸ್ವತ'ದ ಸಾನಿಧ್ಯದಲ್ಲಿ ಕಳೆದರು. ಬರೀ ಪಠ್ಯಪುಸ್ತಕಗಳನ್ನಷ್ಟೇ ಓದಿ ಕೇವಲ ಪರೀಕ್ಷೆಗಳನ್ನು ತೇರ್ಗಡೆಮಾಡುವುದು ಅವರ ಉದ್ದೇಶವಾಗಿರಲಿಲ್ಲ. ಅವರೆಂದೂ 'ಪರೀಕ್ಷಾರ್ಥಿ'ಗಳಾಗಿ ಓದಲಿಲ್ಲ. ಅವರು ವಿದ್ಯಾರ್ಥಿಗಳಾಗಿ

ಓದಿದರು. ಆದ್ದರಿಂದ ದಿನೇ ದಿನೇ ಜಿಜ್ಞಾಸುಗಳಾಗಿ ಬೆಳೆಯುತ್ತ ನಡೆದರು. ಪರೀಕ್ಷಾರ್ಥಿಗಳು ಪರೀಕ್ಷೆಗಳನ್ನು ಪಾಸು ಮಾಡುತ್ತಾರೆ. ಅವರು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಸಂಪಾದಿಸುತ್ತಾರೆ. ಆದರೆ ವಿದ್ಯಾರ್ಥಿ ಜೀವನದಲ್ಲಿ ಅದಕ್ಕಿಂತಲೂ ಮುಖ್ಯವಾದುದು ಏನೆಂದರೆ ವಿದ್ಯಾರ್ಥಿಯಾದವನಲ್ಲಿ ನಿಜವಾದ ವಿದ್ಯೆ ನೆಲೆಯೂರಿ ನಿಲ್ಲಬೇಕು. ಅದು ಮುಖ್ಯ. ಇದು ಚಿದರೆಮಠದ ವೀರಭದ್ರಯ್ಯನವರಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಅವರು ಯಾವುದೇ ಒಂದು ವಿಷಯವನ್ನು ಕೈಗೆತ್ತಿಕೊಂಡರೂ 'ಬೇರಿಗಿಳಿದು' ಅದನ್ನು ಅಧ್ಯಯನ ಮಾಡುತ್ತಿದ್ದರು. ಅವರಲ್ಲಿನ ಜಿಜ್ಞಾಸೆ ವಿದ್ಯೆಗಾಗಿ ನಿರಂತರವಾಗಿ ಹಸಿದುಕೊಂಡಿರುತ್ತಿತ್ತು. ಈ ಕಾರಣದಿಂದಾಗಿಯೇ ಅವರು ದಿನೇ ದಿನೇ ಪಂಡಿತ ವೀರಭದ್ರಯ್ಯನವರಾಗಿ ಬೆಳೆಯತೊಡಗಿದರು. ಪೂಜ್ಯರು ಸಂಸ್ಕೃತವನ್ನು 'ಏಕಮೇವಾದ್ವಿತೀಯ' ಎಂಬ ಮಾದರಿಯಲ್ಲಿ ಓದತೊಡಗಿದರು. ಸಂಸ್ಕೃತ ಭಾಷೆ ಅವರ ಅಂಗೈನೆಲ್ಲಿಯಾಯಿತು. ಬರೀ ಸಂಸ್ಕೃತಕ್ಕೊಂದೇ ಅಂಟಿಕೊಂಡು ಕುಳಿತುಕೊಳ್ಳದೆ ಅವರು ಅದರ ಜೊತೆ ಜೊತೆಯಲ್ಲಿ ಉಳಿದ ಭಾಷೆಗಳೊಂದಿಗೆ ಕೂಡ ಸಂಪರ್ಕವನ್ನು ಕಲ್ಪಿಸಿಕೊಂಡಿದ್ದರು.

ಸಾರಸ್ವತಲೋಕ ವಿಹಾರಿಗೆ........

ಆವ ಭಾಷೆಯಾದೊಡೇನು ಅದು ಅಂಗೈನೆಲ್ಲಿ ಮತ್ತು ಅಂಗೈನಲ್ಲಿ !!

ಪೂಜ್ಯರು ಕರ್ನಾಟಕಾಂಧ್ರ ಗಡಿಪ್ರಾಂತದಲ್ಲಿದುದರಿಂದ ಕನ್ನಡ ಭಾಷೆಯೂ ಕೂಡ ಅವರ ಸಖ್ಯ ಬಯಸಿ ಅವರ ಬಳಿಗೋಲಿದೋಡಿ ಬಂತು. ಪೂಜ್ಯರಲ್ಲಿ ಬೇರೆ ಬೇರೆ ಭಾಷೆಗಳನ್ನು ಕಲಿತುಕೊಳ್ಳಬೇಕೆಂಬ ಶ್ರದ್ಧೆ ಮತ್ತು ಆಸಕ್ತಿಗಳು ಮನೆಮಾಡಿಕೊಂಡಿದ್ದವು. ಅವರಲ್ಲಿ 'ಭಾಷಾ ಕಲಿಕಾ ಶ್ರದ್ಧೆ' ಅಪಾರ ಪ್ರಮಾಣದಲ್ಲಿ ತುಂಬಿಕೊಂಡಿತ್ತು. ಯಾವುದೇ ಭಾಷೆಯನ್ನಾದರೂ ಸರಿ, ಅವರು ಬಹುಬೇಗನೇ ಅದನ್ನು ತಮ್ಮ 'ಆಡುಭಾಷೆ'ಯನ್ನಾಗಿ ರೂಢಿಸಿಕೊಂಡು ಬಿಡುತ್ತಿದ್ದರು. ಭಾಷೆ ಯಾವುದಾದರೇನು? ಅದನ್ನು ಕಲಿತುಕೊಳ್ಳಬೇಕೆಂಬ ಶ್ರದ್ಧೆ, ಆಸಕ್ತಿ ಹಾಗೂ ಅದಕ್ಕನುಗುಣವಾದ ಪ್ರಯತ್ನ ನಮ್ಮಲ್ಲಿದ್ದರೆ ಅದು ಬಹುಬೇಗನೇ ನಮ್ಮ ವಶವರ್ತಿಯಾಗುತ್ತದೆ. ವೀರಭದ್ರಯ್ಯನವರಲ್ಲಿ ಈ ಯಾವುದಕ್ಕೂ ಕೊರತೆ ಇರಲಿಲ್ಲ. ಪೂಜ್ಯರು 'ಪ್ರಯತ್ನ' ಮತ್ತು 'ಆಸಕ್ತಿ'ಗಳ 'ಶಕ್ತಿಕೇಂದ್ರ'ದಂತಿದ್ದರು. ಅವರು ಶ್ರದ್ಧೆಯ ಅಬಾಧಿತ 'ಸಂಪನ್ಮೂಲ'ವಾಗಿದ್ದರು. ಕೆಲವೇ ದಿನಗಳಲ್ಲಿ ಕನ್ನಡ ಭಾಷೆಯು ಕರತಲಾಮಲಕಗೊಂಡು ಅವರನ್ನು ಸೇರಿಕೊಂಡಿತು.

ನಾರಾಯಣಪೇಟೆಯ ಸಂಸ್ಕೃತ ಪಾಠಶಾಲೆಯಲ್ಲಿ....

ಪೂಜ್ಯ ವೀರಭದ್ರಯ್ಯನವರು ಸಂಸ್ಕೃತ ಭಾಷೆಯ ಉನ್ನತ ವ್ಯಾಸಂಗಕ್ಕಾಗಿ 1922ರಲ್ಲಿ ಅಂದಿನ ನಿಜಾಮಾಬಾದ್ ಸ್ಟೇಟ್(ರಾಜ್ಯ)ನ ನಾರಾಯಣಪೇಟೆಯ 'ಶ್ರೀ ಚೋಳೇಂದ್ರ ಸಂಸ್ಕೃತ ಪಾಠಶಾಲೆ'ಯಲ್ಲಿ ಪ್ರವೇಶವನ್ನು ಪಡೆದುಕೊಂಡರು. 1922ರಿಂದ 1925ರ ನವೆಂಬರ್‌ದವರೆಗೆ ಸುಮಾರು ಮೂರು, ಮೂರೂವರೆ ವರುಷಗಳ ಕಾಲ ಅವರು ಶ್ರೀ ಚೋಳೇಂದ್ರ ಸಂಸ್ಕೃತ

ಪಾಠಶಾಲೆಯಲ್ಲಿ ತಮ್ಮ ಸಂಸ್ಕೃತಾಧ್ಯಯನವನ್ನು ಮುಂದುವರಿಸಿದರು. ಸ್ವಾಧ್ಯಾಯನಿಷ್ಠರಾದ ಅವರು ಈ ಅವಧಿಯಲ್ಲಿ 'ಸಂಸ್ಕೃತ ಸಾರಸ್ವತ'ದ ಬಹುಭಾಗವನ್ನು ಅಂಗವಿಸಿಕೊಂಡಾಗಿತ್ತು. ಸಂಸ್ಕೃತ ಸಾರಸ್ವತ ಪ್ರಪಂಚದ ದಿಗ್ಗಜರಾದ ಕವಿಕುಲತಿಲಕ ಮಹಾಕವಿ ಕಾಳಿದಾಸ ವಿರಚಿಸಿದ 'ಕುಮಾರಸಂಭವ', 'ರಘುವಂಶ', ಭಾರವಿಯ 'ಕಿರಾತಾರ್ಜುನೀಯ', ಮಾಘನ 'ಶಿಶುಪಾಲವಧ', ಶ್ರೀಹರ್ಷನ 'ನೈಷಧೀಯಚರಿತ' ಈ ಪಂಚಮಹಾಕಾವ್ಯಗಳನ್ನು, 'ಋತುಸಂಹಾರ', 'ಮೇಘದೂತ' ಇತ್ಯಾದಿ ಖಂಡಕಾವ್ಯಗಳನ್ನು, ಕಾಳಿದಾಸ-ಭಾಸಾದಿಗಳಿಂದ ವಿರಚಿತವಾದ ಸಂಸ್ಕೃತ ನಾಟಕಗಳನ್ನು, ಪತಂಜಲಸೂತ್ರ, ಲಘುಕೌಮುದಿ ಇತ್ಯಾದಿ ವ್ಯಾಕರಣಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ ಪೂಜ್ಯರು ಅವುಗಳನ್ನು 'ಆತ್ಮಸಾತ್'ಗೊಳಿಸಿಕೊಂಡರು. ಇವುಗಳ ಜೊತೆ ಜೊತೆಯಲ್ಲಿ ಪೌರೋಹಿತ್ಯದ ಪ್ರಾಣ, ಮುಖ್ಯಪ್ರಾಣವೆಂದೆನಿಸಿದ ಪಂಚಾಂಗ, ಜ್ಯೋತಿಷ್ಯ, ಗಣಿತ ಈ ಎಲ್ಲ ಕ್ಷಿತಿಜಗಳತ್ತ ಪೂಜ್ಯರು ತಮ್ಮ ಆಸಕ್ತಿಯನ್ನು ವಿಸ್ತರಿಸಿ ಅವುಗಳ ಮೇಲೆ 'ಪ್ರಭುತ್ವ'ವನ್ನು ಸಂಪಾದಿಸಿಕೊಂಡರು. ಸಂಸ್ಕೃತ ಭಾಷೆಯಂತೂ ಅವರ ಒಡನಾಡಿಯಾಗಿ ನಿಂತುಕೊಂಡಿತು. ಬೇರೆ ಭಾಷೆಗಳ ಒಡನಾಟವು ಕೂಡ ಅವರ 'ಭಾಷಾಪಾಂಡಿತ್ಯ'ವನ್ನು ಶ್ರೀಮಂತಿಸಿ ಅವರನ್ನು 'ಬಹುಭಾಷಾ ವಿಶಾರದ'ರನ್ನಾಗಿ ರೂಪಿಸಿತು.

ಎದೆ ತುಂಬಿ ಮಾತನಾಡಿದಾಗ ....ಕರತಾಡನಾವೃಷ್ಟಿ

1924ರಲ್ಲಿ ಗುರುಮಠಕಲ್‌ನ ಪರಮಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳವರ ಭೂರಿ ಭೂರಿ ಪ್ರಯತ್ನದಿಂದಾಗಿ ನಿಜಾಮ್ ಪ್ರಾಂತದ 'ಇಟಗಿ'ಯಲ್ಲಿ ಪ್ರಪ್ರಥಮ ಬಾರಿಗೆ ವೀರಶೈವ ಮಹಾಸಭೆಯು ಸಂಘಟಿಸಲ್ಪಟ್ಟಿತು. ಆ ಮಹಾಸಭೆಯಲ್ಲಿ ಮಾತನಾಡಲು ಚಿದರೆಮಠದ ಶ್ರೀ ವೀರಭದ್ರಯ್ಯನವರಿಗೆ ಅವಕಾಶ ದೊರೆಯಿತು. ಆ ಸಂದರ್ಭದಲ್ಲಿ ಮನಬಿಚ್ಚಿ ಎದೆತುಂಬಿ ಮಾತನಾಡಿದ ವೀರಭದ್ರಯ್ಯನವರ ವಿದ್ವತ್ಪೂರ್ಣ ಮಾತುಗಳು ಇಡೀ ಸಭೆಗೆ ಸಭೆಯೇ ಮಂತ್ರಮುಗ್ಧವಾಗುವ ಹಾಗೆ ಮಾಡಿತು. ಆ ಮಾತುಗಳಲ್ಲಿರುವ ಧೈರ್ಯ, ಸ್ಥೈರ್ಯಗಳು, ಓಜ-ತೇಜಗಳು, ಕೆಚ್ಚು-ಕಿಚ್ಚುಗಳು, ತರ್ಕ-ಪ್ರಮಾಣಗಳು, ಭಾಷಾಪ್ರೌಢಿಮೆಗಳು ಜನರನ್ನು ಮೂಕವಿಸ್ಮಿತಗೊಳಿಸಿದವು. ಜನಗಳು ಪೂಜ್ಯರ ಉಪನ್ಯಾಸವನ್ನು ಕೇಳಿ ರೋಮಾಂಚಿತರಾದರು. ಉಪನ್ಯಾಸ ಮುಗಿಯುತ್ತಲೇ ಸಾರ್ವಜನಿಕರಿಂದ ಬಹುದೊಡ್ಡ ಪ್ರಮಾಣದಲ್ಲಿ ಚಪ್ಪಾಳೆಯ ಸುರಿಮಳೆ ಸುರಿಯಿತು.

ಮಹಾಸಭೆಯಲ್ಲಿ ಉಪಸ್ಥಿತರಿದ್ದ ವೀರಶೈವ ಸಮಾಜದ ಹಿತೈಷಿಗಳಾದ, ಸಾತ್ವಿಕ ಜೀವನದ ತಪಸ್ವಿಗಳಾದ ಲಿಂ. ಶ್ರೀ ಹರ್ಡೇಕರ್ ಮಂಜಪ್ಪನವರು ಪೂಜ್ಯರನ್ನು ತುಂಬು ಹೃದಯದಿಂದ ಅಭಿನಂದಿಸಿದರು. ಧಾರವಾಡ ಮುರುಘಾಮಠದ ಪರಮಪೂಜ್ಯ ಲಿಂ. ಶ್ರೀ ಮ. ನಿ. ಪ್ರ.

ಮೃತ್ಯುಂಜಯ ಅಪ್ಪಗಳವರಂತೂ ಪೂಜ್ಯರ ಮೈದಡವಿ ಆನಂದಾಶ್ರು ಸುರಿಸಿ ಪೂಜ್ಯರಿಗೆ ಹದುಳ ಹಾರೈಸಿದರು. ಸಭೆಯಲ್ಲಿ ಸೇರಿದ್ದ ಅನೇಕ ಗಣ್ಯಮಾನ್ಯ ಭಕ್ತಾದಿಗಳು, ಸಮಾಜದ ಪ್ರಮುಖರು ಪೂಜ್ಯರ ಮೇಲೆ ಪ್ರಶಂಸೆಗಳ ಮಹಾಪೂರವನ್ನೇ ಹರಿಸಿದರು.

'ತನುವು ನಿಮ್ಮದು, ಮನವು ನಿಮ್ಮದು, ಧನವು ನಿಮ್ಮದು'

'ವಿದ್ವದಭಿಮಾನಿ' ವಕೀಲ ಶ್ರೀ ಬಾಬೂರಾವ್ ದೇಶಮುಖ..........

ವೀರಶೈವ ಮಹಾಸಭೆಯ ಅಂದಿನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಹೈಕೋರ್ಟ್ ವಕೀಲರಾದ ಸುಪ್ರಸಿದ್ಧ ಶ್ರೀ ಬಾಬುರಾವ್ ದೇಶಮುಖರಂತೂ ಪೂಜ್ಯರ ಪ್ರಭಾವೀ ಭಾಷಣವನ್ನು ಕೇಳಿ ತುಂಬ ಪ್ರಭಾವಿತರಾದರು. ಪೂಜ್ಯರ ಅಂತರ್ಯದಲ್ಲಿ ಅಡಗಿಕೊಂಡಿರುವ ಕೆಚ್ಚು ಅವರಿಗೆ ವೇದ್ಯವಾಯಿತು. ಪೂಜ್ಯರ ವಿದ್ವತ್ಪೂರ್ಣ ಮಾತುಗಳನ್ನು ಕೇಳಿದ ಅವರು ಪೂಜ್ಯರಲ್ಲೊಂದು 'ಭರವಸೆಯ ವ್ಯಕ್ತಿತ್ವ'ವನ್ನು ಕಂಡರು. 'ಈ 'ಅನರ್ಘ್ಯ ರತ್ನ' ಇನ್ನಷ್ಟು ಮತ್ತಷ್ಟು ಸಂಸ್ಕಾರಗೊಂಡರೆ ಇಡೀ ವೀರಶೈವ ಸಮಾಜವೇ ಲಾಭಾನ್ವಿತವಾಗುತ್ತದೆ' ಎಂದು ಊಹಿಸಿದ ದೇಶಮುಖರು ತುಂಬಿದ ಸಭೆಯಲ್ಲಿ ಎದ್ದು ನಿಂತು ಮಾತನಾಡುತ್ತ, ''ಪೂಜ್ಯ ವೀರಭದ್ರಯ್ಯನವರು ನಿಜಕ್ಕೂ ಪ್ರತಿಭಾನ್ವಿತರು. ಸಾಹಿತ್ಯ ಸರಸ್ವತಿ ಅವರಲ್ಲಿ ಓತಪ್ರೋತವಾಗಿ ತುಂಬಿಕೊಂಡಿದ್ದಾಳೆ. ಅವರ ಮಾತುಗಳನ್ನು ಕೇಳಿದರೆ ಎಂಥ ಸೋಂಬೇರಿಯೂ ಕೂಡ ಸಾಹಸಿಯಾಗಿ ನಿಲ್ಲುವ ಪ್ರಯತ್ನಕ್ಕೆ ಮುಂದಾಗುತ್ತಾನೆ. ಇದರಲ್ಲಿ ಸಂದೇಹವಿಲ್ಲ. ಪೂಜ್ಯರು ಉನ್ನತ ವ್ಯಾಸಂಗವನ್ನು ಕೈಕೊಳ್ಳುವುದಾದರೆ, ಅವರು ಯಾವುದೇ ಸ್ಥಳಕ್ಕೆ ಹೋದರೂ ಸರಿ, ನಾನು ಅವರಿಗೆ ಸಂಪೂರ್ಣವಾಗಿ ಆರ್ಥಿಕ ಬೆಂಬಲವನ್ನು ಕೊಡುತ್ತೇನೆ. 'ತನು ಅವರದು, ಮನ ಅವರದು, ಧನವು ಮಾತ್ರ ನನ್ನದು' ಎಂದು ಘೋಷಿಸಿದರು. ಹೆಚ್ಚಿನ ವ್ಯಾಸಂಗಕ್ಕಾಗಿ 'ಕಾಶಿಗೆ ಹೋಗಬೇಕು' ಎಂಬ ಪೂಜ್ಯ ವೀರಭದ್ರಯ್ಯನವರ ಸಂಕಲ್ಪಕ್ಕೆ ಮತ್ತು ಇಚ್ಛಾಶಕ್ತಿಗೆ ವಕೀಲ ದೇಶಮುಖರ ಈ ಘೋಷಣೆಯಿಂದಾಗಿ 'ಭೀಷ್ಮಬಲ' ಮತ್ತು 'ಭೀಮಬಲ' ಬಂದಂತಾಯಿತು. ಅದೂ ಅಲ್ಲದೆ 'ವಿದ್ವತ್ ಗೌರವ' ರೂಪದಲ್ಲಿ ಆ ಸಭೆಯಲ್ಲಿ ಸೇರಿದ ಜನಗಳು ಪೂಜ್ಯರಿಗೆ ಅಂದಿನ ಆ ಕಾಲದಲ್ಲಿ 80 ರೂ.ಗಳ ಅಭಿಮಾನಯುಕ್ತ 'ಗೌರವ ಕಾಣಿಕೆ'ಯನ್ನು ಸಲಿಸಿದರು. ಆ ಕಾಲದಲ್ಲಿ ಅದೊಂದು ಬಹುದೊಡ್ಡ ಸುದ್ದಿಯಾಯಿತು.

ಪರಳಿ ಪ್ರಕರಣದ ಪ್ರಭಾವ

'ವೇದಮಾತೆ'ಯತ್ತ ಮತ್ತು 'ವೇದತೀರ್ಥ'ದತ್ತ.....

1924 ಮತ್ತು 1925ರ ಸುತ್ತಮುತ್ತ ವೀರಶೈವರ ಸ್ವಾಭಿಮಾನವು ಕುಠಾರಾಘಾತಕ್ಕೆ ಒಳಗಾಗಬೇಕಾದಂಥ ಕಹಿ ಘಟನೆಯೊಂದು ಘಟಿಸಿತು. ಅದನ್ನು 'ಪರಳಿ ಪ್ರಕರಣ' THE PARALI CONTROVERSY ಎಂದೇ ಇತಿಹಾಸದಲ್ಲಿ ದಾಖಲಿಸಲಾಗಿದೆ.

ಶ್ರೀ ಪರಳಿ ವೈದ್ಯನಾಥೇಶ್ವರ ಜ್ಯೋತಿರ್ಲಿಂಗವು ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದು. ಈ ಜ್ಯೋತಿರ್ಲಿಂಗವಿರುವ ಪರಳಿ ದೇವಸ್ಥಾನವು ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಇದು ಹಿಂದೂ ಜನಾಂಗದ ಶ್ರದ್ಧಾಕೇಂದ್ರ ಮತ್ತು ಸರ್ವ ಜನಾಂಗದ ಭಾವ-ಭಾವನೆಗಳ ಶಕ್ತಿಕೇಂದ್ರ. ವೀರಶೈವರೆಲ್ಲರೂ ಸೇರಿ ಪರಳಿ ಶ್ರೀ ವೈದ್ಯನಾಥೇಶ್ವರನಿಗೆ ಅತ್ಯಂತ ಅದ್ದೂರಿ ಹಾಗೂ ಸಡಗರಗಳಿಂದ ಮಹಾರುದ್ರಾಭಿಷೇಕವನ್ನು ಮಾಡಬೇಕೆಂದು ನಿರ್ಧರಿಸಿ ಅದಕ್ಕಾಗಿ ಸಂಭ್ರಮದ ವ್ಯವಸ್ಥೆ ಮಾಡಿಕೊಂಡರು. ಆಗ ಅಲ್ಲಿನ ಸ್ಥಳೀಯ ಪರಳಿ ಬ್ರಾಹ್ಮಣರು ತಮ್ಮನ್ನು ಈ ಮಹಾಕಾರ್ಯದಲ್ಲಿ ಉಪೇಕ್ಷಿಸಲಾಗಿದೆ ಎಂಬ ಕಾರಣವನ್ನು ಮುಂದೆ ಮಾಡಿಕೊಂಡು ವೀರಶೈವರ ವೈದಿಕ ನಿಷ್ಠೆಯನ್ನು ಮತ್ತು ವೇದಾಧಿಕಾರದ ಹಕ್ಕನ್ನು ಪ್ರಶ್ನಿಸಿದರು. ವೀರಶೈವರು ವೇದಮಂತ್ರಗಳನ್ನು ಹೇಳಿಕೊಂಡು ಅಭಿಷೇಕವನ್ನು ಮಾಡುವುದಿಲ್ಲ. ಅವರು ಬರೀ 'ಶಿವಮಹಿಮ್ನ ಸ್ತೋತ್ರ'ವನ್ನು ಹೇಳಿಕೊಂಡು ಅಭಿಷೇಕ ಮಾಡುತ್ತಾರೆ ಎಂದು ಆಪಾದನೆ ಮಾಡಿದರು. ವೀರಶೈವರಿಗೆ ವೇದಗಳ ಮೇಲೆ ಪ್ರಭುತ್ವ ಇಲ್ಲವೇ ಇಲ್ಲ ಎಂದು ಗಂಭೀರವಾಗಿ ಆರೋಪಿಸಿದರು. ವೀರಶೈವರ ಯೋಗ್ಯತೆಯನ್ನು ಪ್ರಶ್ನಿಸಿದ ಈ ಸಂದರ್ಭವು ವೀರಶೈವರ ಆತ್ಮಾಭಿಮಾನಕ್ಕೆ ಚುರುಕು ಮುಟ್ಟಿಸಿತ್ತು. ವೀರಶೈವರ ಸ್ವಾಭಿಮಾನವನ್ನು ಕೆಣಕಿತ್ತು. ವೀರಶೈವರು 'ಮಲಗಿದರೆ ಕುಂಭಕರ್ಣರು, ಎದ್ದರೆ ವೀರಭದ್ರರು' ಎಂಬ ಈ ವಿಷಯದಿಂದ ಅಜ್ಞಾತರಾದ ಪರಳಿ ಬ್ರಾಹ್ಮಣರು ಬಹುದೊಡ್ಡ ಪ್ರಮಾದವನ್ನು ಎಸಗುವ ಮೂಲಕ ವೀರಶೈವರನ್ನು ಎಚ್ಚರಿಸಿದ್ದರು. ದಿನೇ ದಿನೇ ಆರೋಪ- ಪ್ರತ್ಯಾರೋಪಗಳ ಪಟ್ಟಿ ಬೆಳೆಯತೊಡಗಿತು. ವಿಷಯ ನ್ಯಾಯಾಲಯದ ಕಿವಿಯವರೆಗೂ ಹೋಯಿತು. ದಿನಂಪ್ರತಿ ಪತ್ರಿಕೆಗಳಲ್ಲಿಖಂಡನ-ಮಂಡನಗಳಾದವು. ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಇರುವ ವೀರಶೈವ ಸ್ವಾಮೀಜಿಗಳು ಮತ್ತು ಸಮಾಜದ ಹಿತೈಷಿಗಳು ಹಾಗೂ ಪುರ-ಪ್ರಮುಖರೆಲ್ಲ ಸಂಘಟಿತರಾದರು. ಇದು ವೀರಶೈವರ ಅಸ್ತಿತ್ವದ ಅಳಿವು-ಉಳಿವಿನ ಪ್ರಶ್ನೆ ಎಂದು ಭಾವಿಸಿ ಶತಾಯ ಗತಾಯ ಹೋರಾಡಲು ಎಲ್ಲರೂ ಸಾಮೂಹಿಕವಾಗಿ ಸಿದ್ಧ-ಸನ್ನದ್ಧರಾದರು. ಆ ಕಾಲದಲ್ಲಿ ಪರಳಿ ಪ್ರಕರಣವು ನಾಡಿನಾದ್ಯಂತ ಬಹುದೊಡ್ಡ ಸುದ್ದಿಯನ್ನು ಮಾಡಿ ಜನಗಳ ಗಮನ ಸೆಳೆಯಿತು.

ವೀರಶೈವ ಧರ್ಮದ ಏಕಮೇವ ಮತ್ತು ಏಕೈಕ 'ವೇದತೀರ್ಥ'ರ ವಿಜಯದುಂದುಭಿ......

ಅಂದಿನ ಆ ಕಾಲದಲ್ಲಿ ವೀರಶೈವ ಸಮುದಾಯದಲ್ಲಿ ಪ್ರಪ್ರಥಮ 'ವೇದತೀರ್ಥ'ರೆಂಬ ಖ್ಯಾತಿಯನ್ನು ಪಡೆದಿದ್ದ, ಮಹಾಪ್ರತಿಭಾಶಾಲಿಗಳಾದ ಇಂದೌರ ಸ್ಟೇಟ್‌ನ (ಮಧ್ಯಪ್ರದೇಶ) ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾದ ಚೌಡದಾನಪುರದ ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರ್‌ರವರನ್ನು ಈ ಹೋರಾಟದ ನೇತೃತ್ವವನ್ನು ವಹಿಸಿಕೊಳ್ಳಬೇಕೆಂದು

ಕೇಳಿಕೊಳ್ಳಲಾಯಿತು. ಅದ್ವಿತೀಯ ವಿದ್ವಾಂಸರಾದ ಒಡೆಯರ್‌ರವರ ಪ್ರತಿಭೆಯ ಮುಂದೆ ಬ್ರಾಹ್ಮಣ ವಿದ್ವಾಂಸರು ಮತ್ತು ವಕೀಲರುಗಳು ತರಗೆಲೆಯಂತೆ ನಲುಗಿ ಹೋದರು. ಗ್ರಂಥ ಪ್ರಾಮಾಣ್ಯವನ್ನು ಕೊಟ್ಟು, ಶ್ರುತಿ-ಸ್ಮೃತಿಗಳ ಸಾಕ್ಷ್ಯಾಧಾರಸಹಿತ ಮಾತನಾಡಿದಾಗ ಪ್ರತಿವಾದಿ ಪಕ್ಷದ ಸ್ಥಿತಿ ಇಂಗು ತಿಂದ ಮಂಗನಂತಾಯಿತು. 'ಹೋದೆಯಾ ಪಿಶಾಚಿ ಎಂದರೆ ಇದು ಬಂದೆ ಗವಾಕ್ಷಿಲಿ' ಎಂದಂತಾಯಿತಲ್ಲ ಎಂದು ಅವರು ಕೈ ಕೈ ಹಿಸುಕಿಕೊಂಡರು. ಕೊನೆಗೊಂದು ದಿನ ಅಂದರೆ 16.12.1925ರಂದು ನ್ಯಾಯಾಲಯವು ವೀರಶೈವರಿಗೆ ಪರವಾಗಿ ತೀರ್ಪನ್ನು ಬರೆದು ''ವೀರಶೈವರಿಗೆ ವೇದಾಧಿಕಾರವಿದೆ. ವೀರಶೈವರು ಅತ್ಯುತ್ತಮ ವೈದಿಕರಾಗಬಲ್ಲರು. ಅವರು ತಾವೇ ಸರ್ವತಂತ್ರ ಸ್ವತಂತ್ರರಾಗಿ ಪರಳಿ ವೈದ್ಯನಾಥೇಶ್ವರನಿಗೆ ರುದ್ರಾಭಿಷೇಕವನ್ನು ಮಾಡಬಹುದು' ಎಂದು ಹೇಳಿತು.ಈ ತೀರ್ಪಿನಿಂದ ಮುದಗೊಂಡ ವೀರಶೈವರು ವಿಜಯೋತ್ಸವವನ್ನು ಆಚರಿಸುತ್ತ ಅತ್ಯಂತ ಸಂಭ್ರಮ, ಸಡಗರಗಳಿಂದ ಪರಳಿಸ್ವಾಮಿಗೆ ರುದ್ರಾಭಿಷೇಕವನ್ನು ಮಾಡಿದರು.

ಈ ಎಲ್ಲ ಘಟನೆಗಳನ್ನು ಪ್ರತಿದಿನವೂ ಸಾಂಗೋಪಾಂಗವಾಗಿ ಗಮನಿಸುತ್ತಿದ್ದ ವೀರಭದ್ರಯ್ಯನವರು ಸ್ವಾಭಾವಿಕವಾಗಿಯೇ ಕುತೂಹಲಕ್ಕೆ ಒಳಗಾದರು. ಅವರು ಈ ಪ್ರಕರಣದ ಐತಿಹ್ಯವನ್ನೆಲ್ಲ ಶ್ರದ್ಧೆಯಿಂದ ಗ್ರಹಿಸಿದರು. ಈ ಸಂದರ್ಭದಲ್ಲಿ ವೀರಶೈವರನ್ನು ಸಂಘಟಿಸುವಲ್ಲಿ ಪೂಜ್ಯರು ಕೂಡ ಮಹತ್ತರವಾದ ಪಾತ್ರವನ್ನಾಡಿದರು. ತಮ್ಮ ಗಮನಕ್ಕೆ ಬಂದ ಎಲ್ಲ ವಿಷಯಗಳನ್ನು ಆಮೂಲಾಗ್ರವಾಗಿ ಗ್ರಹಿಸಿ ಸುಂದರ ಹಾಗೂ ವಿವರಣಾತ್ಮಕ ವಿಶದ ವರದಿಗಳನ್ನು ಸಿದ್ಧಪಡಿಸಿ ಮೈಸೂರು ಪ್ರಾಂತದ ಮತ್ತು ಆಂಧ್ರ ಪ್ರಾಂತದ ವಿವಿಧ ಪತ್ರಿಕೆಗಳಿಗೆ ಕಳುಹಿಸಿ ಕೊಡುತ್ತಿದ್ದರು.

ಹೋರಾಟವಿದು ಬ್ರಾಹ್ಮಣರ ವಿರುದ್ಧವಲ್ಲ.... 'ಬ್ರಾಹ್ಮಣ್ಯ'ದ ವಿರುದ್ಧ !!

ಪರಳಿ ಪ್ರಕರಣವು ಪೂಜ್ಯ ವೀರಭದ್ರಯ್ಯನವರ ಸುಪ್ತ ಮನಸ್ಸಿಗೊಂದು ಅನಿರೀಕ್ಷಿತ ತಿರುವನ್ನು (Turning Point) ತಂದುಕೊಟ್ಟಿತು. ವೀರಭದ್ಯಯ್ಯನವರ ಬಿಸಿರಕ್ತವು ವೀರಶೈವರ ಅವಹೇಳನೆಗೆ ಸರಿಯಾದ ಬೌದ್ಧಿಕ ಪ್ರತಿಕ್ರಿಯೆ ನೀಡಲು ಸಿದ್ಧವಾಯಿತು. ವೇದಗಳನ್ನು ಆತ್ಮಸಾತ್-ಗೊಳಿಸಿಕೊಳ್ಳಲೇಬೇಕು ಎಂಬ ಹಟ ಅವರಲ್ಲಿ ಮನೆಮಾಡಿ ನಿಂತುಕೊಂಡಿತು. ವೀರಭದ್ರಯ್ಯನವರ ಯುವಮನಸ್ಸು 'ಬ್ರಾಹ್ಮಣ್ಯ'ದ ವಿರುದ್ಧ ಬಂಡೆದ್ದಿತು. ಬ್ರಾಹ್ಮಣರೇನೋ ಒಳ್ಳೆಯವರು. ಆದರೆ 'ಬ್ರಾಹ್ಮಣ್ಯ' ಒಳ್ಳೆಯದಲ್ಲವಲ್ಲ. ಅದು ಆಘಾತಕಾರಿ. ಆದ್ದರಿಂದ ಅದರ ವಿರುದ್ಧ ಸಮರ ಸಾರಿದ ಪೂಜ್ಯರು ಭಾರತೀಯ ಮೂಲವಾಙ್ಮಯವಾದ ವೇದಾಧ್ಯಯನವನ್ನು

ಸಮಗ್ರವಾಗಿ ಮಾಡಲೇ ಬೇಕೆಂಬ ಛಲವನ್ನು ತಮ್ಮ ಎದೆಯಾಳದಲ್ಲಿ ಧರಿಸಿಕೊಂಡರು. ಪೂಜ್ಯರಿಗೆ ಶ್ರೀ ಬಾಪೂರಾವ್ ದೇಶಮುಖ್‌ರ ನೆನಪಾಯಿತು. ಉನ್ನತ ವಾಸಂಗಕ್ಕಾಗಿ ಮತ್ತು ವೇದಾದಿಗಳಲ್ಲಿ ಅಧಿಕೃತ ಪ್ರಭುತ್ವವನ್ನು ಸಂಪಾದಿಸುವುದಕ್ಕಾಗಿ 'ಸಾರಸ್ವತ ಶ್ರೀಕಾಶಿ' ಎಂದೆನಿಸಿದ ಕಾಶಿಗೆ ಹೋಗಲು ತೀರ್ಮಾನಿಸಿರುವುದಾಗಿ ಹೇಳಿದರು. ಪೂಜ್ಯರ ಈ ನಿರ್ಧಾರವನ್ನು ಕೇಳಿ ತಿಳಿದು ಸಂತುಷ್ಟರಾದ ದೇಶಮುಖರು ಪೂಜ್ಯರಿಗೆ ಸಂತೋಷದಿಂದ ಆರ್ಥಿಕ ನೆರವನ್ನು ನೀಡಿದರು.

ಕಾಶಿಯಾದರೂ ಸರಿ, ಕಾಶ್ಮೀರವಾದರೂ ಸರಿ.......
ಅಪರಿಮಿತವಾದ ವಿದ್ಯಾದಾಹ..........

ಪರಳಿ ಪ್ರಕರಣವು ವೀರಭದ್ರಯ್ಯನವರ ಬದುಕಿನಲ್ಲೊಂದು ಹೊಸ ಅಧ್ಯಾಯವು ತೆರೆದುಕೊಳ್ಳುವಂತೆ ಮಾಡಿತು. ವೀರಶೈವರಲ್ಲಿ 'ವೇದಪಾಂಡಿತ್ಯ'ವನ್ನು ಪಡೆದವರು ಮತ್ತು 'ವೇದತೀರ್ಥ'ರಾದವರು ತುಂಬ ವಿರಳ. ಆ ಕಾಲದಲ್ಲಿ ಚೌಡದಾನಪುರದ ಪಂಡಿತ ಶ್ರೀ ವಿರೂಪಾಕ್ಷ ಒಡೆಯರ್‌ರವರನ್ನು ಹೊರತು ಪಡಿಸಿದರೆ ವೀರಶೈವರಲ್ಲಿ ಮತ್ತೊಬ್ಬ 'ವೇದತೀರ್ಥ'ರು ಇರಲೇ ಇಲ್ಲ. ಇಂಥ ಈ ವಿಪರೀತ ಪರಿಸ್ಥಿತಿಯು ಪೂಜ್ಯರನ್ನು ಕನಲಿಸಿತು ಮತ್ತು ಸಾತ್ವಿಕವಾಗಿ ಕೆರಳಿಸಿತು. ಆಗ ಅವರಿಗೆ 21ರ ತುಂಬು ಪ್ರಾಯ ಬೇರೆ. ಆ ಪ್ರಾಯವನ್ನು ವಿದ್ಯಾರ್ಜನೆಗಾಗಿಯೇ ಮೀಸಲಾಗಿಟ್ಟ ಅವರು ಕಾಶಿಕ್ಷೇತ್ರಕ್ಕೆ ಅಭಿಮುಖವಾಗಿ ನಡೆದರು.

ಹಸಿರು ನಿಶಾನೆ ತೋರಿದ ಗಾಜಲು ತೋಟಯ್ಯಗಾರು...........

ಚಿದರೆಮಠದ ಪೂಜ್ಯ ಶ್ರೀ ವೀರಭದ್ರಯ್ಯನವರು ದಿನಾಂಕ 13.12.1925ರ ಒಂದು ಶುಭ ಮುಂಜಾವಿನಂದು ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ವಿದ್ಯಾರ್ಥಿಗಳಾಗಿ ಪ್ರವೇಶ ಪಡೆದರು. ಆಗ ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು (ದ್ವಿತೀಯ) 82ನೆಯ ಪೀಠಾಧಿಪತಿಗಳಾಗಿ ಜ್ಞಾನ ಸಿಂಹಾಸನದ ಮೇಲೆ ವಿರಾಜಿಸಿಕೊಂಡಿದ್ದರು. ಅವರು ವಿದ್ಯಾಪಕ್ಷಪಾತಿಗಳು. ವಿದ್ಯಾವಂತರನ್ನು ಕಂಡರೆ ಅವರಿಗೆ ತುಂಬ ಪ್ರೀತಿ. ಅವರ ಕಾಲದಲ್ಲಿ ವಿದ್ವತ್ತಿನ ಪ್ರತಿರೂಪದಂತಿದ್ದ ಶ್ರೀ ವೀರಭದ್ರ ಜಗದ್ಗುರುಗಳು ಕಾಶೀ ಶ್ರೀಪೀಠವನ್ನು ಪ್ರವೇಶಿಸಿಸಿದುದು ಜ್ಞಾನಪೀಠದ ಅಲಂಕಾರವನ್ನು ಹೆಚ್ಚಿಸಿದಂತಾಯಿತು. ಕಾಶಿಯನ್ನು ಪ್ರವೇಶಿಸುತ್ತಲೇ ಕಾಶಿಯ ವಿದ್ವಾಂಸರು ಶ್ರೀ ವೀರಭದ್ರಯ್ಯನವರನ್ನು 'ವೀರಭದ್ರ ಶರ್ಮಾ' ಎಂದು ಸಂಬೋಧಿಸತೊಡಗಿದರು. ಚಿದರೆಮಠದ ವೀರಭದ್ರಯ್ಯನವರು 'ಶ್ರೀ ವೀರಭದ್ರ ಶರ್ಮ'ರಾಗಿ ನಾಮಾಂತರಗೊಂಡರು.

ಶ್ರೀ ವೀರಭದ್ರ ಶರ್ಮರು 'ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ'ದಲ್ಲಿ ಪ್ರವೇಶ ಪಡೆಯುವುದಕ್ಕೆ ಶಿಫಾರಸ್ಸು ಮಾಡಿ ಸಹಿಹಾಕಿದವರು ಶ್ರೀ ಗಾಜಲು ತೋಟಯ್ಯಗಾರು

ಅವರು. ಶ್ರೀ ಗಾಜಲು ತೋಟಯ್ಯಗಾರು ಅವರು ನಲಗೊಂಡಾದ ಪ್ರಮುಖ ವ್ಯಕ್ತಿಗಳು ಮತ್ತು ಗಾಜಿನ ವ್ಯಾಪಾರಿಗಳು. ಕಾಶೀ ಜ್ಞಾನಪೀಠದ ನಿತಾಂತ ಭಕ್ತರು ಹಾಗೂ ಅಭಿಮಾನಿಗಳಾದ ಅವರು ಹಸಿರು ನಿಶಾನೆಯನ್ನು ತೋರಿಸಿ ಶಿಫಾರಸ್ಸನ್ನು ಮಾಡಿದ್ದರಿಂದಾಗಿ ಪೂಜ್ಯರಿಗೆ ಶ್ರೀ ವಿಶ್ವಾರಾಧ್ಯ ಗುರುಕುಲದಲ್ಲಿ ಕೂಡಲೇ ಪ್ರವೇಶ ದೊರೆಯಿತು. ತೋಟಯ್ಯಗಾರು ಇವರನ್ನು ನಾವೆಲ್ಲ ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳಬೇಕು. ಏಕೆಂದರೆ ತೋಟಯ್ಯಗಾರು ಅವರು ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲಕ್ಕೆ ಬರೀ ಒಬ್ಬ ವಿದ್ಯಾರ್ಥಿಯನ್ನು ಶಿಪಾರಸು ಮಾಡಿ ಕಳುಹಿಸಿರಲಿಲ್ಲ. ಅವರು ಕಾಶೀ ಶ್ರೀ ಜಗದ್ಗುರು ಪೀಠಕ್ಕೆ ಓರ್ವ 'ಸತ್ವಪೂರ್ಣ' ಮತ್ತು 'ವಿದ್ವತ್ಪೂರ್ಣ' ಭಾವೀ ಜಗದ್ಗುರುಗಳನ್ನು ಕಳುಹಿಸಿಕೊಟ್ಟಿದ್ದರು.

ವಿಶ್ವಾರಾಧ್ಯರ ಮಾನಸ-ಸರೋವರದೊಳು......

ವಿಶ್ವಾರಾಧ್ಯ ಗುರುಕುಲದಲ್ಲಿ......

ಕಾಶೀ ಶ್ರೀಕ್ಷೇತ್ರಕ್ಕೆ ಬರುತ್ತಲೇ ಶ್ರೀ ವೀರಭದ್ರ ಶರ್ಮರ 'ಶೈಕ್ಷಣಿಕ ಜೈತ್ರಯಾತ್ರೆ'ಯು ಪ್ರಾರಂಭವಾಯಿತು. ಅಂದಿನ ಆ ಸಮಯದಲ್ಲಿ 'ಕಲಕತ್ತಾ ಪಂಡಿತ ಸಭೆ' C S A ಎಂಬ ಹೆಸರಿನಲ್ಲಿ ಪರೀಕ್ಷೆಗಳನ್ನು ನಡೆಯಿಸುತ್ತಿದ್ದ ಇಂದಿನ ಕಲಕತ್ತಾದ ಶ್ರೀ ವಂಗೀಯ ಸಂಸ್ಕೃತ ಪರಿಷತ್ತು ನಡೆಸುತ್ತಿರುವ 'ಆದ್ಯ, ಮಧ್ಯ ಮತ್ತು ತೀರ್ಥ' ಈ ಪರೀಕ್ಷೆಗಳು ಆಗ ತುಂಬ 'ಜನಪ್ರಿಯವಾಗಿದ್ದವು. ಕಲಕತ್ತಾ ಸಂಸ್ಕೃತ ಅಸೋಶಿಯೇಶನ್ನು ದೇಶದಾದ್ಯಂತ ಈ ಪರೀಕ್ಷೆಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿತ್ತು. ಪೂಜ್ಯ ವೀರಭದ್ರ ಶರ್ಮರು ಆ ಸಂಸ್ಥೆಯಲ್ಲಿ ತಮ್ಮ ಹೆಸರನ್ನು ದಾಖಲಿಸಿ ಸರ್ವಪ್ರಥಮದಲ್ಲಿ 'ವೇದತೀರ್ಥ' ಉಪಾಧಿಯನ್ನು ಪ್ರಾಪ್ತಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿ ಅಧ್ಯಯನನಿರತರಾದರು. ಕಾಶಿಯ ಪಂಡಿತವರೇಣ್ಯರಾದ ಶ್ರೀ ಯಾಗೇಶ್ ಪಾಠಕರವರು ಪೂಜ್ಯರ ಗುರುಗಳಾಗಿ ಅವರಿಗೆ ಮಾರ್ಗದರ್ಶನ ಮಾಡತೊಡಗಿದರು. 'ವೇದತೀರ್ಥ' ಪರೀಕ್ಷೆಯನ್ನು ಪಾಸು ಮಾಡುವುದು ಅಷ್ಟು ಸುಲಭವಲ್ಲ. ಅದು ಒಂದು ತೆರನಾದ 'ಗಜಪ್ರಸವ'ದಂತೆ!!.

ಶುರುವಾಯಿತೊಂದು ಶೈಕ್ಷಣಿಕ ಜೈತ್ರಯಾತ್ರೆ...........

ವಿದ್ವತ್ತಿನ ತೀರ್ಥಕ್ಷೇತ್ರ ಶ್ರೀ 'ವೀರಭದ್ರಶ್ರೀ'

'ಅತ್ಯತೀಯ' ವೀರಶೈವ 'ವೇದತೀರ್ಥ' !!

ಬಾಲ್ಯದಿಂದಲೂ ಅವರು 'ವಾದಮಯ' ಜಗತ್ತಿಗಿಂತ 'ವೇದಮಯ' ಜಗತ್ತನ್ನೇ ಹೆಚ್ಚು ಹೆಚ್ಚಾಗಿ ನೆಚ್ಚಿಕೊಂಡಿದ್ದರು. ಮನೆಯಲ್ಲಿನ 'ಪೈತೃಕ ಸಂಸ್ಕಾರ'ದ ಕಾರಣದಿಂದಾಗಿಯೂ ಅವರಲ್ಲಿ ವೇದಗಳ ವಿಷಯದಲ್ಲಿ ಅಪಾರ ಪ್ರೀತಿ-ವಾತ್ಸಲ್ಯಗಳು ತುಂಬಿಕೊಂಡಿದ್ದವು. ಅಹರ್ನಿಶಿ ವೇದಾಧ್ಯಯನವನ್ನು ಮಾಡಿದ ಪೂಜ್ಯರು 'ವೇದತೀರ್ಥ' ಉಪಾಧಿಯ 'ಆದ್ಯ', 'ಮಧ್ಯ'

ಪರೀಕ್ಷೆಗಳನ್ನು ಉತ್ತಮಾಂಕಗಳನ್ನು ಪಡೆಯುವುದರೊಂದಿಗೆ ಪಾಸು ಮಾಡಿದರು. ಕೊನೆಗೆ 1930ರಲ್ಲಿ 'ವೇದತೀರ್ಥ' ಸಂಸ್ಕೃತ 'ಉಪಾಧಿ' ಪರೀಕ್ಷೆಯನ್ನು ಪಾಸುಮಾಡುವ ಮೂಲಕ ವೀರಶೈವರಲ್ಲಿ 'ವೇದತೀರ್ಥ' ಪರೀಕ್ಷೆಯನ್ನು ಪಾಸುಮಾಡಿದ 'ದ್ವಿತೀಯ ವ್ಯಕ್ತಿ' ಎಂಬ ಗೌರವಕ್ಕೆ ಪಾತ್ರರಾದರು. ತನ್ಮೂಲಕ ಚೌಡದಾನಪುರದ ಪಂಡಿತ ಶ್ರೀ ವಿರೂಪಾಕ್ಷ ಒಡೆಯರ್‌ರವರ ಜೊತೆಗಿದ್ದ 'ಅದ್ವಿತೀಯ' ಪಟ್ಟವು ಕಂಪಿಸುವಂತೆ ಮಾಡಿದರು. ಪೂಜ್ಯ ವೀರಭದ್ರ ಶರ್ಮರ ನಂತರ ಆ ಪರೀಕ್ಷೆಯಲ್ಲಿ ಮತ್ತೊಬ್ಬರಾರೂ ತೇರ್ಗಡೆಯಾಗದ್ದರಿಂದ ಪೂಜ್ಯರು 'ಅತೃತೀಯ'ರಾಗಿ ಉಳಿದುಕೊಂಡಿದ್ದಾರೆ.

ಹರಿದುಬಂದಿತು ಪತ್ರಿಕೆಗಳ ಮೂಲಕ ಪ್ರಶಂಸೆಯ ಮಹಾಪೂರ.......

'ವೇದತೀರ್ಥ' ಪದವಿಯನ್ನು ಪಡೆದುಕೊಂಡು ವೀರಭದ್ರ ಶರ್ಮರನ್ನು ನಾಡಿಗೆ ನಾಡೇ ಅಭಿನಂದಿಸಿತು. ಕನ್ನಡ ಭಾಷೆಯ ಪ್ರತಿಷ್ಠಿತ ಪತ್ರಿಕೆಗಳಾದ ಮೈಸೂರಿನ 'ಮೈಸೂರು ಸ್ಟಾರ್' ಪತ್ರಿಕೆ (16.08.1930) ಮತ್ತು 'ಪಂಚಾಚಾರ್ಯ ಪ್ರಭಾ' ಪತ್ರಿಕೆ (04.09.1930), ತೆಲಗು ಭಾಷೆಯಲ್ಲಿನ ಗೋಲಕುಂಡದ 'ಗೋಲಕುಂಡ ಪತ್ರಿಕೆ' (18.06.1930), ಮಹಾರಾಷ್ಟ್ರದ ಬಾರ್ಶಿಯ 'ವೀರಪ್ರಭಾ' ಪತ್ರಿಕೆ (14.07.1930) ಮತ್ತು ಪುಣೆಯ 'ವೀರಶೈವ ಕೇಸರಿ' (19.07.1930) ನಾಡಿನ ಹತ್ತು ಹಲವಾರು ಪತ್ರಿಕೆಗಳು ಪೂಜ್ಯರನ್ನು ಅಭಿನಂದಿಸಿ 'ಅಭಿನಂದನಾ ಲೇಖನ'ಗಳನ್ನು ಬರೆದು.ಪೂಜ್ಯರನ್ನು ಗೌರವಿಸಿದವು.

ಶೈಕ್ಷಣಿಕ ಪ್ರಾತಿಪತ್ರದಲ್ಲಿ......

'ಕಾವ್ಯತೀರ್ಥ', 'ಸ್ಮೃತಿತೀರ್ಥ', 'ದರ್ಶನತೀರ್ಥ'

'ಸಾಹಿತ್ಯ ವಿಶಾರದ', 'ಧರ್ಮಾಚಾರ್ಯ'

1926ರಿಂದ 1935ರ ಈ ಹತ್ತು ವರುಷಗಳ ಅವಧಿಯಲ್ಲಿ ಶ್ರೀ ವೀರಭದ್ರ ಶರ್ಮರು 'ಕಾವ್ಯತೀರ್ಥ' (1931), 'ಸ್ಮೃತಿತೀರ್ಥ' (1934), 'ಸರ್ವದರ್ಶನ ತೀರ್ಥ'(1935) ಎಂಬ ಉತ್ತಮ ಗುಣಮಟ್ಟದ ಈ ಸಂಸ್ಕೃತ ಪರೀಕ್ಷೆಗಳನ್ನು ಉತ್ತಮಾಂಕಗಳೊಂದಿಗೆ ಪಾಸು ಮಾಡಿ ದಿನದಿನವೂ ವಿದ್ವತ್ತಿನ ಬೆಟ್ಟವಾಗಿ ಬೆಳೆಯತೊಡಗಿದರು. ಈ ಮಧ್ಯದಲ್ಲಿ ಅವರು 'ಮಥುರಾ ವ್ರಜ ಮಂಡಲ'ದ 'ಸಾಹಿತ್ಯ ವಿಶಾರದ' ಪರೀಕ್ಷೆಯನ್ನು ಮತ್ತು 'ಧರ್ಮಾಚಾರ್ಯ' ಪರೀಕ್ಷೆಯನ್ನು ಕೂಡ ಪಾಸು ಮಾಡಿದರು. 1926ರಿಂದ 1935ರ ಈ ಅವಧಿಯಲ್ಲಿ ಪೂಜ್ಯರು ಪ್ರತಿವರ್ಷವೂ ಒಂದಲ್ಲ ಇನ್ನೊಂದು, ಇನ್ನೊಂದಲ್ಲ ಮತ್ತೊಂದು ಪರೀಕ್ಷೆಯನ್ನು ಪಾಸುಮಾಡುತ್ತ ಸಾಮಾನ್ಯವಾಗಿ 'ವಿದ್ಯಾನಗರಿ' ಕಾಶಿ ಮತ್ತು ಕಲಕತ್ತಾದಲ್ಲಿ ಉಪಲಬ್ಧವಾಗುವ ಎಲ್ಲ 'ಪದ-

ಪದವಿ'ಗಳನ್ನು ಛಲ ಬಿಡದ ತ್ರಿವಿಕ್ರಮನಂತೆ ತಮ್ಮದಾಗಿಸಿಕೊಂಡರು. ಕಾಶಿಯ ಮೂರ್ಧನ್ಯ ವಿದ್ವಾಂಸರಾದ ಪಂಡಿತ ಶ್ರೀ ಯಾಗೇಶ್ವರ ಪಾಠಕ್, ಪಂಡಿತ ಶ್ರೀ ವಿದ್ಯಾಧರ ಶರ್ಮಾ, ಪಂಡಿತ ಶ್ರೀ ಶಿವದತ್ತ ಶಾಸ್ತ್ರಿ, ಪಂಡಿತ ಶ್ರೀ ಹರಿನಾಥ ಶಾಸ್ತ್ರಿ ಇವರೆಲ್ಲರುಗಳ ಬಳಿ ಇದ್ದು ಅವರ 'ಅಂತೇವಾಸಿ'ಗಳಾಗಿ ಗುರುತಿಸಿಕೊಂಡು ವೇದ, ಆಗಮ, ಶಾಸ್ತ್ರ ಪುರಾಣ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಜ್ಯೋತಿಷ್ಯ, ಮೀಮಾಂಸಾ ಇವೆಲ್ಲವುಗಳಲ್ಲಿ ಅಧಿಕೃತ ಪಾಂಡಿತ್ಯವನ್ನು ಪಡೆದುಕೊಂಡರು.

'ಅಧ್ಯಯನಮಯ' ಜೀವನವನ್ನೇ ಪೂಜ್ಯರು ತಮ್ಮ ಉಸಿರಾಗಿಸಿಕೊಂಡಿದ್ದರು. ಸಾರಸ್ವತ ಲೋಕದ 'ಅಖಂಡ ತಪಸ್ವಿ'ಗಳಾದ ಅವರು ಸದೃಢ ಸಂಕಲ್ಪಗಳ 'ಕಲ್ಪದ್ರುಮ'ದಂತಿದ್ದರು. ಪೂಜ್ಯರು ಸಾಧನೆಯನ್ನು ಬರೀ ತಮ್ಮ 'ಗುರಿ'ಯಾಗಿಸಿಕೊಳ್ಳದೆ ಅದನ್ನೇ 'ಗುರು'ವಾಗಿಸಿಕೊಂಡು ಕೆಲವೇ ಕೆಲವು ವರುಷಗಳಲ್ಲಿ ಸಾಧನೆಯ ಮರ-ಹೆಮ್ಮರವಾಗಿ ಬೆಳೆದು ನಿಂತರು. (ಅನುಬಂಧದಲ್ಲಿ ಅವರು ಬರೆದ ಪರೀಕ್ಷೆಗಳ Time-Table ನೋಡಿ)

ಕಾಶೀ ಸಂಸ್ಕೃತ ಸಾಹಿತ್ಯ ಸಮಾಜದಿಂದ 'ವಿದ್ಯಾರತ್ನ' ಸಮ್ಮಾನ ಕಾಶೀ ಜ್ಞಾನಪೀಠದಿಂದ 'ವಿದ್ಯಾನಿಧಿ' ಪ್ರಶಸ್ತಿ

ಕಾಶಿಯಲ್ಲಿನ ಕೆಲವೇ ಕೆಲವು ಪ್ರತಿಷ್ಠಿತ ಸಂಸ್ಕೃತ ವಿದ್ವತ್ಸಂಸ್ಥೆಗಳಲ್ಲಿ ಒಂದಾದ 'ಸಂಸ್ಕೃತ ಸಾಹಿತ್ಯ ಸಮಾಜ'ವು ತನ್ನ ದಶಮಾನೋತ್ಸವದ ಶುಭ ಸಂದರ್ಭದಲ್ಲಿ ದಿನಾಂಕ 2, ಮಾರ್ಚ್ 1935ರಂದು ಪಂಡಿತ ಶ್ರೀ ಮಹಾಮಹೋಪಾಧ್ಯಾಯ ಮುಕುಂದ ಝಾಬಕ್ಷಿ ಇವರ ಅಧ್ಯಕ್ಷತೆಯಲ್ಲಿ ಒಂದು ವರ್ಣಮಯ ಸಮಾರಂಭವನ್ನು ಏರ್ಪಡಿಸಿ 'ವರ್ಷದ ವಿದ್ವಾಂಸ' ಪ್ರಶಸ್ತಿಗೆ ಪಾತ್ರರಾದ ಪೂಜ್ಯ ಶ್ರೀ ವೀರಭದ್ರ ಶರ್ಮರಿಗೆ 'ವಿದ್ಯಾರತ್ನ' ಎಂಬ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು. ಅಷ್ಟೇ ಅಲ್ಲ, ಶ್ರೀ ಪಂಡಿತ ವೀರಭದ್ರ ಶರ್ಮರ ವಿದ್ವತ್ತನ್ನು ಮುಕ್ತಕಂಠದಿಂದ ಪ್ರಶಂಸಿಸಿತು.

ಕಾಶೀ ಜಗದ್ಗುರು ಪೀಠದ 83ನೆಯ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಭಗವತ್ಪಾದರು ತಮ್ಮ ಪರಮಪೂಜ್ಯ ಜ್ಞಾನಪೀಠದಿಂದ ಪೂಜ್ಯರಿಗೆ 'ವಿದ್ಯಾನಿಧಿ' ಎಂಬ ಪ್ರಶಸ್ತಿಯನ್ನು ದಯಪಾಲಿಸಿ ಆಶೀರ್ವದಿಸಿದರು.

ಪೂಜ್ಯರೊಂದು ಸಾಧನೆಯ ಪಠ್ಯಪುಸ್ತಕ......

ಶೈಕ್ಷಣಿಕ ಯಾತ್ರೆಯನ್ನು ಪೂರೈಸುತ್ತಿರುವ ಹಾಗೆಯೇ ಪೂಜ್ಯರತ್ತ ಪ್ರಶಸ್ತಿ ಮತ್ತು ಪ್ರಶಂಸೆಗಳ ಮಹಾಪೂರವೇ ಹರಿದು ಬಂತು. ವಿದ್ವದ್ವಲಯದ ಅಂದಿನ ಅತಿರಥ, ಮಹಾರಥರು ಮತ್ತು ಗಜ-ದಿಗ್ಗಜರ ತಲೆಗಳು ಕೂಡ ತಮ್ಮ ತಥಾಕಥಿತ ಘನತೆ-ಗಾಂಭೀರ್ಯಗಳನ್ನು ಕ್ಷಣಗಳೊಂದೆರಡು ಕ್ಷಣಗಳ ಕಾಲ ಪಕ್ಕಕ್ಕಿರಿಸಿ ಪೂಜ್ಯರ ವಿದ್ವತ್ಪೂರ್ಣ ವ್ಯಕ್ತಿತ್ವದ ಎದುರಿನಲ್ಲಿ ಗೌರವದಿಂದ ಬಾಗಿನಿಂತುಕೊಳ್ಳುತ್ತಿದ್ದವು. ಪೂಜ್ಯರಲ್ಲಿನ ವಿದ್ವತ್ತು ಮತ್ತು ಅವರಲ್ಲಿನ ಬದ್ಧತಾ

ಮನೋಭಾವ ಈ ಇವೆರಡು ಅಂದಿನ ಅವರ ಸಮಕಾಲೀನ ಜನಗಳ ಮನೆಮಾತಾಗಿದ್ದವು. ನಿಜಕ್ಕೂ ಪೂಜ್ಯರು ವಿದ್ವತ್ತಿನಲ್ಲಿ ವೀರರಾಗಿ ಮತ್ತು ಬದ್ಧತೆಯಲ್ಲಿ ಭದ್ರರಾಗಿ ಜನಮನವನ್ನು ನೇರವಾಗಿ ತಲುಪಿದರು ಎಂದು ಹೇಳಿದರೆ ಅತಿಶಯೋಕ್ತಿ ಏನಲ್ಲ.

ಜ್ಞಾನಪೀಠದ ಸನ್ನಿಧಾನದಲ್ಲೊಂದು ಗ್ರಂಥಾಲಯಕ್ಕೆ ಮುನ್ನುಡಿ.....

ಶ್ರೀ ವಿಶ್ವಾರಾಧ್ಯ ಗುರುಕುಲ ಛಾತ್ರ ಸಮಿತಿ ವಾಚನಾಲಯ
ಕಾಶೀ ಶ್ರೀ ಪಂಚಾಕ್ಷರ ಸನ್ನಿಧಾನದಿಂದ
'ಅಕ್ಷರಭಾಂಡಾರ'ಕ್ಕೆ ಅಕ್ಷಯ ಆಶೀರ್ವಾದ

ಕಾಶೀ ಜ್ಞಾನಪೀಠದಲ್ಲಿ ವಾಚನಾಲಯವಿರದಿದ್ದರೆ ಹೇಗೆ? ''ನೀರಿಗೆ ನೈದಿಲೆಯೇ ಶೃಂಗಾರ, ಸಮುದ್ರಕ್ಕೆ ತೆರೆಯೇ ಶೃಂಗಾರ' ಎಂಬಂತೆ ಜ್ಞಾನಪೀಠವು ಇನ್ನಷ್ಟು ಮತ್ತಷ್ಟು ಸ್ಫುರದ್ರೂಪಿಯಾಗಿ ಕಾಣಬೇಕೆಂದರೆ, ಸತ್ವಯುತವಾಗಬೇಕೆಂದರೆ ಮತ್ತು ಜ್ಞಾನಪೀಠದ ಹೆಸರು 'ಅನ್ವರ್ಥಕ'ಗೊಳ್ಳಬೇಕೆಂದರೆ ಜ್ಞಾನಪೀಠದ ಆವರಣದಲ್ಲೊಂದು ವಾಚನಾಲಯವಿರಲೇಬೇಕು'' ಎಂಬಿತ್ಯಾದಿ ಗ್ರಂಥಾಲಯದ ಕುರಿತಾಗಿರುವ ವಿಚಾರಗಳನ್ನು ಶ್ರೀಪೀಠದಲ್ಲಿ ಓದುತ್ತಿರುವ ತಮ್ಮ ವಿದ್ಯಾರ್ಥಿಮಿತ್ರರ ತಲೆಯಲ್ಲಿ ತುಂಬುತ್ತ ಬಂದ ವೀರಭದ್ರ ಶರ್ಮರು ಕೊನೆಗೊಂದು ದಿನ 'ಶ್ರೀ ಜಗದ್ಗುರು ದಾರುಕಾಚಾರ್ಯ ಜಯಂತಿ'ಯ ಶುಭ ಸಂದರ್ಭದಲ್ಲಿ ಶ್ರೀ ಜಗದ್ಗುರು ಶಿವಲಿಂಗ ಶಿವಾಚಾಯ ಮಹಾಸ್ವಾಮಿಗಳವರ ದಿವ್ಯ ಸನಿಧಾನದಲ್ಲಿ ನಡೆದ ಸಭೆಯಲ್ಲಿ ಅಧಿಕೃತವಾಗಿ ಗ್ರಂಥಾಲಯದ ವಿಷಯವನ್ನು ಪ್ರಸ್ತಾಪಿಸಿದರು. ಪೂಜ್ಯರು ಗ್ರಂಥಾಲಯದ ಅವಶ್ಯಕತೆಯ ಕುರಿತು ಒತ್ತುಕೊಟ್ಟು ಮಾತನಾಡಿದಾಗ ಅದು ಪರಿಣಾಮಕಾರಿಯಾಗಿ ಎಲ್ಲರನ್ನೂ ಸಂವೇದನೆಗೆ ಒಳಗುಮಾಡಿತು.

ಕಾಶೀ ಜ್ಞಾನಪೀಠದ ಶ್ರೀ ಶಿವಲಿಂಗ ಜಗದ್ಗುರುಗಳವರು ಆ ಕ್ಷಣದಲ್ಲಿಯೇ ಗ್ರಂಥಗಳನ್ನು ಕೊಳ್ಳುವುದಕ್ಕೆಂದು 100 ರೂ.ಗಳನ್ನು ತೆಗೆದುಕೊಟ್ಟು ವಿದ್ಯಾರ್ಥಿಗಳನ್ನು ಆಶೀರ್ವದಿಸಿದರು. ಪೀಠದಲ್ಲಿಯೇ ವಾಸ್ತವ್ಯ ಮಾಡಿಕೊಂಡಿದ್ದ ವಯೋವೃದ್ಧರಾದ ಪಂಡಿತ ಶ್ರೀ ಭಾಲಾಕ್ಷ ಶಾಸ್ತ್ರಿಗಳು ತಮ್ಮ ಬಳಿಯಲ್ಲಿದ್ದ 'ವೀರಶೈವಾಚಾರ ಕೌಸ್ತುಭ' ಮತ್ತು 'ಉದ್ಭಟ ಭಾಷ್ಯ' ಎಂಬ ಅಪರೂಪದ ಎರಡು ಗ್ರಂಥಗಳನ್ನು ಗ್ರಂಥಾಲಯಕ್ಕೆ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಹರಸಿದರು. ಈ ಸಂದರ್ಭದಲ್ಲಿ ಛಾತ್ರ ಸಮಿತಿಯು ಕೂಡ ತನ್ನದೇ ಆದ ಒಂದು ಹಮ್ಮಣಿಯನ್ನು ಅರ್ಪಿಸಿತು. ಆಗ ನೋಡಿ, ಉದಯವಾಯಿತು ಜ್ಞಾನಪೀಠದ ಎದೆಯಂಗಳದೊಳೊಂದು ಛಾತ್ರ ಸಮಿತಿ ವಾಚನಾಲಯ!!

[ಈ ವಿಷಯದ ಕುರಿತಾದ ವರದಿಯು ಮೈಸೂರಿನ 'ಪಂಚಾಚಾರ್ಯ ಪ್ರಭಾ' ಪತ್ರಿಕೆಯಲ್ಲಿ ದಿನಾಂಕ 20.04.1948ರಂದು ಪ್ರಕಟವಾಗಿರುವುದನ್ನು ಗಮನಿಸಬಹುದು.]

ಕಾಶೀ ವೀರಶೈವ ವಿದ್ವತ್ ಸಂಘ 1934

ಪೂಜ್ಯರು ಕಾಶೀ ಶ್ರೀಪೀಠದಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನೆಲ್ಲ ಸಂಘಟಿಸಿ ಸಂಘವೊಂದನ್ನು ಹುಟ್ಟುಹಾಕಿದರು. ಅದಕ್ಕೆ 'ಕಾಶೀ ವೀರಶೈವ ವಿದ್ವತ್ ಸಂಘ' ಎಂದು ನಾಮಕರಣ ಮಾಡಲಾಯಿತು. ನಂತರದ ಕಾಲದಲ್ಲಿ ಶ್ರೀಶೈಲ ಪೀಠದ ಜಗದ್ಗುರುಗಳಾದ ಶ್ರೀ ವಾಗೀಶ ಪಂಡಿತಾರಾಧ್ಯರು ಸಂಸ್ಥೆಯ ಪ್ರಪ್ರಥಮ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಿದರು. ಆ ಕಾಲದಲ್ಲಿರುವ ಬಹುಪಾಲು ವಿದ್ಯಾರ್ಥಿಗಳು ವಿದ್ವಾಂಸರಾಗಿದ್ದರು. ಅವರೆಲ್ಲ ಸೇರಿ ಆಗಾಗ್ಗೆ ಶ್ರೀಪೀಠದ ಆವರಣದಲ್ಲಿ ವ್ಯಾಖ್ಯೆ, ವ್ಯಾಖ್ಯಾನಗಳನ್ನು ಏರ್ಪಡಿಸುತ್ತಿದ್ದರು. ಪ್ರತಿ ಪಕ್ಷಕ್ಕೊಮ್ಮೆ ಪಾಕ್ಷಿಕ ಸಭೆ ನಡೆಯುತ್ತಿತ್ತು . ಅವರೆಲ್ಲ ಪರಸ್ಪರ ವಿದ್ವತ್ಪೂರ್ಣ ಚರ್ಚೆಗಳಲ್ಲಿ ಭಾಗಿಗಳಾಗಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಕಾಶೀ ವೀರಶೈವ ವಿದ್ಯಾರ್ಥಿ ಸಂಘ ಕಾಶೀ ಜ್ಞಾನಪೀಠದ ಗೌರವವನ್ನು ಹೆಚ್ಚಿಸಿತು. ಪೂಜ್ಯರು ಅದರ ರೂವಾರಿಗಳಾಗಿ ನಿಂತು ಆ ವಿದ್ವತ್ ಸಂಸ್ಥೆಯ ಕಾರ್ಯಕಲಾಪಗಳನ್ನು ರೂಪಿಸುತ್ತಿದ್ದರು.

ವೀರಭದ್ರ ಶರ್ಮರ ಹಾಗೂ ವಾಗೀಶರ ಸಾಂಗತ್ಯ

ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯರು ಶ್ರೀ ವಿಶ್ವಾರಾಧ್ಯ ಗುರುಕುಲದಲ್ಲಿ ವಿದ್ಯಾರ್ಥಿಗಳಾಗಿ ಅಧ್ಯಯನ ಮಾಡುತ್ತಿದ್ದರು. ಅದೇ ಸಮಯದಲ್ಲಿ ಶ್ರೀ ವೀರಭದ್ರ ಶರ್ಮರು ಕೂಡ ಗುರುಕುಲವನ್ನು ಪ್ರವೇಶಿಸಿದರು. ಪೂಜ್ಯರೀರ್ವರೂ 'ಸಮಾನಶೀಲ'ರು ಮತ್ತು 'ಸಮಾನ ಮನಸ್ಕ'ರಾಗಿದ್ದರಿಂದ ಅವರೀರ್ವರಲ್ಲಿದ್ದ ಔಪಚಾರಿಕ ಸ್ನೇಹವು ಬಹುಬೇಗನೇ ಆತ್ಮೀಯ ಸ್ನೇಹವಾಗಿ ಮಾರ್ಪಟ್ಟಿತು.

ಕಾಶೀ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರು ಲಿಂಗೈಕ್ಯರಾದ ನಂತರ 1932ರಲ್ಲಿ ನಡೆದ ಶ್ರೀ ಪಂಚಾಕ್ಷರ ಶಿವಾಚಾರ್ಯರ 'ಶ್ರೀ ಕಾಶೀ ಜಗದ್ಗುರು ಪೀಠಾರೋಹಣ' ಕಾರ್ಯಕ್ರಮದಲ್ಲಿ ವಾಗೀಶ ಪಂಡಿತಾರಾಧ್ಯರು ಮತ್ತು ಚಿದರೆಮಠದ ಶ್ರೀ ವೀರಭದ್ರ ಶರ್ಮರು ವೈದಿಕತ್ವದ ಧುರೀಣತ್ವವನ್ನು ಸಾಂಗೋಪಾಂಗವಾಗಿ ಆ ಕಾರ್ಯವನ್ನು ನಿರ್ವಹಿಸಿದರು.

ಪೂಜ್ಯರೀರ್ವರೂ 'ಕಾವ್ಯತೀರ್ಥ' ಪರೀಕ್ಷೆಯಲ್ಲಿ ಸಹಾಧ್ಯಾಯಿಗಳಾಗಿದ್ದರು. ವೀರಭದ್ರ ಶಾಸ್ತ್ರಿಗಳು ಹಾಗೂ ವಾಗೀಶ ಪಂಡಿತಾರಾಧ್ಯರು ಈರ್ವರೂ ಸೇರಿ ಕಾಶೀ ಶ್ರೀ ವಿಶ್ವಾರಾಧ್ಯ ಗುರುಕುಲದ ಸ್ಥಳದಲ್ಲಿ ಕಾಶೀ ವೀರಶೈವ ವಿದ್ವತ್ ಸಂಘವನ್ನು ಕಟ್ಟಿ ಅದನ್ನು ಸಮುನ್ನತಿಯತ್ತ ಕೊಂಡೊಯ್ದರು. ಇನ್ನೂ ಒಂದು ವಿಶೇಷ ಸಂಗತಿ ಏನೆಂದರೆ ಈರ್ವರೂ ಸೇರಿ ವೀರಶೈವ ಧರ್ಮ ಹಾಗೂ ಸಿದ್ಧಾಂತದ ಪ್ರಚಾರಕ್ಕೆ ಕಾಶ್ಮೀರಕ್ಕೆ ಹೋಗಬೇಕೆಂದು ನಿಶ್ಚಯಿಸಿದ್ದರು. ಆದರೆ ಆ ಕಾರ್ಯಕ್ಕೆ ದೈವವು ಅನುಕೂಲಸಿಂಧುವಾಗಿ ಪ್ರತಿಕ್ರಿಯೆ ನೀಡಲಿಲ್ಲ.

ಉತ್ತರ ಹಿಂದೂಸ್ಥಾನದಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಕಾಶಿಯಲ್ಲಿ ಐದುನೂರು ಜನ ಕನ್ನಡಿಗರು ಒಂದು ಗುಂಪು ಕಟ್ಟಿಕೊಂಡು ಉಪ್ಪಿನ ಸತ್ಯಾಗ್ರಹವನ್ನು ಮಾಡಿದರು. ಕಾಶೀ ವಿದ್ಯಾಪೀಠದ ಹತ್ತಿರ ಹೊಲದವೊಂದರಲ್ಲಿ ಉಪ್ಪನ್ನು ತಯ್ಯಾರಿಸಲು ಶ್ರೀ ವಾಗೀಶರು, ಚಿ. ಮ. ಶ್ರೀ ವೀರಭದ್ರ ಶಾಸ್ತ್ರಿಗಳು, ಭಾನಾಪುರ ಮಠದ ಪಂ. ಶ್ರೀ ನೀಲಕಂಠ ಶಾಸ್ತ್ರಿಗಳು, ಸವದತ್ತಿ ಬೆಟ್ಟಸೂರಮಠದ ಶ್ರೀ ನಂದಿಕೇಶ್ವರ ಸ್ವಾಮಿಗಳು, ಖಾನಾಪುರಮಠದ ಪಂ. ಶ್ರೀ ಕಾಶೀನಾಥ ಶಾಸ್ತ್ರಿಗಳು ಸೇರಿದರು. ರಾತ್ರಿಯಲ್ಲೆಲ್ಲ ಉಪ್ಪು ತಯ್ಯಾರಿಸಿದ್ದಾಯಿತು. ಅದಕ್ಕೆ ಗಾಂಧೀ ಉಪ್ಪು, ನೆಹರೂ ಉಪ್ಪು, ಮಾಲವೀಯ ಉಪ್ಪು, ಸರೋಜಿನಿ ಉಪ್ಪು ಎಂದು ಹೆಸರಿಡಲಾಯಿತು. ಆ ಉಪ್ಪು ತೊಲೆಯೊಂದಕ್ಕೆ ನೂರು ರೂಪಾಯಿ ಧಾರಣೆಯಂತೆ ಮಾರಾಟವಾಯಿತು. ಹೀಗೆ ಸಂಗ್ರಹವಾದ 1200 ರೂ.ಗಳನ್ನು ಕಾಂಗ್ರೆಸ್ಸಿಗೆ ಕೊಡಲಾಯಿತು.

ಪೋಲಿಸ್ ಪಡೆಯು ಸತ್ಯಾಗ್ರಹಿಗಳನ್ನು ಬಂಧಿಸಬೇಕೆಂದು ಬಂದಾಗ ಪಂಡಿತ ಮದನಮೋಹನ್ ಮಾಲವೀಯಜಿಯವರು ಮುಂದೆ ಬಂದು ತಾವೇ ಸತ್ಯಾಗ್ರಹಿಗಳ ಮುಂದಾಳಾಗಿದ್ದರಿಂದ ತಮ್ಮನ್ನೇ ಬಂಧಿಸಬೇಕೆಂದು ಹೇಳಿ ಉಳಿದೆಲ್ಲ ಸತ್ಯಾಗ್ರಹಿಗಳನ್ನು ಬಂಧಮುಕ್ತಗೊಳಿಸಿದರು.

ಶ್ರೀ ವೀರಭದ್ರ ಶರ್ಮರ ವಾಗೀಶರ ಸಹಜ ಮತ್ತು ಸೌಜನ್ಯಪೂರ್ಣ ಸ್ವಭಾವವನ್ನು ವರ್ಣಿಸುತ್ತ ಅವರಿಗೆ ತಮ್ಮ ಗೌರವಪೂರ್ಣ ನಮನಗಳನ್ನು ತಿಳಿಸಿದ್ದಾರೆ.

ವಾಗೀಶದೇವೋಽಪಿ ವದಾನ್ಯನಾಥಃ ಪ್ರಿಯಂವದಃ ಶತ್ರು ಸಮಕ್ಷಮೇಽಪಿ।

ವಕ್ತಾ ಮಹಾನ್ ಶತ್ರುಸಭಾಂಗಣೇಽಪಿ ಶ್ರೀ ವೀರಭದ್ರಃ ಕುರುತೇ ಪ್ರಣಾಮಮ್॥

'ಹಿಂದೂಸ್ಥಾನ ಕಾ ಧರ್ಮೇತಿಹಾಸ'ಎಂಬ ಗ್ರಂಥವೊಂದನ್ನು ಕಾಶೀ ವಿಶ್ವವಿದ್ಯಾಲಯವು ಪ್ರಕಟಿಸಿತು. ಅದರಲ್ಲಿ ಕೆಲವರು ವೀರಶೈವರ ಕುರಿತು ಅವಹೇಳನಾಸ್ಪದವಾಗಿ ಬರೆದದ್ದನ್ನು ವೀರಭದ್ರ ಶರ್ಮರು ಮತ್ತು ವಾಗೀಶರು ಪಂಡಿತ ಮದನಮೋಹನ ಮಾಲವೀಯಜಿಯವರಿಗೆ ಭೇಟಿಯಾಗಿ ಅದರಿಂದ ವೀರಶೈವರಿಗಾದ ನೋವನ್ನು ಅವರ ಗಮನಕ್ಕೆ ತಂದರು. ಪಂಡಿತ ಮಾಳವೀಯರವರು ಗ್ರಂಥಕರ್ತನನ್ನು ಕರೆದು ಅವನನ್ನು ಚೆನ್ನಾಗಿ ತೆಗಳಿ ಆತ ಕ್ಷಮೆಬೇಡುವಂತೆ ಮಾಡಿದ್ದಷ್ಟೇ ಅಲ್ಲ, ಆ ಸಂಬಂಧವಾದ ವಿಷಯವನ್ನು ತೆಗೆದುಹಾಕುವಂತೆ ಹೇಳಿದರು.

ಶ್ರೀ ವಾಗೀಶ ಪಂಡಿತಾರಾಧ್ಯರು 'ಶ್ರೀಶೈಲ ಜಗದ್ಗುರು ಪೀಠ'ವನ್ನು ತಾ॥ 07.07.1940 ರಂದು ಆರೋಹಣ ಮಾಡಿದರು. ಅವರ ಪೀಠಾರೋಹಣದ ವೈದಿಕ ಕಾರ್ಯಕ್ರಮದಲ್ಲಿ ಶ್ರೀ ವೀರಭದ್ರ ಶರ್ಮರು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಸ್ನೇಹ-ಪ್ರೀತಿಗಳನ್ನು ದಾಖಲಿಸಿದರು.

ಪರಳಿಯಲ್ಲಿ ಮಹಾರುದ್ರಾಭಿಷೇಕ 1930 'ಮೇ' ನಲ್ಲಿ ವೈಶಾಖ ಶುದ್ಧ ಪೌರ್ಣಿಮೆ

1930ನೇ ಇಸ್ವಿಯಲ್ಲಿ ಪರಳಿ ಶ್ರೀಕ್ಷೇತ್ರದಲ್ಲಿ ದ್ವಿತೀಯ ಮಹಾರುದ್ರಾಭಿಷೇಕ ಕಾರ್ಯಕ್ರಮವು ಅತ್ಯಂತ ಅದ್ದೂರಿಯಿಂದ ನೆರವೇರಿತು. ಇದೇ ಸಂದರ್ಭದಲ್ಲಿ ಶ್ರೀಕ್ಷೇತ್ರದಲ್ಲಿ ಕಾಶೀ ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವವು ಕೂಡ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಪರಳಿಯಲ್ಲಿ ಕಾಶೀ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಪರಮಪೂಜ್ಯರ ದಿವ್ಯ ಸನ್ನಿಧಾನದಲ್ಲಿ ಮಹಾರುದ್ರಾಭಿಷೇಕ ಪ್ರಾಯೋಜಕರು : ವೀರಶೈವ ಮಹಾರುದ್ರಾಭಿಷೇಕ ಕಮಿಟಿ, ಪರಳಿ ವೈದಿಕ ನೇತೃತ್ವ : ಪಂಡಿತ ಸ್ವಾಮಿ ವಿರುಪಾಕ್ಷ ಒಡೆಯರ್‌ರವರು ಚಿದರೆಮಠದ ಶ್ರೀ ವೀರಭದ್ರ ಶರ್ಮರವರು

ಅಕಲಂಕ ಪಾಂಡಿತ್ಯದ ಅದ್ವಿತೀಯ ಭಾಂಡಾರ........

ಸಾಹಿತ್ಯ ವಿಶಾರದ, ಲಿಪಿವಿಶಾರದ, ಬಹುಭಾಷಾವಿಶಾರದ...... ಧರ್ಮಾಚಾರ್ಯ.......

1935ರಿಂದ 1944ರವರೆಗಿನ ಈ ಒಂದು ದಶಕದ ಅವಧಿಯಲ್ಲಿ ಪೂಜ್ಯರ 'ಬಹುಮುಖಿ ವ್ಯಕ್ತಿತ್ವ'ಯು ಇಡಿಯಾಗಿ ಬೆಳಕಿಗೆ ಬಂತು. ಅವರು ಕರ್ನಾಟಕ, ಆಂಧ್ರ ಮಹಾರಾಷ್ಟ್ರದ ಜನಗಳಿಗೆಲ್ಲ ಚಿರಪರಿಚಿತರಾದರು. ಅದರಲ್ಲೂ ಅವರು ವಿದ್ವದ್ವಲಯಕ್ಕೆ ಇನ್ನೂ ಹತ್ತಿರದಲ್ಲಿದ್ದರು. ಈ ಅವಧಿಯಲ್ಲಿ ಪೂಜ್ಯರ ಸಾರಸ್ವತ ಸೇವೆ ಮತ್ತು ಸಾಮಾಜಿಕ ಸೇವೆಗಳು ನಿರಂತರವಾಗಿ ಸಾಗಿಕೊಂಡಿದ್ದವು. ಅವರ ವಿಧಾಯಕ ಮತ್ತು ರಚನಾತ್ಮಕ ಕಾರ್ಯಕ್ರಮಗಳು ಜನರ ಗಮನವನ್ನು ಸೆಳೆದವು.

ಪುಸ್ತಕ ಪ್ರೇಮಿ ಮತ್ತು ಸ್ವಾಧ್ಯಾಯ ನಿಧಿ

ಪೂಜ್ಯರ 'ಪುಸ್ತಕ-ಪ್ರೇಮ'ವಂತೂ ಅಪರಿಮಿತವಾದುದು. ಅವರು ತಮ್ಮ ಅಧ್ಯಯನ ಕಾಲದಲ್ಲಿಯೇ ಒಂದು ಗ್ರಂಥಾಲಯಕ್ಕಾಗುವಷ್ಟು ಪುಸ್ತಕಗಳನ್ನು ಸಂಗ್ರಹಿಸಿದ್ದರು. ಅವರಲ್ಲಿ ಒಂದು ಗ್ರಂಥಾಲಯಕ್ಕೆ ಬೇಕಾಗುವಷ್ಟು ಪಠ್ಯ ಸರಕನ್ನು ಒದಗಿಸಿಕೊಡುವಷ್ಟು ಬಹುದೊಡ್ಡ ಸಂಗ್ರಹ ಪುಸ್ತಕ ಸಂಗ್ರಹವಿತ್ತು. ಅವರು ಬರೀ ಪುಸ್ತಕಗಳನ್ನು ಸಂಗ್ರಹಿಸಿಡುವುದಷ್ಟೇ ಅಲ್ಲ,

ಪ್ರತಿಯೊಂದು ಗ್ರಂಥವನ್ನು ಆಮೂಲಾಗ್ರವಾಗಿ ಪುಟ ಪುಟವನ್ನು ಕೂಡ ಬಿಡದ ಹಾಗೆ ಓದಿಡುತ್ತಿದ್ದರು. ಅವರು ಪುಸ್ತಕಗಳನ್ನು ಓದಿದ ಕುರುಹಾಗಿ ಅವರು ಪುಸ್ತಕಗಳಲ್ಲಿ ಅಲ್ಲಲ್ಲಿ ಪೆನ್ಸಿಲ್ಲಿನಿಂದ 'ಗುರುತು'(ಮಾರ್ಕ್)ಮಾಡಿರುವುದನ್ನು ಈಗಲೂ ಕೂಡ ನಾವು ನೋಡಬಹುದಾಗಿದೆ. ಅವರು ಕೊಂಡುತಂದ ಪುಸ್ತಕಗಳು ಬರೀ ಅವರ ಕೋಣೆಯ ಸೌಂದರ್ಯವರ್ಧಕ ಸರಕುಗಳಾಗಿ ಅಥವಾ ಪ್ರದರ್ಶನಾ ಸಾಮಗ್ರಿಗಳಾಗಿ ಇರದೆ ಅವು ಅವರ ಅಧ್ಯಯನಕ್ಕೆ 'ವಸ್ತುನಿಷ್ಠೆ'ಗೆ ಸಾಕ್ಷಿಯಾಗಿದ್ದವು.

ಪೂಜ್ಯರಲ್ಲಿ ವೈವಿಧ್ಯಮಯ ಗ್ರಂಥಗಳ ಬಹುದೊಡ್ಡ ಬಾಂಢಾರವೇ ಇತ್ತು. ಪುಸ್ತಕಗಳ ಅವರ ಅಪ್ರತಿಹತ ಪ್ರೇಮಕ್ಕೆ ಒಂದು ಉದಾಹಣೆಯನ್ನು ಕೊಡುವುದಾದರೆ ಅವರು ತಾವಿದ್ದಲ್ಲಿಗೇ ತಮ್ಮ ಪುಸ್ತಕ ಭಂಡಾರವನ್ನು ಮತ್ತು ತಾಡೋಲೆಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದರು. 'ತೇನ ವಿನಾ ತೃಣಮಪಿ ನ ಚಲತಿ' ಎಂಬ ಹಾಗೆ ಅವರು 'ಪುಸ್ತಕೇನ ವಿನಾ ನ ಜೀವನಮ್' ಎಂಬ ಸಿದ್ಧಾಂತವನ್ನು ರೂಢಿಸಿಕೊಂಡಿದ್ದರು. ಈ ಕಾರಣದಿಂದಾಗಿಯೇ ಅವರ ಸಮಗ್ರ 'ಪುಸ್ತಕ-ಸಂಪದ'ವು ಕಾಶಿಯಿಂದ ಸಿಕಂದರಾಬಾದ್‌ಗೆ, ಸಿಕಂದರಾಬಾದ್‌ನಿಂದ ಮತ್ತೆ ಕಾಶಿಗೆ ಹೀಗೆ ಪ್ರಯಾಣಮಾಡಬೇಕಾಗಿ ಬಂತು. ಎಲ್ಲರೂ ಪುಸ್ತಕಗಳ ಜಾತ್ರೆ ಮಾಡಿದರೆ ಪೂಜ್ಯರು ಪುಸ್ತಕಗಳು 'ಅಲ್ಲಿಂದ ಇಲ್ಲಿಗೆ' ಮತ್ತೆ 'ಇಲ್ಲಿಂದ ಅಲ್ಲಿಗೆ' ಯಾತ್ರೆ ಮಾಡುವಂತೆ ಮಾಡಿದರು. ಪೂಜ್ಯರು ಅನನ್ಯ ಪುಸ್ತಕ-ಪ್ರೇಮಿಗಳು. ಪುಸ್ತಕವೇ ಪ್ರಾಣ, ಪುಸ್ತಕವೇ ಬದುಕು ಎಂಬುವುದೇ ಅವರ ಬದುಕಿನ ಮಹಾಮಂತ್ರವಾಗಿತ್ತು.

ಕೊನೆಗೊಂದು ದಿನ ಆ ಎಲ್ಲ ಪುಸ್ತಕ ಭಂಡಾರ ಮತ್ತು 'ಸಾಹಿತ್ಯ ಸಂಗ್ರಹ' ಅದಕ್ಕಾಗಿಯೇ ಕಾಶೀ ಜಂಗಮವಾಡಿಮಠದ ಆವರಣದಲ್ಲಿ ನಿರ್ಮಿಸಲಾದ ಪೂಜ್ಯರ ಬಹುದಿನಗಳ ಕನಸಾದ 'ಜ್ಞಾನಮಂದಿರ'ದಲ್ಲಿ ಪ್ರತಿಷ್ಠಾಪನಗೊಂಡಿತು.

ಸಾರಸ್ವತ ಸಹ್ಯಾದ್ರಿ, ಯಾದಗಿರಿ ಸಂಸ್ಕೃತ ಕಾಲೇಜಿನ ಪ್ರಾಚಾರ್ಯರಾಗಿ

ಶ್ರೀ ವೀರಭದ್ರ ಶರ್ಮಾರವರು ಸುದೀರ್ಘ ಹತ್ತು ವರುಷಗಳವರೆಗೆ ಕಾಶಿಯಲ್ಲಿ ಇದ್ದು ಪ್ರತಿಭೆ ಹಾಗೂ ಪಾಂಡಿತ್ಯದ ಬಹುದೊಡ್ಡ ಮೊತ್ತವಾಗಿ ಬೆಳೆದರು. ಅವರ 'ಕೀರ್ತಿ-ಪರಾಗ' ಎಲ್ಲೆಡೆಗಳಲ್ಲೂ ವಿಸ್ತರಿಸಿತು. 1935ರಲ್ಲಿ ಗುಲಬರ್ಗಾ ಜಿಲ್ಲೆಯ ಯಾದಗಿರಿ ಸಂಸ್ಕೃತ ಕಾಲೇಜಿನ ಆಡಳಿತ ಮಂಡಳಿಯು ಪೂಜ್ಯರನ್ನು ಆ ಕಾಲೇಜಿಗೆ ಪ್ರಾಚಾರ್ಯರಾಗಿ ಬರಬೇಕೆಂದು ನಮ್ರವಾಗಿ ವಿನಂತಿಸಿಕೊಂಡಿತು. ಪೂಜ್ಯರು ಆ ಸಂಸ್ಥೆಯ ಪ್ರಾರ್ಥನೆಯನ್ನು ಮನ್ನಿಸಿ 'ಸಾರಸ್ವತ ಸೇವೆ'ಯನ್ನು ಅಂಗೀಕರಿಸಿದರು. ಪ್ರಾಚಾರ್ಯ ಪದವಿಯನ್ನು ಅಲಂಕರಿಸುತ್ತಿರುವ ಹಾಗೆಯೇ

ಶ್ರೀ ವೀರಭದ್ರ ಶರ್ಮರು 'ಪಂಡಿತ ವೀರಭದ್ರ ಶಾಸ್ತ್ರಿ'ಗಳಾಗಿ ಗುರುತಿಸಲ್ಪಟ್ಟರು. ಪೂಜ್ಯರು ಕಾಲೇಜನ್ನು ಶಿಸ್ತುಬದ್ಧಗೊಳಿಸಲು ಹಾಗೂ 'ಮಾದರಿ'ಯಾಗಿರಿಸಲು ಸಾಕಷ್ಟು ಪ್ರಯತ್ನಿಸಿದರು. ಆದರೆ ಅಲ್ಲಿನ ವಾತಾವರಣ ಅಷ್ಟೊಂದು ಹಿತಕರವಾಗಿರಲಿಲ್ಲ. ಸಂಸ್ಥೆಯಲ್ಲಿನ ಉಸಿರುಕಟ್ಟುವ ವಾತಾವರಣದಿಂದಾಗಿ ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳಿಗೆ ಬಹುಕಾಲದವರೆಗೆ ಅಲ್ಲಿ ಸೇವಾನಿರತರಾಗಿ ನಿಲ್ಲುವುದು ಸಾಧ್ಯವಾಗಲಿಲ್ಲ. ಆ ಸಂಸ್ಥೆಯ ಆಂತರಿಕ ಕಲಹಗಳು ಅವರ ಚಿತ್ತಸ್ವಾಸ್ಥ್ಯವನ್ನು ಕದಡತೊಡಗಿದವು. ಆದ್ದರಿಂದ ಪೂಜ್ಯರು ಪ್ರಾಚಾರ್ಯ ಪದವಿಗೆ ರಾಜೀನಾಮೆಯನ್ನು ಕೊಟ್ಟು ಅಲ್ಲಿಂದ ಹೊರನಡೆದು ಬಂದರು.

ಸಿಕಂದರಾಬಾದ್‌ನಲ್ಲಿ ವೀರಶೈವ ಗುರುಕುಲ.......
ನಾಗಪ್ಪ ದಂಪತಿಗಳ ನಿಷ್ಕಾಮ ದಾನ

ಪೂಜ್ಯರು ತಮ್ಮದೇ ಆದ ಒಂದು 'ಗುರುಕುಲ'ವನ್ನು ಸ್ಥಾಪಿಸಬೇಕೆಂದು ಸಂಕಲ್ಪಿಸಿದರು. ಶಾಂತ-ಪ್ರಶಾಂತವಾದ ವಾತಾವರಣದಲ್ಲಿ ಗುರುಕುಲವನ್ನು ಸ್ಥಾಪಿಸಿ ತಮ್ಮ ಅಕ್ಕ-ಪಕ್ಕದಲ್ಲಿಯೇ ವಿದ್ಯಾರ್ಥಿಗಳನ್ನು ಇರಿಸಿಕೊಂಡು ಅವರಿಗೆ ವಿದ್ಯಾದಾನ ಮಾಡಬೇಕೆಂತಲೂ ಮತ್ತು ತನ್ಮೂಲಕ ಭಾರತೀಯ ಸಂಸ್ಕೃತಿ ಹಾಗೂ ಸಭ್ಯತೆಗಳನ್ನು ಪಸರಿಸಬೇಕೆಂದು ತೀರ್ಮಾನಿಸಿದರು. ಪೂಜ್ಯರ ಪರಮ ಪವಿತ್ರ ಸಂಕಲ್ಪಕ್ಕೆ ಸ್ಪಂದಿಸಿದ ಸಿಕಂದರಾಬಾದಿನ ನಾಗಯ್ಯ ಮಠದ ಎಂಬ ಭಕ್ತರು ಆ ಕಾಲದಲ್ಲಿಯೇ ಸುಮಾರು 21 ಸಹಸ್ರ ರೂಪಾಯಿ ಬೆಲೆ ಬಾಳುವ ತಮ್ಮ ಮನೆಯನ್ನು ಪಂಡಿತ ವೀರಭದ್ರ ಶಾಸ್ತ್ರಿಗಳಿಗೆ ದಾನವಾಗಿ ನೀಡಲು ಮುಂದೆ ಬಂದರು. ಆ ದಂಪತಿಗಳ ದಾನ ನಿಜಕ್ಕೂ ಅಭಿನಂದನಿಯ. ಈ ದಾನದಿಂದಾಗಿ ಪೂಜ. ವೀರಭದ್ರ ಶಾಸ್ತ್ರಿಗಳ ಗುರುಕುಲ ಸ್ಥಾಪನೆಯ ಸತ್ಸಂಕಲ್ಪಕ್ಕೆ ಸಾವಿರ ಸಾವಿರ ಆನೆಗಳ ಬಲ ಬಂದಂತಾಯಿತು. ಅವರು 1936ರ ಸೆಪ್ಟೆಂಬರ್ ತಿಂಗಳಲ್ಲಿ ಸಿಕಂದರಾಬಾದ್‌ನಲ್ಲಿ 'ವೀರಶೈವ ಗುರುಕುಲ'ವನ್ನು ಸ್ಥಾಪಿಸಿ ಅದರ ಉತ್ತರೋತ್ತರ ಪ್ರಗತಿಗೆ 'ಅಥಶ್ರೀ' ಹೇಳಿದರು. ತಮ್ಮದೇ ಆದ ವಿಧಾನದಲ್ಲಿ ನೀತಿ-ಸಂಹಿತೆಯನ್ನು ರೂಪಿಸಿ ಯೋಗ್ಯ ವಿದ್ಯಾರ್ಥಿಗಳಿಗೆ ಅವಕಾಶಕೊಟ್ಟು ಅವರಲ್ಲಿ ಮೌಲ್ಯ ಮತ್ತು ಆದರ್ಶಗಳನ್ನು ತುಂಬತೊಡಗಿದರು. ಆ ವಿದ್ಯಾರ್ಥಿಗಳನ್ನು ಭರವಸೆಯ ಹೊಂಗಿರಣಗಳನ್ನಾಗಿ ರೂಪಿಸತೊಡಗಿದರು.

ವೀರಭದ್ರ ಶರ್ಮರು ಪಂಡಿತ ವೀರಭದ್ರ ಶಾಸ್ತ್ರಿಗಳಾಗಿ......
ಭಾಷಣ ಮತ್ತು ರೇಡಿಯೋ ಭಾಷಣಗಳು

ವೀರಭದ್ರ ಶರ್ಮರು ಪಂಡಿತ ವೀರಭದ್ರ ಶಾಸ್ತ್ರಿಗಳಾಗಿ ತಮ್ಮ ಬಹುಮುಖೀ ವ್ಯಕ್ತಿತ್ವವನ್ನು ನಾಡಿಗೆ ಪರಿಚಯಿಸಿದರು. ಅವರ ಭಾಷಣಗಳು ಜನಪ್ರಿಯವಾದವು. ಅವರ ರೇಡಿಯೋ ಭಾಷಣಗಳು ಜನ-ಮನ್ನಣೆಯನ್ನು ಗಳಿಸಿದವು. ಪೂಜ್ಯರು ಪ್ರತಿಭೆ ಮತ್ತು ಪಾಂಡಿತ್ಯಗಳ ಬಹುದೊಡ್ಡ ಮೊತ್ತದಂತಿದ್ದರು. ಅವರು ಆಶುಕವಿಗಳು. ಸಂಸ್ಕೃತ, ಹಿಂದಿ, ತೆಲಗು, ಕನ್ನಡ

ಇತ್ಯಾದಿ ಭಾಷೆಗಳಲ್ಲಿ ಛಂದೋಬದ್ಧವಾಗಿ ಕವಿತೆ, ಕಾವ್ಯಗಳನ್ನು ರಚಿಸುವ ಸಾಮರ್ಥ್ಯ ಅವರಲ್ಲಿತ್ತು. ಪೂಜ್ಯರು ಕವಿಗಳಾಗಿ, ಸಾಹಿತಿಗಳಾಗಿ, ಶೋಧಕ-ಸಂಶೋಧಕರಾಗಿ, ವಾಗ್ಮಿಗಳಾಗಿ, ಚಿಂತಕರಾಗಿ, ಯೋಜಕರಾಗಿ, ಪ್ರವಚನಕಾರರಾಗಿ, ಬಾನುಲಿ ಉಪನ್ಯಾಸಕರಾಗಿ, ವಿಮರ್ಶಕರಾಗಿ, ವಿಶ್ಲೇಷಕರಾಗಿ, ಸಮಾಜವಾದಿಗಳಾಗಿ ತಮ್ಮ 'ಬಹುಮುಖಿ ವ್ಯಕ್ತಿತ್ವ'ವನ್ನು ಸಮಾಜದ ಏಳಿಗೆಗಾಗಿ ಮತ್ತು ಸಮಕಾಲೀನ ಯುವಪೀಳಿಗೆಗಾಗಿ ದುಡಿಸಿದರು. ಜನಗಳು ಕೂಡ ಪೂಜ್ಯರ ವಿಚಾರಧಾರೆಯನ್ನು ಗೌರವಿಸಿ ಅವರನ್ನು ಪ್ರಾಂತ-ಪಂಥಗಳ, ಪಕ್ಷ-ಪಂಗಡಗಳ ಭೇದವಿಲ್ಲದೆ ಅಭಿನಂದಿಸಿ, ಸತ್ಕರಿಸಿ ಆನಂದಿಸಿದರು.

ವೀರಭದ್ರ ಶರ್ಮರ ಸಾರಸ್ವತ ಕೃಷಿ

ಶ್ರೀ ವೀರಭದ್ರ ಜಗದ್ಗುರುಗಳ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ ವಿಭೂತಿ ಪತ್ರಿಕೆಯಲ್ಲಿನ ಅವರ ಕೆಲವು ಲೇಖನಗಳ ಶೀರ್ಷಿಕೆಗಳು ಇಂತಿವೆ.

1. ಲಿಂಗಾಯತ 2. ಹೋಲಿಯ ಹೂರಣ (ಚಟನೀ) 3. ನಾಟಕ ಮತ್ತು ರೂಪಕ 4. ಮೀನಾಕ್ಷಿಯ ಪ್ರಮಾದ 5. ಪಿತೃಪಕ್ಷ ಮತ್ತು ಶ್ರಾದ್ಧ 6. ಛಳಿ 7. ಪಾಲ್ಕುರಿಕೆಯ ವೃತ್ತಾಂತ 8. ನೀಲಕಂಠ ವಿರಚಿತ 'ಶ್ರೀಕಂಠ ಭಾಷ್ಯ' 9. ಶ್ರೀ ಪಂಡಿತಾರಾಧ್ಯರ ಚರಿತ್ರೆಗೊಂದು ಪೀಠಿಕೆ 10. ಶಿವತತ್ವಸಾರಕರ್ತೃ 11. ಶಿಖಾಸಂಶಯ ನಿವಾರಣ 12. ಲಿಂಗಾಯತರು ಶೂದ್ರರಲ್ಲ 13. ಸಂಸ್ಕೃತಾಧ್ಯಯನದ ಅವಶ್ಯಕತೆ 14. ಆಂಧ್ರ ದೇಶೀಯರ ಕರ್ತವ್ಯ 15. ನಿರ್ಭೀತ ಸಮಾಧಾನ 16. ಹಿಮಾಲಯದ ಶಕ್ತಿಸ್ತಂಭ 17. ವಿಜಯಾದಿತ್ಯನ ಶಾಸನ 18. ವೀರಶೈವ ಶಿಖಾಸಿದ್ಧಾಂತ 19. ಯಥಾರ್ಥವಾದಿಯ ಹೆಸರಿನಲ್ಲಿ ಶಿವಪಂಚಸ್ತವೀ,

ಇವಲ್ಲದೆ, ಋಗ್ವೇದ (ಪ್ರಥಮಾಷ್ಟಕ), ಮಾಲವಿಕಾಗ್ನಿಮಿತ್ರ ಮತ್ತು ಮೀಮಾಂಸಾ ಪರಿಭಾಷೆ ಎಂಬೀ ಸಂಸ್ಕೃತ ಗ್ರಂಥಗಳಿಗೆ ತೆಲಗು ಭಾಷೆಯ ವ್ಯಾಖ್ಯಾನವನ್ನು ಬರೆದರು.

ಬ್ರಹ್ಮಸೂತ್ರ ಶ್ರೀಕರಭಾಷ್ಯಕ್ಕೆ ಪ್ರಸ್ತಾವನೆ ಬರೆಯುವ ಮೂಲಕ ಜಿಜ್ಞಾಸುಗಳ ಮೇಲೆ ಮಹದುಪಕಾರವನ್ನು ಮಾಡಿದರು.

ಶ್ರೀ ವೀರಭದ್ರ ಜಗದ್ಗುರುಗಳ ಕೆಲ ಕೃತಿ-ಕುಸುಮಗಳು

20. ಮಠ ಮತ್ತು ಮಂದಿರ

21. ಹಿಂದೂತ್ವ ಮತ್ತು ಆಧುನಿಕತೆ

22. ಸಂಸ್ಕೃತ ವಾಙ್ಮಯ ಚರಿತ್ರ

23. ಶಿವಪಂಚ ವಿಂಶತಿ ಲೀಲಾಶೀಃ ಶತಕ

24. ಲಿಂಗಧಾರಣ ವಿಧಿ

25. ರೇಣುಕ ವಿಜಯ ಪುರಾಣ

26. ಕಾಶೀ ಪೀಠಾಚೀ ಪ್ರಾಚೀನತ್ವ

27. ವೀರಶೈವ ವಿವಾಹವಿಧಿ

28. ಲಿಂಗಧಾರಣ ಸಿದ್ಧಾಂತ

29. ಆಂಧ್ರ ವೀರಶೈವರು

30. ಹಿಂದೂಗಳು ಮತ್ತು ಮಹಮ್ಮದೀಯರು ಆರ್ಯರೇ?

ಪೂಜ್ಯರು ಹಿಂದೀ ಭಾಷೆಯಲ್ಲಿ ಬರೆದ ಕೆಲ ಪುಟ್ಟಕಥೆಗಳು :

1. ಸಮಾಜ್ ಕಾ ಅಗ್ನಿಕುಂಡ 2. ಲಗ್ನ ಭಯಾಲಗ್ನ 3. ವರಶುಲ್ಕವ್ಯಾಘ್ರ ಮತ್ತು 4. ರೂಪಯೋಂ ಕಾ ರೂಪ್.....ಇತ್ಯಾದಿ

ಶ್ರೀ ವೀರಭದ್ರ ಜಗದ್ಗುರುಗಳ ಸಾಹಿತ್ಯ ಮತ್ತು ಸಾರಸತ್ವ ಪರಿಚಯ.....
ಒಂದು ವಿಹಂಗಮ ನೋಟ

ಕವನ, ಕಾವ್ಯ, ಕೃತಿ

ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳು ಹುಟ್ಟು ಪ್ರತಿಭಾವಂತರು. ಅವರನ್ನು 'ಏಕಪಾಠಿ'ಗಳಿಗೆ ಮತ್ತು 'ಶತಾವಧಾನಿ'ಗಳಿಗೆ ಹೋಲಿಸಬಹುದು. ಅವರು ಆಶುಕವಿಗಳು. 'ಕವಿತ್ವ' ಅವರ ಹೃದಯವಾಗಿತ್ತು. 'ಕವಿ-ಮನ' ಅವರಲ್ಲಿ ಯಾವತ್ತೂ ತುಡಿಯುತ್ತಿತ್ತು. ಪೂಜ್ಯರು 'ಗದ್ಯ-ಪದ್ಯ'ಗಳೆರಡರಲ್ಲೂ ಅವರು 'ಸಮಾನ ಪ್ರಭುತ್ವ'ವನ್ನು ಹೊಂದಿದ್ದರು. ಅವರೊಂದು 'ವಿದ್ವತ್ ಮಾನಸ'ದ ರಾಜಹಂಸ ಮತ್ತು 'ಕಾವ್ಯ-ಕಾಂತಾರ'ದ ರಾಜಕೀರ!!

ಸಂಸ್ಕೃತದಲ್ಲಿ ಒಂದು ಮಾತಿದೆ.

ಉಪೇಯುಷಾಮಪಿ ದಿವಂ ಸನ್ನಿಬಂಧವಿಧಾಯಿನಾಂ।
ಆಸ್ತ ಏವ ನಿರಾತಂಕಂ ಕಾಂತಂ ಕಾವ್ಯಮಯಂ ವಪುಃ॥

ಅಂದರೆ ಉತ್ತಮ ಕಾವ್ಯಗಳನ್ನು ರಚಿಸಿದವರು ಸ್ವರ್ಗವಾಸಿಗಳಾಗಿದ್ದರೂ ಸಹ ಅವರ ಸರಸ-ಸುಂದರವಾದ 'ಕಾವ್ಯ-ಶರೀರ'ವು ಇಲ್ಲಿಯೇ (ಈ ಭೂಮಿಯಲ್ಲಿಯೇ) ಇರುತ್ತದೆ -ಎಂದು. ಕವನ ಕಾವ್ಯ ಕೃತಿ

''ಕವಿಗೆ ಸಾವಿರಬಹುದು, ಸಾವಿದೆ. ಆದರೆ 'ಕವಿಸೃಷ್ಟಿ'ಗೆ ಸಾವಿಲ್ಲ'' ಖ್ಯಾತ ಕಾವ್ಯ ಲಕ್ಷಣಕಾರ ಮಮ್ಮಟ ಹೇಳಿದ ಹಾಗೆ 'ನಿಯತಿಕೃತನಿಯಮರಹಿತಾಂ ಕಾವ್ಯಂ ಯಶಸೇ ಅರ್ಥಕೃತೇ, ವ್ಯವಹಾರವಿದೇ ಶಿವೇತರಕ್ಷತಯೇ' ಎಂಬುದು ಸತ್ಯಸ್ಯ ಸತ್ಯ. ಅಂಥ ಕಾವ್ಯ ಪರಿಣತಮತಿಗಳು ಶ್ರೀ ವೀರಭದ್ರ ಜಗದ್ಗುರುಗಳು. ಅವರು ಬರೆದು ವಚಿಸಿದ ಸುಂದರ-ಸುಮಧುರ ಕವನವಿದು.

[ಹೈದರಾಬಾದ ನಗರದಲ್ಲಿ ನಡೆದ 26ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಉದ್ಘಾಟನಾ ಸಮಾರಂಭವು ಆಶುಕವಿ ವೀರಭದ್ರ ಶಾಸ್ತ್ರಿಗಳಿಂದಲೇ ನೆರವೇರಿತು. ಈ ಕವಿ ಸಮ್ಮೇಳನದಲ್ಲಿ ಬೇರೊಬ್ಬರು ಓದಿದ 'ತಪ್ಪೇನು?' ಎಂಬ ಕವಿತೆಗೆ ಆ ಕ್ಷಣದಲ್ಲಿಯೇ ಉತ್ತರರೂಪವಾಗಿ ರಚಿಸಿ ಪಠಿಸಿದ ಕವನವಿದು.]

ಒಳಿತೇನು?

ನಾಂಕವಿ ತಾನೆಂದು
ಗುರಿದಪ್ಪಿ ರಚಿಸುವುದೊಳಿತೇನು ?
ಪರಭಾವಾಳಿಗೊಲಿದು
ಗುರುಧರ್ಮ ಬಿಡುವುದು ಒಳಿತೇನು ? ॥ 1 ॥
ಚದುರನು ತಾನಾಗಿ
ಕದನವ ಹೂಡುವುದೊಳಿತೇನು ?
ಹದಗೆಟ್ಟ ಮನವುಳ್ಳ
ಚದುರೆಗೆ ಮರುಮದುವೆ ಒಳಿತೇನು ? ॥ 2 ॥
ಮುನಿಸಿನ ಮತಿಯಿಂದ
ಪಿಸುಮಾತು ಹೇಳುವುದೊಳಿತೇನು ?
ರಸರುಚಿ ತಿಳಿಯದೆ
ಹೊಸದೆಂದು ತಿಂಬುವುದೊಳಿತೇನು ? ॥ 3 ॥
ಗತಿ ತೋರಿಸುವವೆಂದು
ವ್ರತಹಾನಿ ಮಾಡುವುದೊಳಿತೇನು ?
ಶ್ರುತಿಯಲ್ಲಿ ಮೆರೆಯುವ
ಮತ ಕೆಡಿಸಿಕೊಳ್ಳುವುದೊಳಿತೇನು ? ॥ 4 ॥
ಪ್ರಖ್ಯಾತಿ ಬೇಕೆಂದು
ಮೂರ್ಖರ ಸೇರುವುದೊಳಿತೇನು ?
ಐಕ್ಯದ ನೆಪದಿಂದ
ಸೌಖ್ಯವ ನಾಶಿಪುದೊಳಿತೇನು ? ॥ 5 ॥
ನೇಮವ ಬದಿಗಿಟ್ಟು
ಸೋಮಾರಿಯಾಗುವುದೊಳಿತೇನು ?
ಕಾಮದ ಭರದಲ್ಲಿ
ಪ್ರೇಮವಿವಾಹವು ಒಳಿತೇನು ? ॥ 6 ॥

ಚಿದರೆಮಠದ ವೀರಭದ್ರ ಶಾಸ್ತ್ರಿಗಳು

ಆನಂದ ಭಜನಂ

ಶ್ರೀ ಗುರು ಜಂಗಮ ಲಿಂಗ ಮಹೇಂದ್ರ
ಇಂದ್ರೋಪೇಂದ್ರಸಮರ್ಚಿತಚರಣ ।
ಚರಣಾಂಭೋಜಯುಗಾನತಶತ್ರೋ
ಶತ್ರುವ್ರಾತ ಮದಾದಿವಿದೂರ ।
ದೂರತಿರಸ್ಕೃತ ದುರ್ಜನಸಂಗ
ಸಂಗತ ವೈದಿಕ ಸಜ್ಜನಸಂಘ ।
ಸಂಘಕ್ಷೇಮಸದಾಗಮ ಬೋಧ,
ಬೋಧಾನಂದ ಪರಿಷ್ಕೃತ ವಿಬುಧ ।
ವಿಬುಧಜನೇಷ್ಟ ಜಗದ್ಗುರುಮುದ್ರ,
ಮುದ್ರಾಯೋಗ ಸಮಾಧಿನಿವಾಸ ।
ವಾಸ ಸ್ವೀಕೃತ ಸುರಚಿರ ಕಾಶೀ,
ಕಾಶೀ ವಿಶ್ವೇಶ್ವರ ತನುಭೂತ ।
ಭೂತಗಣಾವಲಿ ಸಮ್ಮತನಾಥ,
ನಾಥವಿಹೀನನರಾಮರಭೂಜ ।
ಭೂಜಶ್ರೀಕೃತ ಕರತಲದಂಡ,
ದಂಡನ ಮಂಡನ ಧರ್ಮ ಸಮರ್ಥ ।
ಅರ್ಥಭ್ರಾಂತಿ ನಿವಾರಣಧಿಷಣ,
ಧಿಷಣಾದ್ಯಖಿಲ ಗುರುವ್ರಜ ಪೂಜ್ಯ ।
ಪೂಜ್ಯ ತಪೋಮಹಿಮೋದ್ಧೃತ ವಿಶ್ವ,
ವಿಶ್ವಾರಾಧ್ಯ ಗುರೂತ್ತಮ ಪಾಹಿ ।

ಶ್ರೀ ಜಗದ್ಗುರು ವೀರಭದ್ರ ವಿರಚಿತ ಈ ಆನಂದ-ಭಜನೆಯ ಒಂದು ವೈಶಿಷ್ಟವೇನೆಂದರೆ ಇಲ್ಲಿ ಮೊದಲ ಚರಣದಲ್ಲಿರುವ 'ಅಂತ್ಯಪ್ರಾಸ'ವು ಅಂದರೆ 'ಅಂತ್ಯಪದ'ವು ಎರಡನೆಯ ಚರಣದಲ್ಲಿ 'ಆದಿಪ್ರಾಸ' ಅಥವಾ 'ಆದಿಪದ'ವಾಗಿ ನಿಂತುಕೊಳ್ಳುತ್ತದೆ. ಪ್ರತಿಯೊಂದು ಚರಣದ 'ಅಂತ್ಯಪದ'ವು ಅದರ ಮುಂದಿನ ಚರಣದ 'ಆದಿಪದ'ವಾಗಿ ರೂಪಾಂತರಗೊಳ್ಳುತ್ತದೆ. ಮೊದಲ ಚರಣದಲ್ಲಿರುವ 'ಮಹೇಂದ್ರ'-ಎಂಬ 'ಅಂತ್ಯಪದ'ವು ಅದರ ಮುಂದಿನ ಚರಣದಲ್ಲಿ 'ಇಂದ್ರ' ಎಂದು 'ಆದಿಪದ'ವಾಗಿ ಆ ಚರಣಕ್ಕೆ ನಾಂದಿಯನ್ನು ಹಾಡುತ್ತದೆ. ಈ ನಿಟ್ಟಿನಲ್ಲಿ ''ಮಹೇಂದ್ರ-ಇಂದೋಪೇಂದ್ರ, ಸಮರ್ಚಿತ ಚರಣ-ಚರಣಾಂಭೋಜಯುಗ, ಆನತ ಶತ್ರೋ-

ಶತ್ರುವ್ರಾತ, ಮದಾದಿ ವಿದೂರ-ದೂರ ತಿರಸ್ಕೃತ, ದುರ್ಜನ ಸಂಗ-ಸಂಗತ ವೈದಿಕ, ಸಜ್ಜನ ಸಂಘ-ಸಂಘಕ್ಷೇಮ, ಸದಾಗಮ ಬೋಧ-ಬೋಧಾನಂದ, ಪರಿಷ್ಕೃತ ವಿಬುಧ-ವಿಬುಧಜನೇಷ್ಟ, ಜಗದ್ಗುರು ಮುದ್ರ-ಮುದ್ರಾಯೋಗ, ಸಮಾಧಿ ನಿವಾಸ-ವಾಸ ಸ್ವೀಕೃತ, ಸುರಚಿರ ಕಾಶೀ-ಕಾಶೀ ವಿಶ್ವೇಶ್ವರ, ತನು ಭೂತ-ಭೂತಗಣಾವಲಿ, ಸಮತ್ರ ನಾಥ-ನಾಥವಿಹೀನ, ಅಮರ ಭೂಜ-ಭೂಜಶ್ರೀಕೃತ, ಕರತಲ ದಂಡ-ದಂಡನ ಮಂಡನ, ಧರ್ಮ ಸಮರ್ಥ-ಅರ್ಥಭ್ರಾಂತಿ, ನಿವಾರಣ ಧಿಷಣ-ಧಿಷಣಾದ್ಯಖಿಲ, ಗುರುವ್ರಜ ಪೂಜ್ಯ- ಪೂಜ್ಯ ತಪೋಮಹಿಮ, ಉದ್ಧೃತ ವಿಶ್ವ-ವಿಶ್ವಾರಾಧ್ಯ ಗುರು'' ಎಂದಿತ್ಯಾದಿಯಾಗಿ ಬಹು ಸುಂದರವಾದ ಕಾವ್ಯ ಲಕ್ಷಣಗಳನ್ನುಳ್ಳ ಸಾಹಿತ್ಯವನ್ನು ಇಲ್ಲಿ ಕಾಣಬಹುದಾಗಿದೆ.

ಆಯಾ ಚರಣದ 'ಅಂತ್ಯಪದ'ವನ್ನು ಇನ್ನೊಂದು ಚರಣದ 'ಆದಿಪದ'ವನ್ನಾಗಿ ಪರಿವರ್ತಿಸಿರುವುದು ಶ್ರೀ ವೀರಭದ್ರ ಜಗದ್ಗುರುಗಳ ಭಾಷಾ ಪ್ರೌಢಿಮೆಗೆ ಸಾಕ್ಷಿ ಹೇಳುವಂತಿದೆ. ಪರಮಪೂಜ್ಯರು 'ಲೀಲಯಾ' ಈ ಸ್ತುತಿಯನ್ನು ರಚಿಸಿದ್ದಾರೆ. ಕರ್ಕಶ ಪದಪ್ರಯೋಗಗಳಿಲ್ಲದ ಕರ್ಣಮಧುರವಾದ ಇದು ಕೇಳುವುದಕ್ಕೆ ಹಿತವಾಗಿಯೂ ಮತ್ತು ಮಧುರವಾಗಿಯೂ ಇದೆ.

ಇಲ್ಲಿ ಪರಮಪೂಜ್ಯರು ಗುರುಶ್ರೇಷ್ಠರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರನ್ನು 'ಪಾಹಿ'(ರಕ್ಷಿಸೆನ್ನನು) ಎಂದು ಪ್ರಾರ್ಥಿಸಿಕೊಂಡಿದ್ದಾರೆ. ಅವರು ಈ ಸ್ತುತಿಯಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಘನಾತಿಘನ ಮಹಿಮೆಯನ್ನು ಓತಪ್ರೋತವಾಗಿ ಕೊಂಡಾಡಿದ್ದಾರೆ. ಇದು ಅವರಲ್ಲಿರುವ ಅಪ್ರತಿಮ ಮತ್ತು ಅಪ್ರತಿಹತ ಗುರುಭಕ್ತಿಗೆ ನಿದರ್ಶನ.

ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್‌ರವರು ರಂಭಾಪುರೀ ಪೀಠಕ್ಕೆ ಆಗಮಿಸಿದಾಗ ನಾಲ್ಕು ಭಾಷೆಗಳಲ್ಲಿ ಬರೆದು ಅರ್ಪಿಸಿದ ಅಭಿನಂದನಾ ಪತ್ರ

ಬಾಳೆಹೊನ್ನೂರು 16.2.1941

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮಜ್ಜಗದ್ಗುರುರೇಣುಕಾಚಾರ್ಯ ಭಗವತ್ಪಾದರವರು ಶ್ರೀ ರಂಭಾಪುರೀ ವೀರಸಿಂಹಾಸನ ಕ್ಷೇತ್ರವನ್ನಲಂಕರಿಸಿದ ಶುಭಸಮಯದಲ್ಲಿ ಶ್ರೀಮದನುಭೂತರಾಜಾಧಿರಾಜಾದಿಬಿರುದವ್ರಾತರೂ,

ಪ್ರಖ್ಯಾತ ಶ್ರೀಮನ್ಮಹೀಶೂರ ಸಾಮ್ರಾಜ್ಯಶ್ರೀನಾಥರೂ, ಆತ್ಮಸಾತ್ಕೃತಕರ್ಣಾಟಾಂಗ್ಲಾದಿ ವಿವಿಧಭಾಷಾ ವಿಜ್ಞಾನಶೇಮುಷೀವಿಲಾಸರೂ, ಪರಿಪಾಲ್ಯಮಾನ ಸುಕವಿ ಪಂಡಿತ ಪ್ರಕಾಂಡಪ್ರಜಾವಿಶೇಷರೂ ಆದ

ಶ್ರೀ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್

ಮಹಾಪ್ರಭುಗಳವರ ಕರಕಮಲಗಳಲ್ಲಿ ಸಮರ್ಪಿಸಿದ

ಅಭಿನಂದನ ಪತ್ರಿಕೆ

(ಚತುರ್ಭಾಷಾಮಯಿ)

ಸ್ರ. ಶ್ರೀಮದ್ದಿವ್ಯಪ್ರಭಾಸಂಸ್ಥಿತನಿಜಮಹಿಮಪ್ರಾಪ್ತರಾಜ್ಯೈಕಪೂರ್ತಿಃ
ಕಾಮಸ್ತೋಮಪ್ರದಾನಪ್ರಧೃತವಿಬುಧಭೂಜನ್ಮಜನ್ಮಾಂತಕೀರ್ತಿಃ।
ರಾಮತ್ರೈವಿಧ್ಯವಿದ್ಯಾಗುಣಗಣಶಮಿತಾಶೇಷಲೋಕಾಖಿಲಾರ್ತಿಃ
ಸೋಮಶ್ರೀ ರಾಜತೇ ಶ್ರೀಮಹಿಸುರಜಯವಚ್ಚಾಮಭೂಪಾಲಮೂರ್ತಿಃ॥

ಶ್ರಾ. ಯಃ ಶ್ರೀರತ್ನಮಜೀಜಯದ್, ಯಮಮಿತಾ ಯಾಯಾವರಾಃ ಸಂಶ್ರಿತಾಃ,
ಯೇನಾಕಾರಿಸುಚಾರುಲೋಕವಿಭವೋ, ಯಸ್ಮೈ ಮಹೋ ರೋಚತೇ।
ಯಸ್ಮಾದ್ರುಜ್ಜ್ವಲಿತಾ ಸ್ವರಾಜ್ಯಘನತಾ, ಯಸ್ಯಾಸ್ತಿ ಜನ್ಯೂದ್‌ಧೃತಿಃ
ಯಸ್ಮಿನ್ ಶ್ರೀಜಯಚಾಮರಾಜಪದವೀ ಸೋಽಸ್ಮಾಭಿರುದ್ಗೀಯತೇ ॥

ಪಾವನದೇವ ಭಕ್ತಿ, ಮೃದುಭಾವವಿಲಾಸವಿಧಾನಸೂಕ್ತಿ, ಸ
ತ್ಕೋವಿದಲೋಕರಕ್ತಿ, ವಿನಿಗೂಢಸುಸಂವಿದನೂನಸಕ್ತಿ, ವಿ
ದ್ಯಾವನಿತಾನುಭುಕ್ತಿ, ಸಮುದಂಚಿತ ಶಾಸನತಾಪ್ರಯುಕ್ತಿ, ಭಾ
ಗ್ಯಾವಪಾಶಕ್ತಿ ಮೀ ಕಗು ನಿರಂತರಮುನೇ ಜಯಚಾಮಭೂಪತಿ !!

ಕಂ. ಒಡೆಯಡು ವಿಡಿಮುಡಿವೇಲ್ಪನ
ಗಡುನರಿನಡಿವಡಿನವಾಂಡು ಕಡುವಡಿನಡಲನು।
ವುಡಮಿನಿ ಬಡುಗುಲ ದಡ ವಿಡು ವಡುವುನ ಗಡಿ
ನಡುಪು ದೊರಕು ವರಲುನು ಜೈ ಜೈ ॥

ಚೌ. ಸುಖಜೀವನ ಕಾ ಪ್ರಖರ ಸಹಾರಾ, ಸತ್ಯ ಪ್ರೇಮ ಆಧಾರ
ವಿವಿಧಕಲಾ ಅರು ವಿಶ್ವಜ್ಞಾನ ಕಾ ವಿಮಲ ಕುಶಲ ಭಂಡಾರ।
ಕಹೇ ಸುಶಾಸನ ಕಲಾಪ್ರಕಾಶನ ಮಹಿಸುರ ಮೇ ಚಿರಕಾಲ
ರಹೇ ನಿರಂತರ ಮಂಗಲಮಯ ''ಜಯಚಾಮರಾಜ'' ಭೂಪಾಲ॥

(ಇಲ್ಲಿ ಹಿಂದಿ, ಸಂಸ್ಕೃತ, ತೆಲುಗಿನಲ್ಲಿರುವ ಲಿಪಿಯನ್ನು ಲಿಪ್ಯಂತರಿಸಲಾಗಿದೆ, ಭಾಷಾಂತರಿಸಿಲ್ಲ.)

ಭಾ.ಷ. ಧಾಮವದು 'ಮಹಿಶೂರ' ತನಮಂ
ನಾಮ ಪೇಳಲ್ 'ಜಯ'ವ ಮುದದಿಂ
ಶ್ಯಾಮಸುಂದರರೂಪಸಾಮ್ಯವ 'ಚಾಮ' ನುಡಿ ಸಾರಲ್ ।
ಭೂಮಿಪತ್ವವ 'ನೊಡೆಯ' ನುಡಿಯಲ್
ರಾಮಚಂದ್ರನ ಗುಣಗಳಿಂ ಜಯ
ಚಾಮರಾಜಮಹೇಂದ್ರನಿಳೆಯನು ಶಾಸಿಸಲಿ ಸತತಂ ॥

ಇಂತು ಅಭಿನಂದಿಸುವ ಪಂಡಿತ ಚಿದಿರೆಮಠದ ವೀರಭದ್ರ ಶಾಸ್ತ್ರಿ ವೇದ-ಕಾವ್ಯ-ಸ್ಮೃತಿತೀರ್ಥ ಸಾಹಿತ್ಯ ವಿಶಾರದ ಧರ್ಮಾಚಾರ್ಯ ವಿದ್ಯಾನಿಧಿ, ವಿದ್ಯಾರತ್ನ ಶಿವಧರ್ಮ ಗ್ರಂಥಮಾಲಾ 'ವಿಭೂತಿ' ಸಂಪಾದಕರು.

ಪರಮಪೂಜ್ಯರ ಪಾಂಡಿತ್ಯಕ್ಕೆ ಈ ಅಭಿನಂದನ ಪತ್ರವೇ ಸಾಕ್ಷಿ. ಅಂದಿನ ರಂಭಾಪುರೀ ಜಗದ್ಗುರುಗಳು ಇವರಿಂದಲೇ ಬರೆಯಿಸಿ ಪೀಠಗಳ ಪಾಂಡಿತ್ಯ ಮತ್ತು ಪ್ರಭೆಯನ್ನು ರಾಜರ ಸಮ್ಮುಖಕ್ಕೆ ತಂದರು.

ಕವನ, ಕಾವ್ಯ, ಕೃತಿ

ಶ್ರೀ ವೈದ್ಯನಾಥ ವೈದಿಕ ಸ್ತೋತ್ರ ಪಂಚಕಮ್
ವೇದ-ಕಾವ್ಯ-ಸ್ಮೃತಿ-ದರ್ಶನತೀರ್ಥ, ಧರ್ಮಾಚಾರ್ಯ,
ವಿದ್ಯಾನಿಧಿ, ವಿದ್ಯಾರತ್ನ ಪದವೀಕೇನ
ಸಿಕಿಂದ್ರಾಬಾದ-ವೀರಶೈವ ಗುರುಕುಲಪತಿನಾ
ಪಂಡಿತ ಚಿ. ಮ. ವೀರಭದ್ರಶರ್ಮ ಶಾಸ್ತ್ರಿಣಾ ಪ್ರಬದ್ಧಮ್

ಶ್ಲೋ॥ ಆತಾಯಿನೇ ನಿಷಂಗಿಣೇ ಕವಚಿನೇ
ಕಾಟ್ಯಾಯ ನೀಪ್ಯಾಯ ಚ ।
ಶೀಭ್ಯಾಯೇಷುಮತೇ ನಮಃ
ಪ್ರತರಣಾಯೋರ್ಮ್ಯಾಯ ಪ್ರಸ್ವಾಯ ಚ ॥
ತಾವತ್ರಾಯ ಪ್ರಹಿತಾಯ ಚೇಷುಧಿಮತೇ
ವನ್ಯಾಯ ಫೇನ್ಯಾಯ ಚ ।
ಸ್ರೋತಸ್ಯಾಯ ಚ ವಾಮನಾಯ ಚ
ನಮಃ ಶ್ರೀವೈದ್ಯನಾಥಾಯ ತೇ ॥೧॥
ದುಂದುಭ್ಯಾಯ ನಮೋ ಭವಾಯ ಚ
ನಮಸ್ತೀರ್ಥ್ಯಾಯ ಕುಲ್ಯಾಯ ಚ ।
ವೈಶಂತಾಯ ಸುಧನ್ವನೇ
ಗಿರಿಚರಾಯೋಗ್ರಾಯ ಭೀಮಾಯ ಚ ॥

ಉರ್ವರ್ಯಾಯ ನಮಃ ಶಿವಾಯ
ಬೃಹತೇ ವೃದ್ಧಾಯ ಸಂವೃದ್ಧ್ವನೇ ।
ಶ್ರೇಷ್ಠಾಯಾಸ್ತು ಮಯಸ್ಕರಾಯ ಚ
ನಮಃ ಶ್ರೀ ವೈದ್ಯನಾಥಾಯ ತೇ ॥2॥
ಕ್ಷೇತ್ರಾಣಾಂ ಪತಯೇಽರುಣಾಯ ಚ
ನಮೋ ವರ್ಷೀಯಸೇ ಶಂಭವೇ ।
ವೃಕ್ಷಾಣಾಂ ಪತಯೇ ನಮಃ
ಪರಿಚರಾಯೌಷಧೀಶಿನೇ ಮಂತ್ರಿಣೇ ॥
ಕಕ್ಷಾಣಾಂ ಪತಯೇ ದಿಶಾಂ ಚ ಪತಯೇ
ಶಂಗಾಯ ತೇ ಧಾವತೇ ।
ಸತ್ವಾನಾಂ ಪತಯೇ ಹಿರಣ್ಯಪತಯೇ
ಶ್ರೀವೈದ್ಯನಾಥಾಯ ತೇ ॥3॥
ಜ್ಯೈಷ್ಠ್ಯಂ ಮೇಽಸ್ತು ಶ್ರಿಯಂ ಧನಂ ಚ
ಸುಕೃತಂ ವಿಶ್ವಂ ಯಶೋ ಮೇ ಖ್ಯಿತಂ ।
ಭೂತಂ ಚ ಕ್ರತುರಸ್ತು ಮೇ ಚ
ಮಹಿಮಾ ಶ್ರೋತ್ರಂ ಬಲಂ ಮೇ ಸ್ವರಃ ॥
ಭದ್ರಂ ಮೇ ದ್ರವಿಣಂ ಮತಿಶ್ಚ
ಸುಮತಿಃ ಶರ್ಮಾಸ್ತು ಚಿತ್ತಂ ಚ ಮೇ ।
ಶ್ರೇಯಃ ಶಂ ಚ ತನುಶ್ಚ ಮೇಽಸ್ತು ಸುದಿನಂ
ಶ್ರೀ ವೈದ್ಯನಾಥ ಪ್ರಭೋ ॥4॥
ಯಸ್ಮಾನ್ಮೋಽರುಣ ಈಶ್ವರಃ
ಶಿವತಮೋ ಮೀಢುಷ್ಟಮಃ ಶಂಕರೋ ।
ಯೇನೇದಂ ಭುವನಂ ಚ ಭವ್ಯಮಮೃತಂ
ಭೂತಂ ಭವಿಷ್ಯತ್ ಸ್ಮೃತಂ ॥
ಯಂ ಜಾನಂತಿ ಬುಧಾಃ ಶ್ರುತಂ ಚ
ಪುರುಷಂ ಕೃತ್ತಿಂ ವಸಾನಂ ಮಹಃ ।
ಸೋಽಸ್ಮಾನ್ ಪಾತು ಮಹೇಶ್ವರಸ್ತು
ಪರಳೀ-ವೈದ್ಯನಾಥಃ ಶಿವಃ ॥5॥

ಶ್ರುತಿ-ಸ್ಮೃತಿ-ಪುರಾಣೇತಿಹಾಸಶಾಸ್ತ್ರ ವಿಪಶ್ಚಿತಾ
ಜಂಗ್ಮ್ರೇಯ ವೀರಶೈವೇನ, ವೀರಭದ್ರೇಣ ಶಾಸ್ತ್ರಿಣಾ ।
ಗ್ರಥಿತಾ ಪದ್ಯಮಾಲ್ಯಾ ಪದಿಕಾ ಸೂತ್ರಗುಂಜಿಕಾಮ್
ಶುದ್ಧೇನ ಮನಸಾ ಸ್ತುತ್ವಾ ಪ್ರಾಪ್ನುವಂತಿ ಶಿವಂ ಧ್ರುವಮ್ ।
(ಶಾ.ಶ. 1860, ಭಾದ್ರಪದ, ಕೃಷ್ಣಪಕ್ಷ ಪ್ರಥಮಾ ತಿಥೌ ಪಂಚಾಕ್ಷರೀಕೃಪಾಂಕುರಿತಾ ಮಾಸಪತ್ರಿಕಾ
ಸಮಾರಂಭೇ ಪ್ರಸ್ತುತ್ಯ, ಪ್ರಕಟಿತಾ)

ಕವನ, ಕಾವ್ಯ, ಕೃತಿ

ಶಿವಲಿಂಗ ಮಂಗಳಾರತಿ

ಜಯ ಜಯ ಚಿನ್ಮಯ ಶಿವಲಿಂಗ ಜಯ ಜಯಪರತರ ಚರಲಿಂಗ
ಜಯ ಜಯ ನಿರುಪಮ ಗುರುಲಿಂಗ ಜಯಜಯ ಘನಜಂಗಮಲಿಂಗ ||ಪ||

ನರಸುರಗುರುಪೂಜಿತಪಾದ ಪರಿಣತಶಾಸ್ತ್ರಾಗಮವೇದ
ಪರಿಷ್ಕೃತಪರಸಮುದಯವಾದ ವಿರಚಿತವಿಶ್ವವಿಕೃತಿಭೇದ ||1||

ಪಂಚಭೂತಪಾವನಕರಣ ಪಂಚಾಚಾರ್ಯಾಮಲಕರಣ
ಕಿಂಚಿತ್ಕೃತಸಂಸಾರಗುಣ ಸಂಚಿತವೃಜಿನೋನ್ಮಥನಚಣ ||2||

ನಿತ್ಯನಿರಾಮಯ ನಿಜಸಾರ ಸತ್ಯಸನಾತನ ಸಕಲವರ
ಮೃತ್ಯುಜರಾಜನಿ ಮೂಲಹರ ಕೃತ್ಯವಿವೇಕಮಹಾಕಾರ ||3||

ಶಕ್ತಿವಿಶಿಷ್ಟಕಥಾಭರಿತ ಭಕ್ತಿಕಲಾನಿಧಿಭಾವರತ
ಯುಕ್ತಿಕದಂಬವಿಪುಲಚರಿತ ಮುಕ್ತಿವಿಧಾನಸುಧಾನಿರತ ||4||

ಪದನತಜನಜೀವನಸದಯ ಕದನಸಹಸ್ರಮಹಾವಿಜಯ
ವಿದಳಿತ ಮದಷಡ್ವರ್ಗಚಯ ಚಿದರೆಮಠಬುಧಾವನಹೃದಯ ||5||

ಶಂಕರಪಾಪಭಯಂಕರ
ಕಂಕಾಲ ಕಪಾಲಹಸ್ತ ಗೌರೀರಮಣಾ।
ಓಂಕಾರಮಂತ್ರಮಂದಿರ
ಕಂಕಣಭುಜಗಾದಿನಾಥ ಕಾರುಣ್ಯನಿಧೇ॥

ಶಿವಧರ್ಮ ಗ್ರಂಥಮಾಲಾ

ಪೂಜ್ಯರು 'ಶಿವಧರ್ಮಗ್ರಂಥಮಾಲಾ' ಎಂಬ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ ತನ್ಮೂಲಕ ಧಾರ್ಮಿಕ ಸಾಹಿತ್ಯವನ್ನು ಹೊರತರಬೇಕೆಂದು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು.

'ವಿದ್ವದ್ವಿಭೂತಿ'ಯ 'ವಿಭೂತಿ'

ಪೂಜ್ಯರು ಮನೆ-ಮನೆಗೆ ತತ್ವ, ಸಿದ್ಧಾಂತ ಮತ್ತು ಧರ್ಮ-ದರ್ಶನಗಳನ್ನು ಕೊಂಡೊಯ್ಯುವ ಉದ್ದೇಶದಿಂದ ತೆಲಗು ಭಾಷೆಯಲ್ಲಿ 'ವಿಭೂತಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಖುದ್ದು ತಾವೇ ಅದರ ಸಂಪಾದಕರಾಗಿ ಬೋಧಪರ, ಚಿಂತನಪರ ಲೇಖನಗಳನ್ನು ಬರೆಯುವ ಮೂಲಕ ಜನಜಾಗೃತಿಯನ್ನು ಉಂಟುಮಾಡಿದರು. ಪತ್ರಿಕೆಯ ಯಶಸ್ಸಿಗಾಗಿ ಅಹರ್ನಿಶಿ ಪರಿಶ್ರಮಿಸಿದರು. 'ವಿಭೂತಿ' ಪತ್ರಿಕೆಯು ಅವರ ಬಹು ಸುಂದರವಾದ ಕಲ್ಪನೆಯ ಕೂಸಾಗಿತ್ತು. ಪೂಜ್ಯರು 'ವಿಭೂತಿ' ಪತ್ರಿಕೆಯ ಮೂಲಕ 'ಪತ್ರಿಕಾ ಕ್ಷೇತ್ರ'ದಲ್ಲೊಂದು ಹೊಸ ಕ್ರಾಂತಿಯನ್ನು ಮಾಡಿದರು. 'ವಿಭೂತಿ'ಯು ಆಂಧ್ರದಾದ್ಯಂತ 'ಧರ್ಮ-ದುಂದುಭಿ'ಗಳು ಮೊಳಗಿಕೊಳ್ಳುವಂತೆ ಮಾಡಿತು. ವಿಭೂತಿ ಪತ್ರಿಕೆ ವಿಲಕ್ಷಣವಾಗಿ ಮತ್ತು ವಿಶೇಷವಾಗಿ ಹೊರಬರಬೇಕು. ಅದೊಂದು ಬರೀ ವೃತ್ತ ಪತ್ರಿಕೆ ಮತ್ತು ವೃತ್ತಿ ಪತ್ರಿಕೆಯಾದರೆ ಪ್ರಯೋಜನವಿಲ್ಲ. ಅದು ಜನರ ಮತ್ತು ಜನಸಾಮಾನ್ಯರ ಧ್ವನಿಯಾಗಿನಿಲ್ಲಬೇಕು. ಪಂಡಿತರ ಚರ್ಚಾವೇದಿಕೆಯಾಗಬೇಕು. ವೈಚಾರಿಕತೆಯನ್ನು ಅಳವಡಿಸಿಕೊಂಡಿರಬೇಕು. ಧಾರ್ಮಿಕತೆಗೆ ಬದ್ಧವಾಗಿರಬೇಕು. ಪ್ರಚಂಡ ಪತ್ರಿಕೆಯಾಗಿ ಹೊರಬರಬೇಕು.

ಪೂಜ್ಯರು ಪ್ರತಿಭೆ ಮತ್ತು ಪಾಂಡಿತ್ಯಗಳ ಬಹುದೊಡ್ಡ ಮೊತ್ತದಂತಿದ್ದರು. ಅವರು ಆಶುಕವಿಗಳು. ಸಂಸ್ಕೃತ, ಹಿಂದಿ, ತೆಲಗು, ಕನ್ನಡ ಇತ್ಯಾದಿ ಭಾಷೆಗಳಲ್ಲಿ ಛಂದೋಬದ್ಧವಾಗಿ ಕವಿತೆ, ಕಾವ್ಯಗಳನ್ನು ರಚಿಸುವ ಸಾಮರ್ಥ್ಯ ಅವರಲ್ಲಿತ್ತು. ಪೂಜ್ಯರು ಕವಿಗಳಾಗಿ, ಸಾಹಿತಿಗಳಾಗಿ, ಶೋಧಕ-ಸಂಶೋಧಕರಾಗಿ, ವಾಗ್ಮಿಗಳಾಗಿ, ಚಿಂತಕರಾಗಿ, ಯೋಜಕರಾಗಿ, ಪ್ರವಚನಕಾರರಾಗಿ, ಬಾನುಲಿ ಉಪನ್ಯಾಸಕರಾಗಿ, ವಿಮರ್ಶಕರಾಗಿ, ವಿಶ್ಲೇಷಕರಾಗಿ, ಸಮಾಜವಾದಿಗಳಾಗಿ ತಮ್ಮ 'ಬಹುಮುಖಿ ವ್ಯಕ್ತಿತ್ವ'ವನ್ನು ಸಮಾಜದ ಏಳಿಗೆಗಾಗಿ ಮತ್ತು ಸಮಕಾಲೀನ ಯುವ ಪೀಳಿಗೆಗಾಗಿ ದುಡಿಸಿದರು. ಜನಗಳು ಕೂಡ ಪೂಜ್ಯರ ವಿಚಾರಧಾರೆಯನ್ನು ಗೌರವಿಸಿ ಅವರನ್ನು ಪ್ರಾಂತ-ಪಂಥಗಳ, ಪಕ್ಷ-ಪಂಗಡಗಳ ಭೇದವಿಲ್ಲದೆ ಅಭಿನಂದಿಸಿ, ಸತ್ಕರಿಸಿ ಆನಂದಿಸಿದರು.

'ಶ್ರಮ ಏವ ಜಯತೇ' ಪೂಜ್ಯರದು ಶಾಸ್ತ್ರೀಯ ಭಾಷೆ. ಅವರದು ಅಶಾಸ್ತ್ರೀಯ ಭಾಷೆಯಲ್ಲ. ಪ್ರಮಾಣ ಬದ್ಧ ಮಾತು ಮತ್ತು ಪ್ರಾಮಾಣಿಕ ಮಾತುಗಳನ್ನಾಡುತ್ತಿದ್ದರು ಅವರು.ಅವರದು ತತ್ವನಿಷ್ಠ ಮತ್ತು ತತ್ವಬದ್ಧ ಜೀವನ ಅವರದು. ಸ್ವಾಭಿಮಾನವನ್ನು ಒತ್ತೆ ಇಟ್ಟು ಯಾರದೋ ಮುಖವಾಣಿಯಾಗಿ ಹೇಡಿ ವ್ಯಕ್ತಿತ್ವ ಅವರದಲ್ಲ. ಲೋಕವಿದು ಹೆದರುವವರನ್ನು ಕಂಡರೆ ಹೆದರಿಸುತ್ತದೆ, ಬೆದರುವವರನ್ನು ಕಂಡರೆ ಬೆದರಿಸುತ್ತವೆ.

ವಿಜಯಾದಿತ್ಯನ ಅಮ್ಮಣಿಗೆ ತಾಮ್ರಶಾಸನ

ಶ್ರೀ ವೀರಭದ್ರಶರ್ಮರದು ಪುರಾತತ್ವ ಪಾಂಡಿತ್ಯದಲ್ಲೂ ಎತ್ತಿದ ಕೈ. ಅವರು ಶಾಸ್ತ್ರಾಧ್ಯಯನದ ಜೊತೆಯಲ್ಲಿ ಪ್ರಾಚೀನ ಲಿಪಿಗಳನ್ನು ಕೂಡ ಆಳವಾಗಿ ಅಧ್ಯಯನ ಮಾಡಿದ್ದರು. ಈ ಅಧ್ಯಯನದ ಫಲಶ್ರುತಿ ಎಂಬಂತೆ ಅವರು ಸರಿಸುಮಾರು ನಲವತ್ತು ಪ್ರಾಚೀನ ಲಿಪಿಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದರು. ಆದ್ದರಿಂದ 'ಪುರಾತತ್ವ' ವಿಭಾಗದಲ್ಲಿ ತುಂಬ ಜನಪ್ರಿಯವಾಗಿ ಚಲಾವಣೆಯಲ್ಲಿತ್ತು.

ಪೂಜ್ಯರು ಕ್ರಿಸ್ತಶಕ 1933ರಲ್ಲಿ ಪುರಾತನ ದಾಖಲೆಗಳ ಸಂಶೋಧನೆಗೆಂದು ಉತ್ತರ ಪ್ರದೇಶದ ಗಢವಾಲ ಪ್ರಾಂತದಲ್ಲಿ ಸಂಚರಿಸುತ್ತಿರುವಾಗ ಉತ್ತರಕಾಶಿಯ ಒಂದು 'ಶಕ್ತಿಸ್ತಂಭ'ದ ಮೇಲೆ ಬರೆಯಲ್ಪಟ್ಟ ಪ್ರಾಚೀನ ಲಿಪಿಯನ್ನು ಓದಿ ಅದರ ಅಭಿಪ್ರಾಯವನ್ನು ಬಿಹಾರ ಪ್ರದೇಶದ 'ಪುರಾ ತತ್ವಾಂಕ' ಎಂಬ ಹಿಂದಿ ಪತ್ರಿಕೆಯಲ್ಲಿ ಪ್ರಕಟಿಸಿದರು. ಇವರ ಈ ಸಾಧಾರ ಮತ್ತು ಸಪ್ರಮಾಣ ಲೇಖನವನ್ನು ಓದಿ ಅನೇಕ ಇತಿಹಾಸಜ್ಞರು ಇವರ ಪಾಂಡಿತ್ಯವನ್ನು ಮುಕ್ತಕಂಠದಿಂದ ಪ್ರಶಂಸಿದರು. ರಾಯಲ್ ಏಷಿಯಾಟಿಕ್ ಸೊಸೈಟಿನವರು ಇವರನ್ನು ಕೊಂಡಾಡಿದರು. ಏಕೆಂದರೆ 1933ರವರೆಗ ಆ ಶಿಲಾಲೇಖವನ್ನು ಯಾರೂ ಓದಿ ಅರ್ಥೈಸಿರಲಿಲ್ಲ.

ಅಗಾಧ ಲಿಪಿಜ್ಞಾನವನ್ನು ಹೊಂದಿದ್ದ ಇವರು 'ವಿಜಯಾದಿತ್ಯನ ಅಮ್ಮಣಿಗೆ ತಾಮ್ರಶಾಸನ'ದ ಕುರಿತು ಒಂದು ಸಮಗ್ರ ಲೇಖನವನ್ನು ಬರೆದು ಖ್ಯಾತ ಇತಿಹಾಸತಜ್ಞರಾದ ಮಹಾಮಹೋಪಾಧ್ಯಾಯ ರಾವ್ ಬಹಾದ್ದೂರ್ ಪಂಡಿತ ಗೌರೀಶಂಕರ ಹೀರಾಚಂದ್ ಓಝಾ ಇವರ ಅಭಿನಂದನಾ ಗ್ರಂಥದಲ್ಲಿ ಪ್ರಕಟಿಸಿದ್ದಾರೆ. ಇದು ವಿಕ್ರಮ ಸಂವತ್ 1991 (ಕ್ರಿ.ಶ.1935)ರಲ್ಲಿ ಪ್ರಯಾಗ ಕ್ಷೇತ್ರದ 'ಭಾರತೀಯ ಅನುಶೀಲನ' ಮುದ್ರಿಸಲ್ಪಟ್ಟಿದೆ.

ಕಲಿಕಾಲ ಪರಿಚಯ

ಈ ಗ್ರಂಥವು ಪರಮಪೂಜ್ಯರ ಸ್ವಹಸ್ತಾಕ್ಷರದಲ್ಲಿದೆ.ಇದುವರಿಗೆ ಅಚ್ಚಿನ ಮನೆಗೆ ಹೋಗಿಲ್ಲ. ಇದರಲ್ಲಿ ಕಲಿಯುಗ ಸಂವತ್, ವಿಕ್ರಮ ಸಂವತ್, ಶಾಲಿವಾಹನ ಶಕೆ, ಕ್ರಿಸ್ತಶಕೆ ಹಾಗೂ ಹಿಜರಿ ಶಕೆಗಳ ಕಾಲಮಾನವನ್ನು ಕೋಷ್ಟಕ ರೂಪದಲ್ಲಿ ಕೊಡಲಾಗಿದೆ.ಈ ಪುಸ್ಕದಲ್ಲಿ

ಕಲಿಯುಗದ ಪ್ರಾರಂಭದಿಂದ ಕ್ರಿಸ್ತಶಕ 1986ರವರೆಗೆ ಕಾಲಚಕ್ರದ ಪರಿಚಯವನ್ನು ಬರೆದಿಟ್ಟಿದ್ದಾರೆ. ಮುಂದಿನವರು ಅದನ್ನು ಮುಂದುವರಿಸಿಕೊಂಡು ಹೋಗಲು ಅಲ್ಲಿ ಮಾರ್ಗದರ್ಶನವಿದೆ. ಈ ಗ್ರಂಥದ ಪ್ರಾರಂಭದಲ್ಲಿ

ಮಾತುಲೋ ಯಸ್ಯ ಗೋವಿಂದಾಃ ಪಿತಾ ಯಸ್ಯ ಧನಂಜಯಃ ।

ಸೋಽಪಿ ಕಾಲವಶಾ ಪ್ರಾಪ್ತಃ ಕಾಲೋ ಹಿ ದುರತಿಕ್ರಮಃ ॥

ಈ ಶ್ಲೋಕವನ್ನು ಬರೆಯುವ ಮೂಲಕ ಪೂಜ್ಯರು 'ಕಾಲನ ದುರತಿಕ್ರಮ ಪರಾಕ್ರಮ'ವನ್ನು ಸ್ಮರಿಸಿಕೊಂಡಿದ್ದಾರೆ. ಕಾಲವಿದು ಒಂದು ತೆರನಾಗಿ ಬುಲ್ಡೋಜರ್ ಇದ್ದಂತೆ. ಇದು ತನ್ನ ಎದುರಿಗೆ ಯಾರು ಬರುತ್ತಾರೋ ಅವರನ್ನೆಲ್ಲ 'ಸ್ವಾಹಾ' ಮಾಡಿಬಿಡುತ್ತದೆ.

ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಉಯಿಲು ಮತ್ತು ಕನಸು

ಕಾಶೀ ಶ್ರೀಪೀಠದ ಅಂದಿನ ಜಗದ್ಗುರುಗಳಾದ ಶ್ರೀ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಪಂಡಿತ ವೀರಭದ್ರ ಶಾಸ್ತ್ರಿಗಳನ್ನು ತುಂಬ ಹತ್ತಿರದಿಂದ ಬಲ್ಲವರಾಗಿದ್ದರು. ಅವರ ವಿದ್ವತ್ತಿನ ಪರಿಚಯ ಪರಮಪೂಜ್ಯ ಜಗದ್ಗುರುಗಳಿಗಿತ್ತು. ಅಷ್ಟೇ ಅಲ್ಲ, ದಕ್ಷಿಣ ಪ್ರಾಂತಗಳಲ್ಲಿ ಪೂಜ್ಯ ವೀರಭದ್ರ ಶಾಸ್ತ್ರಿಗಳು ಉಂಟುಮಾಡಿದ ವೈಚಾರಿಕ ಹಾಗೂ ಸಾಮಾಜಿಕ ಕ್ರಾಂತಿಯು ಜಗದ್ಗುರುಗಳಿಗೆ ವೇದ್ಯವಾಗಿತ್ತು. ಆದ್ದರಿಂದ ಅವರು ವೀರಭದ್ರ ಶಾಸ್ತ್ರಿಗಳೇ ತಮ್ಮ 'ಉತ್ತರಾಧಿಕಾರಿ' ಎಂದು ತೀರ್ಮಾನಿಸಿಯಾಗಿತ್ತು. ಪೂಜ್ಯ ಜಗದ್ಗುರುಗಳು ತಮ್ಮ ತರುವಾಯ ಶ್ರೀ ವೀರಭದ್ರ ಶಾಸ್ತ್ರಿಗಳು ಕಾಶೀ ಜಗದ್ಗುರುಗಳಾಗಿ ಪೀಠಾಧಿಪತ್ಯವನ್ನು ವಹಿಸಿಕೊಳ್ಳಬೇಕೆಂದು ಉಯಿಲು- 'ಇಚ್ಛಾಪತ್ರ' (Will)ವನ್ನು ಬರೆದಿಟ್ಟಿದ್ದರು. ಪೂಜ್ಯಶ್ರೀ ಪಂಚಾಕ್ಷರ ಜಗದ್ಗುರುಗಳು ಶಿವಾಧೀನರಾದ ಮೇಲೆ ಅವರ ಇಚ್ಛೆಯಂತೆ ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳು ಕಾಶೀ ಪೀಠದ 84ನೆಯ ಪೀಠಾಧಿಪತಿಗಳಾಗಿ ಪೀಠಾರೋಹಣವನ್ನು ಮಾಡಿದರು.

ಶ್ರೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವದ ಆಮಂತ್ರಣ ಪತ್ರಿಕೆ

27.09-1944

ತಾರಣ ನಾಮ ಸಂವತ್ಸರ ವಿಜಯದಶಮಿ

ಕಾಶೀ ಶ್ರೀ ಜಗದ್ಗುರು ಪೀಠಾರೋಹಣ

ದಿವ್ಯ ಸನ್ನಿಧಾನ : ಶ್ರೀಮದ್ ರಂಭಾಪುರಿ ಶಿವಾನಂದ ಜಗದ್ಗುರುಗಳು

ಈ ಪೀಠಾರೋಹಣ ಮಹೋತ್ಸವವು ತಾರಣ ನಾಮ ಸಂವತ್ಸರದ ವಿಜಯದಶಮಿಯ ಪರ್ವಕಾಲದಲ್ಲಿ ದಿನಾಂಕ 27. 09. 1944ರಲ್ಲಿ ರಂಭಾಪುರಿ ಪೀಠದ

ಅಂದಿನ ವರ್ಚಸ್ವೀ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಅವರ ಅಮೃತಸದೃಶ ಕರಕಮಲಗಳಿಂದ ನೆರವೇರಿತು.

|| ಶ್ರೀ 1008 ಜಗದ್ಗುರು ವಿಶ್ವಾರಾಧ್ಯ ಪ್ರಸೀದತು ||

ಶ್ಲೋಕ ವಿಶ್ವೇಶಲಿಂಗಸಂಭೂತೋ ವಿಶ್ವಾರಾಧ್ಯೋ ಜಗದ್ಗುರುಃ

ವೀರಭದ್ರಸುಧೀಂದ್ರಾಯ, ಚಿತ್ಪೀಠಾಯುರ್ದ್ಯಾಯಿನಂ

ಶ್ರೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವಾಹ್ವಾನ ಪತ್ರಿಕೆ

ಶ್ರೀ ಭೂಕೈಲಾಸ ವಾರಾಣಸೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು

ವಿಶ್ವಾರಾಧ್ಯ ಜ್ಞಾನಸಿಂಹಾಸನ ಜಂಗಮವಾಡಿಮಠ ಸಂಸ್ಥಾನದಿಂದ:-

ಶ್ರೀಮಜ್ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರು ಲಿಂಗೈಕ್ಯರಾಗುವುದಕ್ಕೆ ಪೂರ್ವದಲ್ಲಿ ಮಾಡಿರುವ ಅಪ್ಪಣೆಯ (ವಿಲ್) ಮೇರೆಗೆ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಶ್ರೀಮನ್ನೃಪ ಶಾ.ಶ. 1866 ತಾರಣ ನಾಮ ಸಂವತ್ಸರ ಅಶ್ವಯುಜಶುದ್ಧ ವಿಜಯದಶಮಿ ಬುಧವಾರ (27-09-1944) ಮಧ್ಯಾಹ್ನದ ಧನುರ್ಲಗ್ನ (1.20, 1.50)ದ ಸುಮುಹೂರ್ತದಲ್ಲಿ

ವೇದ-ಕಾವ್ಯ-ಸ್ಮೃತಿತೀರ್ಥ, ಸಾಹಿತ್ಯ ವಿಶಾರದ, ಧರ್ಮಾಚಾರ್ಯ, ವಿದ್ಯಾನಿಧಿ, ವಿದ್ಯಾರತ್ನಾದಿ ಪದವೀವಿಭೂಷಿತರೂ, ವಿವಿಧ ಭಾಷಾಲಿಪೀತಿಹಾಸಜ್ಞರೂ, ಅನೇಕ ಗ್ರಂಥಕರ್ತೃಗಳೂ, ಸಿಕಂದ್ರಾಬಾದು ವೀರಶೈವ ಗುರುಕುಲಾದಿಸಂಸ್ಥಾಪಕರೂ, ದೇಶಿಕಮೂರ್ತಿಗಳೂ ಸುಪ್ರಸಿದ್ಧರೂ ಆದ

ಶ್ರೀ ಪಂಡಿತ ಚಿದಿರೆ ಮಠಾಧ್ಯಕ್ಷ ವೀರಭದ್ರ ಶಾಸ್ತ್ರಿಗಳವರಿಗೆ

ಶ್ರೀ ಕಾಶೀಪೀಠದಲ್ಲಿ ನೂತನ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವವು ಮಹಾವೈಭವದಿಂದ ನೆರವೇರುವುದು. ಈ ಮಹೋತ್ಸವಕ್ಕೆ ಭರತಖಂಡದ ನಾನಾಭಾಗಗಳಿಂದ ಅನೇಕ ಸ್ವಾಮಿಗಳೂ ವಿದ್ವಾಂಸರೂ ಪ್ರಮುಖರೂ ಭಕ್ತಮಾಹೇಶ್ವರರೂ ಆಗಮಿಸುವರು. ಆದುದರಿಂದ ತಾವು ಕುಟುಂಬಪರಿವಾರ ಸಮೇತರಾಗಿ ಈ ಮಹೋತ್ಸವಕ್ಕೆ ಆಗಮಿಸಿ ಇದನ್ನು ನಿರ್ವಹಿಸಿ ಶ್ರೀ ವಿಶ್ವನಾಥ-ಅನ್ನಪೂರ್ಣಾ ದರ್ಶನ, ಗಂಗಾಸ್ನಾನ,

ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನದ

ಸಾನ್ನಿಧ್ಯಗಳನ್ನು ಪಡೆದು ಧನ್ಯಾತ್ಮರಾಗಬೇಕೆಂದು ಆಶಿಸುತ್ತೇವೆ.

ತಮ್ಮ ವಿಧೇಯ

ರಾಮಚಂದ್ರ ಪ್ರಸಾದ

ಸರ್ವಾಧಿಕಾರಿ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನ, ಜಂಗಮವಾಡಿ ಮಠ, ಬನಾರಸ್ ಸಿಟಿ

ಸೂಚನೆ : ಮಹಾಸನ್ನಿಧಿಗೆ ಅರ್ಪಿಸುವ ಗುರುದಕ್ಷಿಣೆ, ಬೆಳ್ಳಿ ಬಂಗಾರದ ವಸ್ತುಗಳು ಪೂಜಾಸಾಮಗ್ರಿ, ಸ್ತೋತ್ರ, ಕವಿತೆ ಮುಂತಾದವುಗಳನ್ನು ಎಂಟು ದಿನ ಮೊದಲೇ ನನ್ನ ಹೆಸರಿಗೆ ರಿಜಿಸ್ಟರ್ ಪೋಸ್ಟಿನಿಂದ ರವಾನಿಸುವುದಲ್ಲದೆ ಆಯಾ ವಸ್ತುಗಳ ಮೇಲೆ ತಮ್ಮ ಪೂರ್ಣ ವಿಳಾಸ ಬರೆದು ಹಚ್ಚಬೇಕು. ಬರತಕ್ಕವರು ತಮಗೆ ಬೇಕಾದ ಪ್ರತ್ಯೇಕವಾದ ಏರ್ಪಾಟುಗಳೇನಾದರೂ ಇದ್ದರೆ ತಿಳಿಸಬೇಕು.

ಇಲ್ಲಿಯ ಹವಾಮಾನವು ವಿಜಯದಶಮಿಯಲ್ಲಿ ಬಹಳ ಅನುಕೂಲವಾಗಿರುವುದು.

ಪ್ರೇಮಸಾಗರ ಪ್ರೆಸ್, ಸುಲತಾನ್ ಬಾಜಾರ್, ಹೈದರಾಬಾದು-ದ

ಕರ್ನಾಟಕ ಆಂಧ್ರ ಮಹಾರಾಷ್ಟ್ರ ನಾಡಿನುದ್ದಗಲಗಳಿಂದ ಪರಮಪೂಜ್ಯರ ಪಟ್ಟಾಭಿಷೇಕ ಮಹೋತ್ಸವಕ್ಕೆ ಅಭಿಮಾನ ಹಾಗೂ ಅಭಿನಂದನೆಗಳು ಮಹಾಪ್ರವಾಹವೇ ಹರಿದುಬಂದಿತು.

ಅಭಿನಂದನೆಯ ಒಂದು ಮಾದರಿ ಪತ್ರ ಇಲ್ಲಿದೆ.

ಶ್ರೀ ಶಿವಾಭ್ಯಾಂ ನಮಃ

ಇದಂ ಕಿಲಾನಂದಮಾನಂದಮಾತನೋತಿ ಸಮೇಷಾಮಸ್ಮಾಕಂ
ಯದದ್ಯ ವೇದಕಾವ್ಯ, ಸ್ಮೃತಿ, ದರ್ಶನ ತೀರ್ಥ, ಸಾಹಿತ್ಯ
ವಿಶಾರದ, ಧರ್ಮಾಚಾರ್ಯ, ವಿದ್ಯಾನಿಧಿ, ವಿದ್ಯಾರತ್ನೇತ್ಯಾದ್ಯನೇಕ
ಬಿರುದಾಲಂಕೃತೇಭ್ಯಸ್ತತ್ರಭವದ್ಭ್ಯಃ ಶ್ರೀಮದ್ಭ್ಯಃ ಜದರೆಮಠ(ಂ)
ಪಂಡಿತ ವೀರಭದ್ರ ಶರ್ಮಾಭ(ಧೀ)ಭ್ಯಃ
ಸಮುಪಾಹಾರ್ಷ್ಮಾಭಿನಂದನಪತ್ರಿಕಾಂ ನ ಕೇವಲಮಿಯಂ ವಿಜ್ಞಾನವರ್ಧಿನೀ
ಪರಿಷತ್ ಕಿಂತು ಕೃಶಾನುಭ್ಯಾಂಗ್ಲಲೋಕಃ ಸಮುಚಿತಾರ್ಥಸಂಪನ್ನೋಪಿ
ಭವತೀತಿ ಮಾನನೀಯಾಃ!
ನಿಖಿಲಶಾಸ್ತ್ರನಿಧಾನಭೂತಾಯಾಂ ಕಾಶ್ಯಾಂ ಶಾಸ್ತ್ರಾಣ್ಯಧೀತ್ಯ,

ಛಾತ್ರನಿವಾಸೇಭ್ಯೋ ಭೋಜಯಂತಃ, ಪತ್ರಿಕಾಮುಖೇನ ಪ್ರಚಾರಯಂತಃ ಚಿರಂತಸ್ಯ ತಸ್ಯೈವ ವಿದ್ಯಾಯಾಸ್ತತ್ತ್ವಾರ್ಥವತ್ತ್ವಂ ಪ್ರಸಾರಯಂತೋ ಭವಂತಃ ಶ್ರೀಕಾರ್ಷ್ಣ್ಯಸ್ಯ ಕಾರ್ಷ್ಣ್ಯಮುತ್ಪಾದಯಂತಿ. ತತ್ರಭವತಾಮನನ್ಯಸಾಧಾರಣಂ ವೈದುಷ್ಯಂ ಶಾಸ್ತ್ರೇಷು, ನಿರವಧಿಕಃ ಪ್ರೇಮಭರೋ ಮಾತೃಭಾಷಾಯಾಂ ಅಹಮಹಮಿಕಾ ಭಾಷಾಸೇವಾಯಾಂ ಸೌಜನ್ಯಂ ಚ ಸರ್ವೇಷು ವಿಶ್ವವಿಖ್ಯಾತಮಿತ್ಯೇವ ವಿಶ್ವೇಶ್ವರಃ ಸ್ವಸನ್ನಿಧೌ ವಾಸಮಕಲ್ಪಯತ್. ಅತ್ರಭವತಾಂ ಅನ್ಯಾದೃಶೀ ವಿಮರ್ಶನಸರಣಿಃ, ವಿಶೇಷನೈಪುಣೀ ಸಿದ್ಧಾಂತೀಕರಣೇ, ಸಂಸ್ಕೃತಾ ವಾಕ್, ವಿಧಿದೃಷ್ಟಂ ಚ ಕರ್ಮೇತ್ಯೇತತ್ ಸಾಕಲ್ಯೇನ ಅನ್ಯೇಷಾಂ ನಿದರ್ಶನಂ ಭವತಿ. ಭವತಾಂ 'ವಿಭೂತಿ' ಪತ್ರಿಕಾ ನ ಕೇವಲಂ ನಾಮತಃ ಕಿಂತ್ವರ್ಥತೋಽಪಿ ಲೋಕವಿಭೂತ್ಯೈ ಭವತೀತಿ ನಾತ್ಯುಕ್ತಿಃ. ಮಹಾರಾಷ್ಟ್ರ, ಕರ್ಣಾಟಕಾದಿ ಸಾಹಿತ್ಯಸಭಾ ಸ್ವಾಗ್ರಿಮಂ ಸ್ಥಾನಮಲಂಕುರ್ವತಾಂ ಭವತಾಂ ವಿಜ್ಞಾನಜ್ಯೋತಿಃ ವಿವಿಧಮುಖೇನ ದೇದೀಪ್ಯತ ಇತಿ ವಿಜ್ಞಾನವರ್ಧಿನೀ ಪರಿಷದ್ ಭವತಾಂ ಸತ್ಕೃತಾ ಸತ್ಕಾರಂ ಶೋಭತ ಇತಿ ವಿದುಷಾಂ ವಿದಿತಚರಮೇವ. ಪ್ರಮುದಿತಯಾ ಆಂಧ್ರಜನಸ್ಯೈದಂ ಪ್ರಥಮತಯಾ ವಿಶ್ರಾಣಿತಂ ಛಾತ್ರನಿಲಯಸ್ಯ ಮಠಸ್ಯಾಧಿಪತ್ಯಮಂಗೀಕೃತ್ಯ ಯಥಾಪೂರ್ವಮಾಂಧ್ರಲೋಕಸ್ಯ ಭಾಷಾಯಾಶ್ಚ ಸರ್ವತೋಮುಖೀನ್ಯತ್ವಮಾಪಾದಯಿತುಂ ಯತೇಯುರಿತಿ ಪ್ರಾರ್ಥಯಾಮಹೇ

ಶ್ರೀ ಪಾರ್ವತೀಪತಿ ದಯಾವೃತಪೂರ್ಣದೃಷ್ಟ್ಯಾ ಶ್ರೀ ವೀರಭದ್ರವಿಬುಧಾಃ ವಸುಚಿರಂ ಧರಾಯಾಮ್ ಆನಂದಕಂದಲಿತಮಾಯತಮಾಯುರಕ್ಷೈಃ ಸಂಪ್ರಾಪ್ನುಯಾದಿತಿ ಶಿವಂ ಸತತಂ ಭಜಾಮಃ

ಶ್ರೇಯೋಭಿಲಾಷಿಣಃ
ವಿಜ್ಞಾನವರ್ಧಿನೀ ಪರಿಷತ್
ದಕ್ಷಿಣ ಹೈದರಾಬಾದ
ತಾರಣ ಶ್ರಾವಣಶುದ್ಧ ಸಪ್ತಮೀ
ಗುರುವಾಸರಃ
27.7.1944

ಪರಮಪೂಜ್ಯರ ಜಗದ್ಗುರು ಪೀಠಾರೋಹಣದ ಸವಿವರ ವರದಿಯನ್ನು ಅನುಬಂಧದಲ್ಲಿ ನೋಡಿ.

ಕಾಶೀ ಜ್ಞಾನಪೀಠವನ್ನು ಆರೋಹಣ ಮಾಡಿದ ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳವರ 'ಪೂರ್ಣ ಪರಿಚಯ'ದ ಸಂಕ್ಷಿಪ್ತ ರೂಪ. (In a nutshell).

ವೇದತೀರ್ಥ, ಕಾವ್ಯತೀರ್ಥ, ಸ್ಮೃತಿತೀರ್ಥ,
ಸಾಹಿತ್ಯ ವಿಶಾರದ, ಧರ್ಮಾಚಾರ್ಯ, ವಿದ್ಯಾನಿಧಿ ವಿದ್ಯಾರತ್ನ

1. ಭೂತಪೂರ್ವ ಪ್ರಿನ್ಸಿಪಾಲ್: ಶಂಕರ ಸಂಸ್ಕೃತ ಕಾಲೇಜ್, ಯಾದಗಿರಿ
2. ಲಿಪಿಶಾಸ್ತ್ರಜ್ಞ, ಚರಿತ್ರಾನ್ವೇಷಕ
3. ನಿರ್ಮಾತಾ : ಶೈವಭಾರತೀ ಭವನ, ವೀರಶೈವ ಗುರುಕುಲ
4. ಸಂಪಾದಕ : ಶಿವಧರ್ಮಗ್ರಂಥಮಾಲಾ, ವಿಭೂತಿ (ತೆಲಗು ಮಾಸಿಕ)
5. ಅಧಿಪತಿ : ಶ್ರೀಜಗದ್ಗುರು ವಿಶ್ವಾರಾಧ್ಯ ಸಿಂಹಾಸನ, ಜಂಗಮವಾಡಿಮಠ, ಬನಾರಸ ಸಿಟಿ

ಕಾಶೀ ಪೀಠದ ಇತಿಹಾಸದಲ್ಲಿಯೇ ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳದು ಒಂದು ವಿಶಿಷ್ಟ ಮತ್ತು ವಿದ್ವತ್ಪೂರ್ಣ ವರ್ಚಸ್ಸು. ಪರಮಪೂಜ್ಯರು ಪೀಠಾರೋಹಣವನ್ನು ಮಾಡುತ್ತಲೇ ಶ್ರೀಪೀಠದ ಧಮನಿ ಧಮನಿಗಳಲ್ಲಿ ಸರ್ವತೋಮುಖ ಮತ್ತು ಸರ್ವಾಂಗೀಣ ಪ್ರಗತಿಯ 'ಓಂಕಾರ ನಾದ' ಮೊಳಗತೊಡಗಿತು. ಪೂಜ್ಯರು ಶ್ರೀಪೀಠದ ಕಾರ್ಯವಾಹಿನಿಯನ್ನು ಮತ್ತು ಕಾರ್ಯಕಾರಿಣಿಯನ್ನು ಉತ್ಸಾಹಿಸಿದರು.

ಪೂಜ್ಯರ ಯೋಜನೆಗಳು ಮತ್ತು ಯೋಚನೆಗಳು

ಶ್ರೀಪೀಠದ ಋಣಪರಿಹಾರಕ್ಕೆ ಆದ್ಯತೆ

ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳು ಪೀಠಾರೋಹಣ ಮಾಡಿದ ಸಮಯದಲ್ಲಿ ಕಾಶೀ ಪೀಠವು ಋಣಭಾರದ ಹೊರೆಯಿಂದ ತ್ರಸ್ತಗೊಂಡಿತ್ತು. ಅದನ್ನು ಗಂಭೀರವಾಗಿ ಗಮನಿಸಿ ಪೂಜ್ಯರು ಶ್ರೀಪೀಠದ ಋಣಭಾರವನ್ನು ಕಡಿಮೆ ಮಾಡಿ ಪೀಠವನ್ನು ಋಣಮುಕ್ತಗೊಳಿಸುವಲ್ಲಿ ಅಹರ್ನಿಶಿ ಪರಿಶ್ರಮಿಸಿದರು.

ಜ್ಞಾನಮಂದಿರದ ಸುತ್ತಮುತ್ತ

ಶ್ರೀಪೀಠದಲ್ಲಿ ತಮ್ಮ ಕನಸಿನ ಕೂಸಾದ 'ಜ್ಞಾನಮಂದಿರ' ಗ್ರಂಥಾಲಯಕ್ಕೆ ಶಂಕುಸ್ಥಾಪನೆಯನ್ನು ಮಾಡಿ ಆರೇ ಆರು ತಿಂಗಳ ಅಲ್ಪ ಕಾಲಾವಧಿಯಲ್ಲಿ ಅದನ್ನು ಪೂರೈಸಿ ವಿಧ್ಯುಕ್ತವಾಗಿ ಉದ್ಘಾಟಿಸಿ ವಿದ್ವತ್ ವಲಯಕ್ಕೆ ಸಮರ್ಪಿಸಿದರು. ಜ್ಞಾನಮಂದಿರ ಗ್ರಂಥಾಲಯವು ಗ್ರಾಂಥಿಕ ಶ್ರೀಮಂತಿಕೆಯಿಂದ ಕೂಡಿಕೊಂಡು ಜ್ಞಾನಪೀಠದಲ್ಲಿ ಶೋಭಾಯಮಾನವಾಗಿ ರಾರಾಜಿಸುತ್ತಿರುವುದನ್ನು ಕಂಡು ವೀರಭದ್ರ ಜಗದ್ಗುರುಗಳ ಅಂತರಂಗವು ಆನಂದದಿಂದ ಸಂಭ್ರಮಿಸಿತು.

ವೀರಶೈವ ಸೈನಿಕರು.......

ವೀರಶೈವರನ್ನು ಮೊತ್ತ ಮೊದಲ ಬಾರಿಗೆ 'ವೀರಶೈವ ಸೈನಿಕರು' ಎಂದು ಕರೆದವರು ಶ್ರೀ ವೀರಭದ್ರ ಜಗದ್ಗುರುಗಳು. ತನ್ಮೂಲಕ ಅವರು ವೀರಶೈವ ಯುವಶಕ್ತಿಯನ್ನು ಉತ್ಸಾಹಿಸಿದರು. ವೀರಶೈವ ಯುವಕರೆಲ್ಲ ಸೈನಿಕರ ಹಾಗೆ ವೇಷವನ್ನು ಧರಿಸಿಕೊಂಡು ಧರ್ಮ ಸೇವೆಗಾಗಿ ಹಾಗೂ ದೇಶಸೇವೆಗಾಗಿ ದುಡಿಯಬೇಕು ಇಲ್ಲವೆ ಮಡಿಯಬೇಕು ಎಂಬ 'ಮಾಡು ಇಲ್ಲವೆ ಮಡಿ' ಎಂಬ ಸಿದ್ಧಾಂತವನ್ನು ಅವರ ಎದೆಗಳಲ್ಲಿ ತುಂಬಿದರು.

'ಶೈವ ಭಾರತೀ' ಪತ್ರಿಕೆಯ ಕನಸು!!

ತಮ್ಮ ಪೂರ್ವಾಶ್ರಮದಲ್ಲಿ ಪ್ರಾರಂಭಿಸಿದ್ದ ತೆಲಗು ಭಾಷೆಯಲ್ಲಿನ 'ವಿಭೂತಿ' ಪತ್ರಿಕೆಯನ್ನು ಪರಿಷ್ಕರಿಸಿ 'ಶೈವ ಭಾರತೀ' ಎಂಬ ಹೊಸ ನಾಮಾಂಕಿತದೊಂದಿಗೆ ಮತ್ತು ವಿನೂತನ ವಿನ್ಯಾಸದೊಂದಿಗೆ ಪ್ರಕಟಿಸುವ ಕನಸು ಶ್ರೀ ವೀರಭದ್ರ ಸನ್ನಿಧಿಯವರದಾಗಿತ್ತು.

ಪರಮಪೂಜ್ಯರು ಕಾಶೀ ಪೀಠವನ್ನು ತಮ್ಮ ಕಲ್ಪನೆಯ ಕುಂಚದಿಂದ ಶ್ರೀಮಂತವಾಗಿ ಶೃಂಗರಿಸಿದರು. ಅವರ ಮನೋಬಾಂಢಾರದಲ್ಲಿ ಶ್ರೀಪೀಠದ ಉಜ್ವಲೋಜ್ವಲ ಪ್ರಗತಿಯ ಕುರಿತಾದ ಸಾವಿರಾರು ಸುಂದರ ಕನಸುಗಳು ಮತ್ತು ನವಿರಾದ ಕಲ್ಪನೆಗಳು ಬಂಧಿಯಾಗಿದ್ದವು.

ಪರಮಪೂಜ್ಯರು ಪೀಠಾರೋಹಣವನ್ನು ಮಾಡುತ್ತಲೇ ತಾವು ಸಂಕಲ್ಪಿಸಿಕೊಂಡಿದ್ದ ಸಂಕಲ್ಪಗಳಿಗೆಲ್ಲ ಚಾಲನೆಯನ್ನು ಕೊಡಲು ಪ್ರಾರಂಭಿಸಿದರು. ಶ್ರೀಪೀಠವು ಅವರ ಕಾರ್ಯಕಾಲದಲ್ಲಿ 'ಹೊಸಸ್ಪರ್ಶ'ವನ್ನು ಪಡೆದುಕೊಳ್ಳಲಾರಂಭಿಸಿತು. ಆದರೆ ಅಷ್ಟರಲ್ಲಿ ವಿಧಿಯು ಬೇರೆ ತೆರನಾಗಿ ತನ್ನ ನಿರ್ಣಯವನ್ನು ಬರೆಯತೊಡಗಿತ್ತು.

ಅನಾರೋಗ್ಯ

ಕೆಲವು ದಿನಗಳವರೆಗೆ ಅವರನ್ನು ಅನಾರೋಗ್ಯವು ತುಂಬ ಗಂಭೀರವಾಗಿ ಕಾಡಿತು. ಎಷ್ಟೋ ದಿನಗಳವರೆಗೆ ಊಟವನ್ನು ಮಾಡುವುದಕ್ಕೂ ಕೂಡ ಅವಕಾಶವನ್ನು ಮಾಡಿಕೊಡಲಿಲ್ಲ.

ಪೂಜ್ಯರು ಬರೀ ಹಣ್ಣಿನ ರಸವನ್ನು ಸೇವಿಸಿಕೊಂಡಿರಬೇಕಾಗಿತ್ತು. ಅವರ ಆರೋಗ್ಯ ದಿನೇ ದಿನೇ ಕ್ಷಯಿಸತೊಡಗಿತು. ಪ್ರತಿಯೊಂದು ದಿನವನ್ನು ಅವರು ತುಂಬ ಕಷ್ಟದಿಂದ ಎದುರಿಸುವಂತಾಯಿತು.

ಉತ್ತರಾಧಿಕಾರತ್ವದ ಉಯಿಲು.....

ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಪ್ರಕೃತಿಯಲ್ಲಿ ಅನಾರೋಗ್ಯ ಲಕ್ಷಣಗಳು ದಾಂಗುಡಿ ಇಡುತ್ತಿರುವುದನ್ನು ಗಮನಿಸಿ ಶ್ರೀಪೀಠದ ತಮ್ಮ ಉತ್ತರಾಧಿಕಾರಿಗಳ ಕುರಿತು ಆಲೋಚಿಸತೊಡಗಿದರು. ಆಗ ಅವರ ಗಮನ ಸೆಳೆದವರು ಶ್ರೀ ವಿಶ್ವೇಶ್ವರ ಶಿವಾಚಾರ್ಯರು ಅಂದರೆ ಅಂದಿನ ಕ್ಯಾಸನೂರಿನ ಶ್ರೀ ಜಯಗುರು ಶಿವಾಚಾರ್ಯರು.

ಪೂಜ್ಯ ಶಿವಾಚಾರ್ಯರ ಹೆಸರಿನಲ್ಲಿ ಕೂಡಲೇ ಮೃತ್ಯುಪತ್ರವನ್ನು ಬರೆದಿಟ್ಟು ಆ ಸಮಾಚಾರವನ್ನು (Will) ಕೆಳಕಂಡ ಪೂಜ್ಯರುಗಳಿಗೆ ಮತ್ತು ದೇಶದ ಪ್ರಮುಖ ಜನಗಳಿಗೆ ತಂತಿ ಸಂದೇಶದ ಮೂಲಕ ತಿಳಿಸಿದರು. ಅವರ ನಾಮಕ್ರಮ ಸಂಖ್ಯೆಯು ಈ ಕೆಳಗಿನಂತಿದೆ.

1. ಶ್ರೀ ಜಗದ್ಗುರು ಶ್ರೀಶೈಲ ಮಹಾಸ್ವಾಮಿಗಳವರಿಗೆ 2. ಶ್ರೀಮದ್ರಂಭಾಪುರೀ ಜಗದ್ಗುರುಗಳವರಿಗೆ 3. ಶ್ರೀಮದುಜ್ಜಯಿನೀ ಜಗದ್ಗುರುಗಳವರಿಗೆ 4. ಶ್ರೀ ಷ. ಬ್ರ. ಹೊಟಗೀ ಶ್ರೀಗಳವರಿಗೆ 5. ಶ್ರೀ ಷ. ಬ್ರ. ಪರಾಂಡಕರ ಶ್ರೀಗಳವರಿಗೆ 6. ಶ್ರೀ ಷ. ಬ್ರ. ಕುಂದಗೋಳ ಶ್ರೀಗಳವರಿಗೆ 7. ಶ್ರೀ ಷ. ಬ್ರ. ಜಮಖಂಡಿ ಶ್ರೀಗಳವರಿಗೆ 8. ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರಿಗೆ 9. ಪಂಡಿತ ಶ್ರೀ ಮರುಳಾರಾಧ್ಯ ಶಾಸ್ತ್ರಿಗಳವರಿಗೆ 10. ಶ್ರೀ ಅಫಝುಲ್‌ಪುರಕರ ಸೋಲಾಪುರ 11. ಶ್ರೀ ಮಲ್ಲಿಕಾರ್ಜುನಪ್ಪ ಗಂಭೀರೆ 12. ಶ್ರೀ ಮೂರ್ತ್ಯಪ್ಪ ಪೆಂಗಾಣೆ 13. ಶ್ರೀ ಪಿ. ಮಹದೇವಯ್ಯ ಬೆಂಗಳೂರು 14. ಶ್ರೀ ಜಿ. ಮಲ್ಲಿಕಾರ್ಜುನ ಬೆಜವಾಡ 15. ಶ್ರೀ ಶರಣಬಸಪ್ಪ ಗುಲಬರ್ಗಾ 16. ಶ್ರೀ ಎನ್. ರುದ್ರಯ್ಯ ಬೆಂಗಳೂರು 17. ಶ್ರೀ ಪಿ. ಆಯ್. ಹಿರೇಮಠ ಹುಬ್ಬಳ್ಳಿ 18. ಶ್ರೀ ಗುರುಸಿದ್ದಪ್ಪ ಗೌಡರು ಮರೂರು 19. ಶ್ರೀ ಶಿವಲಿಂಗಪ್ಪ ಕೊಪ್ಪಾಳಿ ಮಾಸೂರು 20. ಶ್ರೀ ಅಪ್ಪಯ್ಯ ಶಾಸ್ತ್ರಿ ಹಿರೇಮಠ ಮಿರಜ್ 21. ಶ್ರೀ ಶಂಕರರಾವ್ ಕಟಾಪ ಪಂಢರಪುರ 22. ಶ್ರೀ ಗುರುಬಸಪ್ಪ ಕಂಪ್ಲಿ ಹಿರೇಕೆರೂರು 23. ವೇ॥ ಪುಟ್ಟವೀರಯ್ಯನವರು 24. ಶ್ರೀ ಶಿವರುದ್ರಪ್ಪ ವಕೀಲರು ಹೈದರಾಬಾದ

ಅದೂ ಅಲ್ಲದೆ, ಕೆಲ ಕನ್ನಡ-ಆಂಧ್ರ-ಮರಾಠಿ ಮೊದಲಾದ ಸಮಾಚಾರ ಪತ್ರಿಕೆಗಳಿಗೆ ಕಳುಹಿಸಿದ್ದಾಯಿತು.

1. ಆಂಧ್ರ ಪತ್ರಿಕೆ 2. ಹಿಂದೂ 3. ಆಂಧ್ರಪ್ರಭಾ 4. ಮಾತೃಭೂಮಿ 5. ಸಂಯುಕ್ತ ಕರ್ನಾಟಕ 6. ದಿವ್ಯವಾಣಿ 7. ಗೋಲಕೊಂಡ ಪತ್ರಿಕೆ 8. ಪ್ರಜಾ 9. ನವಯುಗ 10. ತರುಣ

ಕರ್ನಾಟಕ 11. ಸೊಲ್ಲಾಪುರ ಸಮಾಚಾರ 12. ಸುದರ್ಶನ 13. ಸನ್ಮಾರ್ಗದರ್ಶಕ, ಈ ಎಲ್ಲ ಪತ್ರಿಕೆಗಳಿಗೆ ಕಳುಹಿಸಲಾಯಿತು.

ಇಹಮುಕ್ತಿ...25.01.1948

ಪರಮಪೂಜ್ಯರ ಕನಸುಗಳೆಲ್ಲ ನನಸಾಗುವ ಮುನ್ನವೇ, ಇನ್ನೂ ಅವರ 'ಸಂಕಲ್ಪಯಾತ್ರೆ'ಯು ಮಾರ್ಗಮಧ್ಯದಲ್ಲಿರುವಾಗಲೇ ಅವರು ಕಾಲನ ಕರೆಗೆ 'ಓ'ಗೊಡಬೇಕಾಯಿತು. ಪರಮಪೂಜ್ಯರು ದಿನಾಂಕ 25-01-1948ರಂದು ಭಾನುವಾರ ಸಾಯಂಕಾಲ 7 ಗಂಟೆ 30 ನಿಮಿಷಕ್ಕೆ **(at 7.30 P.M. on Sunday the 25th January 1948)** ಲಿಂಗೈಕ್ಯರಾದರು. ಕಾಶೀ ಶ್ರೀಪೀಠದ ಅಪೂರ್ವ ವ್ಯಕ್ತಿತ್ವವೊಂದು ಪೀಠವು ಸರ್ವಾಂಗೀಣ ಪ್ರಗತಿಯ ಔನ್ನತ್ಯವನ್ನು ಕಾಣುವ ಮುನ್ನವೇ ವಾಹಿನಿಯಿಂದ ಕಳಚಿಕೊಂಡಂತಾಯಿತು. ಇದರಿಂದ ಶ್ರೀಪೀಠವು ಮತ್ತೊಮ್ಮೆ ಆಘಾತಕ್ಕೆ ಒಳಗಾಗುವಂತಾಯಿತು. ಎದೆ ತುಂಬಿ ಹಾಡುವ ತಯ್ಯಾರಿಯಲ್ಲಿದ್ದ ಶ್ರೀಪೀಠವು ಮತ್ತೆ ಎದೆಗುಂದುವಂತಾಯಿತು. ಕಾಶೀ ಪೀಠದ ಇತಿಹಾಸದಲ್ಲಿ ಪರಮಪೂಜ್ಯರ ಅಗಲಿಕೆಯದು ತುಂಬಲಾರದ ನಷ್ಟ ಮತ್ತು ಭರಿಸಲಾಗದ ಕಷ್ಟ. ಸಾವಿನ ಸಾನಿಧ್ಯದಲ್ಲಿದ್ದಾಗಲೂ ಪರಮಪೂಜ್ಯರು ಓದು-ಬರಹದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಾಯಂಕಾಲ 6.30ರವರೆಗೂ ಅವರು ತಮ್ಮ ದಿನನಿತ್ಯದ ರೂಢಿಯಂತೆ ಬರೆಯುತ್ತಲೇ ಇದ್ದರು. ಮೃತ್ಯು ದೇವತೆ ಹೊಸಿಲಲ್ಲಿ ಬಂದು ನಿಂತುಕೊಂಡಿದ್ದಾಗಲೂ ಅವರು ಪಾರದರ್ಶಕದಂತೆ ತಮ್ಮ ಕರ್ತವ್ಯ ಮತ್ತು ಕಾರ್ಯ-ಕಲಾಪಗಳನ್ನು ಮಾಡಿಕೊಂಡಿದ್ದರು. ಆ ನಿರಂತರ ಕ್ರಿಯಾಶೀಲತೆಯನ್ನೇ ನಾವು 'ವೀರಭದ್ರ ಜಗದ್ಗುರು'ಗಳೆಂದು ಕರೆಯಬೇಕು. ಶ್ರೀ ವೀರಭದ್ರ ಜಗದ್ಗುರುಗಳು ಇತಿಹಾಸವನ್ನು ಬಿಟ್ಟುಹೋಗಲಿಲ್ಲ. ಅವರು ಇತಿಹಾಸವನ್ನು ಬದುಕಿಸಿಹೋದರು. ಈ ಮಾತು ಅಕ್ಷರಶಃ ಸತ್ಯ.

ಅನುಬಂಧದಲ್ಲಿ ಅವರ ಅಂತಿಮ ವಿದಾಯದ ಪತ್ರಿಕಾ ವರದಿಯನ್ನು ನೋಡಿ.

ಸಾರಸ್ವತ ಲೋಕದ ಸಶಕ್ತ ಚೇತನಕ್ಕೊಂದು ಅಂತಿಮ ನಮನ

ಕೇವಲ ಮೂರು ವರುಷ ಮೂರು ತಿಂಗಳು ಹಾಗೂ ಇಪ್ಪತ್ತೊಂಬತ್ತು ದಿನಗಳವರೆಗೆ ಮಾತ್ರ ಪರಮಪೂಜ್ಯರು ಪೀಠಾಧ್ಯಕ್ಷರಾಗಿದ್ದರು. ಅವರು ಶ್ರೀಪೀಠದ ಕುರಿತಾಗಿ ತಮ್ಮ ಮನಸ್ಸಿನಲ್ಲಿ ಸಾವಿರ, ಸಾವಿರ ಯೋಜನೆಗಳನ್ನು ಕಟ್ಟಿಕೊಂಡಿದ್ದರು.

ಪರಮಪೂಜ್ಯರ ಸಂಕಲ್ಪಗಳಲ್ಲಿ ದೃಢತೆ ಇತ್ತು. ಅವರು 'ಪುರುಷ ಸರಸ್ವತಿ'ಗಳಾಗಿದ್ದಂತೆ 'ಸಂಕಲ್ಪ ಸರಸ್ವತಿ'ಗಳು ಕೂಡ ಆಗಿದ್ದರು. ಅವರ ಸಂಕಲ್ಪದಲ್ಲಿ ದೈವೀ ಬಲವಿತ್ತು, ಅನಂತ ಶಕ್ತಿ ಇತ್ತು. ಆದ್ದರಿಂದಲೇ ಅವರ ಕನಸುಗಳೆಲ್ಲ ಇನ್ನೂ ಜೀವಂತವಾಗಿವೆ. ಯಾವ ಸಂಕಲ್ಪವು

ಪ್ರಾಮಾಣಿಕವಾಗಿ ಮತ್ತು ಪ್ರಾಂಜಲವಾಗಿ ಇರುತ್ತದೆಯೋ ಅದು ದೀರ್ಘಾಯುವಾಗುತ್ತದೆ. ಯಾವ ಸಂಕಲ್ಪದಲ್ಲಿ ಪ್ರಾಮಾಣಿಕತೆ ಮತ್ತು ಪ್ರಾಂಜಲತೆ ಇರುವುದಿಲ್ಲವೋ ಅಂಥ ಸಂಕಲ್ಪಗಳು ಅಲ್ಪಾಯುವಾಗುತ್ತವೆ. ಸ್ವತಃ ಶ್ರೀ ವೀರಭದ್ರ ಜಗದ್ಗುರುಗಳವರ ಪರಮಪೂಜ್ಯ ಜೀವನವೇ ಒಂದು ಪ್ರಾಮಾಣಿಕ ಸಂಕಲ್ಪ, ಆದ್ದರಿಂದ ಅದು ಇನ್ನೂ ಜೀವಂತವಾಗಿದೆ.

ನೂರು ವರುಷಗಳ ನಂತರ....... ಇದು ಸಂಸ್ಮರಣ ವರ್ಷ.......

ಶ್ರೀ ವೀರಭದ್ರ ಜಗದ್ಗುರುಗಳ ನೆನಹಿನಲ್ಲಿ......

ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳು ಗತಿಸಿ 56 ವರ್ಷಗಳು ಕಳೆದುಹೋಗಿದ್ದರೂ ಅವರು ಕಂಡ ಕನಸುಗಳು ಮತ್ತು ಸಂಕಲ್ಪಿಸಿದ ಸಂಕಲ್ಪಗಳು ಶ್ರೀಪೀಠದ ವರ್ತಮಾನ ಜಗದ್ಗುರುಗಳ ಮೂಲಕ ಕಾರ್ಯರೂಪಕ್ಕೆ ಬರುತ್ತಲಿರುವುದು ಶ್ರೀ ವೀರಭದ್ರ ಜಗದ್ಗುರುಗಳ 'ಸಂಕಲ್ಪ-ದಾರ್ಢ್ಯ'ವನ್ನು ಎತ್ತಿ ತೋರಿಸುತ್ತಿದೆ ಎಂದು ಹೇಳಬಹುದು. ಈಗಾಗಲೇ ಶ್ರೀ ಪೀಠದ 'ವರ್ತಮಾನ'ವಾದ ಶ್ರೀ ಜಗದ್ಗುರು ಡಾ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಪೂರ್ವಾಚಾರ್ಯರಾದ ಶ್ರೀ ವೀರಭದ್ರ ಜಗದ್ಗುರುಗಳ ಕನಸುಗಳನ್ನು ನನಸಾಗಿಸುವ ಮತ್ತು ಸಂಕಲ್ಪಗಳನ್ನು ಸಂಚಲನಗೊಳಿಸುವ ದಿಶೆಯಲ್ಲಿ ಮಹತ್ವದ ಹೆಜ್ಜೆಯನ್ನು ಇಟ್ಟಾಗಿದೆ.

ಶ್ರೀ ವೀರಭದ್ರ ಜಗದ್ಗುರುಗಳು ಜನಿಸಿದುದು ಭಾರತೀಯ ಸಂವತ್ಸರದ ಪ್ರಕಾರ ಶಾಲಿವಾಹನ ಶಕೆ 1826 ಕ್ರೋಧೀ ನಾಮ ಸಂವತ್ಸರ ಶ್ರಾವಣ ಶುದ್ಧ ಪೌರ್ಣಿಮೆಯಂದು ಅಂದರೆ ದಿನಾಂಕ 25. 08. 1904ರಂದು. ಇಸ್ವಿಸನ್ 2004ರ ಶ್ರಾವಣ ಶುದ್ಧ ಪೌರ್ಣಿಮೆಗೆ ಮತ್ತು 25.08. 2004ಕ್ಕೆ ಪೂಜ್ಯರು ಜನ್ಮಿಸಿ ನೂರು ವರುಷಗಳಾದವು. ಇದು ಅವರ ಜನ್ಮ ಶತಮಾನೋತ್ಸವ ಪೂರ್ತಿ ಸಂವತ್ಸರ. ಕಾಶೀ ಪೀಠದ ಶ್ರೀಮಂತ ಇತಿಹಾಸದಲ್ಲಿ ಅತ್ಯಂತ ಶ್ರೀಮಂತ ವ್ಯಕ್ತಿತ್ವವನ್ನು ಹೊಂದಿ ವಿದ್ವತ್ ಕ್ಷೇತ್ರದಲ್ಲಿ ಚಿರಂಜೀವಿಗಳಾಗಿ ಉಳಿದ ಲಿಂಗೈಕ್ಯ ಶ್ರೀ ವೀರಭದ್ರ ಜಗದ್ಗುರುಗಳ ಜನ್ಮಶತಮಾನೋತ್ಸವ ಪೂರ್ತಿ ವಾರ್ಷಿಕದ ಈ ಸುಸಂದರ್ಭದಲ್ಲಿ ಅವರ ಶತಾಬ್ದಿಪೂರ್ತಿ ಸಮಾರಂಭವನ್ನು ಈ ವರ್ಷ ಪೂರ್ತಿ ನಾಡಿನಾದ್ಯಂತ ವಿವಿಧ ಭಾಗಗಳಲ್ಲಿ ವಿವಿಧ ಪ್ರಾಂತಗಳಲ್ಲಿ, ಜಿಲ್ಲೆ-ಜಿಲ್ಲೆಗಳಲ್ಲಿ ನಗರ-ಪಟ್ಟಣಗಳಲ್ಲಿ ಗ್ರಾಮ-ಗ್ರಾಮಗಳಲ್ಲಿ ಎಲ್ಲರೂ ಅತ್ಯಂತ ಸಂಭ್ರಮ-ಸಡಗರಗಳಿಂದ ಆಚರಿಸಬೇಕು. ಪರಮಪೂಜ್ಯರ ಸಾಹಸಮಯ ಮತ್ತು ಸಾಧನಾಮಯ ಬದುಕಿನ ಜೀವಂತ--ಗಾಥೆಯನ್ನು ನಾಡಿಗರು ಪುನರವಲೋಕನ ಮಾಡುವ ಮೂಲಕ ಅವರಿಗೆ ಕೃತಜ್ಞತೆಯ ಶ್ರದ್ಧಾ-ಸುಮನಗಳನ್ನು ಅರ್ಪಿಸಬೇಕು. ಸಕಲ ಜೀವಾತ್ಮರ ಲೇಸಿಗಾಗಿ ಮತ್ತು ಮನುಕುಲದ ಉದ್ಧಾರಕ್ಕಾಗಿ ಪರಮಪೂಜ್ಯರಿತ್ತ ದಿವ್ಯ ಸಂದೇಶಗಳನ್ನು ಮನ-ಮನೆಗೂ ಮತ್ತು ಮನ-ಮನಕ್ಕೂ ಕೊಂಡೊಯ್ಯಬೇಕು. ಪೂಜ್ಯರ

ಕನಸುಗಳಿಗೆ ಎಲ್ಲರೂ ಕಣ್ಣಾಗುವಂತೆ ಮಾಡಬೇಕು. ಅವರ ಸಾಧನೆಗಳಿಗೆ ಎಲ್ಲರೂ ಕಿವಿಯಾಗುವಂತೆ ಮಾಡಬೇಕು. ಅವರ ಆಶಯಗಳಿಗೆ ಎಲ್ಲರೂ ಧ್ವನಿಯಾಗುವಂತೆ ಮಾಡಬೇಕು. ಅವರ ಸಾಹಿತ್ಯವನ್ನು 'ಬಹುಶ್ರುತ'ಗೊಳಿಸಬೇಕು. ಅವರ ಪಾಂಡಿತ್ಯವನ್ನು ಜನಜನಿತವಾಗಿಸಬೇಕು. ಅದುವೇ ನಾವು ಅವರಿಗೆ ಸಲ್ಲಿಸುವ ನಿಜವಾದ ಭಕ್ತಿ ಮತ್ತು ಗುರುದಕ್ಷಿಣೆ!!

2004ರ ಈ ತಾರಣ ನಾಮ ಸಂವತ್ಸರದ ವಿಜಯದಶಮಿಯ ಪರ್ವಕಾಲದಲ್ಲಿ ಕಾಶೀ ಶ್ರೀಪೀಠದಲ್ಲಿ ಶ್ರೀ ವೀರಭದ್ರ ಜಗದ್ಗುರುಗಳ ಜನ್ಮಶತಾಬ್ದಿ ವರ್ಷಪೂರ್ತಿ ಮಹೋತ್ಸವವನ್ನು ಕಾಶೀ ಪೀಠದ ಪ್ರಸ್ತುತ ಜಗದ್ಗುರುಗಳಾದ ಶ್ರೀ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ವಿಧ್ಯುಕ್ತವಾಗಿ ಉದ್ಘಾಟಿಸುವ ಮೂಲಕ ಅದಕ್ಕೆ ಚಾಲನೆಯನ್ನು ಕೊಟ್ಟಿದ್ದಾರೆ. ಇದೇ ಸಂದರ್ಭದಲ್ಲಿ ಆಂಧ್ರಪ್ರದೇಶ ರಾಜ್ಯದ ಉಪಲೋಕಾಯುಕ್ತರಾದ ಶ್ರೀ ಎಮ್. ಶಿವರತ್ನ ಇವರು ಉಪಸ್ಥಿತರಿದ್ದು ಆಂಧ್ರಸಂಜಾತ ಶ್ರೀ ವೀರಭದ್ರ ಜಗದ್ಗುರುಗಳಿಗೆ ಆಂಧ್ರ ದೇಶೀಯ ಗೌರವವನ್ನು ಸಲ್ಲಿಸಿದ್ದಾರೆ. ಈ ಜನ್ಮಶತಾಬ್ಧಿ ಪೂರ್ತಿ ಮಹೋತ್ಸವವು 2005 ಶ್ರಾವಣ ಶುದ್ಧ ಪೌರ್ಣಿಮೆಯವರೆಗೆ ಅಖಂಡವಾಗಿ ನಡೆದುಕೊಂಡು ಬರುತ್ತದೆ. ಈ ಸಂದರ್ಭದಲ್ಲಿ ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳ ಸಂಸ್ಮರಣೆಯಲ್ಲಿ ಕಾಶಿಯ ವಿಶ್ವವಿಖ್ಯಾತ ಬನಾರಸ ಹಿಂದೂ ವಿಶ್ವವಿದ್ಯಾಲಯವನ್ನೇ ಮೊದಲು ಮಾಡಿಕೊಂಡು ದೇಶದ ವಿವಿಧ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ವಿಚಾರ-ಸಂಕಿರಣಗಳು, ವಿದ್ವದ್ಗೋಷ್ಠಿಗಳು, ಚರ್ಚಾಕೂಟಗಳು ನಡೆದುಕೊಂಡು ಬರುವುದರ ಜೊತೆ-ಜೊತೆಯಲ್ಲಿ ಕರ್ನಾಟಕಾಂಧ್ರ ಮಹಾರಾಷ್ಟ್ರಾದಿ ರಾಜ್ಯಗಳಲ್ಲಿ ಸಾಹಿತ್ಯ ಸಮ್ಮೇಳನಗಳು, ಧರ್ಮ ಸಮ್ಮೇಳನಗಳು, ಸಭೆ-ಸಮಾರಂಭಗಳು, ವಿದ್ವತ್ಪೂರ್ಣ ಉಪನ್ಯಾಸಗಳು, ಜನಜಾಗೃತಿ ಮತ್ತು ಭಾವೈಕ್ಯ ಸಮಾರಂಭಗಳು. .....ಇತ್ಯಾದಿ ನಡೆದುಕೊಂಡು ಬರುತ್ತವೆ.

ಇದೇ ಸಂದರ್ಭದಲ್ಲಿ ಶ್ರೀ ವೀರಭದ್ರ ಜಗದ್ಗುರುಗಳ ಸಮಗ್ರ ಜೀವನವನ್ನು ಪರಿಚಯಿಸುವ ಗ್ರಂಥಗಳು, ಅವರ ಕುರಿತಾದ ಸಾಹಿತ್ಯ, ಸಿ.ಡಿ., ಕ್ಯಾಸೆಟ್ಟುಗಳು, ಅವರ ಭಾವಚಿತ್ರಗಳು ನಾಡಿನ ವಿವಿಧ ಭಾಗಗಳಲ್ಲಿ ವಿವಿಧ ಭಾಷೆಗಳಲ್ಲಿ ಬಿಡುಗಡೆಯಾಗಲಿವೆ. ಈ ವರ್ಷವನ್ನು 'ಶ್ರೀ ಲಿಂಗೈಕ್ಯ ಜಗದ್ಗುರು ವೀರಭದ್ರ ವಾರ್ಷಿಕ'ವಾಗಿ ಪರಿಗಣಿಸಿ ಈ ವರ್ಷದ ತುಂಬೆಲ್ಲ ನಡೆಯಲಿರುವ ಧಾರ್ಮಿಕ ಕಾರ್ಯಕಲಾಪಗಳನ್ನು ಮತ್ತು ಸಾಹಿತ್ಯಿಕ ಚಟುವಟಿಕೆಗಳನ್ನು ಅವರ ಶ್ರೀ ಸನ್ನಿಧಾನಕ್ಕೆ ಸಮರ್ಪಿಸಲು ಕಾಶೀ ಶ್ರೀಪೀಠವು ನಿರ್ಧರಿಸಿದೆ. ಶ್ರೀ ವೀರಭದ್ರ ಜಗದ್ಗುರುಗಳವರ ಸೃಜನಾತ್ಮಕ ಚೇತನಕ್ಕೆ ಸಮಸ್ತರೆಲ್ಲರೂ ತುಂಬು ಹೃದಯದ ಗೌರವವನ್ನು ಸಮರ್ಪಿಸಿ ಅವರ ಕೃಪಾಶೀರ್ವಾದಕ್ಕೆ ಪಾತ್ರರಾಗಲಿ.

गुरुतत्त्वाचे निरूपण,

(लेखक - विद्यानिधि.)

श्लो॥ प्रपंच परमार्थैक - कारणं मारमारणं ।
प्रपद्ये परमेशानं पंचास्यं भववारणं ॥

उपक्रम —

आपले वैदिक मतांमध्ये शैव, वैष्णव, स्मार्त, हे तीन मत भारत वर्षात सुप्रसिध्द आहेत। आणि विविध मतांचे अस्तित्व सूक्ष्म रूपाने दिसले तरी (स्पष्टेन ...

ಶ್ರೀ ವೀರಭದ್ರ ಜಗದ್ಗುರುಗಳವರು ಮರಾಠಿ ಭಾಷೆಯಲ್ಲಿ ಬರೆದಾಗ.........

ಶ್ರೀ ವೀರಭದ್ರ ಜಗದ್ಗುರುಗಳು ಸಂಸ್ಕೃತ ಭಾಷೆಯಲ್ಲಿ ಬರೆದಾಗ.................

का - ना - स्मृती
शोक - श्लोक पंचकम्

॥ यस्यान्ध्र पत्रिकापाठ - दान्ध्रता समुपस्थिता ।
हन्त नागेश्वरस्यैव, तस्य आन्ध्रादतिक्रम: ॥१॥

॥ काशीनाथ नगाधीशे, काशीनाथ पदं गते ।
विश्वनाथ पदं हन्त विश्वनाथ मुपाश्रितम्॥२॥

॥ अमर्त्यभक्तरूपेण अमृतं मर्त्य मार्जितं ।
किन्तु नागेश्वरे याते दर्शितोऽमा भि कैयत॥३॥



Shree Jagadguru Vishwaradhya Simhasan

Jangamawadimath Estate, Benares City

To

Shree ....

ಶ್ರೀ ವೀರಭದ್ರ ಜಗದ್ಗುರುಗಳು ಬಳಸುತ್ತಿದ್ದ
ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನದ ಪೋಸ್ಟಲ್ ಎನ್‌ವಲಪ್
ಅಂಚೆ ಲಕೋಟೆ



To HIS HOLINESS

Shree Jagadguru Veerabhadra
Shivacharya Mahaswami,

Vedatirtha, Kavyatirtha, Smrititirtha, Sahityavisharada,
Dharmacharya, Vidyanidhi, Vidyaratna
Ex-principal: S-Sanskrit College, Yadagiri, Epigraphist &
Research Scholar.
Founder : Shaiva Bharati Bhavana & Veerashaiva Gurukula.
Editor : "Shivadharma Granthamala" & "Vibhuti".

Adhipati:— SREE JAGADGURU VISHWARADHYA SIMHASAN
Jangamawadimath Benares City.

ಶ್ರೀ ವೀರಭದ್ರ ಜಗದ್ಗುರುಗಳವರ ವಿಜಿಟಿಂಗ್ ಕಾರ್ಡ್
Visiting Card



श्रीजगद्गुरु विश्वाराध्य सिंहासन

जंगमवाडी मठ, बनारस सिटी.

ता. ೨೨-೧೧-೧೯೪೫.

ಶ್ರೀ ವೀರಭದ್ರ ಜಗದ್ಗುರುಗಳು ತಮ್ಮ ಸ್ವಹಸ್ತಾಕ್ಷರದಿಂದ ಖುದ್ದಾಗಿ ಬರೆದ ಕಾಗದ



Pandit C. M. Veerabhadra Sharma

Vedatirtha : Kavyatirtha : Smrititirtha : Sahityavisharada : Dharmacharya : Vidyanidhi : Vidyaratna

EX-PRINCIPAL : S-SANSKRIT COLLEGE, YADAGIRI. EPIGRAPHIST AND RESEARCH SCHOLAR.

Founder: Shaiva Bharati Bhavana. Proprietor: Veerashaiva Gurukula. Editor: "Shivadharma Granthamala" & "Vibhuti"

4268, Sajanlal Street,
SECUNDERABAD-Dn.

194

ಶ್ರೀ ವೀರಭದ್ರ ಜಗದ್ಗುರುಗಳವರು ಪತ್ರ ಹಾಗೂ ಕಾಗದಗಳನ್ನು
ಬರೆಯಲು ಉಪಯೋಗಿಸುತ್ತಿದ್ದ ಪತ್ರ-ಸಂಪುಟ
Lettter-pad

ಶ್ರೀ ೧೦೦೮ ಜಗದ್ಗುರುವಿಶ್ವಾರಾಧ್ಯಃ ಪ್ರಸೀದತು

ಶ್ಲೋ. ವಿಶ್ವೇಶಲಿಂಗಸಂಭೂತೋ, ವಿಶ್ವಾರಾಧ್ಯೋ ಜಗದ್ಗುರುಃ
ವೀರಭದ್ರಬುಧೇಂದ್ರಾಯ, ವಿತನೋತ್ವಾಯುರವ್ಯಯಂ॥

ಶ್ರೀಜಗದ್ಗುರುಪಟ್ಟಾಭಿಷೇಕಮಹೋತ್ಸವಾಹ್ವಾನಪತ್ರಿಕೆ.

ಶ್ರೀ ಭೂಕೈಲಾಸವಾರಾಣಾಸೀಕ್ಷೇತ್ರವಿರಾಜಮಾನ ಶ್ರೀಜಗದ್ಗುರುವಿಶ್ವಾರಾಧ್ಯ
ಜ್ಞಾನಸಿಂಹಾಸನಜಂಗಮವಾಟಿಕಾಮಠ ಸಂಸ್ಥಾನದಿಂದ:—

ಶ್ರೀಮಜ್ಜಗದ್ಗುರು ಪಂಚಾಕ್ಷರಶಿವಾಚಾರ್ಯಮಹಾಸ್ವಾಮಿಗಳವರು ಲಿಂಗೈಕ್ಯರಾಗುವದಕ್ಕೆ ಪೂರ್ವದಲ್ಲಿ ಮಾಡಿರುವ ಅಪ್ಪಣೆಯ (Will) ಮೇರೆಗೆ ಶ್ರೀಮದ್ರಾಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಶ್ರೀಮನ್ನೃಪ ಶಾ. ಶ. ೧೮೬೬ ತಾರಣ ಸಂವತ್ಸರ ಆಶ್ವಯುಜಶುದ್ಧ ವಿಜಯದಶಮಿ ಬುಧವಾರ (೨೭-೯-೧೯೪೪) ಮಧ್ಯಾಹ್ನದ ಧನುರ್ಲಗ್ನ (೧-೨೦,೧-೩೦) ಸುಮುಹೂರ್ತದಲ್ಲಿ ವೇದಕಾವ್ಯಸ್ಮೃತಿತೀರ್ಥ ಸಾಹಿತ್ಯವಿಶಾರದ ಧರ್ಮಾಚಾರ್ಯ ವಿದ್ಯಾನಿಧಿ ವಿದ್ಯಾರತ್ನಾದಿ ಪದವೀವಿಭೂಷಿತರೂ; ವಿವಿಧ ಭಾಷಾಲಿಪೀತಿಹಾಸಜ್ಞರೂ; ಅನೇಕ ಗ್ರಂಥಕರ್ತೃಗಳೂ; ಸಿಕಂದ್ರಾಬಾದುವೀರಶೈವಗುರುಕುಲಾದಿಸಂಸ್ಥಾಪಕರೂ ದೇಶಿಕಮೂರ್ತಿಗಳೂ ಸುಪ್ರಸಿದ್ಧರೂ ಆದ

ಶ್ರೀ ಪಂಡಿತ ಚಿದಿರೆಮಠಾಧ್ಯಕ್ಷ ವೀರಭದ್ರಶಾಸ್ತ್ರಿಗಳವರಿಗೆ

ಶ್ರೀ ಕಾಶೀಪೀಠದಲ್ಲಿ ನೂತನ ಜಗದ್ಗುರುಪಟ್ಟಾಭಿಷೇಕಮಹೋತ್ಸವವು ಮಹಾವೈಭವದಿಂದ ನೆರವೇರುವುದು. ಈ ಮಹೋತ್ಸವಕ್ಕೆ ಭರತಖಂಡದ ನಾನಾಭಾಗಗಳಿಂದ ಅನೇಕ ಸ್ವಾಮಿಗಳೂ ವಿದ್ವಾಂಸರೂ ... ಭಕ್ತಮಾಹೇಶ್ವರರೂ ಆಗಮಿಸುವರು. ಆದುದರಿಂದ ತಾವು ಕುಟುಂಬಪರಿವಾರಸಮೇತವಾಗಿ ಈ ಮಹೋತ್ಸವಕ್ಕೆ ಆಗಮಿಸಿ ಇದನ್ನು ನಿರ್ವಹಿಸಿ ಶ್ರೀ ವಿಶ್ವನಾಥ-ಅನ್ನಪೂರ್ಣಾ ದರ್ಶನ ... ಗಂಗಾಸ್ನಾನ, ಶ್ರೀಜಗದ್ಗುರು ವಿಶ್ವಾರಾಧ್ಯಸಿಂಹಾಸನದ ಸಾನ್ನಿಧ್ಯಗಳನ್ನುಪಡೆದು ಧನ್ಯಾತ್ಮರಾಗಬೇಕೆಂದು ... ತಿಸುತ್ತೇನೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನ
ಜಂಗಮವಾಡಿಮಠ
ಬನಾರಸ್ ಸಿಟಿ

ತಮ್ಮ ವಿಧೇಯ
ರಾಮಚಂದ್ರಪ್ರಸಾದ
ಸರ್ವಾಧಿಕಾರಿ.

ಸೂಚನೆ:— ಮಹಾಸನ್ನಿಧಿಗೆ ಅರ್ಪಿಸುವ ಗುರುದಕ್ಷಿಣೆ, ಬೆಳ್ಳಿಬಂಗಾರದ ವಸ್ತುಗಳು, ಪೂಜಾಸಾಮಗ್ರಿ, ಸ್ತೋತ್ರ, ಕವಿತೆ, ಮುಂತಾದವುಗಳನ್ನು ಎಂಟು ದಿನ ಮೊದಲೇ ನನ್ನ ಹೆಸರಿಗೆ ರಜಿಸ್ಟರ್ ಪೋಸ್ಟಿನಿಂದ ರವಾನಿಸುವದಲ್ಲದೆ, ಆಯಾ ವಸ್ತುಗಳಮೇಲೆ ತಮ್ಮ ಪೂರ್ಣ ವಿಳಾಸ ಬರೆದು ಹಚ್ಚಬೇಕು. ಬರತಕ್ಕವರು ತಮಗೆ ಬೇಕಾದ ಪ್ರತ್ಯೇಕವಾದ ಏರ್ಪಾಟುಗಳೇನಾದರೂ ಇದ್ದರೆ ತಿಳಿಸಬೇಕು. ಇಲ್ಲಿಯ ಹವಾಮಾನವು ವಿಜಯದಶಮಿಯಲ್ಲಿ ಬಹಳ ಅನುಕೂಲವಾಗಿರುವುದು.

ಶ್ರೀಮಹಾಗರ ಪ್ರೆಸ್ ಹೈದರಾಬಾದು-ದ.

ಶ್ರೀ ವೀರಭದ್ರ ಜಗದ್ಗುರುಗಳವರ
'ಶ್ರೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವ'ದ ಆಮಂತ್ರಣ ಪತ್ರಿಕೆ
ಕನ್ನಡ ಭಾಷೆಯಲ್ಲಿ

|| ಶ್ರೀ ೧೦೦೮ ಜಗದ್ಗುರು ವಿಶ್ವಾರಾಧ್ಯಃ ಪ್ರಸೀದಂತು. ||

ಶ್ರೀ ಮದ್ವೀರಶೈವ ಮತಸ್ಥಾಪನಾಚಾರ್ಯವರ್ಯ
ಮಹಾಕ್ಷೇತ್ರ-ಕಾಶೀ ಶ್ರೀ ಜ್ಞಾನಸಿಂಹಾಸನಾಧೀಶ
ಶ್ರೀ ೧೦೦೮ ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ
ಪರಮ ಪೂಜ್ಯಪಾದಗಳಿಗೆ,

ಒಪ್ಪಿಸಿದ ಮೌಕ್ತಿಕ ಮಾಲೆ.

ಶಿವನ | ಮುಖದಿಂದುದಿಸುತೆ |
ಶಿವಸಿದ್ಧಾಂತಂ | ಹರಿಯಜರಿಗೆ | ಬೋಧಿಸುತಂ ||
ಶಿವಮತವಂ ಸ್ಥಾಪಿಸುತಂ |
ಶಿವಕುಲ ಚಂದ್ರನೆನಿಸಿದ ವಿಶ್ವಾರಾಧ್ಯಂ || ೧ ||
ವಿಶ್ವೇಶ್ವರ ನಿಂದುದಿಸುತೆ |
ವಿಶ್ವಾರಾಧ್ಯ ನೆನಿಸುತ್ತ | ಬೋಧವ | ಗೈದೇ ||
ವಿಶ್ವದೊಳು | ವೀರ ಶೈವವ |
ಶಾಶ್ವತ | ಗೊಳಿಸಿದ | ಯುಗ ಯುಗ ದೊಳು ಬರುತಿರುತಂ || ೨ ||
ಶ್ರೀಕ್ಷೇತ್ರ ಕಾಶಿ ಯೊಳಿರುವ |
ಅಕ್ಷಯ ಸುಜ್ಞಾನಪೀಠ ದೊಳುಮಂಡಿಸುತೇ |
ಮೋಕ್ಷ ಪ್ರದಾಯಕನೆ ನೀಂ |
ಅಕ್ಷರ ಸಂಪದವನೀಡು ವಿಶ್ವಾರಾಧ್ಯಂ || ೩ ||
ಭಕುತರ ಭಾಗ್ಯದ ಧೇನುಂ |
ಭಕುತರ ಕಲ್ಪದ್ರುಮವು ಗುರುವಿಶ್ವಾರಾಧ್ಯಂ ||
ಭಕುತರ ಚಿಂತಾರತ್ನಂ |
ಭಕುತರ ರಾಜ್ಯವ ಪೊರೆಯುವ ಯತಿಕುಲ ಚಂದ್ರಂ || ೪ ||
ಗುರುಸಾರ್ವಭೌಮ ಕರುಣಿಸು |
ಧರೆಯರಸರ | ಧನಿಕರ | ಭಕುತರ | ನಿಕರವನುಂ ||
ಹರಿಯಜ | ಸುರರ | ಪೊರೆದುದಂ |
ನರರರಿಯರು | ಅಭಿನವಗುರು | ವಿಶ್ವಾರಾಧ್ಯಂ || ೫ ||
ವರುಷವ ನೀನ್ ಮಾಲೆಯು |
ವರಕೋಟ್ಯೂರೇಶರಚಿಸಿ ಭಕುತಿಯೊಳುಂ ಕಾ ||
ಗುರು ವಿಶ್ವಾರ್ಯನ ಚರಣಕೆ
ಮೆರೆವಂದದೊಳಿತ್ತು ಧನ್ಯ ನಾದೀ ಧರೆಯೊಳ್ || ೬ ||

ಅನಾದಿ ಕಾಲದಿಂದೀವರೆಗೂ ದಿವ್ಯ ತೇಜಸ್ಸಿನಿಂದ ಮೆರೆಯುತ್ತಿರುವ ಶ್ರೀಮದ್ವೀರಶೈವ ಜಗದ್ಗುರು ಪಂಚ ಪೀಠಗಳಲ್ಲೊಂದಾದ ಶ್ರೀ ಭೂಕೈಲಾಸ ವಾರಾಣಸೀ ಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನಾಧೀಶ ಜಂಗಮವಾಡಿಕಾಮಠ ಸಂಸ್ಥಾನದ ಶ್ರೀಮಜ್ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರು ಕೆಲವು ದಿವಸಗಳ ಹಿಂದೆ ಲಿಂಗೈಕ್ಯರಾದರು ಅವರು ಲಿಂಗೈಕ್ಯರಾಗುವ ಪೂರ್ವದಲ್ಲಿ ಅಪ್ಪಣೆ ಕೊಡಿಸಿ ದಮೇರೆಗೆ ವೀರಶೈವ ಸಾಮ್ರಾಜ್ಯ ಚಕ್ರವರ್ತಿ ಶ್ರೀ ಮದ್ರಂಭಾಪುರಿ ವೀರಸಿಂಹಾಸನಾಧೀಶ ಶ್ರೀ ೧೦೦೮ ಜಗದ್ಗುರು ಶಿವಾನಂದರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ಶ್ರೀ ಮನ್ನೃಪ ಶಾ. ಶ. ೧೮೬೬ನೇ ತಾರಣ ಸಂವತ್ಸರದ ಆಶ್ವೀಜ ಶುದ್ಧ ವಿಜಯದಶಮಿ ಬುಧವಾರ [ತಾ. ೨೭—೯—೪೪] ಧನುರ್ಲಗ್ನ ಶುಭಮುಹೂರ್ತದಲ್ಲಿ ವೇದ ಶಾಸ್ತ್ರ ಸ್ಮೃತಿ ತೀರ್ಥ ಸಾಹಿತ್ಯ ವಿಶಾರದ ಧರ್ಮಾಚಾರ್ಯ ವಿದ್ಯಾನಿಧಿ ವಿದ್ಯಾರತ್ನಾದಿ ಪದವೀ ವಿಭೂಷಿತರೂ ವಿವಿಧ ಭಾಷಾ ಲಿಪಿಕೋವಿದರೂ ಅನೇಕ ಗ್ರಂಥಕರ್ತೃಗಳೂ ಶಿವಾನಂದ ಪ್ರಭಾವದು ವೀರಶೈವ ಗುರು ಕುಲಾದಿ ಸಂಸ್ಥಾಪಕರೂ ದೇಶಿಕ ಮೂರ್ತಿಗಳೂ ಸುಪ್ರಸಿದ್ಧರೂ ಆದ ಪಂಡಿತ ಕುಲಚಂದ್ರ ಶ್ರೀ ಚವರೀ ಮಠಾಧ್ಯಕ್ಷ ವೀರ ಭದ್ರ ಶಾಸ್ತ್ರಿಗಳವರಿಗೆ ಶ್ರೀ ಕಾಶೀಜ್ಞಾನಪೀಠದಲ್ಲಿ ನೂತನ ಜಗದ್ಗುರುಗಳ ಪಟ್ಟಾಭಿಷೇಕ ಮಹೋತ್ಸವವು ಮಹಾ ವೈಭವದಿಂದ ನೆರವೇರಿದ ಶುಭ ಸಮಯದಲ್ಲಿ ಶ್ರೀ ಅಭಿನವ ಶ್ರೀ ೧೦೦೮ ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯ ಮಹಾ ಸ್ವಾಮಿಗಳ ಪರಮ ಪೂಜ್ಯ ಪಾದಗಳಿಗೆ ಪದ್ಯರೂಪದ ಮೌಕ್ತಿಕ ಮಾಲೆಯನ್ನು ಕರ್ನಾಟಕ ಪ್ರಾಂತಿಯ ವೀರಶೈವರ ಪರಿಯಿಂದ ಸಮರ್ಪಿಸುವೆ ಅಲ್ಲದೆ ಗುರು ಸಾರ್ವಭೌಮರಾದ ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ರಿಂದ ವೀರಶೈವ ಮತವು ಸರ್ವತ್ರ ಉನ್ನತಿಯಾಗಲೆಂದು ಪ್ರಾರ್ಥಿಸುತ್ತೇನೆ.

ಬ್ಯಾಡಗಿ.
ತಾ|| ೧೪-೯-೪೪

ಶ್ರೀ ಗುರುಪಾದ ಸೇವಕ,
ವೇ|| ಕೋಟ್ಯೂರೇಶ್ವರಶಾಸ್ತ್ರಿ ಹಚ್ಚೇಶ್ವರಸ್ವಾಮಿ ಹಿರೇಮಠ, ಕುಮ್ಮೂರ
ಪೋಸ್ಟ:— ಚಿಕ್ಕೇರಿ ತಾಲೂಕ:— ಕೋಡ ಜಿಲ್ಲಾ:— ಧಾರವಾಡ.

ಶ್ರೀ ವೀರಭದ್ರ ಜಗದ್ಗುರುಗಳವರ

ಪೀಠಾರೋಹಣದ ಸುಸಂದರ್ಭದಲ್ಲಿ

ಭಕ್ತರೊಬ್ಬರು ಸನ್ನಿಧಿಗೆ ಅರ್ಪಿಸಿದ ಶಬ್ದರೂಪೀ ಮೌಕ್ತಿಕ ಮಾಲೆ

श्री जगद्गुरुविश्वाराध्यः प्रसीदतु

ओं. विश्वेशलिंगसंभूतो, विश्वाराध्यो जगद्गुरुः ·
वीरभद्रबुधेन्द्राय, तिलनोत्वायुरव्ययम्.

श्रीजगद्गुरुपट्टाभिषेकमहोत्सवनिमंत्रण.

श्री भूकैलास वाराणसीक्षेत्रविराजमान श्रीजगद्गुरु विश्वाराध्य
ज्ञानसिंहासनजंगमवाडिमठ संस्थानाकडून—

श्रीमज्जगद्गुरु पंचाक्षरशिवाचार्य महास्वामींनीं लिंगैक्य होण्याचे पूर्वी केलेल्या आज्ञे (will) प्रमाणें श्रीमद्रंभापुरी वीरसिंहासनाधीश्वरश्रीमज्जगद्गुरु शिवानन्दगजदेशिकेन्द्र शिवाचार्य महास्वामी यांच्या अमृतहस्ते श्रीमन्नृप शालिवाहन शके १८६६ तारणसंवत्सर आश्वीनशुद्ध विजयादशमी (२७–९–१९४४) बुधवार रोजीं मध्याह्न धनुर्लग्न (१–२०, १-५० घ.) या सुमुहूर्तावर वेदभाष्यस्मृतितीर्थ साहित्यविशारद धर्माचार्य विद्यानिधि विद्यारत्नादिपदवीविभूषित; विविधभाषालिपीतिहासज्ञः अनेकग्रंथकर्ता; सिकिन्द्राबादवीरशैवगुरुकुलादि संस्थापकः देशिकेन्द्र आणि प्रसिद्ध असें

श्री पंडित चिदिरेमठाध्यक्ष वीरभद्रशास्त्री यांना

श्री काशीपीठांत नूतन जगद्गुरुपट्टाभिषेकमहोत्सव महावैभवानें साजरा होणार आहे. या उत्सवात अखिल भारतांतील अनेक स्वामी, विद्वान पुढारी आणि भक्तमाहेश्वर भाग घेणार आहेत . तरी आपण सहकुटुंबपरिवार आगमन करून या महाकार्याला निर्वाह करून श्री विश्वनाथ-अन्नपूर्णादर्शन, गंगास्नान व श्री जगद्गुरुविश्वाराध्य महापीठाचे सान्निध्याचें लाभ घेऊन धन्यता संपादन करावी अशी प्रार्थना.

श्री जगद्गुरुविश्वाराध्यसिंहासन जंगमवाडीमठ बनारससिटी.	आपला नम्र, रामचन्द्रप्रसाद. सर्वाधिकारी

सूचनाः—महासन्निधीनां अर्पण करण्याच्या गुरुदक्षिणा, चान्दी व सोन्याच्या वस्तु, पूजासामग्री, स्तोत्र, आणि कविता वगैरे आठ दिवस अगोदर माझे नांवें रजिस्टर पोस्टानें पाठवावीत. या सर्व वस्तूवर आपला पूर्ण पत्ता लिहून चिकटवावा. ज्या कोणास विशेष व्यवस्था पाहिजे असल्यास तसें कळवावे. येथील हवामान, आश्विनमासात फार अनुकूल राहते.

प्रेमसागर प्रेस, सुलतान बाजार, है. द.

ಶ್ರೀ ವೀರಭದ್ರ ಜಗದ್ಗುರುಗಳವರ
'ಜಗದ್ಗುರು ಪಟ್ಟಾಭಿಷೇಕ ಮಹೋತ್ಸವ'ದ ಆಮಂತ್ರಣ ಪತ್ರಿಕೆ
[ಮರಾಠಿ ಭಾಷೆಯಲ್ಲಿ]

श्रीः

विश्वेश्वरमहालिङ्गगर्भाविर्भूतभूतिमान् ।
विश्वविश्रुतविश्वेशो विश्वाराध्यः प्रसीदतु ॥ १ ॥

श्रीमन्माननीयानां विविधविद्याविद्योतितान्तःकरणानां विशिष्टसमालोचनादिसमलङ्कृत-
नानाग्रन्थप्रकाशकानां पुरातत्त्वान्वेषणविचक्षणानां भूकैलासवाराणसी-
क्षेत्रप्रविराजमान श्रीजङ्गमवाटिकामहामठाधिष्ठित-
विश्वाराध्यज्ञानसिंहासनाधीश्वराणां

पण्डितप्रवराणां श्रीमज्जगद्गुरुश्रीवीरभद्रशिवाचार्य महास्वामिमहोदयानां—

शुभाभिनन्दनम् ।

श्रीमन्मान्यवराः प्रभूतधिषणाः प्रेष्ठप्रतिष्ठान्विताः ।
नानाशास्त्रविचाररीतिचतुरा धर्मप्रथापालकाः ॥
पञ्चाचार्यवचोनिरन्तरयनस्वच्छन्दसञ्चारिणो ।
भूकैलासविराजमानमहिमज्ञानासनाधीश्वराः ॥ २ ॥

वीरभद्रशिवाचार्या जगद्गुरुवरा इह ।
भ्राजन्ते वीरशैवस्य धरन्तोऽधिधरं धुरम् ॥ ३ ॥

अयि श्रीमन्तो विद्वांसो महान्तः !

तत्रभवतां श्रीमतां सदाचारेण, विद्वद्वृन्दाभिनन्दितवैदुष्येण, सनातनधर्ममर्यादासंरक्षणविलक्षणवैचक्षण्येन, विविधभाषालिपीतिहासज्ञानगौरवमाहात्म्येनानेकग्रन्थरचनानैपुण्येन, वीरशैवगुरुकुलादिसंस्थासंस्थापकतया च नितान्तसन्तुष्टान्तरङ्गोऽयं संयुक्तप्रान्तीयसंस्कृताध्यापकमण्डलोऽस्मिन् पट्टाभिषेकमहोत्सवे विद्यातपोव्रतनियमादिपरिपूतमानसानां वाराणसीजङ्गमवाटिकास्थितविश्वाराध्यज्ञानसिंहासनमहापीठमलङ्कुर्वतां संयमिप्रवराणां पवित्रचरित्राणां जगद्गुरूणां भवतामभिनन्दनं विदधदमन्दानन्दसन्दोहम्प्रकटयन् जीवमात्रहितैषिणो भगवतः सनातनधर्मस्य यथातिपूर्वं समुदयं समेधयन्तः, आर्यसभ्यतायाः प्रभावं दिक्षु विदिक्षु च विस्तारयन्तः, पूर्णमायुर्लभमानास्तत्रभवन्तः श्रीमन्तश्चिरमिह विराजन्तामिति श्रीविश्वनाथचरणसरसीरुहेषु सादरमभ्यर्थयते ।

आश्विनशुक्लदशम्याम, २००१.
कार्यालयः,–शारदाभवनम्, काशी ।

(स० सभापतिः)

ज्योतिष प्रकाश प्रेस, विश्वेश्वरगंज, बनारस । ४८४५

ಶ್ರೀ ವೀರಭದ್ರ ಜಗದ್ಗುರುಗಳು ಕಾಶೀ ಪೀಠಾರೋಹಣ ಮಾಡಿದ ಸಂದರ್ಭದಲ್ಲಿ
ವಿದ್ವತ್ಖ್ಯಾತಿಯಾದ ಕಾಶಿಯ 'ಶಾರದಾ ಭವನ'ವು
ಪರಮಪೂಜ್ಯರನ್ನು ಅಭಿನಂದಿಸಿ ನೀಡಿದ 'ಅಭಿನಂದನಾ ಪತ್ರ'



श्रीकाशीविश्वेश्वरो विजयते

महानुभावाः।

श्रुतिस्मृतिपुराणेतिहासादिविविधशास्त्रपरिशीलनपरिष्कृतशेमुषीकाणां शिष्यप्रशिष्यवर्गानुनन्दितपादारविन्दानां भक्तसमाजेषु धार्मिकभावमासर्जयतां भवतां गुणगौरवं श्रावं श्रावं नितान्तसन्तुष्टान्तरङ्गा वयं वाराणसेयविद्वत्समाजसदस्याः काशीस्थविद्वद्विराजितायामस्यां सदसि सामोदं शुभाभिनन्दनं विदधाना यथापूर्वं समुदयं समेधयन्तः पूर्णमायुर्लभमानाः श्रीमन्तश्चिरं जीव विराजन्तामिति श्रीविश्वनाथचरणसरसीरुहेषु सादरमभ्यर्थयामहे।

द्व्युत्तरद्विसहस्रमितविक्रमाब्दीय कार्तिककृष्णपञ्चम्यां वाराणस्याम् } म.म. [illegible]

ಶ್ರೀ ವೀರಭದ್ರ ಜಗದ್ಗುರುಗಳಿಗೆ

ಭಕ್ತಾದಿಗಳು ಅಭಿಮಾನದಿಂದ ಬರೆದು ತಮ್ಮ ಹಸ್ತಾಕ್ಷರಗಳೊಂದಿಗೆ

ಕಳುಹಿಸಿಕೊಟ್ಟ ಅಭಿನಂದನಾ ಪತ್ರ



ಓಂ

ಶೈವಭಾರತೀ,

(ಮಾಸಪತ್ರಿಕೆ)

ಪ್ರಥಮವರ್ಷ, ಶಾ॥ಶ॥ ೧೮೫೪॥ ಆಂಗೀರಸಸಂವತ್ಸರ ಶ್ರಾವಣ ಶುಕ್ಲಪೌರ್ಣಿಮೆ, ಪ್ರಥಮ ಸಂಚಿಕೆ.

निगमागमसञ्जात-सदाचार समाश्रितम् ॥
शिवसिद्धान्तमेलार्थं, तनुते शैव भारती" ॥-॥

ಸಂಪಾದಕ,

ಚಿ.ನು. ವೀರಭದ್ರಶರ್ಮಾ, ವೇದಶಾಸ್ತ್ರತೀರ್ಥ.

ಕಾಶೀ ಜಂಗಮವಾಡೀ ಮಹಾಸಂಸ್ಥಾನದ
ಶೈವ ಭಾರತೀ ಭವನದಲ್ಲಿ
ಪ್ರಕಟಿಸಲ್ಪಟ್ಟಿತು

'ಶೈವ ಭಾರತೀ' ಪತ್ರಿಕೆಯ ಹೊರಾಂಗಣ

ಓಂ

ಶ್ರೀ ಶಿವಾಯ ಗುರವೇ ನಮಃ

ಶೈವಭಾರತೀ

(ಮಾಸಪತ್ರಿಕೆ)

ಪ್ರಥಮವರ್ಷ	ಶಾ।ಶ। ೧೮೫೪ ಅಂಗೀರಸ ಶ್ರಾವಣಶುಕ್ಲ ರಕ್ಷಾಪೂರ್ಣಿಮೆ.	ಪ್ರಥಮ ಸಂಚಿಕೆ

ಮಂಗಳಸ್ಮರಣಂ

(ಲೇ, ಕಾವ್ಯತೀರ್ಥ ಶ್ರೀ ವೃಷಭಲಿಂಗ ಶಿವಾಚಾರ್ಯರು, ಗೊಬ್ಬೂರು)

ಶ್ರುತಿಸಾರಮಯೀ ಶ್ರವಸ್ಸುಖಾ ।
ವಹ ಸಮ್ಯಗ್ರುಚನಾತ್ಮಿಕಾ ಸತಾ ॥
ಮತಿಮಾತ್ರ ಮತಿ ಪ್ರಗಲ್ಭತಾ ।
ಮಸಮಾ ದಾಸ್ಯತು ಶೈವಭಾರತೀ ॥

ಶ್ರೀ ವೀರಭದ್ರ ಜಗದ್ಗುರುಗಳು ಕಾಶೀ ಪೀಠದಿಂದ ಹೊರತರಬೇಕೆಂದುಕೊಂಡಿದ್ದ 'ಶೈವಭಾರತೀ' ಮಾಸ ಪತ್ರಿಕೆಯ ಒಂದು ಮಾದರಿ ಮುಖಪುಟ)

ಶೈವಭಾರತೀ—   ಅಂಗೀರಸ - ಶ್ರಾವಣಮಾಸ.

"ಶ್ರೀ ಗೌರೀಶಂಕರ"



॥ जगद्धिताय येनोमा परिणीता महात्मना ॥
तस्मै विशुद्धसत्त्वाय श्री शिवाय नमो नमः ॥ -

(सम्पादकस्य)

ಶೈವ ಭಾರತೀ ಪತ್ರಿಕೆಯ ಒಳಾಂಗಣ

"ವೀರಶೈವ ಸಿದ್ಧಾಂತ"

(24-3-1943 ರಲ್ಲಿ ಮೈಸೂರು ರೇಡಿಯೋದಲ್ಲಿ
ಪಂಡಿತ ಶಿವಯೋಗಿಮಠದ ವೀರಭದ್ರಶಾಸ್ತ್ರಿಗಳು ಮಾಡಿದ ಭಾಷಣ)

ಚಿದ್ಘನ ಏಕೋ ವ್ಯಾಪೀ, ನಿತ್ಯಸ್ಸತತೋದಿತಃ ಪ್ರಭುಶ್ಶಾಂತಃ।
ಜಯತಿ ಜಗದೇಕಬೀಜಂ, ಸರ್ವಾನುಗ್ರಾಹಕಶ್ಶಂಭುಃ ॥
(ತತ್ತ್ವಪ್ರಕಾಶಿಕೆ)

ವೈದಿಕವಾದ ಗುರುಮಂತ್ರದಿಂದ ವೇದೋಕ್ತವಾದ ಪರಶಿವಬ್ರಹ್ಮವನ್ನು ಉಪಾಸನೆ ಮಾಡತಕ್ಕ ಮತಕ್ಕೆ ಶೈವಮತವೆಂಬ ನಾಮವು ರೂಢವಾಗಿದೆ. ಈ ಶಿವೋಪಾಸನೆಂಬುದೇ ಶಿವಭಕ್ತಿ. ಇದನ್ನವಲಂಬಿಸಿದ ವ್ಯಕ್ತಿಯು ಶಿವಭಕ್ತನೆನಿಸುವನು. ಇಂತಹ ಶಿವೋಪಾಸನೆಯನ್ನು ಮಾಡುವ ಸಂಪ್ರದಾಯಗಳು ಹಲವಿವೆ. ಅವುಗಳಲ್ಲಿ ಪ್ರಶಸ್ತವಾದುದೇ ವೀರಶೈವಮತವು. ಇದಕ್ಕೆ ಸಿದ್ಧಾಂತಶೈವವೆಂಬ ಬೇರೊಂದು ನಾಮವೂ ಆಗ

ಶ್ರೀ ವೀರಭದ್ರ ಜಗದ್ಗುರುಗಳು ಕನ್ನಡ ಭಾಷೆಯಲ್ಲಿ ಬರೆದಾಗ...............

ಶೈವಭಾರತೀ

- ಆದರ್ಶ -
(ಲೇ. ಸಂಪಾದಕ -)

ಶ್ಲೋ॥ ನಿಗಮಾಗಮ ಸಂಭೂತ, ಸದಾಚಾರ ಸಮಾಶ್ರಿತಂ।
ಶಿವಸಿದ್ಧಾಂತಸೋಪಾನಂ ತನುತೇ 'ಶೈವಭಾರತೀ' ॥೧॥

ಕಂ॥ ಭುವನದೊಳು ಶುಭವೆನಿಸಾ।
ಶಿವನು [illegible] ಶುದ್ಧತತ್ತ್ವ [illegible] ॥
[illegible] ಮರುಜ।
[illegible] 'ಶೈವಭಾರತೀ' [illegible] ॥೨॥

ಕಂ॥ [illegible] ಭಾರತಿ।
[illegible] ॥
[illegible] ಸಮ್ಮತ।
[illegible] ॥೩॥

—

ಶೈವಭಾರತೀ ಪತ್ರಿಕಾ ಮಾದರಿಯ ಎರಡನೆಯ ಪುಟ



ಶೈವಭಾರತೀ. 3

ಸ್ವಾಗತ,

॥ ಶ್ರೀವಿಶ್ವನಾಥ ಶರ್ವಾಣ್ಯೌ ವೀರಭದ್ರ ವಿನಾಯಕೌ।
ಕಾರ್ತಿಕೇಯ ಗಣಾಜಾದಾ, ನತ್ವಾತ್ರೀಯಂ ಸಮಾರಭೇ ॥

ಶೈವಭಾರತೀ ಪತ್ರಿಕಾ ಮಾದರಿಯ ಮೂರನೆಯ ಪುಟ

॥ ಶ್ರೀ ಗೌರೀಶಂಕರಾಭ್ಯಾಂ ನಮಃ ॥

ಅಪೂರ್ವ ಸಂಧಿ! ತ್ವರೆ ಮಾಡಿರಿ! ಅಲಭ್ಯ ರತ್ನ!

ಶಿವರಹಸ್ಯ.

(ಅದ್ಭುತ ಇತಿಹಾಸ ಗ್ರಂಥ.)

THE ENCYCLOPAEDIA OF SHIVA-DHARMA.

ಶಿವರಹಸ್ಯವೆಂದರೆ ಕೆಲವರು ಸ್ಕಾಂಧ ಪುರಾಣಾಂತರ್ಗತವಾದ ಚಿಕ್ಕ ಭಾಗವೆಂದೇ ಭಾವಿಸಿರುವರು. ಅದು ಬೇರೆ! ಈ ಶಿವರಹಸ್ಯವು ಇತಿಹಾಸವೆಂದೇ ಸುಪ್ರಸಿದ್ಧವಾಗಿದೆ. (ಶಿವರಹಸ್ಯಾಖ್ಯೋ ಮಹೇತಿಹಾಸಃ) ಇದು ಹನ್ನೆರಡು ಭಾಗ (ಒಂದು ಲಕ್ಷ ಇಪ್ಪತ್ತು ಸಾವಿರ ಶ್ಲೋಕ) ಗಳಿಂದ ತತ್ತ್ವರತ್ನಾಕರವಾಗಿದೆ. ಎಲ್ಲ ವಿಷಯಗಳಿಂದ ಮಹಾಭಾರತಕ್ಕಿಂತಲೂ ಸರ್ವಾಂಗ ಸುಂದರವಾದ ಮಹಾ ಗ್ರಂಥವಾಗಿದೆ. ಜೈಗೀಷವ್ಯ ಮಹರ್ಷಿಗಳಿಂದ ಆವಿಷ್ಕೃತವಾದ ಈ ಗ್ರಂಥದ ಪ್ರಾಚೀನ ಪ್ರತಿಯು ಬಹಳ ವ್ಯಯ ಪ್ರಯಾಸಗಳಿಂದ ಸಂಪಾದಿಸಲ್ಪಟ್ಟಿದೆ.

ಇದರಲ್ಲಿ ಶಿವನು ಯಾರು? ಇವನು ಮಹಾದೇವನೇ? ಶಿವನು ದ್ರಾವಿಡನೇ? ವೇದಗಳಿಗೂ ಇತರ ದೇವತೆಗಳಿಗೂ ಶಿವಲಿಂಗ ಪೂಜಾ ಮತಗಳಿಗೂ ತಾರತಮ್ಯವೇನು? ಪ್ರಾಚೀನ ಕಾಲದ ಶಿವಭಕ್ತರೂ ಪ್ರಮಥರೂ ಆಚಾರ್ಯರೂ ಯಾರು? ಶೈವ-ವೀರಶೈವ ಧರ್ಮದ ಆಚಾರ ರಹಸ್ಯ ವಿಶೇಷಗಳೇನು? ಈ ಮತಗಳ ಉತ್ಪತ್ತಿ ಹೇಗೆ? ಆರ್ಯ ದ್ರಾವಿಡ ಸಂಸ್ಕೃತಿಗಳೆಂದರೇನು? ಎಂಬ ಇವೇ ಮೊದಲಾದ ಶೈವ ವೀರಶೈವ ಮತದ ಸಾವಿರಾರೇ ಅಲ್ಲ, ಸಮಸ್ತ ವಿಷಯಗಳನ್ನು ಸುವಿಶದವಾಗಿ ತಿಳಿಸುವದರಲ್ಲಿ ಈ ಗ್ರಂಥವು ವಿಜ್ಞಾನಕೋಶವಾಗಿದೆ. (Encyclopaedia of Shiva Dharma.)

ಇದರ ಪ್ರಕಾಶನಕ್ಕಾಗಿ ಒಟ್ಟು ೨೦ ಸಾವಿರ ರೂಪಾಯಿಗಳು ಬೇಕಾಗಬಹುದು. ಈಗಾಗಲೇ ಮೂರು ಸಾವಿರ ರೂಪಾಯಿಗಳ ವ್ಯಯದಿಂದ ೧, ೨ ಭಾಗಗಳು ಸಂಪೂರ್ಣವಾಗಿಯೂ ೩ನೆಯ ಭಾಗವು ಅರ್ಧದ ವರೆಗೂ ಮುದ್ರಿತವಾಗಿವೆ, ಶೀಘ್ರವಾಗಿಯೇ ಹೊರಬೀಳತಕ್ಕುವಿವೆ. ಈ ಗ್ರಂಥದ ಪೀಠಿಕೆಯು ಇಂಗ್ಲೀಷು, ಸಂಸ್ಕೃತ, ಕನ್ನಡ, ತೆಲುಗು, ಹಿಂದೀ ಭಾಷೆಗಳಲ್ಲಿ ಪ್ರಕಟಿಸಲ್ಪಡುವದು. ಕಡೆಯಲ್ಲಿ ದೊಡ್ಡ ವಿಮರ್ಶಾ ಗ್ರಂಥವೂ ವಿವಿಧ ಭಾಷೆಗಳಲ್ಲಿ ಹೊರಡುವದು. ಇದು ಎಲ್ಲ ದೇಶ (ಭಾರತ, ಅಮೇರಿಕಾ, ಇಂಗ್ಲಂಡ್, ಜರ್ಮನಿ, ರಷ್ಯಾ, ಜಪಾನ್) ಗಳಲ್ಲಿಯೂ ಪ್ರಸಿದ್ಧಿಗೆ ಬರುವ ಗ್ರಂಥವಾಗಿದೆ. ಈಗಾಗಲೇ ಅನೇಕ ಜನ ಮಹಾಶಯರು ಸಹಾಯ ಮಾಡಿದ್ದಾರೆ. ಶೈವ ವೀರಶೈವರೂ ಅತ್ಯವಶ್ಯವಾಗಿ ತಪ್ಪದೆ ಸಹಾಯ ಮಾಡಿ ಜಗದ್ವಿಖ್ಯಾತರೂ ವಾಙ್ಮಯದ ಉದ್ಧಾರಕರೂ ಆಗಬೇಕೆಂದು ನಿವೇದನೆ.

ರೂಪಾಯಿಗಳು ೧೦೦೦ ರಿಂದ ೫೦೦ ರ ವರೆಗೆ ದಾನ ಮಾಡಿದವರು ಪ್ರತಿಷ್ಠಾಪಕರೆಂತಲೂ, ೨೫೦ ರ ವರೆಗಿನ ಸಹಾಯಕರು ಮಹಾರಾಜ ಪೋಷಕರೆಂತಲೂ, ೧೦೦ ವರೆಗಿನ ದಾತೃಗಳು ರಾಜಪೋಷಕರೆಂತಲೂ, ೫೦ ವರೆಗಿನವರು ಸಹಾಯಕರೆಂತಲೂ ಅವರವರ ನಾಮಗಳು ಪೀಠಿಕೆಯ ಎಲ್ಲ ಭಾಷೆಗಳಲ್ಲಿ ಪ್ರಕಟಿಸಲ್ಪಡುವವು. ಮೊದಲಿನ ಮೂರು ವರ್ಗದವರಿಗೆ ಗ್ರಂಥವೆಲ್ಲವೂ ಉಚಿತವಾಗಿ ಸಮರ್ಪಿಸಲ್ಪಡುವುದು. ೫ ರೂಪಾಯಿಗಳಿಗಿಂತಲೂ ಹೆಚ್ಚಿನ ದಾನ ಮಾಡಿದ ಎಲ್ಲರ ನಾಮಗಳೂ ಪ್ರಕಟಿಸಲ್ಪಡುವವು. ಅವರವರ ದಾನಕ್ಕೆ ಅನುಕೂಲವಾಗಿ ಅವರವರ ಫೋಟೋಗಳನ್ನೂ ಇದರಲ್ಲಿ ಸೇರಿಸುವದಾಗುವದು. ಇಂತಹ ಮಹಾಕಾರ್ಯಕ್ಕೆ ಸ್ವಹಸ್ತ, ಪರಹಸ್ತಗಳಿಂದ ಬಹಳವಾಗಿ ಸಹಾಯ ಮಾಡಿ ತಮ್ಮ ಧರ್ಮವನ್ನೂ ತಮ್ಮ ನಾಮಗಳನ್ನೂ ಜಗದ್ವಿಖ್ಯಾತ ಮಾಡುವದು ಶ್ರೇಯಸ್ಕರವಲ್ಲವೆ?

ಎಲ್ಲ ವ್ಯವಹಾರಕ್ಕೂ ವಿಳಾಸ:---

Manager,
Shiva Dharma Granthamala
4268, Sajanlal Street,
SECUNDERABAD. (Dn.)

ಮ್ಯಾನೇಜರ್,
ಶಿವಧರ್ಮ ಗ್ರಂಥಮಾಲಾ,
೪೨೬೮, ಸಜನ್‌ಲಾಲ್ ಸ್ಟ್ರೀಟ್,
ಸಿಕಂದ್ರಾಬಾದ್. (ದ.)

T. A. Ballelli Printing Press, Hubli.

ಶ್ರೀ ವೀರಭದ್ರ ಜಗದ್ಗುರುಗಳವರು ಹೊರತರ ಬಯಸಿದ್ದ 'ಶಿವರಹಸ್ಯ' ಎಂಬ 'ಶಿವಧರ್ಮ' ವಿಶ್ವಕೋಶಕ್ಕೆ ತನು-ಮನ-ಧನ ಮತ್ತು ಅಧಿಕೃತ ಮಾಹಿತಿಗಳೊಂದಿಗೆ ಸಹಾಯ ಮಾಡಲು ಸಾರ್ವಜನಿಕರಲ್ಲಿ ಮನವಿ ಮಾಡುಕೊಳ್ಳುತ್ತ ಹೊರಡಿಸಿದ ಒಂದು ಪತ್ರಿಕಾ ಮನವಿ



1918ರಲ್ಲಿ ಕಾಶೀ ಪೀಠದಲ್ಲಿ ಸೇರಿದ

ಶ್ರೀ ಜಗದ್ಗುರು ಪಂಚಾಚಾರ್ಯರ ಪಂಚ ಪಂಚಾಯತ್

1. ದಿಗುತ್ತರಾಧಿಷ್ಠಾನದಲ್ಲಿ

ಶ್ರೀಶೈಲ ಜಗದ್ಗುರು ಶ್ರೀ ನಾಗಲೋಟಿ ಚಕ್ರವರ್ತಿ ಶಿವಾಚಾರ್ಯ ಮಹಾಸ್ವಾಮಿಗಳು

2. ಪೂರ್ವಾಧಿಷ್ಠಾನದಲ್ಲಿ

ಶ್ರೀಮದ್ ರಂಭಾಪುರೀ ಜಗದ್ಗುರು ಶ್ರೀ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು

3. ಪಶ್ಚಿಮಾಧಿಷ್ಠಾನದಲ್ಲಿ

ಶ್ರೀಮತ್ ಕೇದಾರ ಜಗದ್ಗುರು ಶ್ರೀ ವಿಶ್ವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು

4. ದಕ್ಷಿಣಾಧಿಷ್ಠಾನದಲ್ಲಿ

ಶ್ರೀಮದುಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು

5. ಮಧ್ಯದಲ್ಲಿ

ಶ್ರೀಮತ್ ಕಾಶೀ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು

ಅನುಬಂಧ ಪರ್ವ

ಅನುಬಂಧ-1

ಕಾಶೀ ಪಟ್ಟಣದಲ್ಲಿ ನಡೆದ ಮಹತ್ವದ ಘಟನೆಗಳು

Kashi 1000 BC to 1960 AD :

Periodic Table of Important Events

ANCIENT PERIOD : 100 BC - AD 999

—	**Suparshanath, the 7th Jain Tirthankara was born in Kashi**
8th Cent BC	**Parasanath, the 23rd Jain Tirtankara was born in Bhelupura Ward**
6th Cent BC	**The Buddha's first preaching (dharmachakra pavattam) at Sarnath**
240 BC	**Ashoka visited Kashi**
7th Cent BC	**Annexation of Kashi to Kosala, Magadh, Kaushambi ; Nanda rule ; Kushana rule**
4th Cent AD	**Gupta rule**
490 AD	**Building of Vishwanatha Temple (perhaps for the first time)**
5th Cent AD	**Fa-Hien visited the city**
6th Cent AD	**Jangambari Matha, the chief Matha of Veerashaivism, was established**
7th Cent AD	**Huen Tsang visited Kashi**
8th Cent AD	**Shankaracharya stayed in Kashi for sometime and composed his celebrated commentary on the *Vedantha Sutra* ; perhaps visited the city twice**

8th Cent AD The rule of the Palas
9th Cent AD The rule of the Pratiharas
10th Cent AD The rule of Chedis

MEDIEVAL PERIOD : AD 1000-1750

1013 Ahmed Nialtgin plundered the city, demolished temples
12th Cent The rule of the Gahadwals (Gaharwals)
12th Cent Ramanuja visited Kashi
1194 Qutb-uddin-Aibak demolished Vishwanatha temple and many other temples
1294 Santa Jnaneshwara visited Kashi
13th Cent Alauddin Khilzi invaded the City
13th - 14th Cent. Turko-Afghan domination
14th-15th Cent. Ramananda settled in Kashi, lived and taught on the Panchaganga Ghat, founded a sub-sect in Vaishnavism
1440-1518 Kabir was born near the Lahartara tank
15th Cent Raidas became the disciple of Ramananda
1469-1539 Nanak visited the city, had *shastrartha* with the pandits of Kashi
1494 Sikandar Lodi invaded the City
15th Cent Sharqul's rule - Lodi's and Suri's possession
1478-1530 Vallabhacharya settled here in the latter part of his life ; died in Kashi
1485-1533 Chaitanya lived here for many years
1532-1623 Tulsidas composed the famous

`*Ramacharitamanas*' between 1574-1584, died here in 1623

1567 Akbar defeated Jaichanda, the king of Kashi ; established a mint

1585 Restoration of Vishwanatha temple by Todarmal

1600 Construction of Mana Mandir ghat and more than 1000 temples by Raja Man Singh of Ajmer (Jaipur)

1628 Renovation of Gyanabapi by Baija Biac, the Maharani of Gwalior

- - - Shahjahan demolished several temples

1655-56 Darashikoha translated Upanishad in Persian with the help of 150 Pandits of Kashi

1664 Battle of Gyanabapi between the Dasnami Naga, Sannyasis and the army of Aurangazeb

1666 Shivaji found a refuge with the Brahamans of Kashi on his flight from the imperial court of Aurangazeb

1669 Aurangazeb demolished the temples of Vishwanatha and Beni Madhava, erected mosques on those sites

1697 Raja Jai Singh of Jaipur built observatory

17th Cent Guru Tegh Bahadur visited Kashi

1722 The rule of the Nawab of Oudh

1725 The establishment of Kashi Raj

MODERN PERIOD : AD 1751-1960

1752	The buliding of the fort of Ramnagar
1757	The control of East India Company
1773	Warren Hastings' visit to Kashi
1777	Ahilya Baie, The Maharani of Indore, constructed the persent golden temple of Vishwanath
1791	Construction of Manikarnika ghat
1791	Foundation of Sanskrit Pathashala
1794	The formation of Muncipal Board
1810	Protest against Gharachhari Tax
1817	Maharaja Jai Narain Ghosal opened the first English School
1839	The gilting of Vishwantha temple by gold by Maharana Ranajeeta Singh
1845	Marwari Hindu Hospital was established
1851	Kali andhi (black storm)
1852	Goraiasahi movement
1852	Demolition of *baraha pathak* (twelve gates) on Madanpura
1855	Wazid Ali Sah visited Kashi
1857	Mutiny
1860	Fire in Purani Chauk
1862	Rail link between Moghulsarai and Varanasi
1866	The organization of the MahaPalika
1868	Ramakrishna Paramahansa visited Kashi
1869	Swami Dayananda visited Kashi
1872	First Census
1866-1885	Bharatendu Harishchandra
1887	Opening of Rail-cum-Road bridge on the Ganges (Dufferin bridge, now Malaviya bridge)

1888 Establishment of Church Missionary Society
1891 Ramahalla movement
1892 Water works
1897 The foundation of Hindu College by Annie Besant
1902 Establishment of `Bharath Dharma Mahamandala' by Swami Gyanananda
1905 Foundation of Sydbada Mahavidyalaya
1916 Foundation of Banaras Hindu University
1917 Mahatma Gandhi's first political speech in the Banaras Hindu University
1918 First aeroplane was seen on a Tuesday
1920 Foundation of Kashi Vidyapeetha by Mahatma Gandhi
1928 Electrification
1934 Earthquake on 15th January at 2.30 p.m.
1937 Opening the `Bharath Maata Mandir ' by Mahatma Gandhi
1941 Establishment of Dharma Sangha by Swami Karapatriji
1942 Quit India Movement
1947 Independance
1958 Sanskrit University was founded
1960 Formation of Nagar Maha Palika (Corporation)

ASCETICS OF KASHI

[ಲೇಖಕರು: ಸಿನ್ಹಾ, ಸುರಜಿತ್ ಮತ್ತು ಬೈದ್ಯನಾಥ ಸರಸ್ವತಿ]

ಅನುಬಂಧ-2

ಸನ್ಮಾರ್ಗ ಪತ್ರಿಕೆಯಲ್ಲಿ ಪ್ರಕಟವಾದ ಸಮಾಚಾರದ ಪೂರ್ಣಪಾಠ.

'ಪ್ರಯಾಗ ಉಚ್ಚ ನ್ಯಾಯಾಲಯ ಕಾ ನವಂಬರ್ ಮೇ ಶತಾಬ್ದೀ ಸಮಾರೋಹ'

ಪ್ರಯಾಗ 12, ಅಪ್ರೈಲ್ : ಪ್ರಯಾಗ ಉಚ್ಚ ನ್ಯಾಯಾಲಯ ಕಾ, ಜೋ ಭಾರತ ಕೇ ಸಬಸೇ ಪುರಾನೇ ಔರ್ ಸಬಸೇ ಬಡೇ ಉಚ್ಚ ನ್ಯಾಯಾಲಯೋಂ ಮೇ ಸೇ ಏಕ್ ಹೈ, ಶತಾಬ್ದೀ ಸಮಾರೋಹ ಆಗಾಮೀ 25, 26, 27 ನವಂಬರ್ ಕೋ ಮನಾಯಾ ಜಾಯೇಗಾ. ಭಾರತ ಕೇ ಮುಖ್ಯ ನ್ಯಾಯಾಧೀಶ ಸಮಾರೋಹ ಕೀ ಅಧ್ಯಕ್ಷತಾ ಕರೇಂಗೇ ಔರ್ ರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಸೇ ಸಮಾರೋಹ ಕಾ ಉದ್ಘಾಟನ್ ಕರನೇ ಕಾ ಅನುರೋಧ ಕಿಯಾ ಗಯಾ ಹೈ.

ಶತಾಬ್ದೀ ಸಮಾರೋಹ ಕೀ ಯೋಜನಾ ಸಮಿತಿ ನೇ ಭಾರತ ಸರಕಾರ ಸೇ ಅನುರೋಧ ಕಿಯಾ ಹೈ ಕಿ ವಹ ಶತಾಬ್ದೀ ಸಮಾರೋಹ ಕೇ ಉಪಲಕ್ಷ್ಯ ಮೇ ವಿಶೇಷ ಸ್ಮೃತಿ ಟಿಕಟ್ ಜಾರೀ ಕರೇ. ಇಸ್ ಅವಸರ ಪರ್ ಏಕ್ ಸ್ಮೃತಿ ಪತ್ರಿಕಾ ಭೀ ನಿಕಾಲೀ ಜಾಯೇಗೀ. ನ್ಯಾಯಾಲಯ ಕೇ ಅಭಿಲೇಖೋಂ ಕೀ ಪ್ರದರ್ಶನೀ ಕೇ ಉದ್ಘಾಟನ ಕೇ ಸಾಥ್ ತೀನ್ ದಿವಸೀಯ ಸಮಾರೋಹೋಂ ಕಾ ಆರಂಭ ಹೋಗಾ. **ಪ್ರದರ್ಶಿತ ವಸ್ತುವ್ರೋಂ ಮೇ ಕಾಶೀ ಕೇ ಮಹಾರಾಜಾ ಜಯನಂದ ದೇವ ದ್ವಾರಾ 574 ಇಸ್ವೀ ಸೇ ಜಾರೀ ಕಿಯಾ ಗಯಾ ಏಕ್ ಶಾಹೀ 'ಫರಮಾನ್ ಭೀ ಹೋಗಾ.** ಇಸಕೇ ಅತಿರಿಕ್ತ ಅನ್ಯ ರೋಚಕ್ ಅಭಿಲೇಖ್ ಜೈಸೆ ಸಮಯ್ ಸಮಯ್ ಪರ್ ಜಾರೀ ಕೀ ಗಯೀ ಸನದೇಂ ಔರ್ ಫರಮಾನ್ ಹೋಂಗೇ''.............

[ಸನ್ಮಾರ್ಗ ಪತ್ರಿಕಾ, ಸೋಮವಾರ, ವೈಶಾಖ ಕೃಷ್ಣಪಕ್ಷ 12]

ಅನುಬಂಧ-3

ಶ್ರೀ ಜಗದ್ಗುರು ಕಾಶೀ ಪೀಠದ ಬಗ್ಗೆ
ಅಲಹಾಬಾದ ಹೈಕೋರ್ಟಿನ ತೀರ್ಮಾನ

Case No. 58 of 1954. Appeal No. 161 of 1934

''ಈ ಮಠವು ಇಂಡಿಯಾ ದೇಶದಲ್ಲಿ ಪ್ರಸಿದ್ಧರಾಗಿರುವ ಲಿಂಗಾಯತರು ಅಥವಾ ಶಿವಭಕ್ತರೆಂದು ಕರೆಯಲ್ಪಡುವ ಪಂಗಡಕ್ಕೆ ಸಂಬಂಧಪಟ್ಟಿದ್ದು, ಅವರಲ್ಲಿ ಜಂಗಮರೆಂದು ಕರೆಯಲ್ಪಡುವ ಗುಂಪಿಗೆ ಸೇರಿದೆ. ಜಂಗಮರ ಪೂರ್ವಚರಿತ್ರೆಯು ಅವರಿಗೆ ಐದು ಮುಖ್ಯವಾದ ಪೂಜ್ಯಕೇಂದ್ರಗಳಿರುವವೆಂದು ತೋರಿಸುತ್ತದೆ. ಕಾಶಿಯು ಅವುಗಳಲ್ಲಿ ಒಂದಾಗಿರುವುದು. ಈ ಕೇಸಿನಲ್ಲಿ ಕಾಶಿರಾಜರಿಂದ ಕೊಡಲ್ಪಟ್ಟ ಒಂದು ದಾನಶಾಸನವನ್ನು ಹಾಜರು ಮಾಡಲಾಗಿದೆ. ಅದು ಕ್ರಿ.ಶ. 574ನೇ ವರ್ಷಕ್ಕೆ ಸಂಬಂಧಪಟ್ಟದ್ದಾಗಿರುವುದು ಮತ್ತು ಮೊಘಲ್ ಚಕ್ರವರ್ತಿಗಳಾದ ಹುಮಾಯೂನ್, ಅಕಬರ್, ಜಹಾಂಗೀರ್, ಶಹಾಜಹಾನ್ ಮತ್ತು ಔರಂಗಜೇಬ್ ಇವರುಗಳ ಫರ್ಮಾನುಗಳನ್ನು ಹಾಜರುಮಾಡಲಾಗಿದೆ.

ಈ ದಾನಶಾಸನಗಳು ಕಾಶಿ ಮತ್ತು ಚುನಾರಿನ ಕೆಲವು ಜಮೀನುಗಳು, ಇಲ್ಲಿನ ಜಂಗಮರಿಗೆ ಅಥವಾ ಕಾಶಿಯಲ್ಲಿರುವ ಜಂಗಮರ ಅಧಿಪತಿಗಳಿಗೆ ಆಗಿಂದಾಗ್ಗೆ ಕೊಡಲ್ಪಟ್ಟಿರುವುವೆಂದು ತೋರಿಸುತ್ತವೆ. ರಿಕಾರ್ಡ್ ಪುಸ್ತಕದ 379ನೇ ಪುಟದಲ್ಲಿ ಪ್ರಿಂಟಾಗಿರುವ ಕ್ರಿ.ಶ. 1632ರಲ್ಲಿ ಶಹಾಜಹಾನ್ ಚಕ್ರವರ್ತಿಯಿಂದ ಕೊಡಲ್ಪಟ್ಟ ಒಂದು ಆರ್ಡರಿನಲ್ಲಿ ಜಂಗಮರನ್ನು ಜಂಗಮವಾಡಿಮಠದ 'ಮುಜವಿರ್ಸ್' ಎಂದು ಬರೆದಿದೆ. ಅಂದರೆ ಈ ಶಬ್ದವು 'ಹಿಂದೂ ಮಠಾಧಿಪತಿ' ಎಂದು ಅರ್ಥವಾಗುವ ಉರ್ದುಭಾಷೆಯ ಶಬ್ದವೆಂದು ಹೇಳಬಹುದು.''

[ಹೆಚ್ಚಿನ ವಿವರಗಳಿಗಾಗಿ ನೋಡಿ.]

ಶ್ರೀ ಜಗದ್ಗುರು ಕಾಶೀ ಪೀಠದ ಕೇಸಿನ ಜಡ್ಜಮೆಂಟಿನ ಒಂದು ಭಾಗ

ಪ್ರಕಾಶಕರು : ಮ್ಯಾನೇಜರ್ ಜಂಗಮವಾಡಿಮಠ ವಾರಾಣಸಿ

ಶಿವಧರ್ಮಗ್ರಂಥಮಾಲೆ, 19ನೇ ಪುಷ್ಪ , 22.10.1955]

ಅನುಬಂಧ-4

ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಪೀಠದ ಪೂರ್ವಾಚಾರ್ಯರ 'ಪಟ್ಟವಲ್ಲರಿ'

ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು (ಕೃತಯುಗ)
ಶ್ರೀ ಜಗದ್ಗುರು ಪಂಚವಕ್ತ್ರ ಶಿವಾಚಾರ್ಯ ಮಹಾಸ್ವಾಮಿಗಳು (ತ್ರೇತಾಯುಗ)
ಶ್ರೀ ಜಗದ್ಗುರು ವಿಶ್ವಕರ್ಣ ಶಿವಾಚಾರ್ಯ ಮಹಾಸ್ವಾಮಿಗಳು (ದ್ವಾಪರಯುಗ)
ಶ್ರೀ ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು (ಕಲಿಯುಗ)

1. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು
ಕ್ರಿಸ್ತಪೂರ್ವ 2001-1690
311 ವರುಷಗಳು

2. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1690-1576
114 ವರುಷಗಳು

3. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1576-1501
75 ವರುಷಗಳು

4. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1501-1400
101 ವರುಷಗಳು

5. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1400-1275
125 ವರುಷಗಳು

6. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1275-1195
80 ವರುಷಗಳು

7. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1195-1131
64 ವರುಷಗಳು

8. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1131-1076
55 ವರುಷಗಳು

9. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1076-1019
57 ವರುಷಗಳು

10. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1019-0956
63 ವರುಷಗಳು
11. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0956-0881
75 ವರುಷಗಳು
12. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0881-0847
34 ವರುಷಗಳು
13. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0847-0802
45 ವರುಷಗಳು
14. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0802-0765
37 ವರುಷಗಳು
15. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0765-0699
66 ವರುಷಗಳು
16. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0699-0668
31 ವರುಷಗಳು
17. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0668-0643
25 ವರುಷಗಳು
18. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0643-0626
17 ವರುಷಗಳು
19. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0626-0611
15 ವರುಷಗಳು
20. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0611-0590
21 ವರುಷಗಳು
21. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0590-0513
77 ವರುಷಗಳು
22. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0513-0478
35 ವರುಷಗಳು
23. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0478-0438
40 ವರುಷಗಳು
24. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0438-0393
45 ವರುಷಗಳು
25. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0393-0342
51 ವರುಷಗಳು

26. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0342-0314

28 ವರುಷಗಳು

27. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0314-0300

14 ವರುಷಗಳು

28. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0300-0233

67 ವರುಷಗಳು

29. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0233-0214

19 ವರುಷಗಳು

30. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0214-0190

24 ವರುಷಗಳು

31. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0190-0168

22 ವರುಷಗಳು

32. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0168-0116

52 ವರುಷಗಳು

33. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0116-0078

38 ವರುಷಗಳು

34. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0078-0036

42 ವರುಷಗಳು

35. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0036-0007

29 ವರುಷಗಳು

36. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು

ಕ್ರಿಸ್ತ ಶಕೆ 0007-0005

02 ವರುಷಗಳು

37. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0005-0059

54 ವರುಷಗಳು

38. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0059-0081

22 ವರುಷಗಳು

39. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0081-0105

24 ವರುಷಗಳು

40. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0105-0131

26 ವರುಷಗಳು

41. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0131-0155
24 ವರುಷಗಳು

42. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0155-0214
59 ವರುಷಗಳು

43. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0214-0228
14 ವರುಷಗಳು

44. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0228-0285
57 ವರುಷಗಳು

45. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0285-0354
69 ವರುಷಗಳು

46. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0354-0417
63 ವರುಷಗಳು

47. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0417-0438
21 ವರುಷಗಳು

48. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0438-0449
11 ವರುಷಗಳು

49. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0449-0521
72 ವರುಷಗಳು

50. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0521-0553
32 ವರುಷಗಳು

51. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0553-0674
121 ವರುಷಗಳು

52. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0674-0759
85 ವರುಷಗಳು

53. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0759-0793
34 ವರುಷಗಳು

54. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0793-0829
36 ವರುಷಗಳು

55. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0829-0882
53 ವರುಷಗಳು

56. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0882-0940
58 ವರುಷಗಳು

57. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0940-0996
56 ವರುಷಗಳು

58. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 0996-1009
13 ವರುಷಗಳು

59. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1009-1057
48 ವರುಷಗಳು

60. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1057 -1103
46 ವರುಷಗಳು

61. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1103- 1122
19 ವರುಷಗಳು

62. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1122-1187
65 ವರುಷಗಳು

63. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1187-1201
14 ವರುಷಗಳು

64. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1201-1275
74 ವರುಷಗಳು

65. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1275-1347
72 ವರುಷಗಳು

66. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1347-1356
09 ವರುಷಗಳು

67. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1356-1429
73 ವರುಷಗಳು

68. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1429-1442
13 ವರುಷಗಳು

69. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1442- 1460
18 ವರುಷಗಳು

70. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1460-1527
67 ವರುಷಗಳು

71. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1527-1547

20 ವರುಷಗಳು

72. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1547-1583

36 ವರುಷಗಳು

73. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1583-1631

48 ವರುಷಗಳು

74. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1631-1639

08 ವರುಷಗಳು

75. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1639-1663

24 ವರುಷಗಳು

76. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1663-1710

47 ವರುಷಗಳು

77. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು 1710-1750

40 ವರುಷಗಳು

78. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು (ಪ್ರಥಮ)
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)
1750-1825

75 ವರುಷಗಳು

79. ಶ್ರೀ ಜಗದ್ಗುರು ಹರೀಶ್ವರ ಶಿವಾಚಾರ್ಯ ಮಹಾಸ್ವಾಮಿಗಳು
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)
1825-
1879

54 ವರುಷಗಳು

80. ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು (ಪ್ರಥಮ)
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)
1879-1891

12 ವರುಷಗಳು

81. ಶ್ರೀ ಜಗದ್ಗುರು ರಾಜೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)
1891-1907

16 ವರುಷಗಳು

82. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು (ದ್ವಿತೀಯ)
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)
1907-1932

25 ವರುಷಗಳು

83. ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)
1932-1944

12 ವರುಷಗಳು

84. ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು (ದ್ವಿತೀಯ)
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)

1944-1948

27-09-1944ರಿಂದ 25-01-1948ರವರೆಗೆ

ಮೂರು ವರುಷ ಮೂರು ತಿಂಗಳು ಇಪ್ಪತ್ತೊಂಬತ್ತು ದಿನ
ಆರು ಗಂಟೆ ಹತ್ತು ನಿಮಿಷಗಳು ಮಾತ್ರ

85. ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)
1948-1989

14-11-1948ರಿಂದ 02-10-1989ರವರೆಗೆ

41 ವರುಷಗಳು

86. ಶ್ರೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
(ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು)
17-11-1989 ಪೀಠಾರೋಹಣದ ಪರ್ವದಿನ

ಅನುಬಂಧ-5

ದೊಡ್ಡವರ ಕಣ್ಣುಗಳಲ್ಲಿ ಶ್ರೀ ವೀರಭದ್ರ ಜಗದ್ಗುರುಗಳು

ಕಾಶೀ ಪೀಠದ ನೂತನ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯ ಸನ್ನಿಧಿಯವರು ಸರ್ವವಿದ್ಯಾನಿಧಿಗಳು ಮತ್ತು ಜ್ಞಾನಮೂರ್ತಿಗಳು. ಇವರಲ್ಲಿ ಶ್ರೀ ವಿಶ್ವಾರಾಧ್ಯರ ವಿಶೇಷ ಅಂಶವಿದೆ. ಇವರಿಂದಾಗಿ ಶಿವಾದ್ವೈತ ಸಿದ್ಧಾಂತವು ಜಗತ್ತಿನಲ್ಲಿ ವೈಭವದಿಂದ ಪ್ರಕಾಶಮಾನವಾಗಿ ಬೆಳಗುತ್ತದೆ, ಪೂಜ್ಯರಿಂದ ಗುರುಗಳ ಮತ್ತು ಗುರುಕುಲಗಳ ಗೌರವವು ಧಾರಾಳವಾಗಿ ವೃದ್ಧಿಸುತ್ತದೆ.

ಲಿಂ. ಶ್ರೀಮದ್ರಂಭಾಪುರೀ ಜಗದ್ಗುರು ಶ್ರೀ ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು

ಶ್ರೀ ಕಾಶೀ ವೀರಭದ್ರ ಜಗದ್ಗುರುಗಳ 'ಜಗದ್ಗುರು ಪಟ್ಟಾಭಿಷೇಕ' ಸಂದರ್ಭದಲ್ಲಿ 27.09.1944

''ಕೈಲಾಸವಾಸಿ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರ ಬಗ್ಗೆ ಬರೆಯಲು ಸ್ಥಾನ ಸಾಲದು. ನಾಲ್ಕು ಮಾತುಗಳಲ್ಲಿ ಇತಿಹಾಸ ಮುಗಿಯದು. ಅವರ ಸಮಗ್ರ ಇತಿಹಾಸವು ರಚಿತವಾದರೆ ಅದು ಒಂದು ಸಾವಿರ ಪುಟಕ್ಕೆ ಮೀರಬಹುದು. ಆ ಕಾರ್ಯವನ್ನು ನೂತನಾಧಿಕಾರಿಗಳು ಪಂಡಿತರಿಂದ ಮಾಡಿಸಿ ತಮ್ಮ ಗುರುಭಕ್ತಿಯನ್ನು ಪ್ರಕಟಿಸಬೇಕಾದುದು ಆದ್ಯ ಕರ್ತವ್ಯ.''

ಲಿಂಗೈಕ್ಯ ಶ್ರೀಶೈಲ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ
ಶಿವಾಚಾರ್ಯ ಮಹಾಸ್ವಾಮಿಗಳು

ವಿಪಂಚೀ (ಷಾಣ್ಮಾಸಿಕ) ಮಾರ್ಚ್ 1951

''ತಾವು ಬರೆದ ಪುಸ್ತಕವನ್ನು ಓದಿದೆ. ತುಂಬ ಸಂತೋಷಪಟ್ಟೆ. ತಮ್ಮ ವಿಚಾರಗಳಿಂದ ಪ್ರಭಾವಿತನಾದೆ. ತಾವು ತಮ್ಮ ಪುಸ್ತಕದಲ್ಲಿ ಹೇಳಿರುವ ಹಾಗೆ ವೀರಶೈವ ಮತದ ಮೂಲ ಸಿದ್ಧಾಂತಕ್ಕೆ ಆಧಾರವಾಗಿರುವ ಶಿವಾಗಮ ಮತ್ತು ವೈದಿಕ ವಿದ್ಯೆಯ ಸಿದ್ಧಾಂತವನ್ನೇ ಅನುಸರಿಸಿ ಹಿಂದೂ ಮಹಾಸಭೆಯು ಕಾರ್ಯಮಾಡುತ್ತಿದೆ.''

ವಿ. ದಾ. ಸಾವರಕರ್ ಅಧ್ಯಕ್ಷರು, ಹಿಂದೂ ಮಹಾಸಭೆ, 1940

''ನನ್ನ ಮಾನ್ಯ ಮಿತ್ರರೂ ಕನ್ನಡ ನಾಡಿನ ಹಿರಿಯ ವಿದ್ವಾಂಸರೂ ಆದ ಶ್ರೀ ಪಂಡಿತ ಚಿದರೆ ಮಠಾಧ್ಯಕ್ಷ ವೀರಭದ್ರ ಶಾಸ್ತ್ರಿಗಳವರು ಕಾಶೀ ಕ್ಷೇತ್ರದ ಜಂಗಮವಾಡಿ ಮಠದ ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾಗುವ ಸಂಬಂಧದ ಉತ್ಸವದ ತಮ್ಮ ಆಹ್ವಾನ ಪತ್ರಿಕೆ ತಲುಪಿ ಬಹಳ ಸಂತೋಷವಾಗಿದೆ. ಈ ಉತ್ಸವಕ್ಕೆ ಬಂದು ಭಾಗಿಯಾಗುವ ಅವಕಾಶ ನನಗಿಲ್ಲವಾಗಿದೆ. ದಯವಿಟ್ಟು ಕ್ಷಮಿಸಿ.

ಶ್ರೀ ಶ್ರೀಯವರು ಕಾಶೀ ಕ್ಷೇತ್ರದ ಶ್ರೀ ಜಗದ್ಗುರು ಪೀಠವನ್ನು ಅಲಂಕರಿಸುವುದು ಕನ್ನಡ ನಾಡಿಗೇ ಒಂದು ಹೆಮ್ಮೆಯ ವಿಷಯ. ಪೂಜ್ಯರು ನಮ್ಮ ನಾಡಿಗೂ ನುಡಿಗೂ ಬಹಳ ವಿಧದಲ್ಲಿ ಸಹಾಯ ಮಾಡಿರುತ್ತಾರೆ. ಪೂಜ್ಯ ಶ್ರೀಗಳು ಈ ನೂತನ ಪದವಿಯನ್ನು ಅಲಂಕರಿಸಿರುವುದರಿಂದ ಅವರಿಂದ ಕನ್ನಡ ನಾಡಿಗೇ ಅಲ್ಲದೆ ಅಖಿಲ ಹಿಂದೂಸ್ಥಾನಕ್ಕೇ ಹೆಚ್ಚಿನ ಸೇವೆ ದೊರೆಯುವಂತಾಗಿದೆ. ಈ ಸಂದರ್ಭದಲ್ಲಿ ಪರಿಷತ್ತಿನ ಪರವಾಗಿಯೂ ನನ್ನ ಪರವಾಗಿಯೂ ಶ್ರೀ ಶ್ರೀಯವರಲ್ಲಿ ನಮ್ಮ ಭಕ್ತಿ-ವಿಶ್ವಾಸಗಳನ್ನು ಸಮರ್ಪಿಸುತ್ತೇನೆ.'' ಇಂತಿ ವಿಜ್ಞಾಪನೆಗಳು.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ಪೀಠಾರೋಹಣದ ಸಂದರ್ಭದಲ್ಲಿ 16. 09. 1944

[ನಂತರದ ದಿನಗಳಲ್ಲಿ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿ ಎಂದೇ ಖ್ಯಾತವಾದ 'ಜ್ಞಾನಪೀಠ ಪ್ರಶಸ್ತಿ'ಯನ್ನು ಪಡೆದ ಮತ್ತು 'ಮಾಸ್ತಿ ಕನ್ನಡದ ಆಸ್ತಿ' ಎಂದು ಗುರುತಿಸಲ್ಪಟ್ಟ ವ್ಯಕ್ತಿತ್ವವೊಂದು ವೀರಭದ್ರ ಜಗದ್ಗುರುಗಳ ಕುರಿತು ವ್ಯಕ್ತಿತ್ವದ ಕುರಿತು ಭಕ್ತಿ-ಗೌರವದಿಂದ ಬರೆದ ಪತ್ರವಿದು.]

ಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳು ಪ್ರಕಾಂಡ ಪಂಡಿತರು, ವಿಮರ್ಶಾ ವಿಚಕ್ಷಣರು ಮತ್ತು ಸಹೃದಯರು.

ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ ಮೈಸೂರು 7.12.1965

''ಈ ಮಹಾಪೀಠಕ್ಕೆ ತಮ್ಮಂಥ ಅನೇಕ ಪದವೀ ಭೂಷಿತರೂ, ವಿದ್ಯಾವಂತರೂ ಮತ್ತು ಗ್ರಂಥಕರ್ತರೂ ದೊರಕಿದ್ದು ನಮಗೆ ಮಹದಾನಂದವನ್ನುಂಟು ಮಾಡಿದೆ. ಇದು ಈ ಸಮಾಜದ ಉತ್ಕರ್ಷಕ್ಕೆ ಒಂದು ಭವಿಷ್ಯದ ಶುಭಸೂಚನೆ ಎಂದು ನಾನು ಭಾವಿಸುತ್ತೇನೆ.''

ಶ್ರೀ H. K. ವೀರಬಸವಯ್ಯ B.A., B.L.

ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ 20. 09. 1944

ಅನುಬಂಧ-6

ತ್ರಿದಲಂ ತ್ರಿಗುಣಾತ್ಮಕಮ್........

(ಕಾಶಿ ಜಗದ್ಗುರು ಪೀಠಾರೋಹಣದ ಮಂಗಲ ಮಹೋತ್ಸವದ ಶುಭ-ಸಂದರ್ಭದಲ್ಲಿ ವೇದ್ಯ-ಕಾವ್ಯ-ಸ್ಮೃತಿತೀರ್ಥ, ಧರ್ಮಾಚಾರ್ಯ, ವಿದ್ಯಾರತ್ನ, ವಿದ್ಯಾನಿಧಿ ಪಂಡಿತ ವೀರಭದ್ರ ಶರ್ಮರ ಶ್ರೀ ಚರಣಗಳಿಗೆ ಶ್ರೀಯುತ ಎಲ್. ಜಿ. ಹೊಂಬಳ್ ಬಂಧುಗಳು ಅರ್ಪಿಸಿದ ಭಕ್ತಿಯ ಬಿಲ್ವದಳವಿದು)

ದಳ-1

ಯಾವ ನಗರಿಯೊಳಿದ್ದು ಜ್ಞಾನೋಪಾಸನೆಯ ನೀವ್ ಗೈದಿರೋ
ಯಾವ ಜಂಗಮವಾಡಿಯಲ್ಲಿಯೇ ಶಾಸ್ತ್ರ- ಸುಮಗಳನಾಯ್ದಿರೋ
ಯಾವ ವಿಶ್ವೇಶ್ವರನ ಕೊರಳಿಗೆ ಗ್ರಂಥಮಾಲೆಯನ್ನೆದಿರೋ
ಎಲ್ಲಿ ವ್ಯಾಸಂಗದಲಿ ನಿಮ್ಮಯ ಕಾಯವನ್ನೆ ತೇಯ್ದಿರೋ
ಅಲ್ಲಿ ಜಗದ್ಗುರು ಪೀಠವೇರುವ ನೀವೆ ನಿಜಕ್ಕೂ ಧನ್ಯರು
ಸರಸ್ವತೀ ವರಪುತ್ರಶ್ರೇಷ್ಠರು, ಸರ್ವಕುಲ ಸನ್ಮಾನ್ಯರು

ದಳ-2

ಎಲ್ಲಿ ಹಿಂದೂ ಸಂಸ್ಕೃತಿಯ ಶಿಶು ಪ್ರೌಢವಾಯಿತು ಬೆಳೆಯುತ
ಎಲ್ಲಿ ಭಾರತ ಜ್ಞಾನ ಹರಡಿತೊ ಜಗದ ಕತ್ತಲೆ ಕಳೆಯುತ
ಎಲ್ಲಿ ಶಿವಮತ ಹಬ್ಬಿ ಮೆರೆಯಿತೊ ವೈರಿವರ್ಗವ ತುಳಿಯುತ
ಎಲ್ಲಿ ವಿಶ್ವಾರಾಧ್ಯರಿಗೆ ನೃಪರೆರಗಿದರೊ ಮದವಳಿಯುತ
ಅಲ್ಲಿ ಜಗದ್ಗುರು ಪೀಠವೇರುವ ನೀವೆ ನಿಜಕ್ಕೂ ಧನ್ಯರು
ಸರಸ್ವತೀ ವರಪುತ್ರಶ್ರೇಷ್ಠರು, ಸರ್ವಕುಲ ಸನ್ಮಾನ್ಯರು

ದಳ -3

ಎನಿತು ಎಡರುಗಳೆದುರು ಬಂದರೂ ಧ್ಯೇಯನಿಷ್ಠೆಯ ತೊರೆಯದೆ
ಎನಿತು ವಿಘ್ನಗಳಡ್ಡ ಪಡೆದರೂ ಹೆದರಿ ಹಿಂದಕೆ ಸರಿಯದೆ
ಇನಿತು ಗ್ರಂಥವ ಬರೆದರೊಮ್ಮೆಯು ವ್ಯರ್ಥವಾದುದ ಬರೆಯದೆ
ರಾಜಮನ್ನಣೆ ಪಡೆದರೂ ನಿಜ ಧ್ಯೇಯವೆಂದಿಗು ಮರೆಯದೆ
ಕೊನೆಗೆ ಜಗದ್ಗುರು ಪೀಠವೇರುವ ನೀವೆ ನಿಜಕ್ಕೂ ಧನ್ಯರು
ಸರಸ್ವತೀ ವರಪುತ್ರಶ್ರೇಷ್ಠರು, ಸರ್ವಕುಲ ಸನ್ಮಾನ್ಯರು

ಅನುಬಂಧ-7

ಶ್ರೀ ವೀರಭದ್ರ ಶರ್ಮರ ಜನ್ಮಕುಂಡಲಿ

ಹೆಸರು	: ಚಿದರೆಮಠದ ಶ್ರೀ ವೀರಭದ್ರ ಶರ್ಮಾ
ಲಿಂಗ	: ಪುರುಷ
ಜನ್ಮ ದಿನಾಂಕ	: 25 ಆಗಸ್ಟ್, 1904, ಗುರುವಾರ
ಜನ್ಮ ಸಮಯ (Hr. Min. Sec.)	: 11.45.00 A.M.; Standard Time
ಜನ್ಮ ಸ್ಥಳ	: ನಲಗೊಂಡಾ, ಹೈದರಾಬಾದ
ಆಯನಾಂಶ	: ಚಿತ್ರಪಕ್ಷ
ಜನ್ಮನಕ್ಷತ್ರ	: ಧನಿಷ್ಠ ಮೂರನೇ ಪಾದ
ಜನ್ಮರಾಶಿ	: ಕುಂಭ
ಲಗ್ನ	: ತುಲಾ
ಲಗ್ನ ಅಧಿಪತಿ	: ಶುಕ್ರ
ತಿಥಿ	: ಪೌರ್ಣಮಿ ಶುಕ್ಲಪಕ್ಷ

ನಿರಯನ ಸ್ಫುಟ (Values in Deg: Min: Sec)

ಆಯನಾಂಶ ಕಂಡುಹಿಡಿಯುವುದಕ್ಕೆ ಅನೇಕ ಆಧಾರಗಳಿವೆ.

ಇಲ್ಲಿ ಅನುಸರಿಸಿರುವ ಪದ್ಧತಿ:

ಚಿತ್ರ ಪಕ್ಷ 22 ಡಿಗ್ರಿ. 31 ನಿಮಿಷ 30 ಸೆಕೆಂಡು.

ಜನ್ಮಕುಂಡಲಿ ಮತ್ತು ಫಲಭುಕ್ತಿ ವಿವರಗಳು

ಪರಮಪೂಜ್ಯರು ಶಾಲಿವಾಹನ ಶಕೆ 1826ನೇ ಶ್ರೀ ಕ್ರೋಧಿ ನಾಮ ಸಂವತ್ಸರೇ, ದಕ್ಷಿಣಾಯನೇ, ವರ್ಷಾಋತೌ ಶ್ರಾವಣಮಾಸೇ, ಶುಕ್ಲ ಪಕ್ಷೇ, ಪೌರ್ಣಿಮಾ ತಿಥೌ ಶುಭ ಬೃಹಸ್ಪತಿ ವಾಸರೇ ಬೆಳಿಗ್ಗೆ 11.45ಕ್ಕೆ ಸರಿಯಾಗಿ ಧನಿಷ್ಠಾ ನಕ್ಷತ್ರ 3ನೆಯ ಚರಣ, ಕುಂಭರಾಶಿ, ಶುಭ ತುಲಾಲಗ್ನದಲ್ಲಿ ಜನಿಸಿರುತ್ತಾರೆ.

ಜನನವು ಕುಜದಶಾ ಶನಿಭುಕ್ತಿಯಲ್ಲಿ ಆಗಿದ್ದು, ಜನನ ಕಾಲದಿಂದ ಅಂದರೆ 25-9-1904ರಿಂದ ಕುಜದಶೆಯು 03 ವರ್ಷ 02 ತಿಂಗಳು 18 ದಿನಗಳವರೆಗೆ ನಡೆದು, 1907 ನವೆಂಬರ್ 13ರವರೆಗೆ ಕುಜದಶೆಯು ನಡೆದಿರುತ್ತದೆ. ನಂತರ18 ವರ್ಷಗಳ ಕಾಲ ಅಂದರೆ 1925 ನವೆಂಬರ್ 13ರವರೆಗೆ ರಾಹುದಶೆ, ನಂತರ 16 ವರ್ಷಗಳ ಗುರುದಶಾ ಕಾಲವು 1941 ನವೆಂಬರ್13ರವರೆಗೆ ನಡೆದು ಮುಂದೆ ಶನಿದಶೆಯು ಪ್ರಾರಂಭವಾಗುತ್ತದೆ.

ಜನ್ಮಕಾಲಕ್ಕೆ, ಗುರುವು ಸಪ್ತಮಾಧಿಪತಿಯಾಗಿ, ಸಪ್ತಮಾಧಿಪತಿಯಾದ ಕುಜನು ದಶಮ ಸ್ಥಾನವಾದ ಕಟಕ ರಾಶಿಯಲ್ಲಿದ್ದು, ಗುರುವು ಅತ್ಯಂತ ಉಚ್ಚಸ್ಥಾನದಲ್ಲಿ ಮಂಡಿಸಿರುವುದರಿಂದ ಗುರುದಶಾ ಕಾಲವು 1925 ನವೆಂಬರ್13 ರಿಂದ 1941 ನವೆಂಬರ್13ರವರೆಗೆ ಒಟ್ಟು 16 ವರ್ಷಗಳ ಕಾಲ ಅತ್ಯಂತ ಯೋಗಕಾಲವು ನಡೆದಿದೆ. ಈ ದಶಾ

ಗ್ರಹ	ರಾಶಿ	ರೇಖಾಂಶ	ನಕ್ಷತ್ರ/ಪಾದ	ಗ್ರಹ	ರಾಶಿ	ರೇಖಾಂಶ	ನಕ್ಷತ್ರ/ಪಾದ
ಲಗ್ನ	ತುಲಾ	29:19:38	ವಿಶಾಖಾ/3	ಗುರು	ಮೇಷ	7:39:09	ಅಶ್ವಿನಿ/3
ಚಂದ್ರ	ಕುಂಭ	0:32:31	ಧನಿಷ್ಠ/3	ಶನಿ	ಮಕರ	24:03:01	ಧನಿಷ್ಠ/1
ರವಿ	ಸಿಂಹ	9:04:54	ಮೇಘ/3	ರಾಹು	ಸಿಂಹ	26:45:19	ಉ.ಫಾಲ್ಗುಣ/1
ಬುಧ	ಕನ್ಯ	5:41:49	ಉ.ಫಾಲ್ಗುಣ/3	ಕೇತು	ಕುಂಭ	26:45:19	ಪೂರ್ವಭಾದ್ರ/3
ಶುಕ್ರ	ಸಿಂಹ	22:17:21	ಪೂ.ಫಾಲ್ಗುಣ/3	ಗುಳಿಕ	ತುಲಾ	8:04:42	ಸ್ವಾತಿ/1
ಕುಜ	ಕರ್ಕಟ	13:59:47	ಪುಷ್ಯ/4				

ಕಾಲದಲ್ಲಿ ಉನ್ನತ ವ್ಯಾಸಂಗ, ವಿಶೇಷ ವಿದ್ಯಾಲಾಭ, ಕೀರ್ತಿ, ಗೌರವ, ಸ್ಥಾನಮಾನಗಳು ಲಭ್ಯವಾಗಿರುತ್ತವೆ. ತದನಂತರ ಪ್ರಾರಂಭವಾದ ಶನಿದಶೆಯಲ್ಲಿ 1941 ನವೆಂಬರ್ 23ರಿಂದ 3 ವರ್ಷ 3 ದಿನಗಳು ಶನಿದಶಾ, ಶನಿಭುಕ್ತಿಯು 1944 ನವೆಂಬರ್16ರವರೆಗೆ ನಡೆದು ಶನಿಯು ತುಲಾಲಗ್ನಕ್ಕೆ ಪರಮಮಿತ್ರ ಗ್ರಹವಾಗಿ ಸ್ವಕ್ಷೇತ್ರದಲ್ಲಿ ಶುಭಸ್ಥಾನದಲ್ಲಿದ್ದಾಗ ವಿಶೇಷವಾದ ಯೋಗಪ್ರಾಪ್ತಿಯು ಲಭಿಸಿರುತ್ತದೆ. 1944 ನವೆಂಬರ್ 16ರಿಂದ ಪ್ರಾರಂಭವಾದ ಶನಿದಶಾದಲ್ಲಿ ಬುಧಭುಕ್ತಿಯು 2 ವರ್ಷ 8 ತಿಂಗಳು 9 ದಿನದ ಈ ಅವಧಿಯು ಅತ್ಯಂತ ಕ್ರೂರ ಸಮಯವಾಗಿದ್ದು ಲಗ್ನಕ್ಕೆ ವ್ಯಯಸ್ಥಾನದಲ್ಲಿ ಬುಧನಿ ರುವುದರಿಂದ ಶರೀರಸಂಬಂಧವಾದ ಕಾಯಿಲೆ, ಉದರವ್ಯಾಧಿ, ಚಿತ್ತಚಾಂಚಲ್ಯ, ಬುದ್ಧಿಭ್ರಮಣೆ, ಜ್ವರಸಹಿತವಾದ ಶಾರೀರಿಕ ತಾಪವು ಜಾಸ್ತಿಯಾಗುತ್ತದೆ. 1947ನೇ ಜುಲೈ 27ರವರೆಗೆ ಮೇಲ್ಕಂಡ ಅಶುಭ ಫಲಗಳು ನಡೆದು ನಂತರ ಪ್ರಾರಂಭವಾದ ಶನಿದಶಾ ಕೇತುಭುಕ್ತಿಯು ಅತ್ಯಂತ ಕ್ರೂರ ಹಾಗೂ ಅಶುಭ ಕಾಲವು. ಜನ್ಮಲಗ್ನಕ್ಕೆ ಪಂಚಮದಲ್ಲಿ ಜನ್ಮರಾಶಿಯಲ್ಲಿ ಕೇತುವು ಸೇರಿದ್ದು, ತನುಸ್ಥಾನದಲ್ಲಿ ಅಂದರೆ ಕುಂಭರಾಶಿಯಲ್ಲಿ ಜನ್ಮರಾಶಿಯಿಂದ ಸಪ್ತಮದಲ್ಲಿ ರವಿ ಮತ್ತು ರಾಹುವಿಲ ಕ್ರೂರದೃಷ್ಟಿಯು ಸೇರಿ ಆಯುಷ್ಯಕಾರಕ ಹಾಗೂ ಆರೋಗ್ಯಕಾರಕನಾದ ಶನಿ ಹಾಗೂ ಕೇತುವಿನ ಪಾಪದೃಷ್ಟಿಯಿಂದ ವ್ಯಾಧಿಯು ಉಲ್ಬಣವಾಗುತ್ತದೆ. ಇದು ಅತ್ಯಂತ ಮಾರಕ ಹಾಗೂ ಅರಿಷ್ಟಕಾಲವು. ಈ ಕೇತುಭುಕ್ತಿಯು 1948 ಸೆಪ್ಟೆಂಬರ್ 4ರವರೆಗೆ ಇರುತ್ತದೆ.

ಇಂಥ ಅಶುಭ ಕಾಲದಲ್ಲಿ ಶನಿಗ್ರಹ ಶಾಂತಿ, ಮಹಾಮೃತ್ಯುಂಜಯ ಜಪ, ಮೂಲಮಂತ್ರಸಹಿತ ಮೃತ್ಯುಂಜಯ ಹೋಮ ಇತ್ಯಾದಿ ಶಾಂತಿಕಾರ್ಯಗಳಿಂದ ಸ್ವಲ್ಪಮಟ್ಟಿಗೆ ಆರೋಗ್ಯಸಂಬಂಧಿ ತೊಂದರೆಗಳನ್ನು ಶಮನಮಾಡಿಕೊಳ್ಳಬಹುದು. ಒಟ್ಟಿನಲ್ಲಿ ದಶಾಭುಕ್ತಿಯ ಪ್ರಕಾರ ಶನಿದಶಾ ಕೇತುಭುಕ್ತಿಯು ಮಾರಕ ಸಮಯವಾಗಿರುತ್ತದೆ.

ಅನುಬಂಧ-8

ವೀರಭದ್ರ ಜಗದ್ಗುರುಗಳವರ ದೈಹಿಕ ಪ್ರಮಾಣ ಪತ್ರ

MY

Scientific System of Graduated Physical Culture

Basavangudi Bangalore

PROF. M.V. KRISHNA RAO

MOTTO :- Body Culture a sacred duty.

OBJECT : - To unite the world together in a strong and Healthy Brotherhood and to disseminate the principles of Health and clean living

This is to certify that

Mr. C. M. V. Sharma (J.N0.151) has been following "my Scientific System of Graduated Physical Culture course" and in appreciation of his sincere efforts to build up his health and strength he is taken as aLife Member of our Brotherhood. The Physical Culture League and is advised to lead Healthy and Pure Life and to disseminate the broad prinples of the League for the physical uplift of our Motherland.

Winner of any Medal Whether Gold or Silver

THe Founder of the League

Date 28/10/1927

TWELVE COMMANDMENTS OF THE LEAGUE

1. Avoid every kind of excess.
2. Don't make use of tobacco in any form.
3. Don't drink alcoholic beverages, coffee and tea. 4.Don't fall into the habit of eating too quickly (better fast than eat quickly).
5. Don't indulge in heavy suppers just before going to bed.
6. Look upon Fresh air as your best friend. Inhale life- giving oxgen as much as possible during the day; while at night sleep wwith the bed-room window open. Follow this out even in the depth of winter. It is one of the great secrets of long life.
7. Don't breathe through the mouth, use your nostrils.
8. Keep regular hours and insure 8 hours sleep.
9. Don't neglect physical excercise, your body is sacred: "Sacred thy body even thy soul."
10. Don't neglect you daily bath.
11. Beware of passion. Remember that every outbreak shortens life to a certain degree, while occasionally it is fatal.
12. Seek a good partner in life, but not too early.

2650-26 The Bangalore Press.

ಅನುಬಂಧ-9-A

ವೀರಭದ್ರ ಜಗದ್ಗುರುಗಳು ಸಂಗ್ರಹಿಸಿಟ್ಟ ಅವರ ಪರೀಕ್ಷಾ ವೇಳಾಪಟ್ಟಿಗಳು

ಪರೀಕ್ಷಾ ನಡೆಸುವ ಸಂಸ್ಥೆ

ಕಾಲಿಕಾತಾ ಪಂಡಿತ ಸಭಾ

Calcutta Sanskrit Association = C S A

'ವೇದತೀರ್ಥ' ಸಂಸ್ಕೃತ ಪದವಿ (ಉಪಾಧಿ) ಪರೀಕ್ಷೆ

'VEDATEERTH'

SANSKRIT DEGREE OR TITLE EXAMINATION

Year of Examination

In the Month of February 1930

Place of Examination : Calcutta (ಇಂದಿನ ಕೋಲಕತ್ತಾ)

PAPER : ಶುಕ್ಲಯಜುರ್ವೇದ

ROLL NO. 784

Totally Four Papers

1. First Paper — Date 19. 02. 1930
2. Second Paper — Date 20. 02. 1930
3. Third Paper — Date 21. 02. 1930
4. Fourth Paper — Date 22. 02. 1930

ಅನುಬಂಧ-9-B

ಪರೀಕ್ಷಾ ನಡೆಸುವ ಸಂಸ್ಥೆ
ಕಾಲಿಕಾತಾ ಪಂಡಿತ ಸಭಾ
Calcutta Sanskrit Association = C S A
'ಸ್ಮೃತೀರ್ಥ' ಸಂಸ್ಕೃತ ಪದವಿ (ಉಪಾಧಿ) ಪರೀಕ್ಷೆ
'SMRITI TEERTH'
SANSKRIT DEGREE OR TITLE EXAMINATION
Year of Examination
In the Month of February 1934
Place of Examination : Calcutta (ಇಂದಿನ ಕೋಲಕತ್ತಾ)
PAPER : ಪ್ರಾಚೀನ ಸ್ಮೃತಿ
ROLL NO. 1017
Totally Four Papers

1. First Paper ಪ್ರಥಮ ಪತ್ರಿಕೆ Date 05. 02. 1934
2. Second Paper ದ್ವಿತೀಯ ಪತ್ರಿಕೆ Date 06. 02. 1934
3. Third Paper ತೃತೀಯ ಪತ್ರಿಕೆ Date 07. 02. 1934
4. Fourth Paper ಚತುರ್ಥ ಪತ್ರಿಕೆ Date 08. 02. 1934

ಅನುಬಂಧ-9-C

ಮಥುರೆಯ ಬ್ರಜಮಂಡಲ ವಿಶ್ವವಿದ್ಯಾಲಯ ನಡೆಯಿಸುವ

ಸಾಹಿತ್ಯ ಮಾಧ್ಯಮ ಪರೀಕ್ಷಾ

Year of Examination 1927

Place of Examination : Kashi ಕಾಶೀ

ROLL NO. 68

ಅಲಂಕಾರ ಸರ್ವಸ್ವ

Totally Four Papers

1. First Paper	ಪ್ರಥಮ ಪತ್ರಿಕೆ
2. Second Paper	ದ್ವಿತೀಯ ಪತ್ರಿಕೆ
3. Third Paper	ತೃತೀಯ ಪತ್ರಿಕೆ
4. Fourth Paper	ಚತುರ್ಥ ಪತ್ರಿಕೆ

`ಛಂದೋ ಮಂಜರೀ ಅನುವಾದ' ಪತ್ರಿಕೆ

ಅನುಬಂಧ-9-D

ಪರೀಕ್ಷಾ ನಡೆಸುವ ಸಂಸ್ಥೆ

ಕಾಲಿಕಾತಾ ಪಂಡಿತ ಸಭಾ

Calcutta Sanskrit Association = C S A

'ಕಾವ್ಯತೀರ್ಥ' ಸಂಸ್ಕೃತ ಪದವಿ (ಉಪಾಧಿ) ಪರೀಕ್ಷೆ

'KAVYA TEERTH'

SANSKRIT DEGREE OR TITLE EXAMINATION

Year of Examination

In the Month of February 1931

Place of Examination : Calcutta (ಇಂದಿನ ಕೋಲಕತ್ತಾ)

ROLL NO. 7

Totally Four Papers

1. First Paper	ಪ್ರಥಮ ಪತ್ರಿಕೆ	Date 25. 02. 1931
2. Second Paper	ದ್ವಿತೀಯ ಪತ್ರಿಕೆ	Date 26. 02. 1931
3. Third Paper	ತೃತೀಯ ಪತ್ರಿಕೆ	Date 27. 02. 1931
4. Fourth Paper	ಚತುರ್ಥ ಪತ್ರಿಕೆ	Date 28. 02. 1931

ವಿಶೇಷತೆ....

ಪರಮಪೂಜ್ಯರದು ಶಿಸ್ತುಬದ್ಧ ಮತ್ತು ಅಚ್ಚುಕಟ್ಟಾದ ಜೀವನ. ಅದಕ್ಕೆ ನಿದರ್ಶನ ರೂಪದಲ್ಲಿ ಇಲ್ಲೊಂದು ಶ್ಲೋಕವಿದೆ.

ಸ್ವಕೀಯಾನಾಂ ಪರೀಕ್ಷ್ಯಾಣಾಂ ಪ್ರಶ್ನಪತ್ರಾವಲಿರ್ಮಯಾ।

ಸಂಬಧ್ಯ ಕಾಶಿಕಾವಿದ್ಯಾ ಸ್ಮೃತಿರೇಷಾ ಸ್ಥಿರೀಕೃತಾ ॥

ಈ ಶ್ಲೋಕದಲ್ಲಿ ಪೂಜ್ಯರು ತಾವು ಕಾಶೀ ಕ್ಷೇತ್ರದಲ್ಲಿ ಅಧ್ಯಯನ ಮಾಡುತ್ತಿದ್ದಾಗ ಕೊಟ್ಟ ತಮ್ಮೆಲ್ಲ ಪರೀಕ್ಷೆಗಳ 'ಪ್ರಶ್ನೆ-ಪತ್ರಿಕೆ'ಗಳನ್ನು ಒಂದೆಡೆ ಸಂಗ್ರಹಿಸಿಡುವ ಮೂಲಕ ಕಾಶಿಯಲ್ಲಿ ಕಲಿತ ವಿದ್ಯೆಯ ಸ್ಮೃತಿಯನ್ನು ಸ್ಥಿರೀಕರಿಸಿರುವುದಾಗಿ ಹೇಳಿದ್ದಾರೆ.

ಈ ಸಂಗ್ರಹದಲ್ಲಿ ಅವರು ತಾವು ಕಾಶಿಯಲ್ಲಿದ್ದಾಗ ಕೊಟ್ಟಿರುವ ಎಲ್ಲ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು, ಪ್ರವೇಶ ಪತ್ರಗಳು (Hall Tickets) ಹಾಗೂ ಅಂಕ-ಪತ್ರಿಕೆಗಳು ತುಂಬ ಅಚ್ಚುಕಟ್ಟಾಗಿ ಅವರೇ ಖುದ್ದಾಗಿ ಮತ್ತು ಯಥಾವತ್ತಾಗಿ ಜೋಡಿಸಿಟ್ಟಿರುವುದನ್ನು ಕಾಣಬಹುದಾಗಿದೆ.

ಅನುಬಂಧ-10

ವೀರಭದ್ರ ಜಗದ್ಗುರುಗಳ ಪಾಂಡಿತ್ಯವನ್ನು ಪ್ರತಿಬಿಂಬಿಸುವ ಪ್ರಶಂಸಾ ಪತ್ರ

Testimony
Mahamahopadhyaya
Arthsastravisarada , Vidyalankara
Panditaraja
Dr. R. Shamashastry

I have great pleasure in bearing testimony to the varied erudition which Pandit C.M. Veerabhadra Sharma possesses in Vedic and Classical Sanskrit literature. Besides being a Pandit with Titles of "Vedatirtha, Kavyatirtha, Smrititirtha and Sahityatirtha" bestowed on him for passing his examinations in the respective branches of Sanskrit literature, he is a linguist with a poetic and journalistic proficiency in Telagu, Kannada, Hindi, Maharashtri (Marathi) and Urdu, as testified by his pamphlets and the 'Vibhuti', a high class journal edited and published by him. I think that he is the first in pointing out the names of 'Sampati' and 'Dasaratha', Asoka's successors in some edicts of Asoka. This discovery of great historical importance deserves the attention of Archaeologists. As Ex-Principal of the Sanskrit College at Yadagiri and Principal and Foounder of a Sanskrit School in Secunderabad he has amply proved his capacity for teaching, lecturing and management. I have no hesitation in stating that as he combines in himself both traditional and critical learning of Sanskrit literature. He is well qualified to be a professor of Sanskrit in any University College. I wish him success.

'Asutosh' Chamundi Extension,
Mysore
5th July 1940.

ಅನುಬಂಧ-11

ಪಂಡಿತ ವೀರಭದ್ರಶರ್ಮ ಇವರು ಕಾಶೀ ಪೀಠದ ಜಗದ್ಗುರುಗಳಾಗುವ ಸಂತೋಷದ ವಿಷಯವನ್ನು ಮೈಸೂರಿನ 'ಪಂಚಾಚಾರ್ಯ ಪ್ರಭ' ಪತ್ರಿಕೆಯು ಜನರೊಂದಿಗೆ ಹಂಚಿಕೊಂಡಿತು.

ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಧರ್ಮಪೀಠಾಧಿಪತಿಗಳಾಗಿದ್ದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರು ಕಳೆದ ವೈಶಾಖ ಮಾಸದಲ್ಲಿ ಶಿವಾಧೀನರಾದ ವಿಷಯವು ನಮ್ಮ ಪತ್ರಿಕಾವಾಚಕರಿಗೆಲ್ಲ ತಿಳಿದುದಾಗಿದೆ. ಪರಂಧಾಮವನ್ನೈದಿದ ಶ್ರೀಗಳವರು ತಾವು ಜೀವಿಸಿರುವಾಗಲೇ ಆ ಮಹಾಪೀಠಕ್ಕೆ ಯಾರು ಅರ್ಹರೆಂಬುದನ್ನು ಪೂರ್ಣವಾಗಿ ಆಲೋಚಿಸಿ ಸುಪ್ರಸಿದ್ಧರೂ ಶುದ್ಧಮಠಸ್ಥಲೋತ್ಪನ್ನರೂ ಮಹಾಮೇಧಾವಿಗಳೂ ಆಗಿರುವ ಚಿದರೆ ಮಠಾಧ್ಯಕ್ಷ ವೇ॥ ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳವರ ಹೆಸರಿಗೆ ವಿಲ್ಲನ್ನು ಬರೆದು ರಜಿಸ್ಟರು ಮಾಡಿಸಿರುವುದನ್ನು ನೋಡಿದರೆ ಶ್ರೀಗಳವರ ಜಾಣ್ಮೆಗೆ ಎಣೆಯೇ ಇಲ್ಲವೆಂದು ಹೇಳಬಹುದಾಗಿದೆ. ಪಂಡಿತ ವೀರಭದ್ರ ಶಾಸ್ತ್ರಿಗಳವರು ಮಹಾಬುದ್ಧಿಶಾಲಿಗಳೂ ಅಸಾಧಾರಣ ಪಂಡಿತರೂ ನಾನಾಭಾಷಾ. ಲಿಪಿಗಳನ್ನು ಬಲ್ಲವರೂ ಮಹಾಧೈರ್ಯಶಾಲಿಗಳೂ ವಾಕ್ಪಟುಗಳೂ ಆಗಿರುವರಲ್ಲದೆ, ವೇದತೀರ್ಥ, ಸ್ಮೃತಿತೀರ್ಥ, ಕಾವ್ಯತೀರ್ಥ, ಸಾಹಿತ್ಯ ವಿಶಾರದ, ವಿದ್ಯಾರತ್ನ, ವಿದ್ಯಾನಿಧಿ, ಇತ್ಯಾದಿ ಪದವೀಭೂಷಿತರೂ ಆಗಿರುವರು. ಈ ಕಾಲದಲ್ಲಿ ಇವರಷ್ಟು ಪದವಿಗಳನ್ನು ಪಡೆದವರು ಯಾರೂ ಇಲ್ಲವೆಂದು ಬರೆದರೆ ಅತಿಶಯೋಕ್ತಿಯೆನಿಸಲಾರದು. ಒಟ್ಟಿಗೆ ಅವರು ಸಾರಸ್ವತ ಪ್ರಪಂಚಕ್ಕೆ ಅಲಂಕಾರಪ್ರಾಯರಾಗಿರುವರು.

ಗುರುಪೀಠಗಳನ್ನು ಇಂತಹ ವ್ಯಕ್ತಿಗಳೇ ಅಲಂಕರಿಸಬೇಕು. ಇಂತಹ ವ್ಯಕ್ತಿಗಳಿಂದಲೇ ಪೀಠಗಳು ಮುಂದೆ ಬರಬೇಕಾಗಿದೆ. ಕಾಶೀಪೀಠವು ಜ್ಞಾನಪೀಠವೆನಿಸಿರುವುದರಿಂದ ಇವರು ತಮ್ಮ ಜೀವಮಾನದಲ್ಲಿ ಸಂಗ್ರಹಿಸಿರುವ 8-10 ಸಾವಿರ ಗ್ರಂಥಗಳ ದೊಡ್ಡ ಲೈಬ್ರರಿಯು ಆ ಜ್ಞಾನಪೀಠದ ಹೆಸರಿಗೆ ಅನ್ವರ್ಥಕತೆಯನ್ನುಂಟು ಮಾಡತಕ್ಕುದಾಗಿದೆ. ಇವರ ಕಾಲದಲ್ಲಿ ಕಾಶೀಪೀಠವು ಸರ್ವತೋಮುಖವಾಗಿ ಮುಂದುವರಿಯುವುದೆಂಬ ಸದುದ್ದೇಶದಿಂದಲೇ ಪೂರ್ವದ ಶ್ರೀಗಳವರು ಇವರನ್ನು ನಿಯಮಿಸಿರುವುದು ಅತ್ಯಂತ ಸ್ತುತ್ಯರ್ಹವಾಗಿದೆ.

(ಸ್ತೋತ್ರಾರ್ಹ) ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳವರು ಕಾಶೀ ಜಗದ್ಗುರು ಪೀಠಕ್ಕೆ ಅಧಿಪತಿಗಳಾಗುವರೆಂಬ ವಿಷಯವನ್ನು ತಿಳಿದು ಕರ್ಣಾಟಕಾಂಧ್ರ ಮಹಾರಾಷ್ಟ್ರ ದೇಶಗಳಲ್ಲಿರುವ ಗುರುಭಕ್ತರೆಲ್ಲರೂ ಸಂತೋಷಸಾಗರದಲ್ಲಿ ಮುಳುಗಿರುವರು. ಪಟ್ಟಾಭಿಷೇಕ ಸಮಾರಂಭವು ಬರುವ ಆಶ್ವಯುಜ ಶುದ್ಧದಲ್ಲಿ ನೆರವೇರತಕ್ಕದ್ದಾಗಿದೆ. ಆ ಕಾಲಕ್ಕೆ ಅನೇಕ ಜನ ಗುರುಭಕ್ತರು ನಾನ ದೇಶಗಳಿಂದ ಆಗಮಿಸತಕ್ಕವರಾಗಿದ್ದಾರೆ. ಆಗ್ಗೆ ಆಗಮಿಸುವವರೆಲ್ಲರೂ ಆ ಮಹಾಪೀಠದ ಜೀರ್ಣೋದ್ಧಾರದ ಬಗ್ಗೆ ತಮ್ಮ ಶಕ್ತಿ ಮೀರಿ ಸೇವೆಯನ್ನು ಸಲ್ಲಿಸಿ ನೂತನ ಪೀಠಾಧಿಪತಿಗಳ ಮನಸ್ಸನ್ನು ಸಂತೋಷ ಪಡಿಸಬೇಕೆಂದೂ, ಶ್ರೀ ಜಗದ್ಗುರು ವಿಶ್ವಾರಾಧ್ಯರ ಅನುಗ್ರಹ ಬಲದಿಂದ ಈ ನೂತನ ಪೀಠಾಧಿಪತಿಗಳ ಕಾಲದಲ್ಲಿ ಆ ಮಹಾಪೀಠವು ಸರ್ವತೋಮುಖವಾಗಿ ಪ್ರಕಾಶಿಸುವಂತಾಗಲೆಂದೂ ಆ ಪೂಜ್ಯಪಾದರನ್ನು ಅನನ್ಯ ಸಾಧಾರಣ ಭಕ್ತಿಭಾವದಿಂದ ಭಜಿಸುತ್ತೇವೆ.

ಪಂಚಾಚಾರ್ಯ ಪ್ರಭಾ ಮೈಸೂರು

ತಾ|| 10ನೇ ಜುಲೈ 1944ನೇ ಸೋಮವಾರ]

ಅನುಬಂಧ-12

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ವಿಜಯತೇತರಾಮ್॥

ಶ್ರೀ ಕಾಶೀ ನೂತನ ಜಗದ್ಗುರು

ಶ್ರೀ ಶ್ರೀ ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ಪೀಠಾರೋಹಣದ ಸವಿವರ ವರದಿ

ಪೂರ್ವದಲ್ಲಿ ನಿಶ್ಚಯಿಸಲ್ಪಟ್ಟಂತೆ 'ಭೂ-ಕೈಲಾಸ' ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನ ಮಹಾಪೀಠದಲ್ಲಿ ನೂತನ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಭಿಷೇಕ ಮತ್ತು ಜ್ಞಾನ ಪೀಠಾರೋಹಣ ಮಹೋತ್ಸವವು ವಿಧ್ಯುಕ್ತವಾಗಿ ಅತ್ಯಂತ ಸಂಭ್ರಮದಿಂದ ಮತ್ತು ತುಂಬು ವೈಭವದಿಂದ ನೆರವೇರಿತು.

ಶ್ರೀ ರಂಭಾಪುರಿ ವೀರ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಪರಮಪೂಜ್ಯ ಶ್ರೀ ವೀರಭದ್ರ ಶಿವಾಚಾರ್ಯರಿಗೆ ಕಾಶೀ ಶ್ರೀ ಪೀಠದ ಅಧಿಕಾರವನ್ನು ಅನುಗ್ರಹಿಸುವುದಕ್ಕಾಗಿ ತಮ್ಮ ಮಹಾಸಂಸ್ಥಾನದ ಮೋಟಾರು, ಕಾರುಗಳೊಡನೆ, ತಮ್ಮೆಲ್ಲ ಸಾಮಾನು-ಸರಂಜಾಮು ಹಾಗೂ ಸಿಬ್ಬಂದಿಯೊಡನೆ ಶ್ರೀ ರಂಭಾಪುರಿ ಮಹಾಕ್ಷೇತ್ರದಿಂದ ಕಾಶೀಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದರು. ಪರಮಪೂಜ್ಯ ಶ್ರೀ ರಂಭಾಪುರೀ ಶಿವಾನಂದ ಜಗದ್ಗುರುಗಳು ಕಾಶೀ ಕ್ಷೇತ್ರಕ್ಕೆ ದಯಮಾಡಿಸುತ್ತಿರುವ ಸಂದರ್ಭದಲ್ಲಿ ಮಾರ್ಗಮಧ್ಯದಲ್ಲಿರುವ ಕರ್ನಾಟಕದ ದಾವಣಗೆರೆ, ರಾಣೆಬೆನ್ನೂರು, ಹುಬ್ಬಳ್ಳಿ ಹಾಗೂ ಮಹಾರಾಷ್ಟ್ರದ ಸೋಲಾಪುರ, ಬೀಡ್, ಜಾಲ್ನಾ, ಖಾಮಗಾಂವ್, ಉಮರಾವಲೆ, ನಾಗಪುರ ಮುಂತಾದ ನಗರಗಳ ಮೂಲಕ ದಯಮಾಡಿಸುವಾಗ ಅಲ್ಲಿನ ವೀರಶೈವ ಮಹಾಜನಗಳು ಬೃಹತ್ ಪ್ರಮಾಣದಲ್ಲಿ ಸಮಾವೇಶಗೊಂಡು ಮಹಾಸನ್ನಿಧಿಯ ಸ್ವಾಗತ, ಉತ್ಸವ, ಬಿಡಾರ, ಶಿವಾರ್ಚನೆಗಳ ಬಗ್ಗೆ ಗುರುತರವಾದ ಗುರುಭಕ್ತಿಯಿಂದ ಅತುಲವಾದ ಸೌಕರ್ಯಗಳನ್ನೊದಗಿಸುತ್ತ ಅಮೋಘವಾದ ಸೇವೆಯನ್ನು ಸಲ್ಲಿಸಿ ಶ್ರೀ ಮಹಾಸನ್ನಿಧಾನದ ಆಶೀರ್ವಾದ ಮತ್ತು ಅನುಗ್ರಹಗಳಿಗೆ ಪಾತ್ರರಾದರು.

ಅಲ್ಲಿಂದ ಮಹಾಸನ್ನಿಧಿಯ ಸವಾರಿಯು ತಾ|| 17. 9.1944ನೆಯ ದಿವಸ ಹಿಂದೀ ಪ್ರಾಂತದ 'ಶಿವನಿ' ನಗರಕ್ಕೆ ದಯಮಾಡಿಸಿತು. ಅಲ್ಲಿ ವೀರಶೈವ ಜನರು ಇಲ್ಲದಿದ್ದರೂ ಮಹಾಸನ್ನಿಧಾನವು ಹೈಸ್ಕೂಲಿನ ಬಿಡಾರಕ್ಕೆ ದಯಮಾಡಿಸಿದ ಕೂಡಲೇ ಪುರದ ಜನರೆಲ್ಲ ಮಹಾವೈಭವದಿಂದ ಪರಮಪೂಜ್ಯರನ್ನು ಬರಮಾಡಿಕೊಂಡು ತುಂಬು ಹೃದಯದಿಂದ ಸತ್ಕರಿಸಿದರು. ಈ ಸುದ್ದಿಯು ಕರ್ಣೋಪಕರ್ಣವಾಗಿ ಎಲ್ಲೆಡೆಗೂ ಹಬ್ಬಿದ ಕೂಡಲೇ ಜನಗಳು ಮಿತಿಮೀರಿ ಸೇರಿದರು. ಹಳ್ಳಿ, ಹಳ್ಳಿಗಳಿಂದ ಜನಗಳು ತಂಡೋಪತಂಡವಾಗಿ ಬರತೊಡಗಿದರು. ಕೆಲವೇ ಗಂಟೆಗಳಲ್ಲಿ ಅದೊಂದು ದೊಡ್ಡ ಜಾತ್ರೆಯಾಗಿ ಪರಿಣಮಿಸಿತು. ಸನ್ನಿಧಿಯ ಬಿಡಾರಕ್ಕೆ ಅನುಕೂಲತೆಯನ್ನೊದಗಿಸಿದ ಅಲ್ಲಿಯ ಬ್ಯಾರಿಸ್ಟರೋರ್ವರು ತಮ್ಮ ಧರ್ಮಪತ್ನಿ ಸಮೇತರಾಗಿ ಬಂದು ಶ್ರೀ ಸನ್ನಿಧಿಯ ದರ್ಶನಾಶೀರ್ವಾದಗಳನ್ನು ಪಡೆದುಕೊಂಡರು. ಅನಂತರ ಮಧ್ಯಪ್ರದೇಶದ ಜಬ್ಬಲ್‌ಪುರದಲ್ಲಿ ಶ್ರೀ ತೇಜಮಲ್ ಸೌಭಾಗ್ಯಮಲ್ ಎಂಬ ಮಾರವಾಡಿ ಪ್ರಮುಖರ ಬಿನ್ನಹದ ಮೇರೆಗೆ ದಿವಾನ್ ಬಹದ್ದೂರ್ ವಲ್ಲಭದಾಸರವರ ದಿವ್ಯಭವನದಲ್ಲಿ ಶ್ರೀ ಮಹಾಸನ್ನಿಧಿಯ ಬಿಡಾರ ಮಾಡಿತು. ಅಲ್ಲಿ ಪರಮಪೂಜ್ಯರ ಪೂಜಾದಿಗಳಿಗೆಲ್ಲ ವ್ಯವಸ್ಥೆ ಮಾಡಲಾಯಿತು. ಸನಿಧಿಯನ್ನು ಹತ್ತು ಹಲವು ವಿಧದಿಂದ ಸತ್ಕರಿಸಿ ಬೀಳ್ಕೊಡಲಾಯಿತು. ಅಲ್ಲಿಂದ 'ರೀವಾ' ಮಾರ್ಗವಾಗಿ ತೆರಳುವಾಗ 'ರೀವಾ' ಸಂಸ್ಥಾನದ ಶ್ರೀಮನ್ಮಹಾರಾಜರು, ಮತ್ತು ಅವರ ಖಾಸಾ ಆಫೀಸರುಗಳು ಖುದ್ದಾಗಿ ಬಂದು ಪರಮಪೂಜ್ಯರನ್ನು ಅತ್ಯಂತ ವೈಭವದಿಂದ ಸ್ವಾಗತಿಸಿದರು. ಪರಮಪೂಜ್ಯರು ಮಹಾರಾಜರ ಆಗ್ರಹದ ಮೇರೆಗೆ ಸಂಸ್ಥಾನದ 'ಲಕ್ಷ್ಮಣ ಬಾಗ್ (ತೋಟ)'ದಲ್ಲಿರುವ ಭವ್ಯ ದೇವಾಲಯದಲ್ಲಿ ಬಿಡಾರ ಮಾಡಿದರು. ಅಲ್ಲಿಂದ ಶ್ರೀ ಮಹಾಸನ್ನಿಧಿಯ ಸವಾರಿಯು ಪ್ರಯಾಗದ 'ಜಂಗಮವಾಡಿಮಠ'ಕ್ಕೆ ದಯಮಾಡಿಸಿತು. ಇಷ್ಟು ಸುದೀರ್ಘವಾದ ಯಾತ್ರೆಯನ್ನು ಕೈಗೊಂಡು 'ಸ್ವಮತೀಯ'ರಿಂದಲೂ ಮತ್ತು 'ಪರಮತೀಯ'ರಿಂದಲೂ ಸನ್ಮಾನ ಪಡೆಯುತ್ತ ಉತ್ತರಪ್ರದೇಶದ ಯಾತ್ರೆಯನ್ನು ಪರಮಪೂಜ್ಯರು ಈ ವಿಧವಾಗಿ ಪೂರೈಸಿದರು. ಈ ವಿಧವಾದ ರಾಜಗೌರವ ಮತ್ತು ರಾಜಮರ್ಯಾದೆಗಳೊಂದಿಗೆ ಭಕ್ತಾದಿಗಳ ಪ್ರೀತ್ಯಭಿಮಾನಗಳನ್ನು ಪಡೆದು ಸುದೀರ್ಘ 'ಧಾರ್ಮಿಕ ದೌರಾ' ಮಾಡಿದ ಕೀರ್ತಿ ಶ್ರೀ ರಂಭಾಪುರಿ ಜಗದ್ಗುರುಗಳದು ಮಾತ್ರ ಎಂದು ಹೇಳಲು ಅಭಿಮಾನವೆನಿಸುತ್ತದೆ.

ಪ್ರಯಾಗ ಕ್ಷೇತ್ರದಿಂದ ಶ್ರೀ ಮಹಾಸನ್ನಿಧಿಯ ಸವಾರಿಯು ಸಿಬ್ಬಂದಿ ಸಮೇತವಾಗಿ ದಿನಾಂಕ 22-9-1944ರಂದು ಸಾಯಂಕಾಲ ಶ್ರೀ ಕಾಶೀ ಕ್ಷೇತ್ರಕ್ಕೆ ದಯಮಾಡಿಸಿದ ಕೂಡಲೇ ಪರಮಪೂಜ್ಯ ಮಹಾಸನ್ನಿಧಿಯವರನ್ನು 'ಭಾರತ ಧರ್ಮ ಮಹಾಮಂಡಲ ಭವನ'ದ ಮುಂದೆ ಛತ್ರ-ಚಾಮರಾದಿ ವಿವಿಧ ಉತ್ಸವ-ಸಾಮಗ್ರಿಗಳೊಂದಿಗೆ ಸುಸಜ್ಜಿತವಾಗಿ ಮತ್ತು ತಂಡೋಪತಂಡವಾಗಿ ಸೇರಿದ ವೀರಶೈವ ಮಹಾಜನಸ್ತೋಮವು ಮಂಗಲ ವಾದ್ಯಗಳೊಂದಿಗೆ

ವಿಜೃಂಭಣೆಯಿಂದ ಸ್ವಾಗತಿಸಿ ಉತ್ಸವದ ಮೂಲಕ ಶ್ರೀ ಜಂಗಮವಾಡೀ ಬೀದಿಗೆ ದಯಮಾಡಿಸಿಕೊಂಡು ಬರುವಷ್ಟರಲ್ಲಿ ಜನಸಮುದ್ರವು ಉಕ್ಕೇರಿತು. ಶ್ರೀ ರಂಭಾಪುರೀ ಮಹಾಸನ್ನಿಧಿಯವರು ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠದ 'ಜಂಗಮವಾಟಿಕಾ' ಮಠದ ಮಹಾದ್ವಾರದ ಮುಂಭಾಗಕ್ಕೆ ದಯಮಾಡಿಸಿದ ಕೂಡಲೇ ಚಿದಿರೆಮಠದ ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳವರು ಅನೇಕ ಜನ ಚರಪಟ್ಟಾಧಿಕಾರಿಗಳಿಂದಲೂ ಭಕ್ತಶ್ರೇಷ್ಠರಿಂದಲೂ ಕೂಡಿಕೊಂಡು ಭಕ್ತಿಪುರಸ್ಸರವಾಗಿ ಸ್ವಾಗತಿಸಿ ಅರ್ಘ್ಯ, ಪಾದ್ಯಾಚಮನಾದಿಗಳಿಂದ ಉಪಚರಿಸಿ ವಿಧಿವತ್ತಾಗಿ ಅವರ ಶ್ರೀ ಚರಣಗಳನ್ನು ಪೂಜಿಸಿದರು. ಈ ಸ್ವಾಗತಾದಿ ಕಾರ್ಯಕ್ರಮಗಳೆಲ್ಲ ಆದ ಮೇಲೆ ಪರಮಪೂಜ್ಯ ಶ್ರೀ ರಂಭಾಪುರೀ ಶಿವಾನಂದ ಜಗದ್ಗುರು ಮಹಾಸನ್ನಿಧಾನವು ಶ್ರೀ ಜಗದ್ಗುರು ವಿಶ್ವಾರಾಧ್ಯರ ಮತ್ತು ಜ್ಞಾನ ಸಿಂಹಾಸನದ ದರ್ಶನವನ್ನು ಮಾಡಿಕೊಂಡು ತದನಂತರದಲ್ಲಿ ಕಾಶೀ ಮಹಾಸಂಸ್ಥಾನದ 'ಚಿತ್ರ ಭವನ (ಚಿತ್ರಶಾಲೆ)'ದಲ್ಲಿ ಬಿಡಾರ ಮಾಡಿದರು.

ಪರಮಪೂಜ್ಯ ಕಾಶೀ ನೂತನ ಜಗದ್ಗುರುಗಳವರ ಪೀಠಾರೋಹಣದ ವಿಷಯವನ್ನು ಜನಗಳ ಬಾಯಿಯಿಂದ ಮತ್ತು ಪತ್ರಿಕೆಗಳ ಮೂಲಕ ಕೇಳಿ ತಿಳಿದ ದೇಶದಾದ್ಯಂತದಲ್ಲಿರುವ ಪೀಠಾಭಿಮಾನಿಗಳು ಶ್ರೀಪೀಠಕ್ಕೆ ತಂಡೋಪತಂಡವಾಗಿ ಬರತೊಡಗಿದರು. ಪರಮಪೂಜ್ಯ ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳವರ ಜ್ಞಾನ ಪೀಠಾರೋಹಣ ಸಮಾರಂಭವನ್ನು ಪ್ರತ್ಯಕ್ಷವಾಗಿ ಕಣ್ಣುಗಳಿಂದ ಆಸ್ವಾದಿಸುವುದಕ್ಕಾಗಿ ಮತ್ತು ಸಾಕ್ಷಿಸುವುದಕ್ಕಾಗಿ ಮಹಾರಾಷ್ಟ್ರ, ಕರ್ನಾಟಕ, ಮತ್ತು ಆಂಧ್ರ ಪ್ರಾಂತಗಳನ್ನು ಪ್ರತಿನಿಧಿಸುವ ವೀರಶೈವರು ಸಾವಿರ ಸಾವಿರ ಸಂಖ್ಯೆಯಲ್ಲಿ ಬಂದು ಶ್ರೀಪೀಠದಲ್ಲಿ ಸೇರಿಕೊಳ್ಳತೊಡಗಿದರು. ಗಂಜಾಮ್, ಕಾಕಿನಾಡ, ರಾಮನಾಥ ಮೊದಲಾದ ದೂರದೂರದ ಪ್ರದೇಶಗಳಿಂದಲೂ ಹಾಗೂ ಭರತಖಂಡದ ನಾನಾ ಭಾಗಗಳಿಂದಲೂ ಈ ಒಂದು ಭವ್ಯ ದಿವ್ಯ ಕಾರ್ಯಕ್ರಮವನ್ನು ವೀಕ್ಷಿಸುವುದಕ್ಕಾಗಿ ಜನಗಳು ಬರುತ್ತಲೇ ಇದ್ದರು. ದಿನಾಂಕ 22.09-1944ರಿಂದ27.09.1944ರವರೆಗೆ ಜನಗಳು ನಿರಂತರವಾಗಿ ಶ್ರೀಪೀಠದತ್ತ ಹರಿದುಬರುವುದು ನಡೆದೇ ಇತ್ತು. ಒಟ್ಟಿನಲ್ಲಿ ಕನ್ಯಾಕುಮಾರಿಯಿಂದ ಹಿಮಾಲಯದವರೆಗಿನ ಎಲ್ಲ ಭಾಗಗಳನ್ನು ಪ್ರತಿನಿಧಿಸುವ ಜನಗಳು ಅಲ್ಲಿ ಬಂದು ಸಮಾವೇಶಗೊಂಡಿದ್ದರು. ವಾಹನಾದಿಗಳ ಅಭಾವ ಮತ್ತು ಸೌಕರ್ಯಗಳ ಕೊರತೆ ಇರುವ ಈ ಕಾಲದಲ್ಲಿ ಹಾಗೂ ಪ್ರಯಾಣ, ಪ್ರವಾಸಗಳಿಗೆ ಸಾಕಷ್ಟು ಪ್ರತಿಕೂಲ ಪರಿಸ್ಥಿತಿ ಇರುವ ಈ ದಿನಮಾನಗಳಲ್ಲೂ ಸಹ ಶ್ರೀ ಪೀಠದಲ್ಲಿ ಹತ್ತು ಸಾವಿರಕ್ಕಿಂತಲೂ ಹೆಚ್ಚು ಜನಗಳು ಸೇರಿದ್ದರೆಂಬುದು ನಿಜಕ್ಕೂ ಆಶ್ಚರ್ಯವೇ ಸರಿ. ಅಲ್ಲವೇ?

ದೇಶದ ನಾನಾಭಾಗಗಳಿಂದ ಆಗಮಿಸಿದ ಜನಗಳಿಂದ ಜಂಗಮವಾಡಿ ಮಹಾಸಂಸ್ಥಾನ ಮಠದ ವಿಶಾಲವಾದ ಎಲ್ಲ ಭವನಗಳೂ, ಆವರಣಗಳೂ ತುಂಬಿಕೊಂಡವಲ್ಲದೆ ಕಾಶಿಯಲ್ಲಿರುವ

ಸನಾತನ ಧರ್ಮ ಹೈಸ್ಕೂಲ್, ರಾಮ್‌ಪುರಾ ಧರ್ಮಶಾಲೆ, ರಾಯ್ ಬಹದ್ದೂರ ಭವನ, ಗುನ್ನಿಲಾಲರ ಮನೆ, ಜಂಬೂ ಬೋರ್ಡಿಂಗ್, ದಶಾಶ್ವಮೇಧ ಪೋಸ್ಟಾಫೀಸ್, ಸಾಕ್ಷಿವಿನಾಯಕ ಮಂದಿರ ಇವೇ ಮೊದಲಾದ ಈ ಎಲ್ಲ ಸ್ಥಳಗಳಲ್ಲಿಯೂ ಜನಗಳು ಒತ್ತು ಒತ್ತೊತ್ತಾಗಿ ತುಂಬಿಕೊಂಡಿದ್ದರು. ಕಾಶಿಯ ಪ್ರಮುಖ ಬೀದಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ, ಅದರಲ್ಲೂ ಬಹುಮುಖ್ಯವಾಗಿ ಜಂಗಮವಾಡಿ, ದಶಾಶ್ವಮೇಧ, ವಿಶ್ವನಾಥ ಬೀದಿಗಳಲ್ಲಿ ಹಾಗೂ ಎಲ್ಲೆಂದರಲ್ಲಿ ಬರೀ ವೀರಶೈವ ಮುಖಗಳು ಹಾಗೂ ತಲೆಗಳೇ ಕಾಣುತ್ತಿದ್ದವು.

ಕಾಶಿಯ ಬೀದಿ ಬೀದಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಮತ್ತು ಜಂಗಮವಾಡಿ ಮಠದ ಅಕ್ಕ ಪಕ್ಕ, ಸುತ್ತಮುತ್ತ ಎಲ್ಲೆಂದರಲ್ಲಿ ಬರೀ ಭಸ್ಮಧಾರಿಗಳಾದ ಮತ್ತು ಲಿಂಗಧಾರಿಗಳಾದ ವೀರಶೈವ ಜನಗಳೇ ಸಂಚರಿಸಿಕೊಂಡಿರುವುದನ್ನು ಕುತೂಹಲದ ಕಣ್ಣುಗಳಿಂದ ವೀಕ್ಷಿಸಿಕೊಂಡಿದ್ದ ಕಾಶೀ ನಿವಾಸಿಗಳು ಪರಸ್ಪರ ತಮ್ಮ ತಮ್ಮಗ್ರಳಲ್ಲಿಯೇ ಚರ್ಚಿಸುತ್ತ ಈ ವಿಧವಾಗಿ ಮಾತನಾಡಿಕೊಳ್ಳುತ್ತಿದ್ದರು. ಅವರ ಮಾತುಗಳತ್ತ ಕಿವಿಗಳು ಗಮನ ಹರಿಸಿದಾಗ ಕೇಳಿ ಬಂದದ್ದಿಷ್ಟು......'ಸಾಕ್ಷಾತ್ ಭಗವಾನ್ ಶಂಕರನನ್ನೇ ಅಂಗದ ಮೇಲೆ ಲಿಂಗರೂಪದಲ್ಲಿ ಸದೈವ ಧಾರಣಮಾಡುವ ಇವರು ಅದೆಷ್ಟು ಪವಿತ್ರರು, ಅದೆಂಥ ಪುಣ್ಯಾತ್ಮರು!! ಇವರು ಸಾಕ್ಷಾತ್ ಶಿವಾಂಶಸಂಭೂತರು ಮತ್ತು ಶಿವಸ್ವರೂಪಿಗಳು! ಇವರು ಆ ಪರಮ ಪರತರ ಪರಮ ಮಹಿಮ ಮಹೇಶ್ವರನ ನಿಕಟವರ್ತಿಗಳು ಮತ್ತು ಆಪ್ತರು. ಇವರು ಸಾಮಾನ್ಯ, ಶ್ರೀಸಾಮಾನ್ಯರಲ್ಲ. ಇವರು ಶಿವನ ಆಪ್ತವಲಯದಲ್ಲಿರುವ ವೀರಮಾಹೇಶ್ವರರು, ಶಿವನ ಆಪ್ತಬಂಧುಗಳು. 'ಶಿವೋ ಭೂತ್ವಾ ಶಿವಂ ಯಜೇತ್' ಎಂಬ ಮಾತಿನ ಅಪ್ಪಟ ಅನುಯಾಯಿಗಳು!!'' ಎಂದು. ಓರ್ವ ಜಂಗಮನ ಪರಮ ಪಾವನ ದರ್ಶನ-ಸಂದರ್ಶನ ಮಾತ್ರದಿಂದಲೇ ಅದೆಷ್ಟೋ ಪುಳಕಿತರಾಗುವ ಮತ್ತು ಪ್ರಸನ್ನರಾಗುವ ಕಾಶಿಯ ಪಂಡಿತರು ಇಷ್ಟೊಂದು ಜನ ಜಂಗಮರನ್ನು ಮತ್ತು ಶಿವಭಕ್ತರನ್ನು ಕಂಡು ಆಶ್ಚರ್ಯಚಕಿತರಾದರು. ವೀರಶೈವರ ಕುರಿತಾಗಿ ಪರಮಪವಿತ್ರ ಭಾವನಾ-ಭಾವಿತಾಂತಃಕರಣಿಗಳಾದ ಕಾಶಿಯ ಸಮಸ್ತ ನಾಗರಿಕ ಜನಸ್ತೋಮವು ವೀರಶೈವರನ್ನು ಕಣ್ತುಂಬ ನೋಡಿ ತನಗಾದ ಹರ್ಷ ಮತ್ತು ಆನಂದಗಳಿಗೆ ಶಬ್ದರೂಪ ಕೊಡಲು ಪ್ರಯತ್ನಿಸುತ್ತಿತ್ತು. ಕಾಶಿ ನಿವಾಸಿಗಳಿಗಾದ ಆ ಆನಂದ ಮತ್ತು ಆಶ್ಚರ್ಯಗಳಿಗೆ ಪಾರವೇ ಇರಲಿಲ್ಲ. ಅದು ಸೀಮೋಲ್ಲಂಘನ ಮಾಡಿತ್ತು.

ಶ್ರೀ ತಾರಣ ನಾಮ ಸಂವತ್ಸರದ ದಕ್ಷಿಣಾಯನ ಕಾಲ. ಶರದ್ ಋತುವಿನ ಆಶ್ವಯುಜ ಮಾಸದ ಶುಕ್ಲಪಕ್ಷ ವಿಜಯದಶಮಿಯ ಬುಧವಾರದ ಮಂಗಲಮಯ ಬ್ರಾಹ್ಮೀ ಮುಹೂರ್ತದಲ್ಲಿ ಕೈಲಾಸ ಮಂಟಪ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಪೀಠದ ಸನ್ನಿಧಾನದಲ್ಲಿ ವೇ॥ ಬ್ರ ॥ ಶ್ರೀ ಗುರುಲಿಂಗ ಶಾಸ್ತ್ರಿಗಳು, ವೇ॥ ಗಂಗಾಧರ ಶಾಸ್ತ್ರಿಗಳು, ವೇ॥ ನಂಜುಂಡಾರಾಧ್ಯರು ಇವರೇ ಮೊದಲಾದ ಪುರೋಹಿತರಿಂದ ಪಟ್ಟಾಭಿಷೇಕದ

ವಿಧಿ-ವಿಧಾನಗಳು ಬಲು ಅಚ್ಚುಕಟ್ಟಾಗಿ ಮತ್ತು ಶಾಸ್ತ್ರೀಯವಾಗಿ ಪ್ರಾರಂಭವಾದವು. ಎಲ್ಲಕ್ಕೂ ಮೊದಲು ಗಂಗಾಜಲವನ್ನು ತರುವುದಕ್ಕಾಗಿ ವೈದಿಕರಿಂದಲೂ, ಸುಮಂಗಲೆಯರಿಂದಲೂ, ಗುರುಕುಲದ ವಿದ್ವಜ್ಜನರಿಂದಲೂ ಕೂಡಿ ಕೊಂಡು ಮಂಗಲವಾದ್ಯಗಳೊಡನೆ ಪಲ್ಲಕ್ಕಿಯು ಉತ್ಸವದೊಂದಿಗೆ ಗಂಗಾ ನದಿಯನ್ನು ತಲುಪಿತು. ಯಥಾವಿಧಿ ಪೂಜೆಯನ್ನು ಪೂರೈಸಿ 'ರಜತ ಕುಂಭ'ದಲ್ಲಿ ಗಂಗೋದಕವನ್ನು ತರಲಾಯಿತು. ಆಮೇಲೆ ಪುಣ್ಯಾಹವಾಚನ, ನಾಂದಿಪೂಜಾ, ಮಂಟಪ ದೇವತಾ ಪೂಜೆ, ಅಂಕುರಾರೋಪಣ, ಹೋಮ-ಹೋಮಾಂಗಭೂತ ಕರ್ಮಗಳು ಒಂದೊಂದಾಗಿ ಸಕ್ರಿಯವಾಗಿ ನೆರವೇರಿದವು.

ಇನ್ನೊಂದೆಡೆಯಲ್ಲಿ ಶ್ರೀ ಮುಕ್ತಿಮಂಟಪದ ಮುಂಭಾಗದಲ್ಲಿ ನೂತನ ಶ್ರೀಗಳವರಿಗೆ ಚೌಲಸಂಸ್ಕಾರವೂ, ಅಭ್ಯಂಜನ ಸ್ನಾನವೂ ಆದ ಮೇಲೆ ಅನೇಕ ಚರಪಟ್ಟಾಧಿಕಾರಿಗಳ ಕರ ಕಮಲಗಳಿಂದ ವಿಧ್ಯುಕ್ತವಾಗಿ ಸ್ನಾನ ವಿಧಿಯು ಪೂರೈಸಿಲ್ಪಟ್ಟಿತು. ಈ ಕ್ರಮಾದಿಗಳನ್ನೆಲ್ಲ ಪೂರೈಸಿಯಾದ ಮೇಲೆ ನೂತನ ಶ್ರೀಗಳವರು ವೈದಿಕ ವೇಷಾಲಂಕೃತರಾಗಿ ವೈದಿಕ ವಿವಿಧ ತಂತ್ರ ಸಾಮಗ್ರೀ ವಿಸ್ತೃತವಾದ 'ಕೈಲಾಸ ಮಂಟಪ' ಸ್ಥಾನಕ್ಕೆ ದಯಮಾಡಿಸಿದರು. ಆಮೇಲೆ ಪುರೋಹಿತರ ಸಲಹೆ ಮಾರ್ಗದರ್ಶನದಂತೆ ನೂತನ ಶ್ರೀಗಳವರು ಗಂಭೀರವಾಗಿ ವೇದ ಮಂತ್ರೋಚ್ಚಾರಣೆಯನ್ನು ಮಾಡುತ್ತ ಜಯಾದಿ ಹೋಮಗಳನ್ನು ಪೂರೈಸಿದರು. ಈ ವೈದಿಕ ವಿಧಿ-ವಿಧಾನಗಳನ್ನು ನೋಡುವುದಕ್ಕಾಗಿ ಕಾಶಿಯ ವೈದಿಕರೂ ಸಹ ಪ್ರೇಕ್ಷಕರಾಗಿ ಬಂದಿದ್ದರು.

ಮಠದ ಆವರಣವೆಲ್ಲವೂ 'ರಂಭಾಸ್ತಂಭ'ಗಳಿಂದಲೂ, ತಳಿರು-ತೋರಣಗಳಿಂದಲೂ, ವಿದ್ಯುದ್ದೀಪಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಶ್ರೀಪೀಠದ ಮಹಾದ್ವಾರದ ಮುಂಭಾಗದಲ್ಲಿ ನೂತನೋದ್ಯಾನವು ರಚಿಸಲ್ಪಟ್ಟು ದೊಡ್ಡ ದೊಡ್ಡ ಕಮಾನುಗಳಿಂದ ಶೋಭಿಸುತ್ತಿತ್ತು. ನಾನಾವಿಧ ಮಂಗಲವಾದ್ಯಗಳಿಂದ ಮಠಾಕಾಶವೆಲ್ಲ ಗುಂಜನಿಸುತ್ತಿತ್ತು.. ಎಲ್ಲಿ ನೋಡಿದಡಲ್ಲಿ ವೇದಘೋಷವೇ ಘೋಷ! ಮಂತ್ರಗಳೇ ಮಂತ್ರಗಳು!! ಮಠ ಹಾಗೂ ಮಠಾಕಾಶವೆಲ್ಲ ಮಂತ್ರಮಯವಾಗಿತ್ತು. ಇಡೀ ವಾತಾವರಣವೆಲ್ಲ ಮಂಗಲಮಯವಾಗಿತ್ತು. ಕೈಲಾಸ ಮಂಟಪದಲ್ಲಿಯಂತೂ ವೇದಘೋಷವು ಪ್ರತಿಧ್ವನಿತವಾಗುತ್ತಲಿತ್ತು. ಪವಿತ್ರ ವೇಷಭೂಷಣಗಳಿಂದ ಅಲಂಕೃತರಾದ ಪುರೋಹಿತರು ತಮ್ಮ ತೇಜಃಪುಂಜ ಘನ ಹಾಗೂ ಬೃಹದ್ಗಂಭೀರ ಧ್ವನಿಯಿಂದ ವೇದ ಮಂತ್ರೋಚ್ಚಾರಣೆಯನ್ನು ಮಾಡುತ್ತಿದ್ದರು. ವಿದ್ಯಾವಿಭೂಷಿತ ಸಾತ್ವಿಕ ವರ್ಚಸ್ವಿನ ನೂತನ ಶ್ರೀಗಳಿಂದಲೂ, ಸ್ನಾತರೂ, ಪೂತರೂ, ಭಸ್ಮೋದ್ಧೂಲಿತ ಸರ್ವಾಂಗರೂ, ರುದ್ರಾಕ್ಷಾಲಂಕೃತರೂ, ಪವಿತ್ರ ಕಾಷಾಯ ವಸನಧಾರಿಗಳಾದ ಸ್ವಾಮಿಗಳಿಂದಲೂ ಮತ್ತು ಕಿಕ್ಕಿರಿದು ತುಂಬಿದ ಜನಸ್ತೋಮದಿಂದಲೂ ಕೂಡಿಕೊಂಡ ಕೈಲಾಸ ಮಂಟಪವು ಸಾಕ್ಷಾತ್ ಶಿವನ ಕೈಲಾಸದಂತೆ ರಾರಾಜಿಸುತ್ತಲಿತ್ತು.

ಈ ಎಲ್ಲ ವಿಧಿ-ವಿಧಾನಗಳು ನಿಧಾನವಾಗಿ ಮತ್ತು ಸಸಂಭ್ರಮದಿಂದ ನಡೆದುಕೊಂಡಿರುವಾಗ ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ಶ್ರೀ ರಂಭಾಪುರಿ ಶಿವಾನಂದ

ಜಗದ್ಗುರುಗಳವರು ಕೈಲಾಸ ಮಂಟಪಕ್ಕೆ ದಯಮಾಡಿಸಿದರು. ನೂತನ ಶ್ರೀಗಳವರ ಕರಪಿಡಿದು ಶ್ರೀ ರಂಭಾಪುರಿ ಜಗದ್ಗುರುಗಳವರು 'ಜ್ಞಾನಸಿಂಹಾಸನ'ದತ್ತ ಅವರನ್ನು ಕರೆದೊಯ್ದರು. ನಾಗನೂರು ಬೃಹನ್ಮಠಾಧ್ಯಕ್ಷ ಪಂಡಿತಾಗ್ರಗಣ್ಯ ಶ್ರೀ ಕಾಶೀನಾಥ ಶಾಸ್ತ್ರಿವರ್ಯ ನಿರ್ಮಾಯಿತ 'ಚಿತ್ರಶಿಲಾ ಪ್ರಸ್ತರಣ' ಪರಿಶೋಭಿತ ಜ್ಞಾನಸಿಂಹಾಸನವು ಅಂದು ನಾನಾವಿಧ ಪುಷ್ಪಮಾಲಿಕೆಗಳಿಂದ ಅಲಂಕೃತವಾಗಿತ್ತು.

ವಿವಿಧ ವರ್ಣರಂಜಿತ ವಿದ್ಯುದ್ದೀಪಗಳಿಂದ ವಿಭ್ರಾಜಮಾನವಾದ ಜ್ಞಾನ ಸಿಂಹಾಸನವು ತನ್ನ ಅಂತಃ ತೇಜಸ್ಸನ್ನು ಪ್ರಕಟಿಸಿ ತನ್ನ ತೇಜೋಭಂಡಾರವನ್ನು ಸ್ಪಷ್ಟಗೊಳಿಸಿತ್ತು. ಚತುಸ್ಸೋಪಾನಗಳಿಂದ ಕೂಡಿದ ಜ್ಞಾನಪೀಠವು ಚತುರ್ವೇದಗಳನ್ನು ತನ್ನಲ್ಲಿ ಆಹ್ವಾನಿಸಿಕೊಂಡಂತೆ ಕಾಣುತ್ತಿತ್ತು. ಅಂಥ 'ಪರಮಪೂಜ್ಯ' ಜ್ಞಾನಪೀಠವನ್ನು ನೂತನ ಶ್ರೀಗಳವರು ಗಂಭೀರವದನದಿಂದ ಮತ್ತು ಶಾಂತ-ಸುಶಾಂತ ಚಿತ್ತದಿಂದ ಆರೋಹಣ ಮಾಡುವ ಆ ಮಂಗಲಮಯ ಸಮಯದಲ್ಲಿ ಆ ದೃಶ್ಯಗಳನ್ನೆಲ್ಲ ಅನಿಮಿಷನೇತ್ರರಾಗಿ ತನ್ನ ಕಣ್ಣಾಲಿಗಳಲ್ಲಿ ತುಂಬಿಕೊಳ್ಳುತ್ತಿರುವ ಭಕ್ತಸಮೂಹವು,

'ಸಾಕ್ಷಾತ್ ಶಿವನೇ ಭಕ್ತೋದ್ಧಾರಕನಾಗಿ ನೂತನ ಗುರುರೂಪದಿಂದ ಈ ಜ್ಞಾನ ಪೀಠವನ್ನು ಅಲಂಕರಿಸುತ್ತಿರುವನೆಂದೂ, ಮಹೋಗ್ರವಾದ ತಪಸ್ಸಿನಿಂದ ಅಗಾಧವಾದ ಜ್ಞಾನವನ್ನು ಸಂಪಾದಿಸಿ ಜಗತ್ತಿನಲ್ಲಿ ಅನವರತವೂ ನಡೆಯುವ ಅಜ್ಞರ ಕೋಲಾಹಲವನ್ನು ಅಡಗಿಸಿ ಸತ್ಯಧರ್ಮವನ್ನು ಉದ್ಧರಿಸುವುದಕ್ಕಾಗಿಯೇ ಈ ಪೀಠವನ್ನು ಆರೋಹಣ ಮಾಡುವನೆಂದೂ, 'ಶಿವಸಿದ್ಧಾಂತ ತತ್ವಜ್ಞಾನಶಿಖಾಮಣಿ'ಯಾದ 'ಶಿವಜ್ಞಾನಚಂದ್ರಿಕಾವೃತಚಂದ್ರಮನಾದಿ ಆಚಾರ್ಯವರ್ಯ'ನು 'ವೀರಶೈವ ಸುಧಾನಿಧಿ'ಯನ್ನು ಸಮುಲ್ಲಾಸಗೊಳಿಸುವನೆಂದೂ, 'ಜ್ಞಾನ-ಕ್ರಿಯಾ' ಸ್ವಭಾವವುಳ್ಳ 'ಶಾಂಭವ ತೇಜಸ್ಸ'ನ್ನು ಪ್ರಕಾಶಗೊಳಿಸುವನೆಂದೂ ಶಾಂತಮೂರ್ತಿಯಾದ ಮಹಾನುಭಾವನು ಕ್ಷೋಭೆಯಿಂದ ರಕ್ಷಿಸಿ, ವಿಶ್ವಕ್ಕೆ ಪರಮ ಶಾಂತಿಯನ್ನುಂಟು ಮಾಡುವುದಕ್ಕಾಗಿಯೇ ಸದ್ಯಃ ಅಭಿಷಿಕ್ತನಾಗುತ್ತಿರುವನೆಂದೂ' ಈ ವಿಧವಾಗಿ ತನ್ನಂತರಂಗದಲ್ಲಿ ಭಾವುಕವಾಗಿ ಆಲೋಚಿಸತೊಡಗಿತು.

ನಿಜಕ್ಕೂ ಹೇಳಬೇಕೆಂದರೆ ಆ ಸನ್ನಿವೇಶವು ದರ್ಶನೀಯವಾಗಿತ್ತು. ಇಂಥ ಸನ್ನಿವೇಶವನ್ನು ಕಣ್ತುಂಬ ಸವಿದ ಭಕ್ತಾದಿಗಳು ತಾವು ಧನ್ಯರೆಂದು, ಮಾನ್ಯರೆಂದು ತಮ್ಮ ಅದೃಷ್ಟವನ್ನು ತಾವೇ ಅಭಿನಂದಿಸಿಕೊಂಡರು. ಪೀಠಾರೋಹಣವನ್ನು ಮಾಡಿದ ನೂತನ ಶ್ರೀಗಳು ಮುಹೂರ್ತ ಮಾಡಿದರು. ಆಮೇಲೆ ನೂತನ ಶ್ರೀಗಳಿಗೆ 'ನಮಕ ಚಮಕ'ಗಳಿಂದ ಸುವರ್ಣಾಭಿಷೇಕ, ರತ್ನಾಭಿಷೇಕ, ಶತಧಾರಾಭಿಷೇಕ, ಸಹಸ್ರಧಾರಾಭಿಷೇಕಗಳೇ ಮುಂತಾದ ವಿಧ್ಯುಕ್ತ ವಿವಿಧಾಭಿಷೇಕಗಳು ನೆರವೇರಿದವು. ನೂತನ ಶ್ರೀಗಳವರಿಗೆ ನೀಡಿದ ರಜತ ಪಟದ ಮೇಲೆ

'ಜ್ಞಾನ ಸಿಂಹಾಸನಂ ಪ್ರಾಪ್ತೇ ವೀರಭದ್ರ ಜಗದ್ಗುರೌ ।
ಅಭಿಷೇಕೇ ಮಹಾಪೂತೇ ಕಲಶೋಽಯಂ ನಿಯೋಜಿತಃ ॥'

ಎಂಬ ಮಂತ್ರೋಕ್ತಿಯು ಉಲ್ಲಿಖಿತವಾಗಿತ್ತು. ಆ ನಂತರ ಶ್ರೀ ರಂಭಾಪುರಿ ಜಗದ್ಗುರುಗಳವರ ಅಮೃತ ಹಸ್ತದಿಂದ ನೂತನ ಶ್ರೀ ಶ್ರೀಗಳವರಿಗೆ ಕಾಷಾಯಾಂಬರ, ದಂಡ, ಕಮಂಡಲ ಮತ್ತು ಪಂಚಮುದ್ರೆಗಳು....... ಇವುಗಳನ್ನು ಅನುಗ್ರಹಿಸುವುದಾದ ಮೇಲೆ ದಿವ್ಯವಾದ 'ಗುರು ಚಕ್ರವರ್ತಿತ್ವ' ಸೂಚಕವಾದ 'ಸ್ವರ್ಣಪಟ್ಟ'ವನ್ನು ಅನುಗ್ರಹಿಸಿದರು. ಆ ಸುವರ್ಣ ಪಟ್ಟದ ಮೇಲೆ ಲಿಂಗಮುದ್ರೆಯೊಡನೆ -

''ಶ್ರೀಮತಾ ಪಟ್ಟಬಂಧೇನ ವಿಶ್ವಾರಾಧ್ಯ ಜಗದ್ಗುರೋಃ

ಜ್ಞಾನ ಸಿಂಹಾಸನೇಽಧೀಶಃ ಜಗದ್ಗುರುರಸೌ ಸ್ಮೃತಃ'' ಎಂಬ ಪರಂಪರಾಗತವಾದ 'ಪಟ್ಟ ವಚನ'ವು ವಿರಾಜಿಸುತ್ತಿತ್ತು. ಮಧ್ಯಾಹ್ನ ಒಂದು ಗಂಟೆ, ಇಪ್ಪತ್ತು ನಿಮಿಷ (1. 20)ಕ್ಕೆ ಸರಿಯಾಗಿ ಧನುರ್ಲಗ್ನದಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಶ್ರೀಗಳವರಿಗೆ ದಿವ್ಯವಾದ ಮಣಿಖಚಿತ 'ಸುವರ್ಣ ಕಿರೀಟ'ವನ್ನು ಧಾರಣ ಮಾಡಿಸಿ, ''ಶ್ರೀಮಜ್ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು' ಎಂಬ ಪವಿತ್ರಾಭಿದಾನವನ್ನು 'ಜಯ' ಪುರಸ್ಸರವಾಗಿ ಉದ್ಘೋಷಿಸಿದರು.

ಈ ಮಂಗಲಮಯ ವೈಭವದ ಸನ್ನಿವೇಶವನ್ನು ನೋಡಿ ಆನಂದತುಂದಿಲರಾದ ಭಕ್ತಾದಿಗಳು ಹರ್ಷೋಲ್ಲಾಸಗಳಿಂದ 'ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮೀಜೀ ಕೀ ಜೈ' ಎಂದು ಸಾಮೂಹಿಕವಾಗಿ ಜಯಘೋಷವನ್ನು ಮಾಡಿದರು. ಅದೇ ರೀತಿ ಅಲ್ಲಿ ಸೇರಿದ ಭಕ್ತಾದಿಗಳೆಲ್ಲ 'ಶ್ರೀ ಜಗದ್ಗುರು ವಿಶ್ವಾರಾಧ್ಯರ, ಶ್ರೀ ಜಗದ್ಗುರು ರೇಣುಕರ, ಶ್ರೀ ಜಗದ್ಗುರು ಪಂಚಾಚಾರ್ಯರ ಮತ್ತು ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ' ಹೆಸರಿನಲ್ಲಿ ಜಯಘೋಷವನ್ನು ಮಾಡಿದರು. ಈ ಜಯಘೋಷವು ಕಾಶೀ ಕ್ಷೇತ್ರದ ತುಂಬೆಲ್ಲ ಧ್ವನಿ-ಪ್ರತಿಧ್ವನಿಯಾಗಿ ಓತಪ್ರೋತವಾಗಿ ತುಂಬಿಕೊಂಡಿತು. ಆ ಜಯಘೋಷವು ಪ್ರಚಂಡವಾದ ಗಗನವನ್ನೇ ಭೇದಿಸುವಂತಿತ್ತು. ಜನರೆಲ್ಲ ಮನದಣಿಯೆ ಜಯಘೋಷವನ್ನು ಮಾಡಿ ಸಂತೃಪ್ತರಾದರು. ಜನಸಂದಣಿಯು ದಟ್ಟವಾಗಿದ್ದುದರಿಂದ ಅಲ್ಲಲ್ಲಿ ಸ್ವಯಂಸೇವಕರು ನಿಂತುಕೊಂಡು ಭಕ್ತಾದಿಗಳು ಒಬ್ಬರ ಹಿಂದೆ ಒಬ್ಬರು ನಿಂತುಕೊಂಡು 'ವಾರಂ ವಾರ' ದರ್ಶನ ಮಾಡಿಕೊಂಡು ಹೋಗುವ ವ್ಯವಸ್ಥೆಯನ್ನು ಮಾಡಿದರು. ಆದರೂ ಅಲ್ಲಿನ ಆ ಜನಸಮುದ್ರವನ್ನು ನಿಭಾಯಿಸುವುದು ಮತ್ತು ನಿರ್ವಹಿಸುವುದು ಕಷ್ಟಸಾಧ್ಯವಾಗಿತ್ತು.

ಜನಗಳು ದರ್ಶನಾಶೀರ್ವಾದಗಳನ್ನು ಪಡೆದುಕೊಂಡು ಹೋದಾದ ಮೇಲೆ ಜನಸಮ್ಮರ್ದವು ಕಡಿಮೆಯಾದ ಮೇಲೆ ಉಭಯ ಸನ್ನಿಧಿಗಳವರೂ ಅಲ್ಲಿಂದ ಪ್ರಸ್ಥಾನ ಮಾಡಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ದರ್ಶನವನ್ನು ಮಾಡಿಕೊಂಡು 'ಚಿತ್ರಭವನ'ದಲ್ಲಿ ಮುಹೂರ್ತ ಮಾಡಿ. ಮತ್ತೆ ಭಕ್ತಾದಿಗಳಿಗೆ ದರ್ಶನಾಶೀರ್ವಾದಗಳನ್ನು ಅನುಗ್ರಹಿಸಿದರು. ನಂತರ ಉಭಯ ಜಗದ್ಗುರುಗಳವರು 'ಪೂಜಾಗೃಹ'ದತ್ತ ದಯಮಾಡಿಸಿ ಶಿವಾರ್ಚನಾನುಷ್ಠಾನ ತತ್ಪರರಾದರು. ಇದೇ ಸಂದರ್ಭದಲ್ಲಿ ನೂತನ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀ ರಂಭಾಪುರೀ ಜಗದ್ಗುರುಗಳವರ ಪಾದಪೂಜೆಯನ್ನು ಮಾಡಿ ತೀರ್ಥ, ಪ್ರಸಾದವನ್ನು ಸ್ವೀಕರಿಸಿದರು.

ಇತ್ತ ಇನ್ನೊಂದೆಡೆಯಲ್ಲಿ ಪೀಠಾರೋಹಣ ಸಮಾರಂಭಕ್ಕೆ ಆಗಮಿಸಿದ ಭಕ್ತಾದಿಗಳಿಗೆ ಮತ್ತು ಜನಸ್ತೋಮಕ್ಕೆ ವಿವಿಧ ಮೃಷ್ಟಾನ್ನಗಳಿಂದ ಕೂಡಿದ ಭೂರಿ ಭೋಜನದ ಸಮಾರಾಧನೆಯು ನಡೆಯಿತು. ಶ್ರೀಪೀಠದಲ್ಲಿ ಪೀಠಾರೋಹಣದ ಪ್ರಕ್ರಿಯೆಯು ಪ್ರಾರಂಭವಾಗುತ್ತಲೇ 8-10 ದಿನಗಳಿಂದಲೂ ದಾಸೋಹವು ನಿರಂತರವಾಗಿ ನಡೆದುಕೊಂಡು ಬಂದಿತ್ತು. ಈ ಮಧ್ಯದಲ್ಲಿ ಆಗಾಗ ಮಿಷ್ಟಾನ್ನ ಭಕ್ಷ್ಯ-ಭೋಜ್ಯಗಳ ಸಿಹಿಯೂಟವನ್ನು ಏರ್ಪಡಿಸಲಾಗಿತ್ತು.

ಪ್ರತಿನಿತ್ಯದ ಪ್ರಸಾದಕ್ಕಿಂತಲೂ ಪೀಠಾರೋಹಣದ ಪರ್ವದಿನದಂದು ನೀಡಿದ ಮಿಷ್ಟಾನ್ನ ಭೋಜನ ಎಲ್ಲಕ್ಕೂ ವಿಶೇಷವಾಗಿತ್ತು. ಈ ಒಂದು ವಿಶೇಷ ಸಂದರ್ಭದಲ್ಲಿ ನೀಡಿದ ಭೋಜನವು ಉತ್ತರ ದೇಶದ ಪದ್ಧತಿಯಂತೆ ನಾನಾವಿಧವಾದ ಮೃಷ್ಟಾನ್ನಗಳಿಂದ ಕೂಡಿಕೊಂಡಿತ್ತು. ಜನರೆಲ್ಲ ಆನಂದದಿಂದ ಊಟಮಾಡಿ ಸಂತೃಪ್ತರಾದರು ಮತ್ತು ತೃಪ್ತಿಯಿಂದ ತೇಗಿದರು.

ಶ್ರೀ ಪೀಠದ ಅಂತರಂಗದಲ್ಲಿ ಶ್ರೀ ರಂಭಾಪುರೀ ಜಗದ್ಗುರುಗಳವರ ಸಮ್ಮುಖದಲ್ಲಿ ನೂತನ ಜಗದ್ಗುರುಗಳವರ 'ಶ್ರೀ ಜಗದ್ಗುರು ಪಟ್ಟಾಧಿಕಾರ'ದ 'ಸಂಪುಟ ಪತ್ರ'ವು ಬರೆಯಲ್ಪಟ್ಟಿತು. ಆ ಸಂಪುಟ-ಪತ್ರಕ್ಕೆ ಶ್ರೀ ರಂಭಾಪುರಿ ಜಗದ್ಗುರುಗಳು ಮತ್ತು ಸಮಾರಂಭಕ್ಕೆ ಆಗಮಿಸಿದ ಚರ ಪಟ್ಟಾಧಿಕಾರಿಗಳು ಹಾಗೂ ಗಣ್ಯಮಾನ್ಯ ಪ್ರಮುಖ ಭಕ್ತರು ಹಸ್ತಾಕ್ಷರವನ್ನು ಮಾಡಿ ನಂತರ ಶ್ರೀ ವೀರಭದ್ರ ಜಗದ್ಗುರುಗಳಿಗೆ ಅದನ್ನು ಅರ್ಪಿಸಲಾಯಿತು.

ಸಾಯಂಕಾಲ ಸರಿಯಾಗಿ 7.00 ಗಂಟೆಗೆ ' ಸಭಾ ದರ್ಬಾರ್'ನ್ನು ನಡೆಸಲು ತೀರ್ಮಾನಿಸಲಾಯಿತು. ಅದಕ್ಕನುಗುಣವಾದ ವ್ಯವಸ್ಥೆಗಳು ಪ್ರಾರಂಭವಾದವು. ದರ್ಬಾರ್ ಹಾಲಿನ ಮುಂಭಾಗದ ಬಯಲಿನಲ್ಲಿ ಪ್ರತ್ಯೇಕವಾಗಿ ರಚಿಸಲ್ಪಟ್ಟ ನೂತನ ಮಂಟಪದ ಮಧ್ಯದಲ್ಲಿ ಎರಡು ಸುವರ್ಣಾಂಕಿತ ರಜತ ಸಿಂಹಾಸನಗಳನ್ನು ಇರಿಸಲಾಯಿತು. ಮಠದ ಕಟ್ಟಡದ ಎರಡೂ ಅಂತಸ್ತುಗಳಲ್ಲಿ, ಮಹಾದ್ವಾರದ ಮುಂಭಾಗದಿಂದ ರಾಜಬೀದಿಯವರೆಗೆ ಹಾಗೂ ಮಠದ ಆವರಣದ ತುಂಬೆಲ್ಲ ಎಲ್ಲೆಂದರಲ್ಲಿ ಜನರು ಕಿಕ್ಕಿರಿದು ತುಂಬಿಕೊಂಡಿದ್ದರು.

ಪರಮಪೂಜ್ಯ ಜಗದ್ಗುರುಗಳೀರ್ವರ ಸಿಂಹಾಸನಗಳ ಸುತ್ತಲೂ ಮತ್ತು ವೇದಿಕೆಯ ಸುತ್ತಮುತ್ತ ಹುಬ್ಬಳ್ಳಿ, ಬೆಂಗಳೂರು, ಹುಟಗಿ, ಪರಾಂಡ, ಜಮಖಂಡಿ, ಬೀಳಗಿ, ಹೂಲಿ, ಕೋಳಿಮಾನೂರು, ಜೈನಾಪುರ, ನವಲಗುಂದ, ಮಳಲಿ, ಜೇವರಗಿ, ಗಿರಿಸಾಗರ, ಶಿಗ್ಗಾವಿ, ಸೂಡಿ, ರೌಡಕುಂದಿ, ರಾಯಚೂರು, ಮುಳ್ಳೂರು, ಮೊರಬ, ಕಡಕೋಳ, ಅಳವಂಡಿ, ಬ್ಯಾಹಟ್ಟಿ, ಬಿಚಕುಂದ, ಕ್ಯಾಸಂಪೇಟೆ, ಸೊಲ್ಲಾಪುರ, ವೈರಾಗ, ಜತ್ತ, ಉಮರಾವತಿ, ನಾಗಪೂರ, ನಾಶಿಕ, ಕೊಟ್ಟೂರು........ ಮೊದಲಾದ ಗ್ರಾಮಗಳ ಚರಪಟ್ಟಾಧಿಕಾರಿಗಳು, ದೇಶಿಕಮೂರ್ತಿಗಳು, ಸ್ವಾಮಿಗಳು ಮತ್ತು ಅನೇಕ ಜನ ವಿದ್ವಾಂಸರು ಸುಖಾಸೀನರಾಗಿದ್ದರು. ಸೋಲಾಪುರ, ಬೆಂಗಳೂರು, ತುಮಕೂರು, ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಬೀರೂರು, ಹಾಸನ, ತರೀಕೆರೆ, ಗದಗ, ಬಿಜಾಪುರ, ಕೊಟ್ಟೂರು, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಹೈದರಾಬಾದ್, ಸಿಕಂದ್ರಾಬಾದ್, ಬೆಜವಾಡ, ಗಂಜಾಂ, ವಿಶಾಖಪಟ್ಟಣಮ್, ರಾಮನಾಥ, ಬೀಡ್, ಲಾತೂರ್, ಬಾರ್ಸಿ, ಪಂಢರಪೂರ, ನಾಗಪೂರ, ಉಮರಾವತಿ, ಖಾಮಗಾಂವ್, ಮನಮಾಡ್, ನಾಶಿಕ, ಪೂನಾ, ಬಾಂಬೆ........ ಮೊದಲಾದ ದಕ್ಷಿಣ ದೇಶದ ಎಲ್ಲ ಭಾಗಗಳ ಮತ್ತು ನಗರಗಳ ವೀರಶೈವ ಮಹಾಜನಗಳು, ಪ್ರಮುಖರು, ಶೆಟ್ಟರು, ದೇಸಾಯಿಗಳು, ವಕೀಲರುಗಳು, ಮತ್ತು ಸಮಾಜಾಭಿಮಾನಿಗಳೂ ಅಲ್ಲಲ್ಲಿ ಸುಖಾಸೀನರಾಗಿ ಕುಳಿತಿದ್ದರು.

ಹಿಂದೀ ಪ್ರಾಂತದ ಪ್ರಮುಖರು, ಅದರಲ್ಲೂ ವಿಶೇಷವಾಗಿ ಕಾಶೀ ಕ್ಷೇತ್ರದ ನಾಗರಿಕರು ಭಾಗವಹಿಸಿದ್ದರಿಂದ ಜನಸಂಖ್ಯೆಯು ಹದಿನೈದು (15) ಸಾವಿರಕ್ಕೂ ಮೇಲ್ಪಟ್ಟು ಇತ್ತು ಎಂದು ಒಂದಂದಾಜಿನಿಂದ ಹೇಳಬಹುದು. ಇಂಥ ಸುಮುಹೂರ್ತದಲ್ಲಿ ಮಂಗಳವಾದ್ಯಗಳು ಮೊಳಗುತ್ತಿರಲು ಶ್ರೀ ರಂಭಾಪುರಿ ವೀರ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಶ್ರೀ ಕಾಶೀ ನೂತನ ಪಟ್ಟಾಭಿಷಿಕ್ತ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಸುವರ್ಣ ಕಿರೀಟಧಾರಿಗಳಾಗಿ ವೈದಿಕರ ವೇದಘೋಷಗಳೊಂದಿಗೆ ದಯಮಾಡಿಸಿ 'ಶಮೀಪತ್ರ'ವನ್ನು ಸ್ವೀಕರಿಸಿಯಾದ ಮೇಲೆ ತಮ್ಮ ತಮ್ಮ ಧರ್ಮ ಸಿಂಹಾಸನಗಳನ್ನು ಅಲಂಕರಿಸಿದರು. ಜಗದ್ಗುರುಗಳೀರ್ವರೂ ಪೀಠಾರೋಹಣವನ್ನು ಮಾಡುತ್ತಲೇ ಸೇರಿದ ಜನಸ್ತೋಮವೆಲ್ಲ ಹರ್ಷಾತಿರೇಕದಿಂದ ಜಯಘೋಷವನ್ನು ಮಾಡಿತು.

ಆ ನಂತರದಲ್ಲಿ ನೂತನ ಜಗದ್ಗುರುಗಳವರಿಗೆ 'ಗುರುಕಾಣಿಕಾ' ಸಮರ್ಪಣ ಕಾರ್ಯವು ಪ್ರಾರಂಭವಾಯಿತು. ಮೊತ್ತ ಮೊದಲು ಶ್ರೀ ರಂಭಾಪುರಿ ಸನ್ನಿಧಿಯವರು ಸಹಸ್ರಾರು ರೂಪಾಯಿ ಬೆಲೆಬಾಳುವ ಚೀನಾಂಬರವನ್ನು ಆಹೇರಾಗಿ ಶ್ರೀ ವೀರಭದ್ರ ಜಗದ್ಗುರುಗಳಿಗೆ ಪ್ರದಾನ ಮಾಡುವ ಮೂಲಕ ಕಾಶೀ ನೂತನ ಜಗದ್ಗುರುಗಳವರಿಗೆ ತಮ್ಮ ರಂಭಾಪುರೀ

ಪೀಠದ ಗೌರವವನ್ನು ಸಮರ್ಪಿಸಿದರು. ನಂತರ ಶ್ರೀಶೈಲ, ಉಜ್ಜಯನೀ ಮತ್ತು ಕೇದಾರ ಜಗದ್ಗುರು ಪೀಠಗಳ ಪ್ರತಿನಿಧಿಗಳು ತಮ್ಮತಮ್ಮ ಪೀಠ ಹಾಗೂ ಪೀಠಾಧೀಶರ ಪರವಾಗಿ ತಮ್ಮ ಪೀಠಗಳ ಗೌರವವನ್ನು ಸಮರ್ಪಿಸಿದರು.

ಶ್ರೀ ಸಂಸ್ಥಾನ ಮಠಗಳಿಂದ ಆಹೇರುಗಳನ್ನು ಒಪ್ಪಿಸುವುದಾದ ಮೇಲೆ ಸಮಸ್ತ ಚರಪಟ್ಟಾಧಿಕಾರಿಗಳು, ಮಠಸ್ಥರು, ಭಕ್ತಾದಿಗಳು, ಹಿಂದೂಸ್ಥಾನೀಯರು ಮತ್ತು ಹಿಂದೀ ಭಾಷಾ-ಭಾಷಿಗಳು ಎಲ್ಲರೂ ತಂಡೋಪತಂಡವಾಗಿ ಬಂದು ಶ್ರೀ ಗುರುಗಳ 'ಚರಣ-ಸನ್ನಿಧಾನ'ಕ್ಕೆ ತಮ್ಮತಮ್ಮ 'ಗುರುಕಾಣಿಕೆ'ಯನ್ನು ಅರ್ಪಿಸಿದರು. ಈ 'ಗುರುಕಾಣಿಕಾ' ಸಮರ್ಪಣಾ ಕಾರ್ಯವು ರಾತ್ರಿ 11.00 ಗಂಟೆಯಾದರೂ ನಡೆಯುತ್ತಲೇ ಇತ್ತು. ಜಗದ್ಗುರುಗಳೀರ್ವರ ಅನುಷ್ಠಾನಕ್ಕೆ ವಿಳಂಬವಾಗುತ್ತಿದ್ದ ಕಾರಣ ಆ ದಿನದ ಕಾರ್ಯಕ್ರಮವನ್ನು ಅಷ್ಟಕ್ಕೇ ಮಹಾಮಂಗಲ ಹಾಗೂ ಜಯಘೋಷಗಳೊಂದಿಗೆ ಮುಕ್ತಾಯ ಮಾಡಲಾಯಿತು.

ಎರಡನೆಯ ದಿನದ ಸಮಾರಂಭ
ಅಡ್ಡಪಲ್ಲಕ್ಕಿ ಉತ್ಸವ

ಅಶ್ವೀಜ ಶುದ್ಧ ಏಕಾದಶೀ ಗುರುವಾರ ಹತ್ತು (10.00) ಗಂಟೆಗೆ 'ಅಡ್ಡಪಲ್ಲಕ್ಕಿ ಮಹೋತ್ಸವ'ವು ಪ್ರಾರಂಭವಾಯಿತು. ನಾನಾ ವಿಧದ ವಾದ್ಯಗಳು ಮತ್ತು ವೈದಿಕ ಮಂತ್ರಘೋಷಗಳು ಭೋರ್ಗರೆಯುತ್ತಿದ್ದವು. ಹೀಗಿರುತ್ತಿರಲು ಶ್ರೀಮದ್ರಂಭಾಪುರಿ ಜಗದ್ಗುರುಗಳವರು ಮತ್ತು ನೂತನ ಶ್ರೀ ಕಾಶೀ ಜಗದ್ಗುರುಗಳವರು ಮಹಾಸಂಸ್ಥಾನದ ಪರಿವಾರದೊಡನೆ ಮತ್ತು ಪ್ರಚಂಡವಾದ ಜನಸ್ತೋಮದೊಡನೆ ಮಹಾಸಂಸ್ಥಾನದ ಮಹಾದ್ವಾರವನ್ನು ದಾಟಿ ನಾನಾ ವಿಧವಾದ ಅಮೂಲ್ಯ ಆಭರಣ, ವಸ್ತು ಮತ್ತು ಪುಷ್ಪಾದಿಗಳಿಂದ ಅಲಂಕೃತವಾದ ಪಲ್ಲಕ್ಕಿಯ ಸಮೀಪಕ್ಕೆ ದಯಮಾಡಿಸಿದರು. ಶ್ರೀ ರಂಭಾಪುರಿ ಜಗದ್ಗುರುಗಳವರು ಕಾಶೀ ಜಗದ್ಗುರುಗಳಿಗೆ ಅಡ್ಡಪಲ್ಲಕ್ಕಿಯಲ್ಲಿ ಮುಹೂರ್ತ ಮಾಡಲು ಅಪ್ಪಣೆ ಕೊಡಿಸಿದರು.ಅವರ ಆದೇಶದ ಮೇರೆಗೆ ಶ್ರೀ ಕಾಶೀ ಜಗದ್ಗುರುಗಳವರು ಅಡ್ಡಪಲ್ಲಕ್ಕಿಯಲ್ಲಿ ಮುಹೂರ್ತ ಮಾಡಿದರು. ಆ ಕೂಡಲೇ ಅಲ್ಲಿ ಸೇರಿದ ಅಪಾರ ಜನಸ್ತೋಮವು 'ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾರಾಜಕೀ ಜೈ' ಎಂದು ಮತ್ತೆ ಮತ್ತೆ ಪ್ರಚಂಡವಾಗಿ ಜಯಘೋಷಗಳನ್ನು ಮಾಡಿತು. ಸನ್ನಿಧಿಯ 'ಅಡ್ಡಪಲ್ಲಕ್ಕಿ ಮಹೋತ್ಸವ'ವು ಮಹಾಸಂಸ್ಥಾನ ಜಂಗಮವಾಡಿಮಠದ ರಾಜಬೀದಿಯಿಂದ ನಿಧಾನವಾಗಿ ಹೊರಟಿತು. ಈ ಮಹೋತ್ಸವದಲ್ಲಿ ಸಮಸ್ತ ಚರಪಟ್ಟಾಧಿಕಾರಿಗಳು, ವಿದ್ವಾಂಸರು, ಪ್ರಮುಖರು, ವಕೀಲರು, ಶ್ರೀಮಂತರು, ಭಕ್ತ ಶ್ರೇಷ್ಠರು ಮತ್ತು ಸುಮಂಗಲೆಯರು ಹಾಗೂ ಕಾಶಿಯ ಮಹಾಜನಗಳು, ಪುರ-ಪ್ರಮುಖರು ಇವರೆಲ್ಲ ಭಾಗವಹಿಸಿದುದರಿಂದ ಸನ್ನಿವೇಶವು ತುಂಬ ರಮಣೀಯವಾಗಿತ್ತು ಹಾಗೂ ಉತ್ಸವವು ಸುದೀರ್ಘಗೊಂಡಿತ್ತು. ವೈದಿಕರ ವೇದಘೋಷಗಳು, ಭಕ್ತರ ಭಜನೆಗಳು, ದಕ್ಷಿಣ ದೇಶದ

ಶೈವ ಸಂಘದವರ ಭಜನಾಮೇಳಗಳು, ವಿಶಿಷ್ಟವಾದ ಹಾಗೂ ಇಂಪಾದ ಭಾವಪೂರ್ಣ ಸ್ತೋತ್ರಪದಗಳು, ಮಹಿಳೆಯರ ಮಂಗಳಗೀತೆಗಳು, ಗಾಯಕರ ಸಂಗೀತವು, ಕೆಲ ಭಕ್ತರಿಂದ ಸಿದ್ಧಾಂತ ಶಿಖಾಮಣಿಯ ಪಾರಾಯಣವು, ಶಂಖಭೇರಿ ಕಹಳೆಗಳ ಜಯಧ್ವನಿಗಳು ವಿವಿಧಾನೇಕ ಮಂಗಳವಾದ್ಯಗಳು ಇವೆಲ್ಲವುಗಳು ಸೇರಿ ಅಭೂತಪೂರ್ವ 'ಓಂಕಾರ ಧ್ವನಿ'ಯು ಕಾಶೀ ಕ್ಷೇತ್ರದಲ್ಲೆಲ್ಲ ಪ್ರತಿಧ್ವನಿತವಾಗತ್ತಲಿತ್ತು. ಶ್ರೀ ಸನ್ನಿಧಿಯ 'ಅಡ್ಡಪಲ್ಲಕ್ಕಿ ಮಹೋತ್ಸವ'ವು ಶ್ವೇತಛತ್ರ-ಚಾಮರಾದಿ ಎಪ್ಪತ್ತೆರಡು ಬಿರುದುಗಳಿಂದ ಕೂಡಿ ಗೋಧೂಳಿಯ ಗೋದೌಲಿಯಾ, ಬೇನಿಯಾಬಾಗ್, ಮುನಿಸಿಪಾಲ್ಟಿ ಭವನ, ಭಾರತಧರ್ಮ ಮಹಾಮಂಡಲ, ಚೇಲ್‌ಗಂಜ್ ಕಬೀರಚೌರಾ, ನೀಚಿಬಾಗ್, ಟೌನ್‌ಹಾಲ್ ಚೌಕ್, ಜ್ಞಾನವಾಪೀ, ದಶಾಶ್ವಮೇಧ, ಚಿತ್ತರಂಜನ್ ಪಾರ್ಕ್.........ಮುಂತಾದ ಮುಖ್ಯಬೀದಿಗಳಲ್ಲಿ ಮಹಾವೈಭವದಿಂದ ವಿಜೃಂಭಿಸುತ್ತ ಹೊರಟಿತ್ತು. ಶ್ರೀ ಸನ್ನಿಧಿಯವರು ಅಲ್ಲಲ್ಲಿ ಕೊಡುವ ಸನ್ಮಾನಗಳನ್ನು ಸ್ವೀಕರಿಸುತ್ತ ಕಾಶೀ ಜನರಿಗೆಲ್ಲ ದರ್ಶನಾಶೀರ್ವಾದಗಳನ್ನು ಅನುಗ್ರಹಿಸಿದರು. ಈ ವೈಭವಪೂರ್ಣ ಉತ್ಸವವು ಕಾಶೀ ಜನಗಳಿಗೆ ಅಭೂತಪೂರ್ವವಾಗಿದ್ದು ಪರಮಾನಂದವನ್ನುಂಟುಮಾಡಿತು. ಉತ್ಸವವು ಕಾಶೀ ನಾಗರಿಕರ ಅಂಗಡಿಗಳ ಮುಂದೆ ಬರುತ್ತಲೇ ಅವರು ಶ್ರದ್ಧೆಯಿಂದ ಮತ್ತು ಭಕ್ತಿಯಿಂದ ಭಾವಭರಿತರಾಗಿ ಎದ್ದು ನಿಂತು ನಮಸ್ಕರಿಸುತ್ತಿದ್ದರು. ಈ ಉತ್ಸವದಲ್ಲಿ ಇಲ್ಲಿಯ 'ವೀರಶೈವ ಬೆಟಾಲಿಯನ್ನಿ'(ಪಡೆ)ನ ಸೈನಿಕರು ತಮ್ಮ ಸೈನಿಕ ದಿರಿಸುಗಳೊಂದಿಗೆ ಸುಸನ್ನದ್ಧರಾಗಿ ಭಾಗವಹಿಸಿದ್ದರಿಂದ ಉತ್ಸವದ ಶೋಭೆಯು ಇಮ್ಮಡಿ-ಮುಮ್ಮಡಿಗೊಂಡಿತ್ತು. ಉತ್ಸವದ ವ್ಯವಸ್ಥಿತವಾಗಿ ಕೊಂಡೊಯ್ಯುವಲ್ಲಿ ಪೊಲೀಸ್ ಅಧಿಕಾರಿಗಳು ಬಹಳ ಮುತುವರ್ಜಿಯನ್ನು ವಹಿಸಿಕೊಂಡು ತಮ್ಮ ಭಾಗದ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಅಲ್ಲಲ್ಲಿ ಈ ಧಾರ್ಮಿಕ ಮಹಾಸವಾರಿಯ ಭಾವಚಿತ್ರಗಳು ವರ್ತಮಾನ ಪತ್ರಿಕೆಯ ಪ್ರತಿನಿಧಿಗಳಿಂದ, ನಗರದ ಜನಗಳಿಂದ ಹಾಗೂ ವಿಶೇಷ ಸಂಘ ಸಂಸ್ಥೆಗಳಿಂದ ಕ್ಯಾಮರಾದ ಕಣ್ಣುಗಳಲ್ಲಿ ಸೆರೆ ಹಿಡಿಯಲ್ಪಟ್ಟವು. ಈ ವಿಧವಾಗಿ ಮಹೋತ್ಸವವು ನಗರದ ಪ್ರಮುಖ ಬೀದಿಗಳಲ್ಲೆಲ್ಲ ಸಂಚರಿಸಿ ಮಧ್ಯಾಹ್ನ ಮೂರು (3.00) ಗಂಟೆಯ ಸುಮಾರಿಗೆ ಶ್ರೀ ಜಂಗಮವಾಡಿ ಮಹಾಸಂಸ್ಥಾನ ಮಠಕ್ಕೆ ದಯಮಾಡಿಸಿ ಮುಕ್ತಾಯಗೊಂಡಿತು.

ಸಾಯಂಕಾಲ 'ಧರ್ಮಸಭಾ' ಸಮಾರಂಭ

ಸಾಯಂಕಾಲ 6.00 ಗಂಟೆಗೆ ಈಗಾಗಲೇ ಸಿದ್ಧಗೊಳಿಸಿದ್ದ ದಿವ್ಯ ಮಂಟಪದ ಸಿಂಹಾಸನ ಪೀಠಗಳ ಮೇಲೆ ಶ್ರೀ ರಂಭಾಪುರೀ ಹಾಗೂ ಶ್ರೀ ಕಾಶೀ ಜಗದ್ಗುರುಗಳವರು ಮುಹೂರ್ತ ಮಾಡಿದರು. ಪುನಃ ಜನಸ್ತೋಮವೆಲ್ಲ ಮೊದಲ ದಿನದಂತೆ ಸಭಾಸ್ಥಾನದಲ್ಲಿ ಕಿಕ್ಕಿರಿದು ಸೇರಿಕೊಂಡಿತು. ವೈದಿಕರು ವೇದಘೋಷವನ್ನು ಮತ್ತು ಮಂಗಲಸೂಕ್ತಗಳನ್ನು ಪಠಣಮಾಡಿಯಾದ ಮೇಲೆ 'ಶ್ರೀಮಜ್ಜಗದ್ಗುರು ವಿಶ್ವಾರಾಧ್ಯಾದಿ ಪಂಚಾಚಾರ್ಯರ ಜಯಘೋಷ'ವು ತಾರಕ ಸ್ವರದಲ್ಲಿ ಮಾಡಲ್ಪಟ್ಟಿತು. ಆ ನಂತರ ಸ್ಥಳೀಯ 'ಮೀರಾ' ಎಂಬ

ಹತ್ತು ವರ್ಷದ ಬಾಲಿಕೆಯಿಂದ ಭಗದ್ಭಜನಾ ಪರವಾದ ಮಂಗಲಸ್ತೋತ್ರವು ಹಾಗೂ ಭಗವದಾರಾಧಾನಾ ಪರವಾದ 'ದೀಪನೃತ್ಯ'ವು ಬಲು ಮುದ್ದಾಗಿ ನಡೆಯಿತು.

ಭಾರತ ದೇಶದ ನಾನಾಭಾಗಗಳಿಂದ ವಿವಿಧ ಭಾಷೆಗಳಲ್ಲಿ ಶ್ರೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸಕ್ಕೆ ಶುಭ ಹಾರೈಸಿ ಅನೇಕ ಸಂದೇಶಗಳು ಬಂದಿದ್ದವು. ಒಟ್ಟು ಸಂದೇಶಗಳ ಸಂಖ್ಯೆಯು 450ಕ್ಕೂ ಮೇಲ್ಪಟ್ಟಿದ್ದಿತ್ತು. ಇವುಗಳಲ್ಲಿ ಮುಖ್ಯವಾದವುಗಳ ಸಂಕ್ಷಿಪ್ತ ಸಾರಾಂಶವನ್ನು ಪ್ರಕಟಿಸಲಾಯಿತು.

ಮೊದಲು ಸಂಸ್ಕೃತದಲ್ಲಿನ ಸಂದೇಶಗಳನ್ನು ಪಂ. ವೇ. ಶ್ರೀ ಅಚಲೇರಿ ಶರಣ ಬಸವ ಶಾಸ್ತ್ರಿಗಳು, ಆಂಗ್ಲ, ಹಿಂದೀ ಹಾಗೂ ಮರಾಠಿ ಸಂದೇಶಗಳನ್ನು ಶ್ರೀ ಶಂಕರ ರಾಮಲಿಂಗ ಔದಗಾಂವಕರ್ ಇವರು, ಕನ್ನಡ ಸಂದೇಶಗಳನ್ನು ಶ್ರೀ ಬೀರಗೀ ಬೃಹನ್ಮಠಾಧ್ಯಕ್ಷರಾದ ಶ್ರೀ ಷ. ಬ್ರ. ಗುರುಪಾದ ಶಿವಾಚಾರ್ಯರು ಹಾಗೂ ತೆಲಗು ಭಾಷೆಯಲ್ಲಿನ ಸಂದೇಶಗಳನ್ನು ಶ್ರೀ ಬಂಡಾರು ಲಿಂಗಮೂರ್ತಿ B.Sc. ಇವರುಗಳು ಕ್ರಮವಾಗಿ ಓದಿದರು.

ಕವಿರತ್ನ ಮಲ್ಲಿಕಾರ್ಜುನಡು ಎಂಬುವವರು 'ಕಾಣಿಕೆ' ಎಂಬ ತಮ್ಮ ಮುದ್ರಿತ ತೆಲಗು ಪದ್ಯಗಳನ್ನು ಸಭೆಯಲ್ಲಿ ಓದಿ ಪರಮಪೂಜ್ಯರ ಚರಣಾರವಿಂದಗಳಿಗೆ ಅರ್ಪಿಸಿದರು. ಶ್ರೀಮಾನ್ ಶಿವರುದ್ರಪ್ಪನವರು (ಹೈಕೋರ್ಟ್ ವಕೀಲರು, ಬೀದರ್) ಇವರು ನಿಜಾಮ್ ಪ್ರಾಂತೀಯ ವೀರಶೈವ ಪರಿಷತ್ತಿನ ಹಿಂದೀ ಭಾಷೆಯ ಸುಂದರವಾದ 'ಅಭಿನಂದನಾ ಪತ್ರಿಕೆ'ಯನ್ನು ಓದಿ ಪೂಜ್ಯರ ಸನ್ನಿಧಾನಕ್ಕೆ ಅರ್ಪಿಸಿದರು. ಇವೆಲ್ಲ ಸಂದೇಶಗಳಲ್ಲಿ ಶ್ರೀಶೈಲ ಜಗದ್ಗುರುಗಳವರ ಸಂದೇಶವು ಪ್ರಧಾನವಾಗಿದ್ದು ಅದು ತನ್ನದೇ ಆದ ಪ್ರತ್ಯೇಕ ವರ್ಚಸ್ಸನ್ನು ಮತ್ತು ವಿಶೇಷತೆಯನ್ನು ಹೊಂದಿತ್ತು.

ಶ್ರೀ ಕಾಶೀ ಜಗದ್ಗುರುಗಳ 'ಶ್ರೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವಕ್ಕೆ ಈ ಕೆಳಕಂಡ ಮಠಾಧಿಪತಿಗಳು, ಗುರು ಚರಪಟ್ಟಾಧಿಕಾರಿಗಳು ಮತ್ತು ಗಣ್ಯಮಾನ್ಯರುಗಳು ಸಂಸ್ಕೃತ ಭಾಷೆಯಲ್ಲಿ ಸಂದೇಶಗಳನ್ನು ಕಳುಹಿಸಿದ್ದರು.

1. ಹೂಲಿ ಬೃಹನ್ಮಠಾಧ್ಯಕ್ಷರಾದ 'ತರ್ಕತೀರ್ಥ' ಶ್ರೀ ಷ. ಬ್ರ. ನೀಲಕಂಠ ಶಿವಾಚಾರ್ಯರು 2. ಹಸಗೋಡು ಬೃಹನ್ಮಠಾಧ್ಯಕ್ಷ ಶ್ರೀ ಷ. ಬ್ರ. ರುದ್ರಮುನಿ ಶಿವಾಚಾರ್ಯರು 3. ಉಮರಾವತಿಯ 'ಉದಯ' ಪತ್ರಿಕಾ ಸಂಪಾದಕ ಶ್ರೀ ವೇ. ನಾ.ರಾ. ಬಾಮಣ್‌ಗಾಂವಕರ್‌ರವರು 4. ಗದ್ವಾಲ್ ಜಿಲ್ಲಾ ಮುಖ್ಯ ನ್ಯಾಯಾಧೀಶರಾದ ವಾಚಸ್ಪತಿ ಶ್ರೀ ಗುಂಡೇರಾಯರು 5. ಬೆಂಗಳೂರಿನ ಇನ್‌ಕಮ್ ಟ್ಯಾಕ್ಸ್ ಕಮೀಷನರ್ ಜಿ. ಕೆ. ರುದ್ರಾರಾಧ್ಯರು 6. ಆತ್ಮಕೂರಿನ ಪಂ. ವೀರನಾಗೇಂದ್ರ ಶಾಸ್ತ್ರಿಗಳು 7. ಸೊಲ್ಲಾಪುರದ ಶ್ರೀ ಚ. ಆ. ಭೋಗಡೇಯವರು 8. ಪಂಢರಪುರದ ಶ್ರೀ ಕಲ್ಲಯ್ಯ ಸ್ವಾಮಿಗಳು ತಾಸೇಗಾಂವ್‌ಕಾರ್ ಇವರು 9. ನರಸನ್ನ

ಪೇಟೆಯ ವೀರಶೈವ ಸಂಘದ ಕಾರ್ಯದರ್ಶಿಗಳಾದ ಶ್ರೀ ಚೆಲ್ಲಾ ಬಸವರಾಜಗಾರು ಇವರು 10. ರೌಡಕುಂದಿ ಹಿರೇಮಠದ ಶ್ರೀ ಷ. ಬ್ರ. ಸಿದ್ಧರಾಮ ಶಿವಾಚಾರ್ಯರು ಮತ್ತು 11. ಬೆಂಗಳೂರಿನ ಎಸ್.ಎಂ. ಮರಿಸೋಮಾರಾಧ್ಯರು..........ಮುಂತಾದವರು

ಶ್ರೀ ಕಾಶೀ ಜಗದ್ಗುರುಗಳ 'ಶ್ರೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವಕ್ಕೆ ಈ ಕೆಳಕಂಡ ಗಣ್ಯಮಾನ್ಯರುಗಳು ಮತ್ತು ಮಹನೀಯರುಗಳು ಆಂಗ್ಲಭಾಷೆಯಲ್ಲಿ ತಂತಿ-ಸಂದೇಶ (ಟೆಲಿಗ್ರಾಮ್)ಗಳನ್ನು ಕಳುಹಿಸಿದ್ದರು.

1. ದಿವಾನ್ ಬಹದ್ದೂರ ರಾಜಧರ್ಮ ಪ್ರವೀಣ ರಿ|| ಚೀಫ್ ಜಸ್ಟೀಸ್ ಶ್ರೀ ಪಿ. ಮಹದೇವಯ್ಯನವರು 2. ಶ್ರೀಮಂತ ಚನ್ನಬಸಪ್ಪನವರು ಬಾಬಾ ಸಾಹೇಬ್ ವಾರದ ಸೋಲಾಪುರ 3. ಶ್ರೀಗಳಾದ ನಾಗಪ್ಪ ಮತ್ತು ಬಂಡಪ್ಪ ಕಾಡಾದಿ ಬಂಧುಗಳು 4. ಪಂಡಿತ ಜಿ. ರಾಮಾಚಾರ್ಯರು, ಹೈಕೋರ್ಟ್ ವಕೀಲರು, ಹೈದಾರಾಬಾದ್ 5. ಶ್ರೀ ಜನಾರ್ದನ ರಾಯ್ ದೇಸಾಯಿ, ಹೈಕೋರ್ಟ್ ವಕೀಲರು, ಹೈದರಾಬಾದ್ 6. ವೀರಶೈವ ತರುಣ ಸಂಘ, ಕೊಪ್ಪಳ 7. ಮಾಹೇಶ್ವರ ಸಂಘ, ಗದಗ 8. ಪ್ರಭುರಾವ್ ವಕೀಲರು, ಉದ್ಗೀರ 9. ವೇ|| ಶ್ರೀ ಎಂ. ವಿ. ಮರುಳಸಿದ್ದಯ್ಯನವರು, ಶಿವಮೊಗ್ಗ 10. ವೇ|| ಪಂ|| ಶ್ರೀ ಸೂಗ ವೀರಶರ್ಮಾ, ರಾಯಚೂರು 11. ಶ್ರೀ ವೈಜನಾಥ ಶೇಟ್ ವಕೀಲರು, ಮೋಮಿನಾಬಾದ 12. ಕಾರ್‍ಯದರ್ಶಿ, ಜಂಗಮ ಸಂಘ, ರಾಜಮಹೇಂದ್ರಿ .....ಮುಂತಾದವರು

1 . ರಾಜಸೇವಾ ಪ್ರಸಕ್ತ ಮಾಸ್ತಿ ವೆಂಕಟೇಶ ಅಯ್ಯಂಗಾರರು ಎಂ. ಎ. ಉಪಾಧ್ಯಕ್ಷರು, ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು 2. ಶ್ರೀ ಎಚ್.ಕೆ. ವೀರಬಸವಯ್ಯನವರು ರಿ|| ಡಿ|| ಸೆಷನ್ ಜಡ್ಜ್, ಬೆಂಗಳೂರು 3. ಶ್ರೀ ಪಟ್ಟದಸ್ವಾಮಿ ಹಿರೇಮಠ, ವಕೀಲರು, ಹುಬ್ಬಳ್ಳಿ 4. ಕೀರ್ತನ ಕೇಸರಿ, ಶಿವಕಥಾ ಪಂಡಿತ ಗುಬ್ಬಿ ಶ್ರೀ ಶಿವರುದ್ರ ಶಾಸ್ತ್ರಿಗಳು, ತುಮಕೂರು 5. ಶ್ರೀ ಬಿ. ಬಸಪ್ಪನವರು, ಸರಾಫ್ ವರ್ತಕರು, ಬೆಂಗಳೂರು 6. ಶ್ರೀ ಕಣಬರ್ಗಿ ಹಿರೇಮಠ, ಶ್ರೀ ಸಿದ್ಧಲಿಂಗಾಶ್ರಮ ಬೆಳಗಾವಿ 7. ಶ್ರೀ ವೇ|| ಕೊಟ್ಟೂರೇಶ್ವರ ಶಾಸ್ತ್ರಿ, ಕುಮ್ಮೂರು ಡಿ|| ಧಾರವಾಡ 8. ಶ್ರೀ ಸಿದ್ಧಾಂತ ಜ್ಯೋತಿಷ್ಯರತ್ನ ವೇ. ರುದ್ರಾರಾಧ್ಯ ಶಾಸ್ತ್ರಿಗಳು, ಮಹಾಗಾಂವ್ 9. ಕೊಣ್ಣೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಷ. ಬ್ರ. ಮುರುಘೇಂದ್ರ ಸ್ವಾಮಿಗಳು 10. ಶ್ರೀ ದಾನಗೌಡ ಶಿವಗೌಡ ಪಾಟೀಲ, ನಿಡಸೋಸಿ 11. ಶ್ರೀ ಎಲ್. ಜಿ. ಹೊಂಬಳ ಮತ್ತು ಮಕ್ಕಳು ತಿಜೋರಿ ಕಂಪನಿ, ಹೈದರಾಬಾದ್ 12. ಸೆಕ್ರೆಟರಿ, ವೀರಶೈವ ತರುಣ ಸಂಘ, ಹೈದರಾಬಾದ್ 13. ವೀರಶೈವ ನಾಗರಿಕ ಸಭೆ, ಹುಬ್ಬಳ್ಳಿ 14. ಹಾವೇರಿ ಬಣ್ಣದ ಮಠದ ಚರಮೂರ್ತಿಗಳಾದ ಶ್ರೀ ಷ. ಬ್ರ. ಚೆನ್ನಮಲ್ಲ ಸ್ವಾಮಿಗಳು, ಶ್ರೀಶೈಲ ಸೂರ್ಯ ಸಿಂಹಾಸನ ಸಂಸ್ಥಾನದ ಸರ್ವಾಧಿಕಾರಿಗಳು 15. ಶ್ರೀ ಪಂಡಿತ ಕಂಬಾಳಿಮಠದ ವಿಶ್ವನಾಥ ಶಾಸ್ತ್ರಿಗಳು 16. ಮೈಸೂರು ವೀರಶೈವ ಭಕ್ತ ಮಂಡಳಿ, ಶ್ರೀಕ್ಷೇತ್ರ ಕಾಶಿ 17. ಆಚಾರ್ಯ

ತತ್ವಪ್ರಕಾಶಿಕಾ ಶ್ರೀಮತಿ ಭಾಗೀರಥಿ ಬಾಯಿಯವರು, ಸೋಲಾಪುರ 18. ವೇ॥ ಶ್ರೀ ಸಿದ್ಧರಾಮಯ್ಯನವರು ಬಂಗಿ, ಹುಮನಾಬಾದ್ ಇವರೇ ಮೊದಲಾದ ಮಹನೀಯರುಗಳು ಶ್ರೀ ಕಾಶೀ ಜಗದ್ಗುರುಗಳವರ 'ಶ್ರೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವ'ಕ್ಕೆ . ಕನ್ನಡ ಭಾಷೆಯಲ್ಲಿ ಸಂದೇಶಗಳನ್ನು ಕಳುಹಿಸಿದ್ದರು.

ನೂತನ ಶ್ರೀ ಕಾಶೀ ಜಗದ್ಗುರುಗಳವರ 'ಶ್ರೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವ'ಕ್ಕೆ ಈ ಕೆಳಕಂಡ ಮಹನೀಯರು ಮರಾಠಿಯಲ್ಲಿ ಸಂದೇಶಗಳನ್ನು ಕಳುಹಿಸಿದ್ದರು.

1. ಶ್ರೀ ಬಂಡೆಪ್ಪ ರೇವಣಸಿದ್ದಪ್ಪ ಝುಂಜೆ, ವಕೀಲರು, ಸೋಲಾಪುರ 2. ಶ್ರೀ ಕಾಶೀನಾಥ ರಾಜಾರಾಮ ದೇಶಮುಖ, ವಿಸಾಪುರ ಟೆಂಪರರಿ ಜೇಲರ್ 3. ವೇ॥ ದತ್ತಾತ್ರೇಯ ಕೃಷ್ಣಯ್ಯಾಸ್ವಾಮಿ ವಾಯಕರ ಸಂಗೀತ ವಿದ್ವಾನ್, ಬಾಂಬೆ 4. ಪುರೋಹಿತ ಕಲಾದರ್ಶನ, ಜ್ಯೋತಿಷ ಭವನ, ವಾಸೀಮ್ ಜಿಲ್ಲಾ ಅಕೋಲಾ .....ಮೊದಲಾದವರು.

1. ನಂದಲಾಲ ಭುವಾಲಾಲ ಕೋಟೀಶ್ವರ, ದೌಲತ್‌ರಾಮ ದೇವತಾಮಲ್ಲ ಫಾರಮ್, ಕಲ್ಕತ್ತಾ 2. ನಾಮದೇವ ಸದಾಶಿವ ಶೇಠ್ ಮಿತ್ರುಡಕರ, ಸೆಕ್ರೆಟರಿ, ನಿಜಾಂ ಪ್ರಾಂತೀಯ ವೀರಶೈವ ಪರಿಷತ್, ಶಾಖಾ ಪರಳಿ 3. ಶ್ರೀ ಶ್ರೀನಿವಾಸರಾವ್ ಮದನೂರಕರ್, ಅಧ್ಯಕ್ಷರು, ನಿಜಾಂ ಪ್ರಾತೀಯ ವೀರಶೈವ ಪರಿಷತ್, ಹೈದರಾಬಾದ್ 4. ಶ್ರೀ ಎಸ್. ವಿ. ಸೌದಳೆ, ಅಧ್ಯಕ್ಷರು, ವೀರಶೈವ ತರುಣ ಸಂಘ, ಪರಳಿ ಇಲರೇ ಮೊದಲಾದ ಮಹನೀಯರು ಹಿಂದಿ ಭಾಷೆಯಲ್ಲಿ ಶ್ರೀ ಜಗದ್ಗುರುಗಳವರ ಪಟ್ಟಾಭಿಷೇಕ ಮಹೋತ್ಸವಕ್ಕೆ ಸಂದೇಶಗಳನ್ನು ಕಳುಹಿಸಿದ್ದರು.

(1) ಶ್ರೀ ಬಂಡಾಯ ತಮ್ಮಯ್ಯಗಾರು, ಕಾಕಿನಾಡ (2) ಶ್ರೀ ಪಂ॥ ವೇಟೂರಿ ಪ್ರಭಾಕರ ಶಾಸ್ತ್ರಿಗಳು, ತಿರುಪತಿ (3) ಶ್ರೀ ಜವ್ವಾದಿ ಲಕ್ಷ್ಮಯ್ಯನಾಯಡುಗಾರು ಜಮೀನ್‌ದಾರ್ ಪೆನುಗೊಂಡ (4) ಪಂ. ಪರಕಲಾ ಸೂರ್ಯನಾರಾಯಣ ಶರ್ಮಾಗಾರು, ಪೆನಗೊಂಡ (5) ಎನ್. ಕೋಟಯ್ಯ ಬಿ.ಎ., ಕಲೆಕ್ಟರಿಯೆಟ್, ಕಾಕಿನಾಡ (6) ಕವಿರತ್ನ, ಆಯುರ್ವೇದ ಭಿಷಕ್ ನಲ್ಲಾ ಚನ್ನಕೋಟಯ್ಯ, ಪಾಲಕೋಲ (7) ಮಹಾಕವಿ ಶಿರೋಮಣಿ ಚಿವುಕುಲ ಅಪ್ಪಯ್ಯ ಶಾಸ್ತ್ರಿಗಾರು, ದಿವ್ಯವಾಣಿ ಪತ್ರಿಕಾ ಸಂಪಾದಕರು, ಸಿಕಂದ್ರಾಬಾದ್ (8) ಪಂ. ಅವ್ವಾರಿ ಸುಬ್ರಹ್ಮಣ್ಯ ಶಾಸ್ತ್ರಿಗಾರು, ಒಂಗಿಪುರಂ, ಗುಂಟೂರು (9) ಪಂ. ಓಗಿರಾಲ ಸುಬ್ಬರಾವ್ 'ಸಾಹಿತ್ಯಾಚಾರ್ಯ' ಎಂ.ಓ.ಎಲ್. ಅಸಿಸ್ಟೆಂಟ್ ಗೌರ್ನಮೆಂಟ್ ಸಿಟಿ ಕಾಲೇಜ್ ಹೈದರಾಬಾದ್ (10) ಚುಕ್ಕ ಕೋಟಿವೀರಯ್ಯ ವೀರಶೈವ ಸಂಘ, ರೇಪಲ್ಲಿ (11) ವೀರಶೈವ ಸಂಘ, ಗುಡಿವಾಡ (12) ಕೆ. ಬ. ಕೋಟಿಲಿಂಗದೇವರ ವಿದ್ವಾನ್ ಬಿ.ಎ. (13) ಕೋದಾಟಿ ನಾರಾಯಣರಾವ್, ಕಾರ್ಯದರ್ಶಿ, ವಿಜ್ಞಾನನಿಕೇತನ ಖಮೆಮ್ಮೆಟ್ (14) ವೀರಶೈವ ಸಮಾಜ ಹೈದರಾಬಾದ್ - ಇವರುಗಳು ಆಂಧ್ರ ಭಾಷೆಯಲ್ಲಿ ಸಂದೇಶಗಳನ್ನು ಕಳುಹಿಸಿದ್ದರು.

ಈ ಮೇಲೆ ನಿರೂಪಿತವಾದ ಸಂದೇಶಗಳಲ್ಲಿ ಕೆಲವು ಸಂದೇಶರೂಪವಾಗಿಯೂ, ಕೆಲವು ಸ್ತೋತ್ರರೂಪವಾಗಿಯೂ, ಕೆಲವು ಉಭಯರೂಪವಾಗಿಯೂ ಇವೆ. ಇವುಗಳಲ್ಲಿ ಮುದ್ರಿತವಾಗಿಯೂ, ಚಿತ್ರಕಲಾನೈಪುಣ್ಯಶೋಭಿತವಾಗಿಯೂ, ಸುಂದರ ಅಲಂಕಾರ ಸಾಧನಗಳಿಂದ ಅಲಂಕೃತವಾಗಿಯೂ ಇವೆ. ಇವುಗಳಲ್ಲದೆ ಅಸಂಖ್ಯ ಚಿಕ್ಕಪುಟ್ಟ ಪತ್ರಗಳೂ ಬಂದಿವೆ.

ಉಪನ್ಯಾಸಗಳು

ಮೈಸೂರಿನ ಡಾ. ನಂಜಪ್ಪನವರು ''ವಿಶ್ವಾರಾಧ್ಯ, ವಿಜಯ ದಶಮಿ, ವೀರಗೋತ್ರ, ಜಗದ್ಗುರು ವಾರಣಾಸೀ, ವೀರಶೈವ ಸಮಾಜ, ವೀರಭದ್ರ ಜಗದ್ಗುರು'' ಎಂಬ ಸಮಸ್ತ ಸಂಕೇತಗಳ ಪೂರ್ವದಲ್ಲಿರುವ ವಿಜಯಸೂಚಕವಾದ 'ವಿ' ಎಂಬ ಅಕ್ಷರದ ವೈಶಿಷ್ಟ್ಯವನ್ನು ಹೇಳುತ್ತ ಸ್ವಾರಸ್ಯವಾಗಿ ಭಾಷಣ ಮಾಡಿದರು. ಎರಡನೆಯದಾಗಿ ಶ್ರೀ ಮರುಳಸಿದ್ಧಯ್ಯ ಮಾಸ್ತರರು ಭಾಷಣ ಮಾಡಿದರು. ಶ್ರೀ ಸಿದ್ಧರಾಮಪ್ಪ ಚಪ್ಪಳಗಿ, ಸೋಲಾಪುರ ಇವರು ಮರಾಠಿಯಲ್ಲಿ ಮಾತನಾಡಿದರು. ರಾಯಬಹದ್ದೂರ್ ಶ್ರೀಮಂತ ನಾಗಪ್ಪ ಅಣ್ಣಾ ಅಬ್‌ಜಲ್‌ಪುರಕರ್ ಇವರು ಗುರುಪೀಠಗಳ ಮಹತ್ವ ಮತ್ತು ಸಮಾಜದ ಕರ್ತವ್ಯಗಳನ್ನು ಮನನೀಯವಾಗಿ ತಿಳಿಸಿ ನೂತನ ಜಗದ್ಗುರುಗಳ ಬಗ್ಗೆ ತಮಗಿರತಕ್ಕ ಆದರವನ್ನು ಗಂಭೀರವಾಗಿ ವ್ಯಕ್ತಪಡಿಸಿದರು.

ಆಮೇಲೆ ಸೌ|| ಸಂಗವ್ವಬಾಯಿ ಮಡಕಿ, ಸೋಲಾಪುರ ಇವರು ನೂತನ ಜಗದ್ಗುರುಗಳವರ ಶುಭಾಭಿದಾನಕ್ಕೆ ವ್ಯಾಖ್ಯಾನ ಮಾಡುತ್ತ 'ವೀರ ಎಂದರೆ ವೀರಶೈವರಿಗೆ ಭದ್ರನು, ಮಂಗಲರೂಪನು, ಶಿವಸ್ವರೂಪನು. ವೀರಶೈವೋದ್ಧಾರ ಮಾಡುವಲ್ಲಿ ಭದ್ರನು, ಸಮರ್ಥನು' ಎಂದು. ಮುಂತಾಗಿ ಹೇಳಿ 'ಷಟ್‌ಸ್ಥಲ' ಹಾಗೂ 'ಜಂಗಮರು' ಎನ್ನುವ ವಿಷಯದಲ್ಲಿ ವಿಚಾರಪೂರ್ಣವಾಗಿ ಮಾತನಾಡಿದರು. ಶ್ರೀಮತಿ ಸೌ|| ಆಚಾರ್ಯತತ್ವ ಪ್ರಕಾಶಿಕಾ ಭಾಗೀರಥೀಬಾಯಿ ಕಟಾಪ, ಇವರು ಶ್ರೀಮಜ್ಜಗದ್ಗುರುಗಳವರ 'ಅಗಾಧವಾದ ಪಾಂಡಿತ್ಯ' ಮತ್ತು 'ವಾಚಸ್ಪತಿಯಂಥ ವಕ್ತೃತ್ವ' ಇವುಗಳನ್ನು ವರ್ಣಿಸಿ, 'ಮೊದಲೇ ಸುವರ್ಣ. ಅದಕ್ಕೆ ಈಗ ಕುಂದಣವಿಟ್ಟಂತಾಗಿದೆ. ಈ ಪೀಠಕ್ಕೆ ಇವರು ಭೂಷಣ. ಇವರಿಗೆ ಈ ಪೀಠ ಭೂಷಣ. ಹೀಗೆ ಭೂಷಣ-ಭೂಷ್ಯ ಭಾವವಿದೆ. ಇಂತಹ ವಿಭೂತಿಗಳು ಈ ಪೀಠಕ್ಕೆ ದೊರೆತಿರುವುದೇ ನಮ್ಮಗಳ ಪರಮಭಾಗ್ಯ'' ಎಂದು ಹೇಳಿ ಕಾಶಿಪೀಠದ ಘನತೆಯ ವಿಷಯವನ್ನೆತ್ತಿ, ಪಂಚಮಜಾರ್ಜ್ ಮಹಾಪ್ರಭುಗಳು ಪೀಠಾರೋಹಣ ಸಂದರ್ಭದಲ್ಲಿ ಬ್ರಿಟಿಷ್ ಗೌರ್ನಮೆಂಟ್‌ನವರು ಹಿಂದೂ ದೇಶದ ಪವಿತ್ರ ಕ್ಷೇತ್ರವಾದ ಕಾಶಿಯಲ್ಲಿ ಓರ್ವ ಯೋಗ್ಯ ಧರ್ಮಗುರುಗಳ ಉತ್ಸವವನ್ನು ನೆರವೇರಿಸಬೇಕೆಂದು ನಿರ್ಧರಿಸಿದರು. ಆಗ ವಿಚಾರ ನಡೆದು 'ಯೋಗೀಶ್ವರ' ಎಂದು ಈ ದೇಶದಲ್ಲಿ ಪ್ರಖ್ಯಾತರಾಗಿದ್ದ ಇದೇ ಪೀಠಾಧಿಪತಿಗಳಾಗಿದ್ದ ಶ್ರೀ ಜಗದ್ಗುರು ರಾಜೇಶ್ವರ ಮಹಾಸ್ವಾಮಿಗಳವರನ್ನು ಅಭೂತಪೂರ್ವ ವೈಭವದಿಂದ ಸಕಲ ಮತ ಧರ್ಮಾಚಾರ್ಯ ಮುಖ್ಯಪೀಠಗಳಿಂದ ಯುಕ್ತವಾದ ಈ ಕಾಶೀ ಕ್ಷೇತ್ರದಲ್ಲಿ

ಗೌರ್ನಮೆಂಟ್‌ನವರೇ ಮೆರೆಯಿಸಿದರೆಂಬ ವಿಷಯವು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಉಲ್ಲೇಖಿಸಲು ಯೋಗ್ಯವಾಗಿದೆ'' ಎಂದು ಮುಂತಾಗಿ ಹೇಳಿದರು.

ಶ್ರೀ ಷ. ಬ್ರ. ಪರಾಂಡಕರ ರಾಚಲಿಂಗ ಶಿವಾಚಾರ್ಯ ಸ್ವಾಮಿಗಳವರು ಜಗದ್ಗುರು ಸನ್ನಿಧಿಯವರ ವಿಷಯವಾಗಿ ತಮ್ಮ ಸ್ಫುರದ್ವಾಣಿಯಿಂದ ಮಾತನಾಡಿ, - ಇದು ಮಹಾರಾಷ್ಟ್ರ ಪೀಠ. ಈ ಪೀಠದ ಬಗ್ಗೆ ಮಹಾರಾಷ್ಟ್ರದವರಿಗೆ ಅತ್ಯಂತ ಅಭಿಮಾನ, ಗಾಢವಾದ ಭಕ್ತಿ, ಶ್ರದ್ಧೆಗಳಿವೆ. ಅವರು ಈ ಪೀಠಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ, ಸಲ್ಲಿಸುತ್ತಲೂ ಇದ್ದಾರೆ. ಈ ಪೀಠಕ್ಕೆ ಮಹಾರಾಷ್ಟ್ರದವರು ಮಾಡಿದಷ್ಟು ಸೇವೆಯನ್ನು ಮತ್ತಾವ ಪ್ರಾಂತದವರೂ ಮಾಡಿಲ್ಲ. ಈ ವಿಷಯವನ್ನು ಜಗದ್ಗುರುಗಳವರು ತಮ್ಮ ಘನವಾದ ಚಿತ್ತಕ್ಕೆ ತಂದು ಮಹಾರಾಷ್ಟ್ರ ದೇಶದ ವೀರಶೈವರ ಮೇಲೆ ಸಂಪೂರ್ಣ ಅನುಗ್ರಹ ದೃಷ್ಟಿಯನ್ನಿಟ್ಟು ಅವರನ್ನು ಉದ್ಧರಿಸಬೇಕು'' ಎಂದು ಈ ರೀತಿಯಾಗಿ ಜಗದ್ಗುರು ಸನ್ನಿಧಿಯಲ್ಲಿ ಕಳಕಳಿಯಿಂದ ಪ್ರಾರ್ಥಿಸಿದರು. ಹೊಟಗಿ ಬೃಹನ್ಮಠಾಧ್ಯಕ್ಷರಾದ ಬಾಲವೀರ ತಪಸ್ವಿ ಶ್ರೀ ಷ. ಬ್ರ. ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಕಾಶಿಪೀಠದ ಮಹತ್ವ ಬಗ್ಗೆಯೂ, ನೂತನ ಜಗದ್ಗುರುಗಳ ಬಗ್ಗೆಯೂ ತಮ್ಮ ತಪೋವಾಣಿಯಿಂದ ಮಹತ್ವಪೂರ್ಣ ಭಾಷಣ ಮಾಡಿದರು. ದಾವಣಗೆರೆಯ 'ಸನ್ಮಾರ್ಗದರ್ಶಕ' ಸಂಪಾದಕರಾದ ಗದಗಿನ ಮಠದ ವೇ. ಶ್ರೀ ಅನ್ನದಾನಯ್ಯನವರು ಸನ್ನಿಧಿಯ ವಿಷಯವಾಗಿ ಮಾತನಾಡುತ್ತ - ''ಪೀಠಕ್ಕೆ ಬರುವವರೆಲ್ಲರೂ ಬರಿಗೈಯಿಂದಲೇ ಬರುತ್ತಾರೆ. ಆದರೆ ಈ ಜಗದ್ಗುರು ಸನ್ನಿಧಿಯವರು ತಮ್ಮ ವಿದ್ವಜ್ಜೀವನದಲ್ಲಿ ಅದ್ಭುತ ಸಾಹಸದಿಂದ ಸಂಪಾದಿಸಿದ ವೀರಶೈವ ಸಮಾಜದ ಗ್ರಂಥಾಲಯಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದ ಪ್ರಾಚೀನಾರ್ವಾಚೀನಾದ್ಯತನ ಸಕಲ ಧಾರ್ಮಿಕೈತಿಹಾಸಿಕ ಮಹಾಗ್ರಂಥಗಳಿಂದಲೂ ತಾಳೆಪತ್ರ, ಅಮೂಲ್ಯ, ಅಲಭ್ಯ ಅನೇಕ ತಾಳೆಪತ್ರ ಗ್ರಂಥಗಳಿಂದಲೂ ಕೂಡಿದ ತಮ್ಮ 'ಶೈವ ಭಾರತೀ ಭವನ' ಎಂಬ ಮಹಾಗ್ರಂಥ ಭಂಡಾರವನ್ನು ತಂದಿದ್ದಾರೆ. ಅದೀಗ ಜ್ಞಾನಪೀಠದಲ್ಲಿ 'ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಮಂದಿರಮ್' ಎಂಬ ಪವಿತ್ರಾಭಿಧಾನದಿಂದ ಶೋಭಿಸುತ್ತ ಜ್ಞಾನಪೀಠಕ್ಕೆ ಭೂಷಣಪ್ರಾಯವಾಗಿದೆ'' ಎಂಬ ಮಹತ್ವದ ವಿಷಯವನ್ನು ತಿಳಿಸಿದರು.

ಶ್ರೀ ರಂಭಾಪುರಿ ಶಿವಾನಂದ ಜಗದ್ಗುರುಗಳವರ ಉಪದೇಶಾಮೃತ

ಶ್ರೀ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಆತ್ಮತೇಜಸ್ಸಿನಿಂದ ಪ್ರೋದ್ದೀಪ್ತವಾದ ಗಂಭೀರವಾದ ಅಧಿಕಾರಯುಕ್ತವಾದ ವಾಣಿಯಿಂದ ಅಪ್ಪಣೆ ಕೊಡಿಸಿದರು.. ಈ ಉಪದೇಶಾಮೃತವು ಸಂಸ್ಕೃತ ಭಾಷೆಯಿಂದ ಪ್ರಾರಂಭವಾಗಿ ಕನ್ನಡದಲ್ಲಿ ಹರಿದುಬಂದು ಭಕ್ತರನ್ನು ಆನಂದಗೊಳಿಸಿ ಪವಿತ್ರಿಸಿತು. ''ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಜ್ಞಾನಪೀಠವು 'ಜ್ಞಾನದಾನ ಮಾಡುತ್ತೇನೆ. ಬನ್ನಿ, ಬನ್ನಿ' ಎಂದು ಭಕ್ತರನ್ನು ಕರೆಯುತ್ತದೆ. ಹೀಗೆ ಬನ್ನಿ, ಬನ್ನಿ ಎಂದು ಕರೆಯುವುದೇ ಅದಕ್ಕೊಂದು ಹಬ್ಬ! ಈ ಹಬ್ಬವನ್ನು ಸೂಚಿಸುವುದಕ್ಕಾಗಿಯೇ ಏನೋ ಎಂಬಂತೆ

ಇಂದಿನ ಮಹೋತ್ಸವದ ದಿನವೂ ನಾಮಸಾದೃಶ್ಯದಿಂದ 'ಬನ್ನಿಯ ಹಬ್ಬ'ವೇ ಆಗಿದೆ. ಜ್ಞಾನದಾನ ಮಾಡುತ್ತದಾದ್ದರಿಂದಲೇ ಇದು 'ವಿಶ್ವಾರಾಧ್ಯ ಪೀಠ'ವಾಗಿದೆ, 'ಜಗದ್ಗುರು ಪೀಠ'ವಾಗಿದೆ.

ಈಗ ಎರಡು ತಿಂಗಳಿನಿಂದ ನಮ್ಮ ಪ್ರಕೃತಿಯಲ್ಲಿ ಸ್ವಾಸ್ಥ್ಯವಿಲ್ಲದಿದ್ದರೂ, ಹವಾಮಾನ ವ್ಯತ್ಯಯ ಮಾಡಬಾರದೆಂದು ಡಾಕ್ಟರ್‌ರವರ ಅಭಿಪ್ರಾಯವಿದ್ದರೂ, ಇವುಗಳೆಲ್ಲಾವನ್ನೂ ಲಕ್ಷಿಸದೆ ಬೆಂಗಳೂರಿನಿಂದ ಶ್ರೀ ರಂಭಾಪುರಿಗೆ ಹೋಗಿ ಶ್ರೀ ಜಗದ್ಗುರು ರೇಣುಕರ ದರ್ಶನವನ್ನು ಪಡೆದು ಶ್ರೀಕಾಶೀ ಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದೆವು. ತ್ರಿಕಾಲ ಶಿವಲಿಂಗಾರ್ಚನಾನುಷ್ಠಾನವನ್ನು ನೆರವೇರಿಸುತ್ತ ಅಲ್ಲಿಂದ ಇಲ್ಲಿಗೆ ಬರಬೇಕಾದರೆ ಸಂಪೂರ್ಣ ಒಂದು ತಿಂಗಳಾಯಿತು. ಬಹುದೀರ್ಘವಾದ ಈ ಪ್ರಯಾಣವು ಪರಿಶ್ರಮವನ್ನುಂಟು ಮಾಡಿತು. ಈ ಸ್ಥಿತಿಯಲ್ಲಿ ನಾವು ದಯಮಾಡಿಸುವ ಅವಶ್ಯಕತೆ ಏನೆಂದರೆ- ಶ್ರೀ ವಿಶ್ವಾರಾಧ್ಯರ ಸನ್ನಿಧಿಯಲ್ಲಿ 10-12 ವರ್ಷಗಳವರೆಗೆ ಅವರ ಪೀಠದ ಪ್ರಸಾದದ ಸೇವನೆ ಮಾಡಿ ಜ್ಞಾನಾರ್ಜನೆ ಮಾಡಿದ್ದೇವೆ. ಕೊನೆಗೆ ಆತನ ಆಶೀರ್ವಾದದಿಂದಲೇ ಇದಕ್ಕೆ ಸಮಾನವಾದ ಪೀಠಕ್ಕೆ ಅಧಿಪತಿಗಳಾಗಿ ವೀರಶೈವೋದ್ಧಾರ ಮಾಡುವಂತಹ ಯೋಗವು ಪ್ರಾಪ್ತವಾಗಿದೆ. ಸ್ವಪರಮತೀಯರಿಂದ ಸಂಪೂಜಿತರಾದೆವು, ರಾಜಾಧಿರಾಜರಿಂದ ಸನ್ಮಾನಿತರಾಗಿದ್ದೇವೆ. ಇದರಿಂದ ವೀರಶೈವ ಮತದ ಘನತೆ ಹೆಚ್ಚಿದೆ. ಆದ್ದರಿಂದ ನಮ್ಮ ಮೇಲೆ ಈ ಪೀಠದ ಋಣವು ಬಹಳವಾಗಿದೆ. ನಾವೆಷ್ಟು ಶ್ರಮವಹಿಸಿ ದುಡಿದರೂ ಅದು ತೀರದಾಗಿದೆ. ಕೊನೆಗೆ ಈ ಪ್ರಸಂಗಕ್ಕಾದರೂ ಅನುಕೂಲವಾಗಿ ಕಿಂಚಿತ್ತಾದರೂ ಋಣ ತೀರಿಸುವಾ'' ಎಂದು ಬಂದಿದ್ದೇವೆ.

ಶ್ರೀ ಜ್ಞಾನಪೀಠದಲ್ಲಿ ಕೆಲಕಾಲವಾದರೂ ಪ್ರಸಾದ ಸೇವನೆ ಮಾಡಿ ವ್ಯಾಸಂಗ ಮಾಡದವರು ದೊಡ್ಡ ವಿದ್ವಾಂಸರಾಗುವುದೇ ಇಲ್ಲ. ವೀರಶೈವ ಮತದ ಪೀಠಾಧಿಪತಿಗಳೂ, ಅನೇಕ ಮಠಾಧಿಪತಿಗಳೂ, ಪಂಡಿತರೂ ಇಲ್ಲಿಯೇ ಇದ್ದು ವ್ಯಾಸಂಗ ಮಾಡಿ ವಿದ್ವಾಂಸರಾಗಿದ್ದಾರೆ. ಇಲ್ಲಿ ನಾವೊಬ್ಬರೇ ಅಲ್ಲ. ಚಿತ್ರದುರ್ಗ, ಹುಬ್ಬಳ್ಳಿ, ಕೊಪ್ಪಳ ಸ್ವಾಮಿಗಳು ಇವರೆಲ್ಲ ಇಲ್ಲಿಯೇ ಇದ್ದು ವಿದ್ವಾಂಸರಾಗಿದ್ದಾರೆ. ಇಂದಿನ ನೂತನ ಜಗದ್ಗುರುಗಳವರೂ ಇಲ್ಲಿಯೇ ಬಹುಕಾಲವಿದ್ದು ಜ್ಞಾನೋಪಾಸನೆಗೈದು ಉದ್ದಾಮ ವಿದ್ವಾಂಸರಾಗಿದ್ದಾರೆ.

ಶ್ರೀಗಳವರು ಈ ಪೀಠಾರೋಹಣ ಮಾಡುವ ಅಪೇಕ್ಷೆಯಿಲ್ಲದೆ ಸಿಕಿಂದ್ರಾಬಾದಿನಲ್ಲಿಯೇ ಉಳಿದು -'' ಖಂಡಿತವಾಗಿ ನನಗೆ ಪೀಠಾಧಿಪತ್ಯ ಬೇಡ. ನನಗಿದು ಇಷ್ಟವಿಲ್ಲ. ನಾನು ಹೊರಗಿದ್ದು ಸಾರಸ್ವತ ಪ್ರಪಂಚದಲ್ಲಿ ಕಾರ್ಯ ಮಾಡುತ್ತೇನೆ. ಶಿವಾದ್ವೈತ ಸಿದ್ಧಾಂತ ಪ್ರಕಾಶನ ಮಾಡುತ್ತೇನೆ'' ಈ ವಿಧವಾದ ವಿಷಯಗಳನ್ನು ತಿಳಿಸಿ 'ಖಂಡಿತ ಪೀಠಾಧಿಪತ್ಯ ಸ್ವೀಕರಿಸುವುದಿಲ್ಲ'ವೆಂದು ತಿಳಿಸಿಬಿಟ್ಟರು. ಪರಿಸ್ಥಿತಿ ಹೀಗಾದ ಮೇಲೆ - 'ಕಾಶಿಗೆ ಹೊರಡಲೇಬೇಕು, ಹೊರಡಿರಿ, ಪೀಠಾಧಿಪತ್ಯವನ್ನು ಸ್ವೀಕರಿಸಲೇಬೇಕು. ಸ್ವೀಕರಿಸಿರಿ. ನಮ್ಮ ಆಜ್ಞೋಲ್ಲಂಘನವನ್ನು ಮಾಡಕೂಡದು'' ಹೀಗೆಂದು ನಾವು ಕಠೋರವಾದ ಆಜ್ಞೆಯನ್ನು ವಿಧಿಸಿದ್ದರಿಂದ ಇವರು ಇಲ್ಲಿಗೆ ದಯಮಾಡಿಸಿದರು.

ನೂತನ ಜಗದ್ಗುರುಗಳವರ ಹೆಸರನ್ನು ಪರಿವರ್ತಿಸಬಾರದೆಂದು ಬಹುಜನಗಳಿಂದ ಸೂಚನೆಗಳು ಬಂದವು. ಈ ವಿಷಯದಲ್ಲಿ ಒಂದು ವಿಶೇಷವಾದ ರಹಸ್ಯವಿರುವುದರಿಂದ ಇವುಗಳನ್ನು ಲಕ್ಷಿಸಲಾಯಿತು. ಶ್ರೀ ಜಗದ್ಗುರು ರಾಜೇಶ್ವರ ಮಹಾಸ್ವಾಮಿಗಳವರ ಹಿಂದೆ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ತಪಸ್ವಿಗಳು, ತೇಜಸ್ವಿಗಳು, ವಿದ್ವಾಂಸರೂ ಆಗಿ ಈ ಪೀಠದಲ್ಲಿ ವಿರಾಜಮಾನರಾಗಿದ್ದರು. ಅವರೂ ಸಹ ತೆಲುಗು ದೇಶದಿಂದಲೇ ಬಂದು ಈ ಪೀಠವನ್ನು ಅಲಂಕರಿಸಿದ್ದರು. ಪುನಃ ಅವರೇ ತೆಲುಗು ದೇಶದಲ್ಲಿ ಅವತರಿಸಿ ಅದೇ ಶುಭಾಭಿದಾನಶೋಭಿತರಾಗಿ ಈ ಪೀಠಕ್ಕೆ ದಯಮಾಡಿಸಿದ್ದಾರೆಂದು ನಮ್ಮ ಅಂತರಾತ್ಮವು ಹೇಳಿದ್ದರಿಂದ ಹೆಸರು ಪರಿವರ್ತಿಸುವ ಅಧಿಕಾರವು ನಮ್ಮದಲ್ಲವೆಂದು ಸನ್ನಿಧಿಯವರ ಪೂರ್ವನಾಮವನ್ನೇ ಪುನಃ ಉದ್ಘೋಷಿಸಲಾಗಿದೆ. ಶ್ರೀ ಸನ್ನಿಧಿಯವರು ಸರ್ವ ವಿದ್ಯಾನಿಧಿಗಳು. ಶ್ರೀ ವಿಶ್ವಾರಾಧ್ಯರ ಅಂಶವಿಲ್ಲದೆ ಯಾರೂ ಈ ಪೀಠಕ್ಕೆ ಬರಲಾರರು. ಜ್ಞಾನಮೂರ್ತಿಗಳಾದ ಶ್ರೀ ಸನ್ನಿಧಿಯವರಲ್ಲಿ ಆ ಅಂಶವಿದ್ದುದರಿಂದಲೇ ಈ ಪೀಠಕ್ಕೆ ದಯಮಾಡಿಸಿದ್ದಾರೆ. ಇವರಿಂದ ಶಿವಾದ್ವೈತ ಸಿದ್ಧಾಂತವು ಪ್ರಕಾಶಿತವಾಗಿ ಜಗತ್ತಿನಲ್ಲಿ ಮಹಾ ವೈಭವದಿಂದ ಮೆರೆಯುತ್ತದೆ. ಇವರಿಂದ ವೀರಶೈವ ಸಮಾಜಕ್ಕೆ ಅನಂತ ವಿಧವಾದ ಅಭಿವೃದ್ಧಿಯುಂಟಾಗುತ್ತದೆ. ಇವರ ಕಾಲದಲ್ಲಿ ವೀರಶೈವ ಸಮಾಜವು ಅತ್ಯುನ್ನತ ವ್ಯವಸ್ಥೆಯನ್ನು ಹೊಂದುತ್ತದೆ. ಗುರುಕುಲವು ಬೆಳಗುತ್ತದೆ'' ಎಂದು ಈ ವಿಧವಾಗಿ ಸೂಕ್ಷ್ಮವಾಗಿ ಮತ್ತು ಸೂಕ್ತವಾಗಿ ಅಪ್ಪಣೆ ಕೊಡಿಸಿದರು.

ಕಾಶೀ ನೂತನ ಜಗದ್ಗುರುಗಳವರ ಉಪದೇಶಾಮೃತ

ನಂತರ ನೂತನವಾಗಿ ಪಟ್ಟಾಭಿಷಿಕ್ತರಾದ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನಾಧೀಶ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಅಮೃತವಾಣಿಯಿಂದ ಐದು ಭಾಷೆಗಳಲ್ಲಿ ಅಪ್ಪಣೆ ಕೊಡಿಸಿದರು. ಶ್ರೀ ಸನ್ನಿಧಿಯವರ ಪ್ರದೇಶವು ಬಹುಮಹತ್ವಪೂರ್ಣವಾದ್ದರಿಂದ, ಹೀಗೆಂದು ನಿರೂಪಿಸುವುದು ಕಠಿಣ ಕೆಲಸ. ತೇಜಸ್ವಿಯಾದ ಪೂಜ್ಯರ ವ್ಯಕ್ತಿತ್ವ, ಅಗಾಧವಾದ ವಿದ್ಯೆ, ದರ್ಶನಶಾಸ್ತ್ರಗಳಲ್ಲಿ ಅಪಾರವಾದ ಪಾಂಡಿತ್ಯ, ಭಾರತೀಯ ಸಕಲಭಾಷಾ ವಾಙ್ಮಯ ವಿಶೇಷ ಪ್ರಭುತ್ವ, ಪ್ರತಿಭಾಪೂರ್ಣವಾದ ಸಮಾಲೋಚನಾ ನೈಪುಣ್ಯ, ಅಪ್ರತಿಮ ಐತಿಹಾಸಿಕ ಜ್ಞಾನ, ಅನ್ಯಾದೃಶವಾದ, ಅನನ್ಯ ಸಾಮಾನ್ಯವಾದ ಸರ್ವಾಂಗೀಣ ಪ್ರಭುತ್ವಯುಕ್ತವಾದ ವೀರಶೈವ ದರ್ಶನಶಾಸ್ತ್ರದ ವಿಶೇಷೋದ್ಧಾಮಪಾಂಡಿತ್ಯ, ಕೊನೆಯದಾಗಿ ಎಂಥವರನ್ನೂ ಪ್ರಭಾವಿತರನ್ನಾಗಿ ಮಾಡುವ ವಾಗ್ವೈಖರಿ.... ಇವುಗಳನ್ನು ಕಂಡು ಕಂಡು ಅನುಭವಿಸಿದ ಮಹಾನುಭಾವರಾದ ತಾವೇ ಅಂದಿನ ಉಪದೇಶವನ್ನು ಊಹಿಸಿಕೊಂಡರೆ ಅದರ ದಿವ್ಯ ಭವ್ಯ ಸ್ವರೂಪವು ಕಲ್ಪನೆಗೆ ವಿಷಯವಾಗಿ ಅದು ಆಸ್ವಾದ್ಯವಾಗಬಹುದು. ಆದರೆ ಸಾಮಾನ್ಯರಾದ ನಮ್ಮಂಥವರು ಅದೆಲ್ಲವನ್ನೂ ನಿರೂಪಿಸುವುದು ಸಾಧ್ಯವೇ?

ಅದೊಂದು ಐದು ಭಾಗಗಳ ಒಂದು ತತ್ವಪ್ರಬಂಧವಾಗಿತ್ತು. ಪಂಚತತ್ವಗಳ ವಿಜ್ಞಾನದಂತೆ, ಪಂಚಾಚಾರ್ಯರ ತತ್ವಪ್ರಭೆಯಂತೆ, ಪಂಚ ಪ್ರಸ್ಥಾನದಲ್ಲಿ ಪ್ರಧಾನವಾದ ಪಶುಪತಿ ಮತದ ಸಾರಸರ್ವಸ್ವದಂತೆ ಇದ್ದು ಪಂಚಭಾಷೆಗಳಲ್ಲಿ ಪ್ರತಿಪಾದಿತವಾಗಿತ್ತು. ಜಗದ್ಗುರುಗಳವರ ವದನಾರವಿಂದದಿಂದ ಹೊರಟ ಪಂಚಭಾಷಾಮಯವಾದ ಗಂಗೆ ಶಿವನ ಜಡೆಮುಡಿಯಿಂದ ಹೊರಟ ದೇವಗಂಗೆಯು ಆಕಾಶದಲ್ಲಿ ಐದು ಭಾಗವಾಗಿ ಹರಿದರೆ ಎಂಥ ಶೋಭೆಯೋ ಅಂಥ ಶೋಭೆಯನ್ನು ಅನುಸರಿಸಿತ್ತು.

ಸುಮಧುರ ಪದಸಾನಿಧ್ಯ, ಲಾಲಿತ್ಯ, ಶೈಯ್ಯೆ, ಭಾವವೈಭವ, ಚಾತುರ್ಯ, ಪ್ರೌಢಿಮೆ, ಗಾಂಭೀರ್ಯ, ತತ್ವಪ್ರತಿಪಾದನಾ ಬಾಂಧುರ್ಯ, ಓಜ ತೇಜ ಇತ್ಯಾದಿಗಳುಳ್ಳದ್ದಾಗಿ ಕನ್ನಡಿಗರಿಗೆ, ತೆಲುಗರಿಗೆ, ಮರಾಠಿಯವರಿಗೆ, ಹಿಂದಿಯವರಿಗೆ, ಸಂಸ್ಕೃತ ವಿದ್ವಾಂಸರಿಗೆ, ಸಾಹಿತಿಗಳಿಗೆ, ದಾರ್ಶನಿಕರಿಗೆ, ತತ್ವಜ್ಞಾನಿಗಳಿಗೆ...... ಹೀಗೆ ವಿಧ ವಿಧವಾದ ಭಕ್ತಜನವೃಂದಕ್ಕೂ ಏಕರೂಪಿಯಾದ ಸಮಾರಾಧನಾಪ್ರಾಯವಾಗಿ ಪರಮಾನಂದಾಹ್ಲಾದಜನಕವಾಗಿ ಪರಮ ಮೋಕ್ಷ ಸಾಧನೀಭೂತವಾಗಿತ್ತು. ಅಂದಿನ ಉಪದೇಶವನ್ನು ಪ್ರತಿಭಾವಂತರಾದ ಮತ್ತು ಪಂಡಿತರಾದವರು ಯಾರಾದರೂ ಬರೆದಿದ್ದರೆ ಪಂಚಭಾಷಾತ್ಮಕವಾದ ತಾತ್ವಿಕ ಮಹಾಪ್ರಬಂಧವಾಗಬಹುದಾಗಿತ್ತು. ವಿಶೇಷವಾಗಿ ಶ್ರೀ ಸನ್ನಿಧಿಯವರು 'ವಿದ್ವದ್ದಿಗ್ಗಜ'ಗಳಂತಿರುವ ಕಾಶಿಯ ಪಂಡಿತರಿಂದ ಹಿಡಿದು ಪಾಮರರವರೆಗೂ ಎಲ್ಲರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಪಂಡಿತನಾದರೇನು? ರಾಜನಾದರೇನು? ದೀನನಾದರೇನು? ನಮಗೆ ಸರ್ವರೂ ಸಮದರ್ಶನರು'' ಎಂಬ ತಮ್ಮ ಗುರುಸಾರ್ವಭೌಮತ್ವಕ್ಕೆ ಉಚಿತವಾದ ಸರ್ವಭಕ್ತ ಸಮಾನಾನುಗ್ರಹ ಭಾವದಿಂದ ಎಲ್ಲರ ಹೃದಯವೂ ಆನಂದತುಂದಿಲವಾಗುವಂತೆ ಅಪ್ಪಣೆಕೊಡಿಸಿದರು. ಓಜಸ್ಸಿನಿಂದ ಅಸ್ಖಲಿತವಾಗಿ ಉಪದೇಶಿಸುತ್ತ ವಿಷಯ ಪ್ರತಿಪಾದನೆಗಾಗಿ ಮಧ್ಯೆ ಮಧ್ಯೆ ಪ್ರಮಾಣ ಸೂಕ್ತಿಗಳನ್ನು ಉದಹರಿಸುತ್ತ ತಮ್ಮ ಅಮೃತ ಮಂಜುಲ ಧ್ವನಿಯಿಂದ ಅಪ್ಪಣೆ ಕೊಡಿಸುತ್ತಿರುವಾಗ ಭಕ್ತವೃಂದದ ಹೃದಯಗಳು ಅರಳಿ, ಅಂತಃಕರಣ, ಮನಸ್ಸುಗಳು ಪವಿತ್ರವಾಗಿ ಅವುಗಳಿಂದ ಸತ್ವವು ಉದಯಿಸಿ, ಉದಯಿಸಿದ ಸತ್ವವು ರಜಸ್ತಮಸ್ಸುಗಳನ್ನು ಅಭಿಭವಿಸಿ, ಭಕ್ತಿಯೇ ಸ್ಥಾಯಿಭಾವವಾಗಿ ಉಪದೇಶದಲ್ಲಿಯ ಶಿವತತ್ವಘನತಾ, ಶಿವಪಾರಮ್ಯ ಪ್ರತಿಪಾದನೆಗಳೇ ಆಲಂಬನ ಭಾವವಾಗಿ, ಶಿವಪರವಾದ ಶಾಂತ ಪಾವನಾಮೃತ ಮೃದು ಮಧುರ ಪದಗಳೇ ಉದ್ದೀಪನ ಭಾವಗಳಾಗಿ ತತ್ ತ್ವದಾರ್ಥ ವಿವೇಚನಾ ವಿಚಾರ ಪರಾಮರ್ಶೆಗಳೇ ಅನುಭಾವಗಳಾಗಿ ಲಕ್ಷಣಾ ವ್ಯಂಜನಾಶಕ್ತಿ ಜನ್ಯ ಪ್ರಯೋಜನ ಜ್ಞಾನಭಾನ ಸ್ಫುರಣಗಳೇ ಸಂಚಾರಿ ಭಾವಗಳಾಗಿ ಭಕ್ತವೃಂದದ ಹೃದಯಗಳು ಅಖಂಡವಾದ, ಅನಿರ್ವಚನೀಯವಾದ ಅನಂತ ಪುಣ್ಯಧಾಮವಾದ, ಸ್ವಪ್ರಕಾಶಾನಂದ ಚಿನ್ಮಯವಾದ, 'ಶಿವಾನಂದ' ರಸಾಸ್ವಾದನ ಭೋಗಭಾಗ್ಯಕ್ಕೆ ಭಾಗಿಗಳಾದವು, ಅಪೂರ್ವವಾದ ಶಿವಾನುಭವಾನಂದವನ್ನು ಅನುಭವಿಸಿದವು. ಇಂತಹ ಅನುಭೂತಿಮಂತರಾದ ಅಂದಿನ ಭಕ್ತರು ಧನ್ಯರಲ್ಲವೇ? ಅಲ್ಲಿ ಅಂದು ಆ ರೀತಿಯಾಗಿ ಅನುಭವಿಸಿದವರಿಗೆ ನಾನು ಬರೆದುದು ಬಹು ಅತ್ಯಲ್ಪವೆಂದೆನಿಸದೆ ಇರದು. ಅತ್ಯುದ್ಭುತವಾದ ವೈದುಷ್ಯದಿಂದ ದೇಶ ದೇಶಗಳಲ್ಲಿ

ಶಿವಾದ್ವೈತ ಧ್ವಜವನ್ನು ಮೆರೆಸಿ ದೂಷಕರ ಶೃಂಗಭಂಗ ಮಾಡಿ ವೇದಧರ್ಮವನ್ನು ನೆಲೆಗೊಳಿಸಿ ಪ್ರಚಂಡ ದಿಗ್ವಿಜಯವನ್ನು ಮಾಡಿ ಸ್ವ-ಪರಮತೀಯ ಪಂಡಿತಶ್ರೇಷ್ಠರಿಂದ ಸನ್ಮಾನಿತರಾಗಿ ಪ್ರತಿ ಗರಿಷ್ಠವಾದ ಅಪಾರ ವಿದ್ಯಾಸಾಗರದಂತಿರುವ ಮಹಾವಿಭೂತಿಗಳು ಭಾರತೀಯ ಸಂಸ್ಕೃತಿ ಮಂಜೂಷಾಯಮಮಾಣ ಗೀರ್ವಾಣವಾಣಿಗೆ ಸೀಮಾಭೂಮಿಯಾದ ಜಗದೇಕನಾಥ ಶ್ರೀ ವಿಶ್ವನಾಥನಿಗಾವಾಸ ವಿಷಯವಾದ ಪಾವನಗಂಗಾತರಂಗ ಸ್ನಾತಮಾದ ಪುಣ್ಯಕ್ಷೇತ್ರ ಕಾಶಿಯಲ್ಲಿ ಭಾರತ ವರ್ಷೀಯ ಸಕಲಮತ ಧರ್ಮಮೂಲ ಪೀಠಾಗ್ರಗಣ್ಯವಾದ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನವನ್ನಲಂಕರಿಸಿದ ಶುಭಮಂಗಲಮುಹೂರ್ತದಲ್ಲಿ ಅಪ್ಪಣೆ ಕೊಡಿಸಿದ ಉಪದೇಶಾಮೃತವು ಹೇಗಿರಬಹುದೆಂಬುದನ್ನು ನಿರೂಪಿಸುವುದಕ್ಕಿಂತ ಸಹೃದಯ ಮಹಾನುಭಾವರು ಊಹಿಸುವುದೇ ಮೇಲಲ್ಲವೇ?

ಶ್ರೀ ಸನ್ನಿಧಾನದವರ ಉಪದೇಶದ ಸಹಸ್ರಾಂಶದಲ್ಲಿ ಒಂದಂಶವನ್ನು ನಿರೂಪಿಸುವುದಾದರೆ ಹೀಗೆ ನಿರೂಪಿಸಬಹುದು. ಶ್ರೀ ಸನ್ನಿಧಿಯವರು ಮೊದಲು ಮಂಗಲಸೂಕ್ತಿಗಳನ್ನು ಸಾಮವೇದ ಪ್ರಕಾರವಾಗಿ ನುಡಿದು, ಸಂಸ್ಕೃತ, ಹಿಂದೀ, ಕನ್ನಡ, ತೆಲುಗು, ಮರಾಠಿ ಹೀಗೆ ಐದುಭಾಷೆಗಳಲ್ಲಿ ಅನುಕ್ರಮವಾಗಿ ಅಪ್ಪಣೆ ಕೊಡಿಸಿ ಪುನಃ ಸಂಸ್ಕೃತದಿಂದ ಸಂಪುಟೀಕರಿಸಿದರು. ಸಂಸ್ಕೃತದಲ್ಲಿ ವೀರಶೈವ ಸೃಷ್ಟಿ, ಪ್ರಾಕೃತ ವಿಚಾರ, ಜ್ಞಾನ-ಕರ್ಮ ಸಮುಚ್ಚಯವಾದದ ಕುರಿತು ಉಪದೇಶವನ್ನು ನೀಡಿದರು.

ಈ ರೀತಿಯಾಗಿ ಇನ್ನುಳಿದ ಭಾಷೆಗಳಲ್ಲಿ ಗುರುಗಳ ಕರ್ತವ್ಯ, ಸಮಾಜದ ಕರ್ತವ್ಯ ಮೊದಲಾದ ವಿಷಯಗಳನ್ನು ಅಪ್ಪಣೆ ಕೊಡಿಸಿದರು, ''ಕಾಶಿಯಲ್ಲಿ ವಿಶ್ವನಾಥನ ಸನ್ನಿಧಿಯಲ್ಲಿ ಗಂಗೆ ಹರಿಯುತ್ತಲಿದ್ದಾಳೆ. ಆಕೆ ತ್ರಿವೇಣಿಯಾಗಿದ್ದಾಳೆ. ಆದರೀಗ ವಿಶ್ವಾರಾಧ್ಯ ಪೀಠದಲ್ಲಿ ಐದುಭಾಷೆಯ ಜನಗಳಿಂದ ಇದು ಪಂಚವೇಣಿಯಾಗಿದೆ. ಈ ವಿಶ್ವಾರಾಧ್ಯ ಪೀಠವು ಬಹು ಪ್ರಾಚೀನವಾದ ಪೀಠ. ಪಂಚಪೀಠಗಳಲ್ಲಿ ಗುರುಕಲಶಾಧಿಷ್ಠಾನಭೂತವಾದ ಪೀಠವಿದು ಕಾರಣಾಂತರಗಳಿಂದ ವಿಪನ್ನವಾಗಿತ್ತು. ಅವಿದ್ಯೆಯು ಬ್ರಹ್ಮನ್ನು ಮುಸುಗುತ್ತದೆ. ಮುಂದೆ ಮತ್ತೆ ಅದು ಆವರಣನಾಶದಿಂದ ಪುನಃ ಉಜ್ವಲವಾಗುವುದಿಲ್ಲವೇ? ಈ ಪರಂಪರೆಯು ಬಹು ಉಜ್ವಲವಾದದ್ದು. ನಮ್ಮ ಗುರುಗಳಾದ ಶ್ರೀ ಪಂಚಾಕ್ಷರ ಶಿವಾಚಾರ್ಯ ಮಹಾಸನ್ನಿಧಿಯವರು ಶ್ರೀಮಠದ ಉದ್ಧಾರಕ್ಕಾಗಿ ಬಹಳ ಶ್ರಮವಹಿಸಿದರು. ಅವರ ಪರಿಶ್ರಮದ ಫಲವಾಗಿ ವಿಘ್ನ ಪರಂಪರೆಗಳದೆಷ್ಟೋ ದೂರವಾಗಿ ಮಠವು ಸ್ಥಿರವಾಗಿದೆ. ನಾವು ಇಲ್ಲಿರುವಾಗ ನಮ್ಮ ಮೇಲೆ ಯಾವ ವಿಧವಾದ ವಿಶೇಷ ಪಕ್ಷಪಾತವಿಲ್ಲದಿದ್ದರೂ ಗುರುತರವಾದ ಈ ಭಾರವನ್ನು ನಮಗೆ ಅನುಗ್ರಹಿಸಿದ್ದಾರೆ.

ವೀರಶೈವ ಮತವು ಶ್ರೇಷ್ಠವಾದದ್ದು. ಶಿವಾದ್ವೈತ ದರ್ಶನವು ಸರ್ವದರ್ಶನಾತಿಶಾಯಿಯಾದದ್ದು. ಸಾಖ್ಯ, ಯೋಗ, ಪಾಂಚರಾತ್ರಗಳು, ವೈದಿಕ ದೇಶ ವರ್ತಿಗಳಾದ್ದರಿಂದ ಶೈವವು ಸರ್ವ ವೇದಾನುಸಾರಿಯಾದ್ದರಿಂದ ಇದು ವಿಶಿಷ್ಟವಾಗಿದೆ. ಜ್ಞಾನ-

ಕ್ರಿಯಾ ವಾದದಲ್ಲಿ ವೇದಾಂತ, ಮೀಮಾಂಸಾ ಶಾಸ್ತ್ರಗಳು ವಿಭಿನ್ನ ಮತಾವಲಂಬನದಿಂದ ಫಲಾಭಿಮುಖವಾಗದೆ ಉಳಿದಿವೆ. ಈ ಉಭಯ ಸಮುಚ್ಚಯವಾದವೊಂದನ್ನು ರೂಪಿಸಿ ಮಾನವನಿಗೆ ದಿವ್ಯದರ್ಶನವನ್ನಿತ್ತು ಚಿಜ್ಜ್ಯೋತಿಯನ್ನು ಪ್ರಕಾಶಪಡಿಸಿ ಸರ್ವತೋಮುಖವಾಗಿ ಫಲಾಭಿಮುಖವಾದ ದರ್ಶನವೆಂದರೆ ಇದೋ ಶಿವಾದ್ವೈತ ಸಿದ್ಧಾಂತ!!

ಶ್ರೀ ರೇಣುಕಾದಿ ಪಂಚಾಚಾರ್ಯರು ಪ್ರಾಚೀನ ವೇದಾಂತ ತತ್ವಜ್ಞಾನಿಗಳಾದ ವ್ಯಾಸಾಗಸ್ತ್ಯ ದೂರ್ವಾಸಾದಿ ಮುನಿಗಳಿಗೆ ತಮ್ಮ ಸ್ವಾಯತ್ತವಾದ ಜ್ಞಾನಜ್ಯೋತಿಯ ಪ್ರಭೆಯನ್ನು ಪ್ರದಾನಮಾಡಿ ಅವರನ್ನುದ್ಧರಿಸಿದ್ದಾರೆ. ಈ ಪೀಠಾಧೀಶರಾದ ಶ್ರೀ ಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರು ಅನೇಕ ಜನ ಋಷಿಗಳಿಗೆ ಉಪದೇಶಾಮೃತಗೈದು ಶಿವಾದ್ವೈತ ಪ್ರಕಾಶನ ಮಾಡಿದರೆಂದು ಕಾಶೀ ಖಂಡಾದಿಗಳಲ್ಲಿ ನಿರೂಪಿತವಾಗಿದೆ, ಪ್ರಖ್ಯಾತವಾಗಿದೆ. ನಂದಿ, ಸ್ಕಂದ ಭೃಂಗ್ಯಾದಿ ಪ್ರಾಚೀನ ತತ್ವವೇತ್ತೃಗಳೂ, ಶ್ರೀ ರೇಣುಕಾದಿ ಭಗವತ್ಪಾದರು ಈ ಸಿದ್ಧಾಂತವನ್ನು ದೃಢಗೊಳಿಸಿದ್ದಾರೆ. ಇಂಥ ಪವಿತ್ರವಾದ ಶಿವಾದ್ವೈತ ವೇದಾಂತ ಸಿದ್ಧಾಂತವು ಸರ್ವಮಾನವರಿಗೂ ಜೀವಿತಾಂತದಲ್ಲಿ ಸಮುಪಾಸ್ಯವಾದಲ್ಲಿ ಇಂದಿನ ಅಶಾಂತ ಕ್ಷೋಭೆಯ ಅಲ್ಲೋಲಗಳಿಂದ ವಿನಿರ್ಮುಕ್ತವಾಗಿ ಜೀವನವು ಧನ್ಯವಾಗುವುದಿಲ್ಲವೇ? ಅಂತಾದರೆ ಜನ್ಮತಃ ಈ ಸಿದ್ಧಾಂತಾನುಯಾಯಿಗಳಾದ ನಾವು ಅದೆಷ್ಟು ಧನ್ಯರೆಂಬುದನ್ನು ವಿಚಾರಿಸಿರಿ.

ಶಿವನು ವೈದಿಕದೇವತಾ ಸಾರ್ವಭೌಮನು. ರುದ್ರಶಬ್ದದಲ್ಲಿ ಕಲ್ಯಾಣಕರನೆಂಬ ಅರ್ಥವಿದ್ದರೂ, ಲಯಕರನೆಂಬ ಬೇರೊಂದು ಅರ್ಥವಿರುವುದರಿಂದ ಕಲ್ಯಾಣಮಯನೂ, ಪ್ರಕಾಶಮಯನೂ ಎಂಬ ಪರಮ ತಾತ್ವಿಕವಾದ ಒಂದೇ ಒಂದು ಅರ್ಥವುಳ್ಳ ಶಿವ ಶಬ್ದವನ್ನೇ ಶೈವರು ಸ್ವೀಕರಿಸಿದರು. ಇದುವೇ ಸಂಪ್ರದಾಯದ ಮೂಲ. ಗುರುಮಂತ್ರದಲ್ಲಿಯೂ ಶಿವ ಶಬ್ದವೇ ಉಂಟು. ಮಹಾಪಂಚಾಕ್ಷರಿಯು ಸಮಸ್ತ ವೇದಮಂತ್ರಗಳ ಮಸ್ತಕಮಣಿಯು. ಪಾಂಚಭೌತಿಕ ಮಾಯಾಪಾಶದಿಂದ ಬಿಡುಗಡೆ ಹೊಂದಲು ಪಂಚಾಕ್ಷರ ಮಹಾಮಂತ್ರವೇ ನಿಶಿತ ಕುಠಾರ. ಶಿವನೂ, ಲಿಂಗವೂ ಒಂದೇ ಪದಾರ್ಥವೇ ಆಗಿರುವುದೆಂಬುವುದು- 'ಶಿವಾಯ ನಮಃ, ಶಿವಲಿಂಗಾಯ ನಮಃ' (ತೈ ಆರಣ್ಯಕ) ಎಂಬ ಶೃತಿಯಿಂದ ವಿವೇಕಿಗಳಿಗೆ ಪ್ರತ್ಯಕ್ಷವಾಗಿದೆ. ಆದರೆ ಭಕ್ತಜನಾನುಗ್ರಹಾರ್ಥವಾಗಿಯೂ ಪಂಡಿತ ಪಾಮರಾದಿ ಸರ್ವಸಾಧಾರಣ ಧ್ಯೇಯಕ್ಕಾಗಿಯೂ ಪರಶಿವನು ಲಿಂಗಸ್ವರೂಪನಾಗಿದ್ದಾನೆ. ಆದುದರಿಂದ ಮೊದಲು ಶಿವ, ಆಮೇಲೆ ಲಿಂಗ - ಎಂಬುವುದೇ ಸಕ್ರಮವಾದ ಮಾರ್ಗ. ಲಿಂಗ, ಶಿವವೆಂಬ ವಾಕ್ಯಕ್ರಮವು ಸಂಗತವಲ್ಲ. ಲಿಂಗವು ಶಿವನಲ್ಲಿ ಅಡಗಿರುವುದರಿಂದ ಶಿವಲಿಂಗವೆಂಬುವುದು ಸೂಕ್ತ. ನಮಗುಂಟಾಗತಕ್ಕ ಲಿಂಗಾಂಗ ಸಾಮರಸ್ಯದ ಪೂರ್ಣಭಾವವೇ ಶಿವಸ್ವರೂಪ. ಅಂಗವಿದ್ದಾಗಲೇ ಲಿಂಗವುಂಟು. ಅಂಗಲಿಂಗಳಿಲ್ಲದಾಗ ಸಾಮರಸ್ಯವೂ ಇಲ್ಲ. ಅಂಗವು ಅಥವಾ ಜೀವನು ಇದ್ದರೂ, ಇಲ್ಲದಿದ್ದರೂ ಶಿವನು ಮಾತ್ರ ಸಾರ್ವಕಾಲಿಕವಾಗಿ ಪ್ರಕಾಶಿಸುವನು. ಲಿಂಗಾಂಗ ಸಾಮರಸ್ಯವನ್ನು ಬಯಸುವ ಭಕ್ತನು ಪಂಚಾಕ್ಷರ ಮಂತ್ರದಲ್ಲಿಯೂ ಶಿವವು ನಿಶ್ಚಲವಾಗಿ ನಿಂತಿರುವುದು ಪಂಚಾಕ್ಷರಿಯಲ್ಲಿ ಲಿಂಗಶಬ್ದವಿಲ್ಲವೆಂದು ಆಕ್ಷೇಪವಾಗಲಾರದು. ಆದುದರಿಂದಲೇ

ಈ ಮತವು ಶಿವಮತ. ವಿಶೇಷವಾಗಿ ಹೇಳಬೇಕೆಂದರೆ - ವೀರಶೈವ ಮತ. ವೀರಶೈವವೆಂದರೇನೇ ಅಷ್ಟಾವರಣ, ಷಟ್‌ಸ್ಥಲಾದಿ ಆಚಾರವುಳ್ಳ ಶಿವಧರ್ಮವೆಂದು ಸ್ಪಷ್ಟವಾದ ಅರ್ಥ. ಇನ್ನು ಕೇವಲ ಶಿವಭಕ್ತರಾದ ಲಿಂಗಧಾರಣವಿಲ್ಲದ ಆದಿಶೈವ, ಅನಾದಿಶೈವ, ಮಾರ್ಗಶೈವ, ಶ್ರೋತಶೈವ, ಮಿಶ್ರಶೈವ ಮುಂತಾದ ಚಿಕ್ಕಪುಟ್ಟ ಗುಂಪುಗಳೆಲ್ಲ ಮಹಾಶಿವ ಪರಿವಾರದಲ್ಲಿ ಅಂತರ್ಗತವಾಗುವವು. ಇವರು ಲಿಂಗಾಂಗಿಗಳಲ್ಲದಿದ್ದರೂ ಶಿವಭಕ್ತರಾದ ಕಾರಣ ವೀರಶೈವ ಮಹಾಧರ್ಮಕ್ಕೆ ಸಮೀಪಸ್ಥರಾಗಿ ಸ್ವಪರಿವಾರದ ಜನರಾಗಿ ಗಣಿಸಲ್ಪಟ್ಟಿದ್ದಾರೆ. ಆಗ ಶಿವಧರ್ಮ ಪರಿವಾರದ ವೈಶಾಲ್ಯವನ್ನು ಪ್ರಸಂಗವಶಾತ್ ಮಹಾಶಿವಧರ್ಮಕ್ಕೆ ಕ್ರಮಕ್ರಮವಾಗಿ ಸಂಪೂರ್ಣವಾಗಿ ಇವರು ಶರಣಾಗತರಾಗುವರೆಂದು ಭಾವಿಸಬಹುದು. ವೀರಶೈವವೆಂಬ ಹೆಸರಿರುವಾಗ ಮಾತ್ರ ಮೇಲ್ಕಂಡ ಪರಿವಾರವು ಸಮೀಪಸ್ಥವಾಗುವುದು. ಅಂತೆಯೇ ಕೆಲವು ಪ್ರಸಂಗಗಳಲ್ಲಿ ಲಿಂಗೀ, ಲಿಂಗಪೂಜಕ, ಲಿಂಗವಾನ್ ಎಂದಾಗ ಕೇವಲ ಲಿಂಗಧಾರಣವುಳ್ಳವನೆಂಬ ಅರ್ಥ ಬಂದರೂ ಅದು ಷಟ್‌ಸ್ಥಲಾಷ್ಟಾವರಣ ಸಂಪನ್ನತೆಯನ್ನು ಬೋಧಿಸುವುದಿಲ್ಲ. ವೀರತ್ವವಿಲ್ಲದ ಶೈವವೂ ನಮಗೆ ಅಪ್ರಸಕ್ತವಾಗಿದೆ..... ಇತ್ಯಾದಿ.

ಪೀಠಾಧಿಪತಿಗಳಾದ ಕೂಡಲೇ ಸ್ವಾಮಿಗಳು ಬೆಳ್ಳಿ, ಬಂಗಾರ ಆನೆ, ಒಂಟೆ, ಪಲ್ಲಕ್ಕಿ, ಭರ್ಜರಿ ಉಡುಪು-ತೊಡಪು ಮೊದಲಾದ ವೈಭವದಲ್ಲಿಯೇ ಆಸಕ್ತರಾಗಿ ಸಮಾಜವನ್ನೇ ಮರೆತುಬಿಡುತ್ತಾರೆಂದು ಒಂದು ಪ್ರವಾದವಿದೆ. ಆದರೆ ಏಕಾಕಿಗಳಾಗಿ ಮಠದಲ್ಲಿ ವಾಸ ಮಾಡುವ ಸ್ವಾಮಿಗಳು ಏನು ಮಾಡಬಲ್ಲರು? ಅವರೊಡನೆ ಭಕ್ತರೂ ಸಹಯೋಗಿಗಳಾಗಿ ಕಾರ್ಯ ಮಾಡಬೇಕು. ಹೀಗೆ ಮಾಡಿದರೇನೇ ಕಾರ್ಯವಾಗುತ್ತದೆ. ಸ್ವಾಮಿಗಳೇ ಕಾರ್ಯ ಮಾಡಬೇಕೆಂದು, ಅವರ ಮೇಲೆಯೇ ಎಲ್ಲ ಭಾರವನ್ನು ಹೊರಿಸಿ ನೀವು ಮಾತ್ರ ಯಾವಜ್ಜೀವನವೂ ದುಡ್ಡು ಗಳಿಸುವುದರಲ್ಲಿಯೇ ತತ್ಪರರಾದರೆ ಅದೆಂತು ಸಮಾಜ ಕಾರ್ಯವಾಗಬೇಕು? ಆದ್ದರಿಂದ ನೀವು ಮೊದಲು ಸಿದ್ಧರಾಗಬೇಕು. ವಾನಪ್ರಸ್ಥಾಶ್ರಮದಲ್ಲಿ, ಮಠ-ಮಂದಿರಗಳಲ್ಲಿ ವಾಸಿಸಿ ಕಾಲ ಕಳೆಯಬೇಕೆಂಬ ಧರ್ಮನಿಯಮದಂತೆ ನೀವು ಮಠಕ್ಕೆ ಬಂದು ಮಠದಲ್ಲಿ ನಡೆಯತಕ್ಕ ಧರ್ಮ ಸಂಘಟನಾದಿ ಕಾರ್ಯಗಳಿಗೆ ಅನುಕೂಲರಾಗಿ ಸೇವೆ ಮಾಡಬೇಕು. ಧರ್ಮಕ್ಕೆ ಸೇರಿದವರೆಲ್ಲ ಸ್ವಧರ್ಮಾಭಿಮಾನವುಳ್ಳವರಾಗಬೇಕು. ಗಾಢವಾದ ಅಭಿಮಾನವುಳ್ಳವರಾಗಿ ಅಂತ್ಯ ವಯಸ್ಸಿನಲ್ಲಿ ಮಠಕ್ಕೆ ಬಂದು ಸರ್ವಾಧಿಕಾರವನ್ನು ವಹಿಸಿ ಕೆಲಸ ಮಾಡಿರಿ. ಸಮಾಜದ ದೊಡ್ಡ ದೊಡ್ಡ ಶ್ರೀಮಂತರು ಹೀಗೆ ಮಾಡಲಿ. ಅಂದರೆ ಆವ ಕಾರ್ಯ ತಾನೆ ಆಗಲಿಕ್ಕಿಲ್ಲ?

ನಮಗೆಷ್ಟು ಕಷ್ಟ-ನಷ್ಟಗಳು ಬಂದರೂ ನಿಜವಾಗಿ ಇಂಥ ಕಾರ್ಯದಿಂದಲೇ ಸಮಾಜಕ್ಕೆ ಹಿತವೆಂದು ತಿಳಿದಾಗ ಅದನ್ನು ಸರ್ವದಾ ನೆರವೇರಿಸಲು ಜ್ಞಾನಪೀಠವು ಸಮರ್ಥವಾಗಿದೆ. ಆದರೆ ಅಪಮಾರ್ಗದ ಅನೈತಿಕ ವಿಚಾರಗಳನ್ನು, ದುಷ್ಪ್ರಚಾರವನ್ನು ಬಹುಸಂಖ್ಯಾಕರದಾದರೂ ನಮ್ಮ ಜ್ಞಾನಪೀಠವು ನಿಷೇಧಿಸುತ್ತದೆ. ಧರ್ಮೋಪದೇಶ, ಧರ್ಮ ನಿರ್ಣಯಗಳಲ್ಲಿ ತನ್ನ ಮಾರ್ಗವನ್ನು ಸಪ್ರಮಾಣವಾಗಿ ನಿರೂಪಿಸಲು ಸರ್ವಸಾಧನಾ ಪರಿಪೂರ್ಣವಾಗಿದೆ'' ಎಂದು ಪರಮಪೂಜ್ಯ ನೂತನ ಜಗದ್ಗುರುಗಳವರು ಅಪ್ಪಣೆಕೊಡಿಸಿದರು.

ಅನುಬಂಧ-13

ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಕಾರ್ಯಕಾಲದಲ್ಲಿ ಮಹಾಪೀಠದಲ್ಲಿ ನಡೆದ ಕೆಲ ಆಧುನಿಕ ಮಹತ್ವದ ಘಟನೆಗಳು

20-04-1944	ಶ್ರೀ ಜಗದ್ಗುರು ಪಂಚಾಕ್ಷರ ಮಹಾಸ್ವಾಮಿಗಳ ವಿಲ್ ರಜಿಸ್ಟರ್
26-04-1944	ಶ್ರೀ ಜಗದ್ಗುರು ಪಂಚಾಕ್ಷರ ಮಹಾಸ್ವಾಮಿಗಳವರು ಶಿವೈಕ್ಯ
3-05-1944	ನೂತನ ಉತ್ತರಾಧಿಕಾರಿಗಳು ಪೀಠಕ್ಕೆ ಬಂದುದು.
7-05-1944	ಸರ್ಕಾರದವರಿಂದ ಮಹಾಪೀಠದಲ್ಲಿಯ ಶಿಲಾಶಾಸನದ ಫೋಟೋ.
8-05-1944	ಕೈ. ವಾ. ಶ್ರೀ ಜಗದ್ಗುರುಗಳವರ ಪುಣ್ಯತಿಥಿ ಸಮಾರಂಭ.
20-05-1944	ಉತ್ತರಾಧಿಕಾರಿಗಳು ಸಿಕಿಂದ್ರಾಬಾದಿಗೆ ಹೋದುದು.
10-08-1944	ಉತ್ತರಾಧಿಕಾರಿಗಳು ಪುಸ್ತಕ ಮುಂತಾದ ದೊಡ್ಡ. ಸಾಮಗ್ರಿಗಳೊಂದಿಗೆ ಪೀಠ ಪ್ರವೇಶ ಮಾಡಿದುದು.
14-08-1944	ಗುರುಕುಲದ ವಿದ್ಯಾರ್ಥಿಗಳಿಗೆ ಪುನಃ ಭೋಜನ ವ್ಯವಸ್ಥೆ
22-09-1944	ಶ್ರೀ ರಂಭಾಪುರೀ ಜಗದ್ಗುರುಗಳವರ ಸ್ವಾಗತ ಮಹೋತ್ಸವ
27-09-1944	ನೂತನ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಭಿಷೇಕ ಮಹಾವೈಭವ.
6-10-1944	ಶ್ರೀ ಜಗದ್ಗುರುಗಳವರಿಗೆ ಕಾಶೀ ಪಂಡಿತ ಸಭಾ ಸಂಯುಕ್ತ ಪ್ರಾಂತ ಅಧ್ಯಾಪಕ ಮಂಡಳಿಗಳಿಂದ ಅಭಿನಂದನಾ ಪತ್ರಿಕಾರ್ಪಣೆ.

20-10-1944	ಶ್ರೀ ರಂಭಾಪುರೀ ಜಗದ್ಗುರು ಮಹಾಸ್ವಾಮಿಗಳವರ ಪ್ರಯಾಣ.
22-02-1945	ಋಣ ವಿಮೋಚನಕ್ಕಾಗಿ ಮಹಾಜನರಿಂದ ದ್ರವ್ಯ ಸಹಾಯ.
21-04-1945	ಪಟ್ಟಾಭಿಷೇಕ ದಕ್ಷಿಣೆಯ ಮೇಲೆ ಜಗದ್ಗುರುಗಳಿಗೇನೇ ಹಕ್ಕೆಂದು ಜಡ್ಜಮೆಂಟು
25-04-1945	ಶ್ರೀ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಕಾಶೀ ಸುಹೃತ್ಸಾಹಿತ್ಯ ಗೋಷ್ಠಿಯ ವಾರ್ಷಿಕ ಸಭೆ.
15-05-1945	ಕೈ. ವಾ. ಶ್ರೀ ಜಗದ್ಗುರುಗಳವರ ಪ್ರಥಮ ಪುಣ್ಯತಿಥಿ, ಲಿಂಗಸ್ಥಾಪನೆ.
10-06-1945	ಪ್ರಾಚೀನ ಶ್ರೀಯಂತ್ರ ಮಹಾಕಾಳ ಯಂತ್ರಗಳ ಪ್ರೋಕ್ಷಣ ಪೂಜಾರಂಭ.
4-08-1945	ಋಣ ಪರಿಹಾರಾದಿಗಳ ಬಗ್ಗೆ ಹೈಕೋರ್ಟು ಜಡ್ಜರೊಂದಿಗೆ ಪರಾಮರ್ಶೆ.
19-08-1945	ಜ್ಞಾನಮಂದಿರದ ಶಿಲಾನ್ಯಾಸ (ಆರಂಭ).
7-12-1945	ರಿಸೀವರ್‌ರವರನ್ನು ತೆಗೆದುಹಾಕಲು ಹೈಕೋರ್ಟಿನ ಆಜ್ಞೆ.
21-12-1945	ಪೀಠದ ಎಲ್ಲ ಆಸ್ತಿ ಸ್ವಾಧೀನವಾಗುವಿಕೆ ಮತ್ತು ಚಾರ್ಜು ತೆಗೆದುಕೊಂಡುದು.
2-03-1946	ಜ್ಞಾನ ಮಂದಿರದ ಉದ್ಘಾಟನೆ, ಶಿವರಾತ್ರಿ ಜಯಂತಿ ರಥೋತ್ಸವಗಳು
25-03-1946	ಶ್ರೀ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಸಂಸ್ಕೃತ ಪ್ರಚಾರಿಣಿಯ ವಾರ್ಷಿಕ ಸಭೆ.

(ಇನ್ನೂ ಅನೇಕ ಸಭಾ-ಸಮಾರಂಭಗಳು ಆಗಿವೆ.

ಋಣ ಪರಿಹಾರದ ಕಾರ್ಯವು ವಿಶೇಷವಾಗಿ ಸಾಗಿದೆ.)

ಅನುಬಂಧ-14

ವೀರಭದ್ರ ಜಗದ್ಗುರುಗಳವರ ಅಂತಿಮ ವಿದಾಯದ ಪತ್ರಿಕಾ ವರದಿ

A Great Loss (Report)

It is reported with very deep regret that Sri Jagadguru Sri Mahanta Veeerabhadra Shivacharya Swamiji of Sri Vishwradhya peetha, Jangamwadi Mutt, Kashi passed away at 7.30 P.M. on Sunday the 25th January 1948 at Jangamwadi Mutt. In his sad and premature demise, this country, in general, and the vast Veerashaiva Community has sustained a very great loss. His tragic death has left a void in the Literatures of Kannada, Andhra, Marathi, Hindi and Sanskrit, which it is impossible to fill up. Not only was the Swamiji a profound scholar and writer of very great repute, being very well-versed in the Vedas, epics, Smritis, Darshanas and Shastras,..etc. but also, he was a master in the secular, spiritual, religious and political thought, holding progresssive views. Besides he had proficiency in Music and Astrology.

In spite of his being unwell since the last several months, he had not given up his reading and writing work till the very last moment of his existance. Even at 6.30 P.M. on the day of his death, he was engaged in his usual writing, did his preaching and gave several messages and

instructions to some of his people at the Mutt. This bereavement particularly affects Karnataka Andhra and Maharashtra, where he was well-known and where he served with great zeal and devotion. During the short period of only three years he has occupied this Peetha, he accomplished many works of great note. Among these is a Library and Reading Room known as `Jnyan Mandira' `Temple of Learning' which contains many many books of Dharmic interest. This will ever shine as a living testimony to his deep learning and his vast ability and make his memory immortal.

It is our earnest prayer that though the Jagadguru has shaken off his mortal coit his great soul may continue to inspire and guide this Mutt and his innumerable followers all over the country. May peace be upon him !!!

Issued to the Press on 28th of January 1948

by M.S.S . Sharma

ಪರಮಪೂಜ್ಯ ಶ್ರೀ ವೀರಭದ್ರ ಜಗದ್ಗುರುಗಳವರ ಸಾರಸ್ವತ ಪ್ರಪಂಚದ ಒಂದು ಪರಮಾದ್ಭುತವಾಗಿ ನಿಂತು ಪೀಠಗಳ ಘನತೆ ಗೌರವಗಳನ್ನು ಹೆಚ್ಚಿಸಿ ಇತಿಹಾಸದ ಪುಟಗಳಲ್ಲಿ ಪೀಠಗಳ ವೈಭವವನ್ನು ದಾಖಲಿಸಿದ್ದಾರೆ. ಅವರ ಈ ಸಾಧನೆಗೆ ಮತ್ತು ಸಾಹಸಕ್ಕೆ ಪೀಠಗಳು ಯಾವತ್ತೂ ಅವರನ್ನು ಅಭಿಮಾನದಿಂದ ನೆನೆದುಕೊಳ್ಳಬೇಕು.

'ಆಡು ಮುಟ್ಟದ ಗಿಡವಿಲ್ಲ, ಸರ್ವಜ್ಞ ಮುಟ್ಟದ ವಿಷಯವಿಲ್ಲ' ಎಂದು ಹೇಳುವ ಹಾಗೆ 'ವೀರಭದ್ರ ಶರ್ಮರರಿಯದ ಮರ್ಮವೇ ಇಲ್ಲ' ಎನ್ನುವ ಖ್ಯಾತಿಯು ಅವರನ್ನು ಒಲೈಸಿಕೊಂಡು ಬಂದಿತ್ತು.

ಪಾಂಡಿತ್ಯದ ತಳಸ್ಪರ್ಶಿ ಅನುಭವವನ್ನು ಪಡೆದ ಪೂಜ್ಯರನ್ನು ಹತ್ತು ಹಲವು ವಿಧದ 'ಪದ-ಪದವಿ-ಪ್ರಶಸ್ತಿ'ಗಳು ಅನುಸರಿಸಿಕೊಂಡು ಬಂದವು. ಅವರು 'ಸಾಹಿತ್ಯ ವಿಶಾರದ'ರಾಗಿ, 'ವಿದ್ಯಾ ವಿಶಾರದ'ರಾಗಿ ವಿದ್ವತ್ವಲಯದ ದಿಗ್ಗಜರಾಗಿ ಬೆಳೆದು ನಿಂತರು. ಒಟ್ಟಿನಲ್ಲಿ ಒಂದೇ ಮಾತಿನಲ್ಲಿ ಹೇಳುವುದಾದರೆ ಪೂಜ್ಯರು ವಿದ್ವತ್ತಿನಲ್ಲಿ ವಿಂಧ್ಯ ಪರ್ವತವಾದರೆ, ಸಾಧನೆಯಲ್ಲಿ ಸಹ್ಯಾದ್ರಿ, ಸಹನೆಯಲ್ಲಿ ಸುಮೇರು ಹಾಗೂ ಸಾಹಸದಲ್ಲಿ ಗೌರೀಶಂಕರ!!

ಮತ್ತೊಮ್ಮೆ ಹುಟ್ಟಿಬರಲಿ ಶ್ರೀ ವೀರಭದ್ರ ಜಗದ್ಗುರುಗಳು ವೀರರಾಗಿ, ಭದ್ರರಾಗಿ ಮತ್ತು ವಿದ್ವತ್ತಾಗಿ.....

-ಡಾ|| ಶ್ರೀ ಶಿವಾನಂದ ಶಿವಾಚಾರ್ಯರು

ಕಾಶೀ ಶ್ರೀ ಪೀಠದ ಜಂಗಮವಾಡಿ ಮಠದಲ್ಲಿ ಲಭ್ಯವಿರುವ ಕೆಲ ಹೃದಯಂಗಮ ವರ್ಣಚಿತ್ರಗಳು



ಶ್ರೀ ಶಿವ ಪರಿವಾರ

ಶ್ರೀ ಷಣ್ಮುಖ ಸ್ವಾಮಿ

ಛತ್ರಪತಿ ಶಿವಾಜಿಗೆ
ದುರ್ಗಾ ಸಾಕ್ಷಾತ್ಕಾರ

ಊರ್ಧ್ವ ಕುಂಡಲಿನೀ



ಅಧೋ ಕುಂಡಲಿನೀ



'ಶಿವ-ಶಕ್ತಿ' ಸಮುಚ್ಚಯ
ಶ್ರೀ ಅರ್ಧನಾರೀಶ್ವರ



ಗಂಗಾ ತೀರದಲ್ಲಿ
ಲಿಂಗೋದ್ಭವ ಶ್ರೀ ವಿಶ್ವಾರಾಧ್ಯರು



ಲೌಕಿಕ ಬದುಕಿಗೆ
'ಪಂಚಮುಖಿ' ಶಿವನ ಆಶೀರ್ವಾ

ಕೆಳದಿಯ ದೊರೆ
ಶ್ರೀ ಶಿವಪ್ಪ ನಾಯಕ

ಶ್ರೀ ಷಡಾನನ ಸ್ಕಂದಮೂರ್ತಿ

ಸೌಭಾಗ್ಯವತಿ
ರಾಣಿ ದೇವಮ್ಮ



ಶಿವದರ್ಶನ
'ಪ್ರಕೃತಿ, ನಾನು ನಿನ್ನೊಳಗೆ ನೀನು ನನ್ನೊಳಗೆ'

ಕಾಶೀ ಶ್ರೀ ವಿಶ್ವನಾಥನಲ್ಲಿ ಮೈದೋರಿರುವ
ಶ್ರೀ ವಿಶ್ವಾರಾಧ್ಯರು

ಶ್ರೀ ವೀರಭದ್ರ ಜಗದ್ಗುರುಗಳು ಹೇಳಿ ಬರೆಯಿಸಿದ ಕೆಲ ಯಂತ್ರೋದ್ಧರಣ ಹಾಗೂ ಮಂತ್ರೋದ್ಧರಣಗಳು



ಮಹಾಲಿಂಗೋದ್ಧರಣೆ

ಜಂಗಮೋದ್ಧರಣೆ



ವೃಷಭೋದ್ಧರಣೆ



ಪ್ರಣಮೋದ್ಧರಣೆ

យន្តធំស្នេហ៍រាជ



យន្តធំស្រួចមេល



[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]
[illegible]

* * *

[illegible]
[illegible]

[illegible]
[illegible]

ವೀರಶೈವ ಅನುಸಂಧಾನ ಸಂಸ್ಥಾನದ ಪ್ರಕಟಣೆಗಳು

೧೯೯೮ ಮಕುಟಾಗಮ ಅನು: ಡಾ. ಸಿ. ಶಿವಕುಮಾರಸ್ವಾಮಿ

೧೯೯೮ ಸಿದ್ಧಾಂತ ಶಿಖಾಮಣಿ ವಿಚಾರ ದೀಪ್ತಿ, ಸಂ. ಡಾ. ಎಂ. ಶಿವಕುಮಾರಸ್ವಾಮಿ

೧೯೯೯ ಕಾರಣಾಗಮ ಅನು: ಡಾ. ಮಲ್ಲಿಕಾರ್ಜುನ ಪರಡ್ಡಿ

೧೯೯೯ ಶೈವಾಗಮಗಳಲ್ಲಿ ವೀರಶೈವ ಸಂ. ಡಾ. ಎಂ. ಶಿವಕುಮಾರಸ್ವಾಮಿ

೨೦೦೦ ಪಾರಮೇಶ್ವರಾಗಮ ಅನು: ಡಾ. ಎಂ. ಶಿವಕುಮಾರಸ್ವಾಮಿ

೨೦೦೧ ಸೂಕ್ಷ್ಮಾಗಮ ಅನು: ಶ್ರೀ ಷಣ್ಮುಖಯ್ಯ ಅಕ್ಕೂರಮಠ

೨೦೦೧ ಚಂದ್ರಜ್ಞಾನಾಗಮ ವಿಚಾರರಶ್ಮಿ, ಸಂ. ಡಾ. ಎಂ. ಶಿವಕುಮಾರಸ್ವಾಮಿ

೨೦೦೨ ಸೂಕ್ಷ್ಮಾಗಮ ವಿಚಾರ ಪ್ರಭೆ, ಸಂ. ಡಾ. ಎಂ. ಶಿವಕುಮಾರಸ್ವಾಮಿ

೨೦೦೩ ಚಂದ್ರಜ್ಞಾನಾಗಮ ಅನು: ಡಾ. ಎಂ. ಶಿವಕುಮಾರಸ್ವಾಮಿ

೨೦೦೩ ವೇದಾಗಮಗಳು ಮತ್ತು ಶಿವಶರಣರು-೧, ಸಂ. ಡಾ. ಎಂ. ಶಿವಕುಮಾರಸ್ವಾಮಿ

೨೦೦೪ ವೇದಾಮಗಳು ಮತ್ತು ಶಿವಶರಣರು-೨, ಸಂ. ಡಾ. ಎಂ. ಶಿವಕುಮಾರಸ್ವಾಮಿ

೨೦೦೪ ಅನುಭವಸೂತ್ರಂ, ಅನು: ಡಾ. ಸಿ. ಶಿವಕುಮಾರಸ್ವಾಮಿ

೨೦೦೫ ವಿದ್ವದ್ವಿಭೂತಿ ಶ್ರೀ ಶ್ರೀ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರು
ಲೇಖಕರು: ಷ।। ಬ್ರ।। ಶ್ರೀ ಡಾ।। ಶಿವಾನಂದ ಶಿವಾಚಾರ್ಯರು

* * *

ಶೈವಭಾರತಿ ಶೋಧ ಪ್ರತಿಷ್ಠಾನ
ವಾರಣಾಸಿ, ಜಂಗಮವಾಡಿ ಮಠದ ಪ್ರಕಟಣೆ

೨೦೦೪ ಶಿವತತ್ತ್ವ ಚಿಂತಾಮಣಿ -ಒಂದು ಅಧ್ಯಯನ
ಲೇಖಕರು: ಡಾ. ಸಿ.ಯು. ಉಮಾದೇವಿ ಉಮಾಶಂಕರ್

ಶ್ರೀ ವೀರಭದ್ರ ಜಗದ್ಗುರುಗಳವರು ಕಾಶೀ ಮಹಾಪೀಠದ ಜಗದ್ಗುರು ಪರಂಪರೆಯಲ್ಲಿ ಧ್ರುವ ನಕ್ಷತ್ರವಾಗಿರುವರು. ಬಾಲ್ಯದಿಂದಲೂ ಪ್ರತಿಭಾಸಂಪನ್ನರೂ, ಬಹುಭಾಷಾತಜ್ಞರೂ, ಪ್ರಾಚೀನಲಿಪಿ ವಿಶೇಷಜ್ಞರೂ, ಶ್ರೇಷ್ಠ ಸಂಶೋಧಕರೂ ಆದ ಇವರು ಚಿದರೆಮಠ ವೀರಭದ್ರಶರ್ಮರೆಂಬ ಹೆಸರಿನಿಂದಲೇ ಖ್ಯಾತನಾಮರಾಗಿದರು. ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಯಿಂದ ಸರ್ವೋನ್ನತ ಸ್ಥಾನವಾದ ಜ್ಞಾನಪೀಠಾಧಿಪತ್ಯದವರೆಗೆ ತಮ್ಮನ್ನು ವಿಕಾಸ ಮಾಡಿಕೊಂಡ ಧೀಮಂತ ವ್ಯಕ್ತಿಗಳಿವರು. ವೀರಶೈವ ವಿದ್ವಾಂಸರಲ್ಲಿ ಚೌಡದಾನಪುರದ ಶ್ರೀ ವಿರೂಪಾಕ್ಷ ಒಡೆಯರ್‌ರವರ ತರುವಾಯ 'ವೇದತೀರ್ಥ' ಉಪಾಧಿಯನ್ನು ಪಡೆದ ಏಕಮೇವ ವ್ಯಕ್ತಿಯೆಂದರೆ ಶ್ರೀ ವೀರಭದ್ರ ಜಗದ್ಗುರುಗಳವರು. ಕೇವಲ ೪೪ ವರ್ಷ ಬಾಳಿ ಬದುಕಿದ ಶ್ರೀ ಮಹಾಸನ್ನಿಧಿಯವರು ತಮ್ಮ ಬಹುಪಾಲು ಆಯುಷ್ಯವನ್ನು ವಿದ್ಯಾಧ್ಯಯನದಲ್ಲಿಯೇ ಕಳೆದ ವಿಭೂತಿಪುರುಷರಿವರು. ವೀರಸಾವರಕರ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಶ್ರೀಶೈಲ ಪೀಠದ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಮುಂತಾದವರು ಇವರ ವ್ಯಕ್ತಿತ್ವಕ್ಕೆ ಮಾರುಹೋದವರಲ್ಲಿ ಪ್ರಮುಖರು.

ಶ್ರೀ ಕಾಶೀಪೀಠ ಪರಂಪರೆಯಲ್ಲಿ ಅತ್ಯಲ್ಪಕಾಲದ ಪೀಠಾಧಿಪತಿಗಳಾಗಿದ್ದರೂ ಎಲ್ಲರಿಗಿಂತಲೂ ಹೆಚ್ಚಿನ ಕಾರ್ಯವನ್ನು ಸಾಧಿಸಿದ್ದು ಇವರ ವೈಶಿಷ್ಟ್ಯವಾಗಿದೆ. ವಿದ್ಯಾನಗರಿ ಎಂದೇ ಸುಪ್ರಸಿದ್ಧವಾದ ಶ್ರೀಕ್ಷೇತ್ರ ಕಾಶಿಯ ವಿದ್ವಾಂಸರು ಇವರನ್ನು ಪುರುಷಸರಸ್ವತಿ ಎಂತಲೇ ಸಂಬೋಧಿಸುತ್ತಿದ್ದರು.

- ಶ್ರೀ ಕಾಶೀ ಜಗದ್ಗುರುಗಳವರ 'ಆಶೀರ್ವಚನ' ದಿಂದ